ದಾವಣಗೆರೆ Davanagere | ಹುಬ್ಬಳ್ಳಿ Hubballi | ಮಂಗಳೂರು Mangaluru | ಕಲಬುರಗಿ Kalaburagi | ಬೆಂಗಳೂರು Bengaluru | ಬಾಗಲಕೋಟೆ Bagalakote | ಬೆಳಗಾವಿ Belagavi | ಸಂಪುಟ Volume 25 | ಸಂಚಿಕೆ Issue 20 | ಪುಟ Pages 12+4 | ಶನಿವಾರ 9 ಮೇ 2026 | RNI Regn. No. 3864/59 | www.epaper.samyukthakarnataka.com | Samyuktha Karnataka | @samyuktakarnat2 | ₹ 5-00

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ

# ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ
ಕನ್ನಡಿಗರ ಸಾಕ್ಷಿಪ್ರಜ್ಞೆ
samyuktha karnataka

**ಟ್ರಂಪ್ ವಿಧಿಸಿದ 10% ವಿದೇಶಿ ತೆರಿಗೆಗೆ ಅಮೆರಿಕ ಫೆಡರಲ್ ಕೋರ್ಟ್‌ಲ್ಲೂ ಸೋಲು** 9

**2010ರಲ್ಲಿ ಛತ್ತೀಸ್‌ಗಢದಲ್ಲಿ 76 ಭದ್ರತಾ ಸಿಬ್ಬಂದಿಯ ಹತ್ಯೆಗೈದಿದ್ದ 10 ನಕ್ಸಲರು ಖುಲಾಸೆ** 9

**ಸಿಂದೂರ್ ವೇಳೆ ಪಾಕ್‌ಗೆ ತಾಂತ್ರಿಕ ನೆರವು ನೀಡಿದ್ದಾಗಿ ಮೊದಲ ಬಾರಿಗೆ ಒಪ್ಪಿಕೊಂಡ ಚೀನಾ** 9

ಸಂಯುಕ್ತ ಕರ್ನಾಟಕ
ಜ್ಞಾನ ಗುರು
1 ರೂ.ಗೆ ಮಾಹಿತಿಗಳ ರಸದೌತಣ
ಹದಿಹರೆಯದವರಿಗೆ ಅರಿವಿನ ಹರಿವು
ಇಂದೇ ಕೊಂಡು ಓದಿರಿ
ಪ್ರತಿಗಳಿಗಾಗಿ: ಬಸಪ್ಪ-70220 22063

TVK ವಿಜಯ್ ಮುಂದಿರೋದು ಎರಡೇ ಆಯ್ಕೆ!
QR CODE ಸ್ಕ್ಯಾನ್ ಮಾಡಿ ವಿಡಿಯೋ ನೋಡಿ
Samyukta_Karnataka

## ಸರಳ ಬಹುಮತ ಗಿಟ್ಟಿಸಿದ ದಳಪತಿ

# ಅಂತೂ ಇಂತೂ 118

## ಕಾಂಗ್ರೆಸ್ ಸೇರಿ 4 ಸಣ್ಣ ಪಕ್ಷಗಳಿಂದ ವಿಜಯ್‌ಗೆ ಬೆಂಬಲ

## ಗೌರ್ನರ್ ಭೇಟಿ | ಸರ್ಕಾರ ರಚನೆಗೆ ಇನ್ನೂ ಅನುಮತಿ ಇಲ್ಲ

**ಚೆನ್ನೈ:** ತಮಿಳುನಾಡಿನಲ್ಲಿ 108 ಸ್ಥಾನಗಳಲ್ಲಿ ಗೆದ್ದಿರುವ ವಿಜಯ್ ನೇತೃತ್ವದ ಟಿವಿಕೆ, ಬಹುಮತಕ್ಕೆ ಇದ್ದ ಕೆಲವೇ ಸ್ಥಾನಗಳ ಕೊರತೆಯನ್ನು ಕಡೆಗೂ ತುಂಬಿಕೊಳ್ಳಲು ಯಶಸ್ವಿಯಾಗಿದೆ. ಕಾಂಗ್ರೆಸ್ ಜೊತೆಗೆ ಸಿಪಿಐ, ಸಿಪಿಎಂ ಮತ್ತು ವಿಸಿಕೆ ಪಕ್ಷಗಳ ಬೆಂಬಲದಿಂದ ವಿಜಯ್ ಮೈತ್ರಿಕೂಟ 118 ಸ್ಥಾನಗಳನ್ನು ಸಂಪಾದಿಸಿದೆ.

ಶುಕ್ರವಾರ ಮೂರನೇ ಬಾರಿ ತಮಗಿರುವ ಬೆಂಬಲದ ಬಗ್ಗೆ ರಾಜ್ಯಪಾಲ ಆರ್.ವಿ.ಹರ್ಲೇಕರ್ ಅವರಿಗೆ ವಿಜಯ್ ಪತ್ರ ನೀಡಿ ಸರ್ಕಾರ ರಚನೆಯ ಹಕ್ಕು ಮಂಡಿಸಿದ್ದಾರೆ. ಆದರೆ ಆ ಹೊತ್ತಿಗೆ ವಿಸಿಕೆಯಿಂದ ಅಧಿಕೃತ ಬೆಂಬಲದ ಪತ್ರ ತಲುಪಿರಲಿಲ್ಲ. ಹೀಗಾಗಿ ರಾಜ್ಯಪಾಲರಿಗೆ ಸಮಾಧಾನವಾಗಿಲ್ಲ. ರಾಜ್ಯಪಾಲರನ್ನು ಭೇಟಿಯಾಗಿ ವಾಪಸ್ಸಾದ ನಂತರ ಶನಿವಾರವೇ ಸರ್ಕಾರ ರಚಿಸುವುದಾಗಿ ವಿಜಯ್ ಘೋಷಿಸಿದರೂ, ರಾಜ್ಯಪಾಲರಿಂದ ಇನ್ನೂ ಆಹ್ವಾನ ಬಂದಿಲ್ಲ.

ವಿಜಯ್ ಬಹುಮತಕ್ಕೆ 11 ಸ್ಥಾನಗಳ ಕೊರತೆ ಇತ್ತು ಕಾಂಗ್ರೆಸ್(5) ಮೊದಲೇ ಟಿವಿಕೆಗೆ ಬೆಂಬಲ ಘೋಷಿಸಿತ್ತು. ಶುಕ್ರವಾರ ಸಿಪಿಐ (2), ಸಿಪಿಎಂ (2), ವಿಸಿಕೆ (2) ಬೆಂಬಲ ಪ್ರಕಟಿಸಿವೆ. ಇದರಿಂದ ಮೈತ್ರಿ ಕೂಟದ ಸ್ಥಾನ 118ಕ್ಕೇರಿದೆ. ಆದರೆ ರಾಜ್ಯಪಾಲರು ಆಹ್ವಾನ ನೀಡದ ಕಾರಣ ಶನಿವಾರವೂ ಪ್ರಮಾಣವಚನ ಸ್ವೀಕಾರ ಅನುಮಾನ ಎನ್ನಲಾಗಿದೆ. ಪುಟ 12

### ತ.ನಾಡಲ್ಲಿ ಹೊಸ ಕೂಟ

| | |
|---|---|
| ಟಿವಿಕೆ | 107* |
| ಕಾಂಗ್ರೆಸ್ | 05 |
| ಸಿಪಿಐ | 02 |
| ಸಿಪಿಐಎಂ | 02 |
| ವಿಸಿಕೆ | 02 |
| ಒಟ್ಟು | 118 |
| ಸರಳ ಬಹುಮತ | 118 |

(*ವಿಜಯ್ ಗೆದ್ದಿರುವ 2 ಸ್ಥಾನಗಳಲ್ಲಿ 1 ಕಳೆದು)

### ಕೇರಳ ಸಿಎಂ ರೇಸ್ ಮುಂಚೂಣೀಲಿ ವೇಣು

**ಸತೀಶನ್, ರಮೇಶ್ ಚೆನ್ನಿತಾಲಗೆ ಹೆಚ್ಚು ಶಾಸಕರ ಬೆಂಬಲವಿಲ್ಲ**



ಕೆಸಿವಿಗೆ 63ರಲ್ಲಿ 47 ಶಾಸಕರ ಬೆಂಬಲ

ಕೇರಳಂನಲ್ಲಿ ಮುಖ್ಯಮಂತ್ರಿಯಾಗಲು ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಪೈಪೋಟಿಯಲ್ಲಿ ಸದ್ಯಕ್ಕೆ ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಹಾಗೂ ರಾಹುಲ್ ಗಾಂಧಿ ಆಪ್ತ ಕೆ.ಸಿ.ವೇಣುಗೋಪಾಲ್ ಮುಂದಿದ್ದಾರೆ. ಕಾಂಗ್ರೆಸ್‌ನ ಒಟ್ಟು 63 ಶಾಸಕರ ಪೈಕಿ ಸುಮಾರು 47 ಕೆಸಿವಿಗೆ ಶಾಸಕರ ಬೆಂಬಲವಿದೆ ಎನ್ನಲಾಗಿದೆ. ಮತ್ತಿಬ್ಬರು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾಗಿರುವ ಪ್ರತಿಪಕ್ಷ ನಾಯಕರಾಗಿದ್ದ ವಿ.ಡಿ.ಸತೀಶನ್‌ಗೆ 6 ಹಾಗೂ ರಮೇಶ್ ಚೆನ್ನಿತಾಲಗೆ 8 ಶಾಸಕರ ಬೆಂಬಲವಿದೆ.

### ಪ.ಬಂಗಾಳಕ್ಕೆ ಇಂದು ಸುವೇಂದು ಅಧಿಕಾರಿ

ಪಶ್ಚಿಮ ಬಂಗಾಳದ ಮುಂದಿನ 9ನೇ ಮುಖ್ಯಮಂತ್ರಿ ಹಾಗೂ ಪ್ರಪ್ರಥಮ ಬಿಜೆಪಿ ಸಿಎಂ ಆಗಿ ಸುವೇಂದು ಅಧಿಕಾರಿ ಶನಿವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ನಂದಿಗ್ರಾಮ ಮತ್ತು ಭವಾನಿಪುರ ಕ್ಷೇತ್ರಗಳಲ್ಲಿ ಸುವೇಂದು ಆಯ್ಕೆಯಾಗಿದ್ದಾರೆ. ಶುಕ್ರವಾರ ಕೇಂದ್ರ ಸಚಿವ ಅಮಿತ್ ಶಾ ಉಪಸ್ಥಿತಿಯಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಸುವೇಂದು ಅವರನ್ನು ಮುಂದಿನ ಮುಖ್ಯಮಂತ್ರಿಯಾಗಿ ಆರಿಸಲಾಯಿತು. ಬಂಗಾಳದಲ್ಲಿ ಈ ಬಾರಿ ಬಿಜೆಪಿ ಒಟ್ಟು 206 ಸ್ಥಾನಗಳೊಂದಿಗೆ ಮೂರನೇ ಎರಡರಷ್ಟು ಬಹುಮತ ಗಳಿಸಿದೆ.

## ಚಿತ್ರದುರ್ಗದಲ್ಲಿ ಇಂದು ಯಡಿಯೂರಪ್ಪೋತ್ಸವ

### ನಿನ್ನೆ ಬಿಎಸ್‌ವೈ ಅದ್ದೂರಿ ಪುರಪ್ರವೇಶ ಇಂದು ಸಂಜೆ ಅಮಿತ್ ಶಾ ಆಗಮನ

ಚಿತ್ರದುರ್ಗದಲ್ಲಿ ಶುಕ್ರವಾರ ಬಿ.ಎಸ್.ಯಡಿಯೂರಪ್ಪ ಪುರ ಪ್ರವೇಶ ವೇಳೆ ಸೇರಿದ್ದ ಜನಸ್ತೋಮ.

**ಸಂ.ಕ. ಸಮಾಚಾರ, ಚಿತ್ರದುರ್ಗ**

ಭಾರೀ ಮಳೆ ಮುನ್ಸೂಚನೆ ನೀಡುವ ರೀತಿ ಮೇ 9ರ ಶನಿವಾರ ನಗರದಲ್ಲಿ ಹಮ್ಮಿಕೊಂಡಿರುವ ಬಿಎಸ್‌ವೈ ಅಭಿಮಾನೋತ್ಸವ ಮುನ್ನಾ ದಿನ ಶುಕ್ರವಾರ ಸಂಜೆ ಕೋಟೆ ನಾಡು ಪ್ರವೇಶಿಸಿದ ಬಿ.ಎಸ್.ಯಡಿಯೂರಪ್ಪ ಅವರನ್ನು ಅಭಿಮಾನಿಗಳು ಅದ್ಧೂರಿಯಾಗಿಯೇ ಸ್ವಾಗತಿಸಿದರು.

ಹಾಲಿ-ಮಾಜಿ ಜನಪ್ರತಿನಿಧಿಗಳು, ನೂರಾರು ಮುಖಂಡರುಗಳ ದಂಡೇ ಯಡಿಯೂರಪ್ಪ ಅವರ ಆಗಮನಕ್ಕಾಗಿ ಗಂಟೆಗಟ್ಟಲೇ ಕಾದು ನಿಂತಿದ್ದರು. ಚಂದ್ರವಳ್ಳಿ ಸಮೀಪದ ಬಸವ ವೃತ್ತದಲ್ಲಿ ನಿರ್ಮಾಣ ಮಾಡಿದ್ದ ವೇದಿಕೆಯಲ್ಲಿ ನವಧಾನ್ಯಗಳ ಕುಂಭಗಳು, ಯಡಿಯೂರಪ್ಪ ಅವರಿಗಾಗಿಯೇ ಮುಖ್ಯಮಂತ್ರಿ ಮಾದರಿ ಏಕೈಕ ಕುರ್ಚಿ, ಹೂವಿನ ಅಲಂಕಾರದಿಂದ ವೇದಿಕೆ ಆಕರ್ಷಣೀಯವಾಗಿತ್ತು. ದಾವಣಗೆರೆಯಲ್ಲಿ ವಿಶ್ರಾಂತಿ ಬಳಿಕ ನೇರ ಚಿತ್ರದುರ್ಗದ ವೇದಿಕೆ ಸ್ಥಳಕ್ಕೆ ಯಡಿಯೂರಪ್ಪ ಸಂಜೆ 6.15ಕ್ಕೆ ಆಗಮಿಸುತ್ತಿದ್ದಂತೆ ಎರಡು ಬದಿ ಜೆಸಿಬಿ ಮೂಲಕ ಹೂವಿನ ಮಳೆ ಸುರಿಸಲಾಯಿತು, ಪಟಾಕಿ ಸದ್ದು, ಕಲಾತಂಡಗಳ ಮೆರುಗು ಬಿಎಸ್‌ವೈ ಪುರ ಪ್ರವೇಶವನ್ನು ರಂಗನ್ನಾಗಿಸಿತು.

ವಯಸ್ಸು 83 ಆಗಿದ್ದರೂ ಮುಖದಲ್ಲಿ ಸಿಟ್ಟಿನ ಗೆರೆಗಳು, ಸಫಾರಿ ಡ್ರೆಸ್, ಹಣೆ ಮೇಲೆ ಕುಂಕಮ, ಬಿಳಿಮೀಸೆಯ ಯಡಿಯೂರಪ್ಪ ವೇದಿಕೆ ಸ್ಥಳಕ್ಕೆ ಆಗಮಿಸುತ್ತಿದ್ದಂತೆ ಜೇಬಲ್ಲಿದ್ದ ಬಾಚಣಿಕೆ ತೆಗೆದುಕೊಂಡು ಕೂದಲು ಬಾಚಿಕೊಂಡು ಮೆಲ್ಲಗೆ ವೇದಿಕೆ ಹತ್ತಿ ಜನರತ್ತ ಕೈಬೀಸುತ್ತಿದ್ದಂತೆ ಅಭಿಮಾನಿಗಳ ಹರ್ಷೋದ್ಗಾರ ಮುಗಿಲುಮುಟ್ಟಿತು. ಪುಟ 12

**ಬಿ.ವೈ.ವಿಜಯೇಂದ್ರ ವಿಶೇಷ ಸಂದರ್ಶನ** 7

### ಮುಂದಿನ ತಿಂಗಳು ಜಿಬಿಎ ಚುನಾವಣೆ ಘೋಷಣೆ ಖಚಿತ?

**ಬೆಂಗಳೂರು:** ಬರುವ ಜೂನ್ 14 ರಿಂದ 24ರ ಒಳಗಾಗಿ ಜಿಬಿಎ ವ್ಯಾಪ್ತಿಯ ಐದೂ ನಗರಪಾಲಿಕೆಗಳ ಚುನಾವಣೆಗೆ ಒಂದು ನಿರ್ದಿಷ್ಟ ದಿನಾಂಕವನ್ನು ತಿಳಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಡಾ. ಜಿ.ಎಸ್.ಸಂಗ್ರೇಶಿ ತಿಳಿಸಿದ್ದಾರೆ. ವಿವರ: 7

### ಪೆನ್ನಾರ್ ಟ್ರಿಬ್ಯುನಲ್ ಸ್ಥಾಪನೆಗೆ 'ಸುಪ್ರೀಂ' 6 ತಿಂಗಳ ಗಡುವು

**ನವದೆಹಲಿ:** ಪೆನ್ನಾರ್ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ತಮಿಳುನಾಡು ನಡುವಿನ ವಿವಾದವನ್ನು ಬಗೆಹರಿಸಲು ಅಂತಾರಾಜ್ಯ ಜಲ ನ್ಯಾಯಮಂಡಳಿ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಆರು ತಿಂಗಳ ಗಡುವು ನೀಡಿ ಸುಪ್ರೀಂಕೋರ್ಟ್ ಶುಕ್ರವಾರ ಆದೇಶಿಸಿದೆ. ಕೇಂದ್ರ ಸರ್ಕಾರದ ಕೋರಿಕೆ ಅರ್ಜಿಗೆ ಮನ್ನಣೆ ನೀಡಿದೆ. ವಿವರ: 7

### ಅಂಜನಾದ್ರಿಯ ಹನುಮಗೆ 2.5 ಕೋ. ಚಿನ್ನಾಭರಣ ಅರ್ಪಣೆ

**ಕೊಪ್ಪಳ:** ಗಂಗಾವತಿ ತಾಲೂಕು ಅಂಜನಾದ್ರಿಯ ಆಂಜನೇಯನಿಗೆ ಎ.ಎಂ. ಆರ್ ಗ್ರೂಪ್‌ನವರು 2.5 ಕೋಟಿ ಮೌಲ್ಯದ ವಿಶೇಷವಾಗಿ ವಿನ್ಯಾಸಗೊಳಿಸಿದ ಚಿನ್ನದ ಪ್ರಭಾವಳಿ, ಛತ್ರಿ, ಕಿರೀಟ ಹಾಗೂ ಗಧೆಯನ್ನು ಶುಕ್ರವಾರ ಅರ್ಪಿಸಿದರು. ವಿವರ: 6

### ಜಾತಿನಿಂದನೆ ಕೇಸ್: ವಿಚಾರಣೆಗೆ ಗೈರಾದ ಶಾಸಕ ಹರೀಶ್‌ಗೆ ಸಾವಿರ ರೂ. ದಂಡ

**ಬೆಂಗಳೂರು:** ಜಾತಿ ನಿಂದನೆ ಪ್ರಕರಣದಲ್ಲಿ ಈ ಹಿಂದಿನ ದಿನಾಂಕದಲ್ಲಿ ವಿಶೇಷ ನ್ಯಾಯಾಲಯದ ಮುಂದೆ ಹಾಜರಾಗದ ಹರಿಹರ ಶಾಸಕ ಬಿ.ಪಿ.ಹರೀಶ್‌ಗೆ ಕೋರ್ಟ್ 1000 ರೂ. ದಂಡ ವಿಧಿಸಿ, ವಾರಂಟ್ ಅನ್ನು ರದ್ದುಪಡಿಸಿತು. ವಿವರ: 7




## ಸುಪ್ರೀಂಗೆ ಶೃಂಗೇರಿ ವಿವಾದ

### ಪರಾಜಿತ ರಾಜೇಗೌಡ ಅರ್ಜಿ ವಿಚಾರಣೆಗೆ ಒಪ್ಪಿಗೆ

**ನವದೆಹಲಿ:** ಕರ್ನಾಟಕ ಹೈಕೋರ್ಟ್ ಆದೇಶದಂತೆ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆದಿದ್ದ ಮರು ಎಣಿಕೆಯಲ್ಲಿ 255 ಮತಗಳಿಂದ ಪರಾಭವಗೊಂಡಿದ್ದ ಟಿ.ಡಿ.ರಾಜೇಗೌಡ ಈಗ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ. ಮೇ 11ರಂದು ವಿಚಾರಣೆ ನಡೆಸಲು ನ್ಯಾಯಾಲಯ ಒಪ್ಪಿದೆ.

2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಶೃಂಗೇರಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ರಾಜೇಗೌಡರು 201 ಮತಗಳ ಅಂತರದಿಂದ ಗೆದ್ದಿರುವುದಾಗಿ ಘೋಷಿಸಲಾಗಿತ್ತು. ಆದರೆ ಈ ಚುನಾವಣೆಯಲ್ಲಿ ಪರಾಭವಗೊಂಡ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್, ಹೈಕೋರ್ಟ್‌ಗೆ ಚುನಾವಣಾ ಅರ್ಜಿ ಸಲ್ಲಿಸಿದ್ದರು. ಅದರಂತೆ ಈ ಕ್ಷೇತ್ರದ ಅಂಚೆ ಮತಪತ್ರಗಳ ಮರು ಎಣಿಕೆಗೆ ಆದೇಶಿಸಲಾಗಿತ್ತು. ಪುಟ 12

- ಶೃಂಗೇರಿಯ ವಿಧಾನಸಭಾ ಚುನಾವಣೆಯ ಮರು ಮತ ಎಣಿಕೆಯಲ್ಲಿ 255 ಮತಗಳಿಂದ ಪರಾಭವಗೊಂಡಿರುವ ಕಾಂಗ್ರೆಸ್‌ನ ರಾಜೇಗೌಡ ಸುಪ್ರೀಂಗೆ ಮೇಲ್ಮನವಿ
- ತಿರಸ್ಕರಿಸಲ್ಪಟ್ಟ 279 ಮತಗಳನ್ನು ಮಾತ್ರ ಎಣಿಸಲು ಹೈಕೋರ್ಟ್ ಸೂಚಿಸಿತ್ತು, ಆದರೆ ಎಲ್ಲ ಅಂಚೆ ಮತಗಳನ್ನು ಎಣಿಕೆ ಮಾಡಲಾಗಿದೆ: ಕೈ ಅಭ್ಯರ್ಥಿ ರಾಜೇಗೌಡ ವಾದ
- ಮೇ 11ರಂದು ವಿಚಾರಣೆ ನಡೆಸಲು ದಿನಾಂಕ ನಿಗದಿಪಡಿಸಿದ ಸುಪ್ರೀಂ

## ರಾಗಾ ಹೆಸರಲ್ಲಿ ಮೆಗಾ ವಂಚನೆ

### ತಾನು ಕಾರ್ಯದರ್ಶಿ ಎಂದು ಹೇಳಿ ಹಣ ವಸೂಲಿ

**ಡೆಹ್ರಾಡೂನ್:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಕಾರ್ಯದರ್ಶಿಯಂತೆ ನಟಿಸಿ ಹಲವು ರಾಜ್ಯಗಳಲ್ಲಿ ಪಕ್ಷದ ನಾಯಕರಿಗೆ ಕೋಟ್ಯಂತರ ರೂಪಾಯಿ ವಂಚಿಸಿದ 49 ವರ್ಷದ ಆರೋಪಿಯನ್ನು ಬಂಧಿಸಲಾಗಿದೆ.



ಪಕ್ಷದಲ್ಲಿ ಉನ್ನತ ಸ್ಥಾನಮಾನ ಮತ್ತು ಚುನಾವಣಾ ಟಿಕೆಟ್ ಕೊಡಿಸುವ ಭರವಸೆ ನೀಡಿ ಕಾಂಗ್ರೆಸ್ ಕಾರ್ಯಕರ್ತರಿಂದ ದೊಡ್ಡ ಮೊತ್ತದ ಹಣವನ್ನು ಸಂಗ್ರಹಿಸಿದ ಆರೋಪದಲ್ಲಿ ಅಮೃತಸರದ ನಿವಾಸಿ ಗೌರವ್‌ನನ್ನು ಡೆಹ್ರಾಡೂನ್‌ನಲ್ಲಿ ಬಂಧಿಸಲಾಯಿತು. ನ್ಯಾಯಾಲಯವು ಆತನನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದೆ. ಡೆಹ್ರಾಡೂನ್ ಮೂಲದ ಕಾಂಗ್ರೆಸ್ ನಾಯಕಿ ಭಾವನಾ ಪಾಂಡೆಯವರು ಮೇ 3ರಂದು ರಾಜ್‌ಪುರ ಠಾಣೆಯಲ್ಲಿ ದೂರು ದಾಖಲಿಸಿದ ನಂತರ ಈ ಪ್ರಕರಣ ಬೆಳಕಿಗೆ ಬಂದಿದೆ. 25 ಲಕ್ಷ ರೂ ವಂಚನೆ ಮಾಡಲಾಗಿದೆ ಎಂದು ದೂರು ದಾಖಲಾಗಿತ್ತು. ಪುಟ 12

### ಕೈ ನಾಯಕರೇ ಗುರಿ

ಆರೋಪಿ ಕುಮಾರ್ ಪಂಜಾಬ್‌ನಲ್ಲಿರುವ ತನ್ನ ಸಹಚರರಾದ ಚಜ್ಜು, ರಜತ್ ಮಾದ ಮತ್ತು ಮಣೀಂದರ್ ಸಿಂಗ್ ಕಲು ಸಹಾಯದಿಂದ ಈ ರೀತಿಯ ವಂಚನೆ ನಡೆಸಿರುವುದು ತನಿಖೆ ವೇಳೆ ಗೊತ್ತಾಗಿದೆ. ಉತ್ತರಾಖಂಡ, ರಾಜಸ್ಥಾನ, ಹರಿಯಾಣ, ಮಧ್ಯಪ್ರದೇಶ ಮತ್ತು ಬಿಹಾರದ ಕಾಂಗ್ರೆಸ್ ನಾಯಕರನ್ನೇ ಗುರಿಯಾಗಿಸಿಕೊಂಡು ವಂಚನೆ ನಡೆಸುತ್ತಿದ್ದ ಎಂದು ಆರೋಪಿಸಿದ್ದಾರೆ. ಡೆಹ್ರಾಡೂನ್‌ನ ಮತ್ತೊಬ್ಬ ಕಾಂಗ್ರೆಸ್ ಪದಾಧಿಕಾರಿಯಿಂದ ಹಣ ಸಂಗ್ರಹಿಸಲು ಯತ್ನಿಸುತ್ತಿದ್ದಾಗ ಬಂಧಿಸಲಾಗಿದೆ.

## ತೇಲಿ ಹೋಗಿ ಸ್ಫೋಟಿಸುವ ದೇಸಿ ಬಾಂಬ್!

### ವಿಮಾನದಿಂದ ಎಸೆದ ಬಾಂಬ್‌ನ ದಿಕ್ಕು ಬದಲಿಸುವ ತಾರಾ ಕಿಟ್ ಯಶಸ್ವಿ ಪರೀಕ್ಷೆ

**ನವದೆಹಲಿ:** ದೇಶದ ರಕ್ಷಣಾ ತಂತ್ರಜ್ಞಾನದಲ್ಲಿ ಹೊಸ ಮೈಲುಗಲ್ಲು ಎನ್ನಬಹುದಾದ ಬೆಳವಣಿಗೆಯೊಂದರಲ್ಲಿ 'ತಾರಾ' ಹೆಸರಿನ ದೇಸಿ ಗ್ಲೈಡ್ ವೆಪನ್ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿದೆ. ವಿಮಾನದಿಂದ ಬಾಂಬ್ ಬೀಳಿಸಿದ ಮೇಲೆ ಅದು ನೇರವಾಗಿ ಕೆಳಗೆ ಬೀಳದೆ ತೇಲಿಕೊಂಡು ಹೋಗಿ ನಿಖರ ಜಾಗಕ್ಕೆ ಬಿದ್ದು ಸ್ಫೋಟಿಸುವಂತೆ ಮಾಡುವ ತಂತ್ರಜ್ಞಾನ ಇದಾಗಿದೆ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಈ ದೇಸಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ.




ಭಾರತೀಯ ವಾಯುಪಡೆಯ ಸಹಯೋಗದಲ್ಲಿ ಗುರುವಾರ ಒಡಿಶಾ ಕರಾವಳಿಯಲ್ಲಿ ಇದನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಪುಟ 12

### ತಾರಾ ತಂತ್ರಜ್ಞಾನದ ಅನುಕೂಲ

- ಸಾಮಾನ್ಯ ಬಾಂಬ್‌ಗಳನ್ನು ಗ್ಲೈಡ್ ಬಾಂಬ್ ಆಗಿ ಪರಿವರ್ತಿಸುತ್ತದೆ
- ಯುದ್ಧವಿಮಾನದಿಂದ ಬಿದ್ದ ಬಾಂಬ್ ನೇರವಾಗಿ ಕೆಳಗೆ ಬೀಳದೆ ನಿರ್ದೇಶಿತ ಸ್ಥಳಕ್ಕೆ ಹೋಗಿ ಸ್ಫೋಟಿಸುವಂತೆ ಮಾಡುತ್ತದೆ
- ಈಗಾಗಲೇ ಉತ್ಪಾದಿಸಿಟ್ಟ ಹಳೆಯ ಸಾಂಪ್ರದಾಯಿಕ ಬಾಂಬ್‌ಗಳನ್ನು ಇದರ ಮೂಲಕ ಅತ್ಯಾಧುನಿಕ ಬಾಂಬ್ ರೀತಿ ಬಳಸಬಹುದು
- ಯುದ್ಧವಿಮಾನಗಳು ಅಪಾಯಕಾರಿ ಪ್ರದೇಶಗಳಿಗೆ ಹೋಗದೆ ಸುರಕ್ಷಿತ ಜಾಗದಲ್ಲಿ ಇದ್ದುಕೊಂಡೇ 'ತಾರಾ ಬಾಂಬ್' ದಾಳಿ ನಡೆಸಬಹುದು
- ಹಣ ಉಳಿತಾಯ, ಯುದ್ಧವಿಮಾನಗಳ ಪೈಲಟ್‌ಗಳಿಗೆ ಸುರಕ್ಷತೆ

| | | | | | |
|---|---|---|---|---|---|
| ಮೊಟ್ಟೆ ಧಾರಣೆ 100ಕ್ಕೆ-₹590, 10ಕ್ಕೆ- ₹64 | ಚಿಕನ್ ದರ ಕೆಜಿಗೆ ₹280 | ಶುದ್ಧ ಬಂಗಾರ (99.90) ₹1,51,400 | ಸ್ಟ್ಯಾಂಡರ್ಡ್ ಬಂಗಾರ (22 ಕ್ಯಾ.) ₹1,39,950 | ಶುದ್ಧ ಬೆಳ್ಳಿ (.999 ಶುದ್ಧತೆ) ₹2,55,000 | ಪ್ರತಿ ಡಾಲರ್‌ಗೆ ₹94.47 |

C M Y K

# ಬಿ.ಎಸ್.ವೈ. ಅಭಿಮಾನೋತ್ಸವ

## ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯತ್ತ ಬಿ.ಜೆ.ಪಿ. ನಡಿಗೆ ವಿಕಸಿತ ಶಿವಮೊಗ್ಗದೆಡೆಗೆ

## ಬಿ.ಎಸ್.ವೈ ಮತ್ತು ಬಿ.ವೈ.ಆರ್ ಕೊಡುಗೆ

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ವಿಶೇಷವಾಗಿ ಗುರುತಿಸಬಹುದಾದ ಅವಧಿ ಎಂದರೆ ಅದು ಶ್ರೀ ಬಿ.ಎಸ್. ಯಡಿಯೂರಪ್ಪನವರ ಮುಖ್ಯಮಂತ್ರಿಯ ಆಡಳಿತದ ಅವಧಿಯಲ್ಲಿ. ಈ ಅವಧಿಯಲ್ಲಿ ಆಡಳಿತದ ಚುರುಕುತನ, ಅಭಿವೃದ್ಧಿಯ ದಿಟ್ಟ ದೃಷ್ಟಿಕೋನ ಮತ್ತು ಜನಪರ ಯೋಜನೆಗಳ ಅನುಷ್ಠಾನ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು. ರಾಜ್ಯದ ಸಮಗ್ರ ಅಭಿವೃದ್ಧಿಗೆ ಬುನಾದಿ ಹಾಕಿದ ಈ ಅವಧಿಯನ್ನು **"ಸುವರ್ಣ ಯುಗ"** ಎಂದು ಹಲವರು ವರ್ಣಿಸುತ್ತಾರೆ.

ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜೀ ಮತ್ತು ಶ್ರೀ ಬಿ.ಎಸ್. ಯಡಿಯೂರಪ್ಪನವರ ಆಶೀರ್ವಾದದಿಂದ 4 ಬಾರಿ ಸಂಸದರಾಗಿ ಆಯ್ಕೆಯಾದ ಶ್ರೀ ಬಿ.ವೈ ರಾಘವೇಂದ್ರರವರು ಕೂಡ ತಂದೆಯನ್ನು ಮೀರಿಸುವಂತಹ ಅಭಿವೃದ್ಧಿ ಕೆಲಸಗಳನ್ನು ಕ್ಷೇತ್ರದಲ್ಲಿ ಮಾಡಿದ್ದು, ಅವರ ಕೆಲಸಗಳೇ ಮಾತನಾಡುತ್ತಿವೆ.

**ಕೃಷಿ ಕ್ಷೇತ್ರದಲ್ಲಿ ಕ್ರಾಂತಿ :** ರಾಜ್ಯದಲ್ಲಿ ಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡನೆ ಮಾಡುವ ಮೂಲಕ ರೈತರ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಾಯಿತು. **ಕಡಿಮೆ ಬಡ್ಡಿ ದರದ ಸಾಲ, ಉಚಿತ ವಿದ್ಯುತ್, "ಭೂ ಚೇತನ", "ಸುವರ್ಣ ಭೂಮಿ"** ಯೋಜನೆಗಳ ಮೂಲಕ ರೈತರ ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಯಿತು. ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹ ಧನ ನೀಡುವಂತಹ ಕ್ರಮ. ಕೇಂದ್ರ ಸರ್ಕಾರದ ಕಿಸಾನ್ ಸಮ್ಮಾನ್ ಯೋಜನೆಗೆ ವಾರ್ಷಿಕ ರೂ 6,000/– ಸಹಾಯಧನದ ಜೊತೆಗೆ ರಾಜ್ಯ ಸರ್ಕಾರದಿಂದ ರೂ. 4,000/– ಹೆಚ್ಚುವರಿಯಾಗಿ ಸಹಾಯಧನ ನೀಡಿದ ಹೆಗ್ಗಳಿಕೆ ಶ್ರೀ ಬಿ.ಎಸ್. ಯಡಿಯೂರಪ್ಪನವರದ್ದು. ಇವರಿಗೆ ರೈತರ ಬಗ್ಗೆ ಇದ್ದಂತಹ ಅಪಾರವಾದ ಕಾಳಜಿಯನ್ನು ನಾವು ಇಲ್ಲಿ ಸ್ಮರಿಸಬಹುದು.

**ಸಾಮಾಜಿಕ ಭದ್ರತೆ ಮತ್ತು ಜನಪರ ಯೋಜನೆಗಳು : "ಭಾಗ್ಯಲಕ್ಷ್ಮಿ", "ಸಂಧ್ಯಾ ಸುರಕ್ಷಾ", "ಆರೋಗ್ಯ ಕವಚ. 108 ಆಂಬುಲೆನ್ಸ್" "ವೃದ್ಧಾಪ್ಯ ವೇತನ, ವಿಧವಾ ವೇತನ"** ಯೋಜನೆಗಳು ಬಡವರ ಹಾಗೂ ಹಿಂದುಳಿದ ವರ್ಗಗಳ ಬದುಕಿನಲ್ಲಿ ಸ್ಪಷ್ಟ ಬದಲಾವಣೆ ತಂದವು. ಅಂಗವಿಕಲರು, ಹಿರಿಯ ನಾಗರಿಕರು, ದುರ್ಬಲ ವರ್ಗಗಳಿಗೆ ನೇರ ಆರ್ಥಿಕ ನೆರವು ನೀಡುವ ಮೂಲಕ ಸಾಮಾಜಿಕ ಭದ್ರತೆ ವಲಯವನ್ನು ವಿಸ್ತರಿಸಲಾಯಿತು.

**ಶಿಕ್ಷಣ ಮತ್ತು ಯುವಜನತೆ :** ರಾಜ್ಯದಲ್ಲಿ ನೂತನವಾಗಿ 6 ವಿಶ್ವವಿದ್ಯಾಲಯಗಳ ಸ್ಥಾಪನೆ ಹಾಗೂ ಶಿವಮೊಗ್ಗ ಸೇರಿದಂತೆ 6 ವೈದ್ಯಕೀಯ ಕಾಲೇಜುಗಳ ಸ್ಥಾಪನೆ. ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ 232 ಕಿತ್ತೂರು ರಾಣಿ ಚನ್ನಮ್ಮ ಬಾಲಿಕಾ ವಸತಿ ಶಾಲೆಗಳ ನಿರ್ಮಾಣ.

**ಮೂಲಸೌಕರ್ಯ ಮತ್ತು ನಗರಾಭಿವೃದ್ಧಿ :** ರಸ್ತೆಗಳು, ಸೇತುವೆಗಳು, ಕುಡಿಯುವ ನೀರು, ವಿದ್ಯುತ್ ಇವೆಲ್ಲ ಕ್ಷೇತ್ರಗಳಲ್ಲಿ ವ್ಯಾಪಕ ಅಭಿವೃದ್ಧಿ ನಡೆದಿದೆ. ಬೆಂಗಳೂರಿನಲ್ಲಿ ಮೆಟ್ರೋ ಯೋಜನೆಗೆ ವೇಗ ನೀಡಲಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿಯೂ ಮೂಲ ಸೌಕರ್ಯವನ್ನು ವಿಸ್ತರಿಸಲಾಗಿದೆ. **"ನಿರಂತರ ಜ್ಯೋತಿ"** ಯೋಜನೆಯ ಮೂಲಕ ವಿದ್ಯುತ್ ಪೂರೈಕೆಯಲ್ಲಿ ಸುಧಾರಣೆ ತರಲಾಗಿದೆ.

**ಸಮಗ್ರ ಅಭಿವೃದ್ಧಿಯ ದಿಕ್ಕಿನಲ್ಲಿ :** ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಇಷ್ಟು ವ್ಯಾಪಕ ಬದಲಾವಣೆ ಸಾಧ್ಯವಾಗಿರುವುದು ಆಡಳಿತದ ಚುರುಕುತನಕ್ಕೆ ಸಾಕ್ಷಿಯಾಗಿರುವುದು ಶ್ರೀ ಬಿ.ಎಸ್ ಯಡಿಯೂರಪ್ಪನವರ ಅವಧಿಯಲ್ಲಿ. ಬಡವರಿಂದ ಹಿಡಿದು ರೈತರವರೆಗೂ, ವಿದ್ಯಾರ್ಥಿಗಳಿಂದ ಹಿಡಿದು ಉದ್ಯಮಿಗಳವರೆಗೂ ಪ್ರತಿ ವರ್ಗಕ್ಕೂ ಸ್ಪರ್ಶಿಸುವಂತಹ ಹಲವು ಜನಪರ ಹಾಗೂ ಕ್ರಾಂತಿಕಾರಕ ಯೋಜನೆಗಳನ್ನು ಜಾರಿಗೆ ತರಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪನವರ ಅವಧಿಯಲ್ಲಿ ಸಾಧಿಸಿದ ಅಭಿವೃದ್ಧಿ ಕಾರ್ಯಗಳು ಮುಂದಿನ ದಶಕಗಳ ಬೆಳವಣಿಗೆಗೆ ಬಲವಾದ ಅಡಿಗಲ್ಲುಗಳಾಗಿವೆ. ದಿಟ್ಟ ನಿರ್ಧಾರಗಳು, ಜನಪರ ಆಡಳಿತ ಮತ್ತು ಅಭಿವೃದ್ಧಿಯ ಮೇಲಿನ ಒಲವು ಇವುಗಳ ಸಂಯೋಜನೆಯೇ ಈ ಸಾಧನೆಯ ಮೂಲ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

**ಬ್ಯಾಂಕಿಂಗ್ ಕ್ಷೇತ್ರ :** ಶಿವಮೊಗ್ಗ ನಗರದಲ್ಲಿ SIDBI ನೂತನ ಬ್ಯಾಂಕ್ ಸ್ಥಾಪನೆ ಮಾಡಲಾಗಿದೆ.

**ಬೈಂದೂರು ವಿಧಾನಸಭಾ ಕ್ಷೇತ್ರದ ಬಂದರು ಅಭಿವೃದ್ಧಿ :**

- ಗಂಗೊಳ್ಳಿಯಲ್ಲಿ ಕೋಸ್ಟಲ್ ಬರ್ತ್ ನಿರ್ಮಾಣ ರೂ. 96 ಕೋಟಿ.
- ಕೋಡೇರಿಯಲ್ಲಿ ಕಿರು ಬಂದರು ನಿರ್ಮಾಣ ರೂ.63 ಕೋಟಿ.
- ಗಂಗೊಳ್ಳಿ ಬಂದರು ಜಟ್ಟಿ ಅಭಿವೃದ್ಧಿ ರೂ. 12.00 ಕೋಟಿ.
- ಮರವಂತೆಯಲ್ಲಿ ಹೊರಬಂದರು ನಿರ್ಮಾಣ ಮೊದಲ ಹಂತ ರೂ. 45 ಕೋಟಿ.
- ಮರವಂತೆಯಲ್ಲಿ ಹೊರಬಂದರು ನಿರ್ಮಾಣ ಎರಡನೆ ಹಂತ ರೂ. 85 ಕೋಟಿ.
- ಬೈಂದೂರು ಭಾಗದ ಬಂದರುಗಳ ಸಂಪರ್ಕ ರಸ್ತೆ ನಿರ್ಮಾಣ ರೂ. 12 ಕೋಟಿ.
- ಸೌಡ–ಶಂಕರನಾರಾಯಣ ಸೇತುವೆ ನಿರ್ಮಾಣ – ರೂ. 15.48 ಕೋಟಿ.
- ಹಳ್ಳಿಹೊಳೆ ಕಬ್ಬಿನಾಲೆ ಸೇತುವೆ ನಿರ್ಮಾಣ – ರೂ. 3.48 ಕೋಟಿ.

**ತುಂಗಾ ನದಿಗೆ ಪ್ರವಾಹ ತಡೆಗೋಡೆ ನಿರ್ಮಾಣ :**

- ಶಿವಮೊಗ್ಗ ನಗರದ ಹಾಗೂ ಮತ್ತೂರು ಗ್ರಾಮದಲ್ಲಿ ತುಂಗಾ ನದಿಗೆ ತಡೆಗೋಡೆ ನಿರ್ಮಾಣ. ರೂ. 70 ಕೋಟಿ.
- ಕರ್ನಾಟಕ ನೀರಾವರಿ ನಿಗಮದ ವತಿಯಿಂದ ರೂ. 1210 ಕೋಟಿ ವೆಚ್ಚದಲ್ಲಿ 2610 ವಿವಿಧ ರಸ್ತೆಗಳ ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.

**ಅಮೃತ್ 1.0 ಯೋಜನೆ :**

- ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ. 181 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿ ರೂ. 158 ಕೋಟಿ ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದೆ.

**ಅಮೃತ್ 2.0 ಯೋಜನೆ :** ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 321.99 ಕಿಲೋ ಮೀಟರ್ ಕೊಳವೆ ಮಾರ್ಗದ ಮೂಲಕ 15776 ಮನೆಗಳಿಗೆ ನಲ್ಲಿ ಸಂಪರ್ಕ ಮತ್ತು 11 ಓ.ಹೆಚ್.ಟಿ ಟ್ಯಾಂಕ್ ನಿರ್ಮಾಣಕ್ಕೆ ಒಟ್ಟು ರೂ 173.00 ಕೋಟಿ.

**ವೈಯಕ್ತಿಕ ಶೌಚಾಲಯಗಳು :** ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಪ್ರದೇಶಗಳಲ್ಲಿ 2,48,697 ಹಾಗೂ ನಗರ ಪ್ರದೇಶಗಳಲ್ಲಿ 7281 ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಅದೇ ರೀತಿ ಗ್ರಾಮೀಣ ಪ್ರದೇಶದಲ್ಲಿ 183 ಸಮುದಾಯ ಶೌಚಾಲಯ ಗಳನ್ನು ಹಾಗೂ ನಗರ ಪ್ರದೇಶದಲ್ಲಿ 588 ವಿವಿಧ ಬಗೆಯ ಸಮುದಾಯ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

**ವಿಮಾನ ನಿಲ್ದಾಣ :** ಶಿವಮೊಗ್ಗದ ಸೋಗಾನೆಯಲ್ಲಿ 3.2 ಕಿ.ಮಿ. ರನ್ ವೇ ಹೊಂದಿರುವ ಸುಸಜ್ಜಿತ ವಿಮಾನ ನಿಲ್ದಾಣ ಸ್ಥಾಪನೆ ರೂ. 449 ಕೋಟಿ

**ರೈಲ್ವೆ ಯೋಜನೆಗಳು :** ರೈಲ್ವೆ ಕ್ಷೇತ್ರದಲ್ಲಿ ಒಟ್ಟಾರೆಯಾಗಿ ರೂ 1830.00 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಬಹು ಮುಖ್ಯವಾದ ಯೋಜನೆಗಳು ಈ ಕೆಳಗಿನಂತಿವೆ.

- 2009 ಕ್ಕೂ ಮೊದಲು ಕೇವಲ 8 ರೈಲುಗಳು ಮಾತ್ರ ಓಡಾಟ ಇತ್ತು. ಇದೀಗ 28 ರೈಲುಗಳ ಓಡಾಟ.
- ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ನೂತನ ರೈಲ್ವೆ ಮಾರ್ಗ ಅಂದಾಜು ವೆಚ್ಚ ರೂ. 994.47 ಕೋಟಿ.
- ಶಿವಮೊಗ್ಗ–ತಾಳಗುಪ್ಪ ಮೀಟರ್ ಗೇಜ್ ನಿಂದ ಬ್ರಾಡ್ ಗೇಜ್ ಮಾರ್ಗ ಮಾಡಿ ಮೇಲ್ದರ್ಜೆಗೆ ಏರಿಸಿರುವುದು. ರೂ. 280 ಕೋಟಿ.

**ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ :** ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟಾರೆಯಾಗಿ ರೂ 11.280.23 ಕೋಟಿ ವೆಚ್ಚದಲ್ಲಿ ರಸ್ತೆಗಳ ನಿರ್ಮಾಣ. ಬಹು ಮುಖ್ಯವಾದ ಯೋಜನೆಗಳು ಈ ಕೆಳಗಿನಂತಿವೆ.

- ರಾ.ಹೆ. 206 ತುಮಕೂರಿನಿಂದ ಶಿವಮೊಗ್ಗವರೆಗಿನ 214.45 ಕಿ.ಮೀ ಉದ್ದದ 4 ಪಥದ ರಸ್ತೆಯ ನಿರ್ಮಾಣ ರೂ 7158.00 ಕೋಟಿ.
- ರಾ.ಹೆ. 369 ಇ ಸಾಗರ ತಾಲ್ಲೂಕಿನ ಸಿಗಂಧೂರು ಬಳಿ ಶರಾವತಿ ಹಿನ್ನೀರಿಗೆ 2.25 ಕಿ.ಮೀ ಉದ್ದದ ಕೇಬಲ್ ಆಧಾರಿತ ಸೇತುವೆ ನಿರ್ಮಾಣ ರೂ. 478.00 ಕೋಟಿ

- ರಾ.ಹೆ. 13 ಚಿತ್ರದುರ್ಗದಿಂದ – ಶಿವಮೊಗ್ಗವರೆಗಿನ ದ್ವಿಪಥ ರಸ್ತೆ ಹಾಗು ಚಿತ್ರದುರ್ಗ, ಚನ್ನಗಿರಿ, ಹೊಳೆಹೊನ್ನೂರು ಮತ್ತು ಶಿವಮೊಗ್ಗ ನಗರಗಳ 4 ಪಥದ ಬೈಪಾಸ್ ರಸ್ತೆ, ಹಾಗು ಚಿತ್ರದುರ್ಗ, ಹೊಳಲ್ಕೆರೆ, ಶಿವಮೊಗ್ಗ ನಗರಗಳಲ್ಲಿ ರೈಲ್ವೇ ಮೇಲ್ಸೇತುವೆಗಳ ನಿರ್ಮಾಣ ರೂ 516.96 ಕೋಟಿ
- ರಾ.ಹೆ. 766 (ಸಿ) ಬೈಂದೂರು – ರಾಣೇಬೆನ್ನೂರು ದ್ವಿಪಥ ರಸ್ತೆ ನಿರ್ಮಾಣ ರೂ. 218.98 ಕೋಟಿ
- ರಾ.ಹೆ. 766ಸಿ ಹೊಸನಗರದ ಮಾವಿನಕೊಪ್ಪ ದಿಂದ ಆಡುಗೋಡಿವರೆಗೆ ಬೈಪಾಸ್ ರಸ್ತೆ ನಿರ್ಮಾಣ ಹಾಗು 2 ಭಾರೀ ಸೇತುವೆಗಳ ನಿರ್ಮಾಣ ರೂ. 313.56 ಕೋಟಿ.
- ರಾ.ಹೆ 766ಸಿ ಬೈಂದೂರಿನಿಂದ ನಾಗೋಡಿವರೆಗೆ ದ್ವಿಪಥ ರಸ್ತೆ ನಿರ್ಮಾಣಕ್ಕೆ ರೂ. 394.95 ಕೋಟಿ
- ರಾ.ಹೆ. 169 ಶಿವಮೊಗ್ಗ ಮುಡಬದಿಂದರಿಂದ ತೀರ್ಥಹಳ್ಳಿಯವರೆಗೆ 4 ಪಥದ ರಸ್ತೆ ನಿರ್ಮಾಣಕ್ಕೆ – 538.71 ಕೋಟಿ

**ನೀರಾವರಿ ಕ್ಷೇತ್ರ :** ಶ್ರೀ ಬಿ.ಎಸ್ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟಾರೆಯಾಗಿ ರೂ 2168.76 ಕೋಟಿ ವೆಚ್ಚದಲ್ಲಿ ಸುಮಾರು 600 ಕ್ಕೂ ಹೆಚ್ಚು ಕೆರೆಗಳಿಗೆ ನೀರು ತುಂಬಿಸುವ ಕೆಲಸವಾಗಿದೆ. ತಂದೆಯವರ ಸಹಕಾರದಿಂದ ಈ ಕೆಲಸ ಆಗಿರುವುದಾಗಿ ಸಂಸದರಾದ ಬಿ.ವೈ ರಾಘವೇಂದ್ರವರು ಸಂತಸ ವ್ಯಕ್ತಪಡಿಸಿದ್ದು, ಶಿವಮೊಗ್ಗ ಜಿಲ್ಲೆಯ ವಿವಿಧ ಕೆರೆಗಳಲ್ಲಿ ಈಗ ಬೇಸಿಗೆಯಲ್ಲೂ ಸಹ ನೀರು ದೊರೆಯುವಂತಹ ಕೆಲಸ ಆಗಿದೆ.

- ಶಿವಮೊಗ್ಗ ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಹತ್ತಿರ (ಅರಕೆರೆ ಹತ್ತಿರ) ತುಂಗಾ ನದಿಯಿಂದ ನೀರನ್ನೆತ್ತಿ ಕುಂಸಿ, ಹಾರನಹಳ್ಳಿ ಹೋಬಳಿಯ 75 ಕೆರೆಗಳಿಗೆ ಹಾಗೂ ಅಂಜನಾಪುರ ಜಲಾಶಯಕ್ಕೆ ನೀರು ತುಂಬಿಸುವ ಯೋಜನೆ – ರೂ. 250 ಕೋಟಿ
- ಉಡುಗಣಿ–ತಾಳಗುಂದ–ಹೊಸೂರು ಹೋಬಳಿಯ 290 ಕೆರೆ ತುಂಬಿಸುವ ಯೋಜನೆ–ರೂ. 890 ಕೋಟಿ.
- ಕಸಬಾ ಏತ ನೀರಾವರಿ ಯೋಜನೆಯಡಿ 17 ಗ್ರಾಮಗಳ ಸುಮಾರು 3430 ಹೆಕ್ಟೇರ್ ಪ್ರದೇಶಕ್ಕೆ ನೀರು ಕಲ್ಪಿಸುವುದು ರೂ. 125 ಕೋಟಿ.
- ಸೊರಬ ತಾಲ್ಲೂಕಿನ ಮೂಡಿ ಗ್ರಾಮದ ಸಮೀಪ ವರದಾ ನದಿಯಿಂದ 38 ಗ್ರಾಮಗಳ 66 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ರೂ. 285 ಕೋಟಿ.

- ಸೊರಬ ತಾಲ್ಲೂಕಿನ ಮೂಗೂರು ಗ್ರಾಮದ ಸಮೀಪ ವರದಾ ನದಿಯಿಂದ 16 ಗ್ರಾಮಗಳ 31 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ರೂ. 105.00 ಕೋಟಿ.
- ಸೊರಬ ತಾಲ್ಲೂಕಿನ ಕಚವಿ ಗ್ರಾಮದ ಸಮೀಪ ವರದಾ ನದಿಯಿಂದ 16 ಗ್ರಾಮಗಳ 32 ಕೆರೆಗಳಿಗೆ ಸಣ್ಣ ನೀರಾವರಿ ಇಲಾಖೆಯ ಮೂಲಕ ನೀರು ತುಂಬಿಸುವ ಯೋಜನೆ–ರೂ. 16.50 ಕೋಟಿ.
- ಶಿವಮೊಗ್ಗದ ಮಂಡಗದ್ದೆ ಬಳಿ ತುಂಗಾ ನದಿಗೆ ತೀರ್ಥಹಳ್ಳಿ ತಾಲ್ಲೂಕಿನ ರಾಮಯ್ಯನ ಕೆರೆ, ಸೂರಯ್ಯನ ಕೆರೆ, ತೋಟದ ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ ರೂ. 8.00

- ಶಿವಮೊಗ್ಗ ತಾಲ್ಲೂಕಿನ ಹೊಳೆಹನಸವಾಡಿ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಮೂಲಕ 29 ಕೆರೆಗೆಳಿಗೆ ನೀರು ತುಂಬಿಸುವ ಯೋಜನೆ: ರೂ. 29 ಕೋಟಿ.
- ಹೊಳಲೂರು ಬೂದಿಗೆರೆ ಏತ ನೀರಾವರಿ ಯೋಜನೆ ರೂ. 11 ಕೋಟಿ.
- ಕಾಕನ ಹೊಸೂಡಿ ಏತ ನೀರಾವರಿ ಯೋಜನೆ ರೂ. 8 ಕೋಟಿ.

**ಸಂಸತ್ ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆ :** ಬಸ್ ನಿಲ್ದಾಣ, ಹೈಮಾಸ್ಕ್ ಬೀದಿ ದೀಪ, ಕಾಲು ಸಂಕ, ರಸ್ತೆ, ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿ, ಸಮುದಾಯ ಭವನ, ಕುಡಿಯುವ ನೀರಿನ ಘಟಕಗಳು, ಸರ್ಕಾರಿ ಶಾಲಾ/ಕಾಲೇಜುಗಳಿಗೆ ಸ್ಮಾರ್ಟ್ ಬೋರ್ಡ್ ಅಳವಡಿಕೆ ಇತ್ಯಾದಿ ಸೌಲಭ್ಯಗಳನ್ನು ಒಟ್ಟು ರೂ 65.00 ಕೋಟಿ ವೆಚ್ಚದಲ್ಲಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

**ಪಿ.ಎಂ.ಜಿ.ಎಸ್.ವೈ. ಯೋಜನೆಯಡಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ :**

- ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನ ಸಭಾ ಕ್ಷೇತ್ರಗಳಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 3 ಹಂತಗಳಲ್ಲಿ 253 ರಸ್ತೆಗಳನ್ನು ಕೈಗೆತ್ತಿಕೊಂಡು ಒಟ್ಟು 1209.09 ಕಿ.ಮೀ ಉದ್ದದ ರಸ್ತೆಯನ್ನು 443.42 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.

**ಬಿ.ಎಸ್.ಎನ್.ಎಲ್ ಟವರ್‌ಗಳ ಸ್ಥಾಪನೆ :** ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ತಾಲ್ಲೂಕುಗಳಲ್ಲಿ ಒಟ್ಟು 232 4ಜಿ ಬಿ.ಎಸ್.ಎನ್.ಎಲ್ ಟವರ್ ಗಳು ಮಂಜೂರಾಗಿದ್ದು, ಈಗಾಗಲೇ 130 ಸಾರ್ವಜನಿಕ ಸೇವೆಗೆ ಸಮರ್ಪಿಸಲಾಗಿದ್ದು, 102 ಟವರ್ ಗಳ ಕಾಮಗಾರಿ ಪ್ರಗತಿಯಲ್ಲಿದೆ.

**ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ :** ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ 108 ಗ್ರಾಮಗಳಿಗೆ ತಲಾ ರೂ 20.00 ಲಕ್ಷದಂತೆ ಒಟ್ಟು ರೂ 24.25 ಕೋಟಿ ಅನುದಾನದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

**ಜಲ ಜೀವನ್ ಮಿಷನ್ ಯೋಜನೆ (ಗ್ರಾಮೀಣ ಕುಡಿಯುವ ನೀರು) :** ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ರೂ 815.42 ಕೋಟಿ ವೆಚ್ಚದಲ್ಲಿ ಒಟ್ಟು 3,02,800 ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲಾಗಿದೆ.

**ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು :** ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಬಹುಗ್ರಾಮ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದ್ದು, ರೂ 1994.05 ಕೋಟಿ ವೆಚ್ಚದಲ್ಲಿ ಒಟ್ಟು 2,15,122 ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲಾಗಿದೆ.

**ಶಿಕ್ಷಣ ಕ್ಷೇತ್ರ :**

- ಶಿವಮೊಗ್ಗದ ಸಂತೆಕಡೂರಿನಲ್ಲಿ ಕೇಂದ್ರೀಯ ವಿದ್ಯಾಲಯ ಸ್ಥಾಪನೆ.
- ಶಿವಮೊಗ್ಗದ ನವುಲೆ ರಾಗಿಗುಡ್ಡದಲ್ಲಿ ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯದ ಕ್ಯಾಂಪಸ್ ಸ್ಥಾಪನೆ.
- ಪಿ.ಎಂ.ಶ್ರೀ ಯೋಜನೆಯಡಿ 9 ಸರ್ಕಾರಿ ಶಾಲೆಗಳ ಅಭಿವೃದ್ಧಿ – ರೂ. 15.00 ಕೋಟಿ
- ಕೇಂದ್ರ ರಾಷ್ಟ್ರೀಯ ಗ್ರಾಮೀಣ ಸಾಕ್ಷರತಾ ಮಿಷನ್ ವತಿಯಿಂದ 8 ವಿಧಾನ ಸಭಾ ಕ್ಷೇತ್ರಗಳಲ್ಲಿ ಒಂದು ಲಕ್ಷ ಮಕ್ಕಳಿಗೆ ಉಚಿತವಾಗಿ ಶಾಲಾ ಬ್ಯಾಗ್ ಗಳನ್ನು ಹಾಗೂ 60 ಸಾವಿರ ಮಕ್ಕಳಿಗೆ ಸ್ವೆಟರ್ ಗಳನ್ನು ವಿತರಿಸಲಾಗಿದೆ.

**ಎಫ್.ಎಂ. ರೇಡಿಯೋ ಉಪ ಪ್ರಸಾರ ಕೇಂದ್ರ :** ಭದ್ರಾವತಿ ಆಕಾಶವಾಣಿ ಕೇಂದ್ರದಿಂದ 10 ಕಿ.ವ್ಯಾ ಸಾಮರ್ಥ್ಯದ ಎಫ್.ಎಂ. ರೇಡಿಯೋವನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲಾಗಿದೆ. ರೂ. 9.62 ಕೋಟಿ.

**ವೈದ್ಯಕೀಯ ಕ್ಷೇತ್ರ :**

- ಶಿವಮೊಗ್ಗದ ನವುಲೆ ರಾಗಿಗುಡ್ಡ ಬಳಿ 100 ಹಾಸಿಗೆಗಳ ಇ.ಎಸ್.ಐ. ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಹಾಗೂ 32 ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣಕ್ಕೆ – ರೂ. 100 ಕೋಟಿ. ಕೇಂದ್ರ ಸರ್ಕಾರಿ ನೌಕರರಿಗೆ ಸಿ.ಜಿ.ಹೆಚ್.ಎಸ್. ವೆಲ್ನೆಸ್ ಸೆಂಟರ್ ಸ್ಥಾಪನೆ.

**ರಾಪಿಡ್ ಆಕ್ಷನ್ ಫೋರ್ಸ್ :**

- ಭದ್ರಾವತಿಯ ಬುಳ್ಳಾಪುರ ಗ್ರಾಮದಲ್ಲಿ 50.29 ಎಕರೆ ಪ್ರದೇಶದಲ್ಲಿ ರಾಪಿಡ್ ಆಕ್ಷನ್ ಫೋರ್ಸ್ ಸ್ಥಾಪನೆ.

**ಆದರ್ಶ ಗ್ರಾಮ ಯೋಜನೆ :**

- ಪಿ.ಎಂ. ಆದರ್ಶ ಗ್ರಾಮ ಯೋಜನೆಯಡಿ ಕ್ಷೇತ್ರದ 80 ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ. 15.403 ಕೋಟಿ.
- 4 ಸಂಸದರ ಆದರ್ಶ ಗ್ರಾಮ ಯೋಜನೆಯಡಿ ಶಿವಮೊಗ್ಗ ತಾಲ್ಲೂಕಿನ ಹೊಳಲೂರು ಮತ್ತು ಸಾಗರ ತಾಲ್ಲೂಕಿನ ತ್ಯಾಗರ್ತಿ ಗ್ರಾಮ ಪಂಚಾಯತಿಗಳ ವಿವಿಧ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿ

**ಪ್ರವಾಸೋದ್ಯಮ ಕ್ಷೇತ್ರ :**

- ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹಧಾಮ ಹಾಗೂ ಕಾಡುಕೋಣದ ಸಫಾರಿಯನ್ನು ರೂ 1,464 ಲಕ್ಷಗಳಲ್ಲಿ ವೆಚ್ಚ ಮಾಡಿ ಅಭಿವೃದ್ಧಿ ಪಡಿಸಲಾಗಿದೆ.
- ಕೊಡಚಾದ್ರಿ ಮತ್ತು ಕೊಲ್ಲೂರು ನಡುವೆ ಕೇಬಲ್ ಕಾರ್ (3.80 ಕಿ.ಮೀ. ಉದ್ದದ ರೋಪ್ ವೇ ನಿರ್ಮಾಣಕ್ಕೆ) ರೂ. 320 ಕೋಟಿ
- ಜೋಗ್ ಜಲಪಾತದ ಸಮಗ್ರ ಅಭಿವೃದ್ಧಿಗೆ ರೂ.81 ಕೋಟಿ.
- ಉಡುತಡಿಯಲ್ಲಿ ಅಕ್ಕಮಹಾದೇವಿ ಜನ್ಮ ಸ್ಥಳ ಸಮಗ್ರ ಅಭಿವೃದ್ಧಿಗೆ ರೂ. 49 ಕೋಟಿ.
- ಮರವಂತೆ ಮತ್ತು ಸೋಮೇಶ್ವರ ಬೀಚ್ ಅಭಿವೃದ್ಧಿ ರೂ. 25 ಕೋಟಿ.

# ಮತ ಡಕಾಯಿತಿ ಸಿಎಂ ಸಾಬೀತು ಮಾಡಲಿ

**ಚಿಕ್ಕಮಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಮತ ಡಕಾಯಿತಿ ನಡೆದಿದೆ ಎಂದು ಸಿಎಂ ಸಿದ್ದರಾಮಯ್ಯ ಆರೋಪ ಮಾಡಿದ್ದಾರೆ. ಆದರೆ ಆ ಆರೋಪಗಳಿಗೆ ಪುರಾವೆಗಳಿದ್ದರೆ ಸಾಬೀತುಪಡಿಸಲಿ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರೇ ಮತ ಡಕಾಯಿತಿ ಮಾಡಿದರು ಅವರ ಮೇಲೆ ಕಠಿಣ ಶಿಕ್ಷೆ ಆಗಲಿ. ಅದನ್ನು ಬಿಟ್ಟು ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯರಿದ್ದಾರೆ. ಅವರ ಬಳಿ ಯಾವುದೇ ದಾಖಲೆಗಳಿದ್ದರೆ ಅದನ್ನು ಸಾಬೀತುಪಡಿಸಲಿ. ಅದನ್ನು ಬಿಟ್ಟು ಸುಮ್ಮನೆ ಮಾತನಾಡಿದರೆ ಸರಿಯಲ್ಲ ಎಂದರು. ಒಂದು ವೇಳೆ ಮತ ಡಕಾಯತಿ ನಡೆದಿದ್ದರೆ ನಾನು ಸಹಿಸುವುದಿಲ್ಲ. ಅವರು ಯಾವುದೇ ಪಕ್ಷದವರಾಗಿರಲಿ. ಮತ ಡಕಾಯತಿ ನಡೆದಿದೆ ಎಂದಾದರೆ ಚುನಾವಣಾ ಆಯೋಗದ ಮುಂದೆ ಇಲ್ಲವೆ ನ್ಯಾಯಾಲಯದ ಎದುರು ಸಾಬೀತುಪಡಿಸಿ. ಇಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇಬೇಕು ಎಂದು ಆಗ್ರಹಿಸಿದರು.

2023ರ ಚುನಾವಣೆ ಫಲಿತಾಂಶ ಹಾಗೂ 2026ರಲ್ಲಿ ನಡೆದ ಮರುಮತ ಎಣಿಕೆಯ ಫಲಿತಾಂಶಗಳು ವೈರುಧ್ಯವಾಗಿವೆ. ಇದರಲ್ಲಿ ಒಂದು ಸತ್ಯವಾಗಿರಲು ಸಾಧ್ಯ. ಈ ಸತ್ಯಾಸತ್ಯತೆ ಬಗ್ಗೆ ಹೇಳುವ ಅಧಿಕಾರ ನನಗಿಲ್ಲ. ಸಿಎಂ ಬಳಿ ದಾಖಲೆಗಳಿದ್ದರೆ ನ್ಯಾಯಾಲಯದ ಎದುರು ಇಡಲಿ. ಅದನ್ನು ಬಿಟ್ಟು ಸಾರ್ವಜನಿಕವಾಗಿ ಮಾತನಾಡುವುದು ಸರಿಯಲ್ಲ. ನ್ಯಾಯಾಲಯಕ್ಕೆ ದಾಖಲೆ ಕೊಡಿ ಎಂದು ಒತ್ತಾಯಿಸಿದರು.

## ಪವರ್ ಲಿಫ್ಟಿಂಗ್ ಸ್ಪರ್ಧೆ: ಕಾರ್ತಿಕ್‌ಗೆ ಕಂಚು

**ಭದ್ರಾವತಿ:** ಮಂಗಳೂರಿನ ಕಿನ್ನಿಗೋಳದಲ್ಲಿ ಜರುಗಿದ ಕರ್ನಾಟಕ ರಾಜ್ಯ ಪವರ್‌ಲಿಫ್ಟಿಂಗ್ ಪಂದ್ಯಾವಳಿಯಲ್ಲಿ ಕ್ರೀಡಾಪಟು ಕಾರ್ತಿಕ್ ಭಾಗವಹಿಸಿ ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದಾರೆ.



83 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿ ಸ್ಕ್ವಾಟ್‌ನಲ್ಲಿ 255 ಕೆ.ಜಿ., ಬೆಂಚ್ ಪ್ರೆಸ್‌ನಲ್ಲಿ 150 ಕೆ.ಜಿ ಮತ್ತು ಡೆಡ್ ಲಿಫ್ಟ್‌ನಲ್ಲಿ 245 ಕೆ.ಜಿ. ಸೇರಿ ಒಟ್ಟು 650 ಕೆ.ಜಿ ಭಾರ ಎತ್ತುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಕಂಚಿನ ಪದಕ ಗೆಲ್ಲುವ ಮೂಲಕ ತಾಲೂಕಿಗೆ ಕೀರ್ತಿ ತಂದಿದ್ದಾರೆ.ಇವರು ತರಬೇತುದಾರರಾದ ರಾಕೇಶ್ ಉಪಾಧ್ಯಾಯ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದಿದ್ದು, ಕುವೆಂಪು ವಿಶ್ವವಿದ್ಯಾಲಯದ ಲೀಲಾವತಿ ರಮೇಶ್‌ರವರು ಪುತ್ರರಾಗಿದ್ದಾರೆ.

## ಆಕಸ್ಮಿಕ ವಿದ್ಯುತ್ ತಗುಲಿ ಸಾವು

**ತ್ಯಾಗರ್ತಿ:** ಅಡಿಕೆ ತೋಟಕ್ಕೆ ನೀರು ಹಾಯಿಸಲು ಹೋಗಿದ್ದ ಮರಾಠಿ ಸುರೇಶ್ (49) ಆಕಸ್ಮಿಕ ವಿದ್ಯುತ್ ತಗುಲಿ ಶುಕ್ರವಾರ ಬೆಳಗ್ಗೆ ಸಾವನ್ನಪ್ಪಿದ್ದಾರೆ.

ಸಾಗರ ತಾಲ್ಲೂಕಿನ ತ್ಯಾಗರ್ತಿಯ ತಮ್ಮ ಜಮೀನಿನಲ್ಲಿ ಅಡಿಕೆ ಬೆಳೆದಿದ್ದು ಎಂದಿನಂತೆ ಇಂದು ಬೆಳಗ್ಗೆ 6.30ರ ಸುಮಾರಿಗೆ ನೀರು ಹಾಯಿಸಲು ಹೋದಾಗ ಕೊಳವೆ ಬಾವಿಗೆ ಎಳೆದಿರುವ ವಿದ್ಯುತ್ ವೈರ್ ಡ್ಯಾಮೇಜ್ ಆಗಿರುವುದು ತಿಳಿಯದೇ ಕಾಲು ತಗುಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

## ಮನೆ ಬೀಗ ಮುರಿದು 19ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳ ಕಳ್ಳತನ

**ಶಿವಮೊಗ್ಗ:** ಹಾಡಹಗಲೇ ಮನೆಯ ಬೀಗ ಮುರಿದು ಬರೋಬ್ಬರಿ 19 ಲಕ್ಷಕ್ಕೂ ಅಧಿಕ ಮೌಲ್ಯದ ಚಿನ್ನ, ದುಡ್ಡು ಕಳವು ಮಾಡಿದ ಘಟನೆಯೊಂದು ಶಿವಮೊಗ್ಗ ನಗರದಲ್ಲಿಯೇ ನಡೆದಿದೆ.

ಮೇ 4ರಂದು ಜಯನಗರ ಠಾಣೆಯ ವೆಂಕಟೇಶ್ ನಗರದ ಮನೆಯೊಂದರಲ್ಲಿ ಈ ಘಟನೆ ನಡೆದಿದೆ. ಪ್ರಶಾಂತ್ ಎಂಬುವರ ಮನೆಯಲ್ಲಿ ಮಟ ಮಟ ಮಧ್ಯಾಹ್ನವೇ ಕಳ್ಳರು ಕೃತ್ಯ ಎಸಗಿ ಪರಾರಿಯಾಗಿದ್ದಾರೆ. 4,00,000 ನಗದು, 1,68,000 ರೂಪಾಯಿ ಮೌಲ್ಯದ 14 ಗ್ರಾಂ ತೂಕದ ಚಿನ್ನದ ಬ್ರಾಸ್‌ಲೈಟ್, 1,20,000 ರೂಪಾಯಿ ಬೆಲೆಯ 10 ಗ್ರಾಂ ಚಿನ್ನದ ಚೈನ್, 1,80,000 ರೂಪಾಯಿ ಮೌಲ್ಯದ 15 ಗ್ರಾಂ ಚಿನ್ನದ ಚೈನ್, 60,000 ರೂಪಾಯಿ ಬೆಲೆಯ 5 ಗ್ರಾಂ ಚಿನ್ನದ ಚೈನ್ ಹಾಗೂ ಮತ್ತೊಂದು 1,20,000 ರೂಪಾಯಿ ಮೌಲ್ಯದ 10 ಗ್ರಾಂ ಚಿನ್ನದ ಚೈನ್ 1,20,000 ರೂಪಾಯಿ ಮೌಲ್ಯದ 10 ಗ್ರಾಂ ತೂಕದ ಚಿನ್ನದ ಉಂಗುರ, 60, 000 ರೂಪಾಯಿ ಬೆಲೆಯ 5 ಗ್ರಾಂ ಚಿನ್ನದ ಉಂಗುರ, 24,000 ರೂಪಾಯಿ ಮೌಲ್ಯದ 2 ಗ್ರಾಂ ಚಿನ್ನದ ಉಂಗುರ ಸೇರಿದಂತೆ ಒಟ್ಟು 15,12,000 ರೂಪಾಯಿ ಮೌಲ್ಯದ 126 ಗ್ರಾಂ ತೂಕದ ಚಿನ್ನಾಭರಣ ಕಳ್ಳತನವಾಗಿದೆ.

## ಜಿಮ್ ಟ್ರೈನರ್ ಮೇಲೆ ರಾಡ್‌ನಿಂದ ಹಲ್ಲೆ

**ಶಿವಮೊಗ್ಗ:** ಇಲ್ಲಿನ ವಿನಾಯಕ ನಗರದ ಜಿಮ್ ಟ್ರೈನರ್ ಒಬ್ಬರ ಮೇಲೆ ಅನಾಮಧೇಯ ವ್ಯಕ್ತಿಯೊಬ್ಬ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿರುವ ಘಟನೆ ನಡೆದಿದೆ.

ಜಿಮ್ ಟ್ರೈನರ್ ರಾತ್ರಿ 9.10ರ ಸುಮಾರಿಗೆ ಕೆಲಸ ಮುಗಿಸಿ ಮನೆಗೆ ತೆರಳಲು ಜಿಮ್‌ನಿಂದ ಹೊರಬಂದಿದ್ದರು. ಫುಟ್‌ಪಾತ್‌ನಲ್ಲಿ ನಿಲ್ಲಿಸಿದ್ದ ತಮ್ಮ ಬೈಕ್ ಹತ್ತಲು ರೆಡಿಯಾದಾಗ, ಸುಮಾರು 25ರಿಂದ 30 ವರ್ಷ ವಯಸ್ಸಿನ ಅನಾಮಧೇಯ ವ್ಯಕ್ತಿಯೊಬ್ಬ ಅವಾಚ್ಯ ಶಬ್ದಗಳಿಂದ ನಿಂದಿಸಿ, ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದ್ದಾನೆ. ತಲೆಯ ಭಾಗಕ್ಕೆ ತೀವ್ರ ಪೆಟ್ಟು ಬಿದ್ದಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಜಿಮ್ ಟ್ರೈನರನ್ನು ಮೆಗ್ಗಾನ್ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಈ ಸಂಬಂಧ ವಿನೋಬನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> ರಾಜ್ಯ ಕಂಡ ಅತ್ಯಂತ ಜನಪ್ರಿಯ ಮುಖ್ಯಮಂತ್ರಿ ಹಾಗೂ ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಮತ್ತು ನನ್ನ ನಡುವಿನ ಒಡನಾಟ ನಾಲ್ಕು ದಶಕಗಳಿಗೂ ಮೀರಿದ್ದು. ನನ್ನನ್ನು ರಾಜಕೀಯಕ್ಕೆ ಕರೆ ತಂದವರೇ ಯಡಿಯೂರಪ್ಪನವರು. ರಾಣಿ ಚನ್ನಮ್ಮ ಮೈದಾನ (ಈದ್ಗಾ) ಹೋರಾಟದಲ್ಲಿ ನನ್ನ ಬೆಂಬಲಕ್ಕೆ ನಿಂತು, ಧೈರ್ಯ ತುಂಬಿದ್ದನ್ನು ನಾನು ಎಂದಿಗೂ ಮರೆಯಲಾರೆ. ಏಕೆಂದರೆ ರಾಜಕಾರಣದಲ್ಲಿ ಹೋರಾಟ ಬಹಳ ಮುಖ್ಯ. ನನ್ನ ಹೋರಾಟಗಳಿಗೆ ಬೆನ್ನೆಲುಬಾಗಿ ಯಾರಾದರೂ ಹಿರಿಯ ನಾಯಕರು ನಿಂತರೆ ನಮ್ಮ ಉತ್ಸಾಹ ಇಮ್ಮಡಿಯಾಗುತ್ತದೆ ಮತ್ತು ನಮ್ಮಲ್ಲಿ ಹೋರಾಟದ ಕಿಚ್ಚು ಹೆಚ್ಚುತ್ತದೆ. ನನ್ನಲ್ಲಿದ್ದ ಹೋರಾಟದ ಗುಣಕ್ಕೆ ಯಡಿಯೂರಪ್ಪ ಅವರು ಮುಖ್ಯ ಕಾರಣ.

ಮಾಜಿ ಶಾಸಕರಾದ ಅಶೋಕ ಕಾಟವೆ ಅವರು ಯಡಿಯೂರಪ್ಪನವರೊಂದಿಗೆ ಉಭಯ ಕುಶಲೋಪರಿ ನಡೆಸಿದ ಕ್ಷಣ.

# ಕರ್ನಾಟಕ ಬಿಜೆಪಿ ಪಾಳಯ ಗಟ್ಟಿಗೊಳಿಸಿದ ಜನನಾಯಕ 'ಬಿಎಸ್‌ವೈ'

- ಅಶೋಕ ಕಾಟವೆ, ಮಾಜಿ ಶಾಸಕರು

ಉತ್ತರ ಹಾಗೂ ಕಲ್ಯಾಣ ಕರ್ನಾಟಕ ಪ್ರಾಂತ್ಯಗಳೆಂದರೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಇನ್ನಿಲ್ಲದ ಪ್ರೀತಿ. ಹೀಗಾಗಿ ಇವರು ಉತ್ತರ ಮತ್ತು ಕಲ್ಯಾಣ ಕರ್ನಾಟಕದ ಮನೆಮನೆಗಳಲ್ಲೂ 'ಅಪ್ಪಾಜಿ' ಎಂದೇ ಜನಪ್ರಿಯ.

ಯಡಿಯೂರಪ್ಪನವರು ಅಧಿಕಾರಕ್ಕೇರುವ ಮೊದಲಿನಿಂದಲೂ ಉತ್ತರದ ಭಾಗಗಳ ಅಭಿವೃದ್ಧಿಯ ಸಲುವಾಗಿ ಮಾಡಿದ ಹೋರಾಟಗಳು ಅಷ್ಟಿಷ್ಟಲ್ಲ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವ ಪೂರ್ವದಲ್ಲಿಯೇ ಅಭಿವೃದ್ಧಿ ವಂಚಿತ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ನೆಲದ ಸಲುವಾಗಿ ಸಕ್ರಿಯ ಹೋರಾಟ ಆರಂಭಿಸಿದವರು. ಇವರ ಹೋರಾಟದ ಫಲವಾಗಿಯೇ ಉತ್ತರದ ಜಿಲ್ಲೆಗಳೆಲ್ಲ ಕೇಸರಿ ಪಾಳಯದ ಗಟ್ಟಿ ನೆಲವಾದವು ಎಂಬುದು ಮಾಜಿ ಶಾಸಕ 'ಅಶೋಕ ಕಾಟವೆ' ಅವರು ಗಟ್ಟಿಯಾದ ಮಾತುಗಳು.

> ## ಸೈಕಲ್‌ನಲ್ಲಿ ಸಂಚರಿಸಿ ಹೋರಾಟದಲ್ಲಿ ಭಾಗಿ
>
> ಹುಬ್ಬಳ್ಳಿಗೆ ರಾಣಿ ಚನ್ನಮ್ಮ ಮೈದಾನ (ಈದ್ಗಾ) ಹೋರಾಟದಲ್ಲಿ ಯಡಿಯೂರಪ್ಪನವರು ನಿರಂತರವಾಗಿ ಭಾಗವಹಿಸಿದ್ದಾರೆ. ಶಿವಮೊಗ್ಗದಿಂದ ಬಸ್ ಮೂಲಕ ಬಂದು ಹುಬ್ಬಳ್ಳಿಯಲ್ಲಿ ಸೈಕಲ್ ಮೂಲಕ ಅಲೆದಾಡಿ ಹೋರಾಟದಲ್ಲಿ ತೊಡಗುತ್ತಿದ್ದರು. ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ ಜನಪ್ರತಿನಿಧಿಯಾಗಿದ್ದರು. ಗ್ರಾಮೀಣ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಲಿ ಎಂಬ ಉದ್ದೇಶದಿಂದ ಮೊಟ್ಟ ಮೊದಲ ಬಾರಿಗೆ ಸೈಕಲ್ ಭಾಗ್ಯ ನೀಡಿದರು. ಮಹಿಳೆಯರು ಸ್ವಾವಲಂಬಿಯಾಗಲು ಭಾಗ್ಯ ಲಕ್ಷ್ಮೀ ಬಾಂಡ್ ಯೋಜನೆ ಜಾರಿಗೆ ತಂದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಪಕ್ಷ ಸಂಘಟನೆಗೆ ಅಹೋರಾತ್ರಿ ದುಡಿದಿದ್ದಾರೆ. ಅವರೊಂದಿಗೆ ಅನೇಕ ಹೋರಾಟದಲ್ಲಿ ಭಾಗವಹಿಸಲು ಅವಕಾಶ ದೊರೆತಿರುವುದು ನನ್ನ ಸೌಭಾಗ್ಯ ಎಂದು ಹೇಳಬಹುದು.

ಅಜಾತ ಶತ್ರುವಾದ, ಹುಟ್ಟು ಹೋರಾಟಗಾರ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಪ್ರಭಾವಶಾಲಿ ಹಾಗೂ ಜನಪ್ರಿಯ ನಾಯಕರಲ್ಲಿ ಒಬ್ಬರಾಗಿದ್ದಾರೆ.

ಬಿ.ಎಸ್. ಯಡಿಯೂರಪ್ಪ ಸಿಟ್ಟಿನ ಸ್ವಭಾವದವರಾದರೂ ಸಹ ಪ್ರತಿಯೊಬ್ಬರನ್ನು ಪ್ರೀತಿ ಹಾಗೂ ವಿಶ್ವಾಸದಿಂದ ಕಾಣುವ ಗುಣವಂತರಾಗಿದ್ದರು. ಸುಮಾರು 40 ವರ್ಷಗಳ ಕಾಲ ನನ್ನ ಹಾಗೂ ಅವರ ಒಡನಾಟವಿದ್ದು, ರಾಮ ಮಂದಿರ, ಕಾಶ್ಮೀರ ತಿರಂಗ, ಹುಬ್ಬಳ್ಳಿ ಈದ್ಗಾ ಹೋರಾಟದಲ್ಲಿ ಅವರೊಂದಿಗೆ ಭಾಗವಹಿಸಿದ್ದು, ಅವಿಸ್ಮರಣೀಯವಾಗಿದೆ. ಎಷ್ಟೋ ಜನರಿಗೆ ರಾಜಕೀಯ ಗುರುವಾದ ಅವರು, ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಭದ್ರ ಬುನಾದಿಯನ್ನು ಹಾಕಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಇಡೀ ರಾಜ್ಯವನ್ನು ಬಸ್‌ನಲ್ಲಿ ಅಲೆದಾಡುವ ಮೂಲಕ ಪಕ್ಷ ಸಂಘಟನೆ ಮಾಡಿದರು. ಬಿ.ಎಸ್. ಯಡಿಯೂರಪ್ಪ ಗುಡುಗಿದರೆ ಆ ಸಮಯದಲ್ಲಿ ವಿಧಾನ ಸೌಧ ನಡುಗುತ್ತಿತ್ತು. ಶಿಕಾರಿಪುರದಿಂದ ಮೊಟ್ಟ ಮೊದಲ ಬಾರಿಗೆ ಪಂಚಾಯ್ತಿಗೆ ಆಯ್ಕೆಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಹೋರಾಟದ ವೇಳೆ ಅವರ ಮೇಲೆ ಮಾರಣಾಂತಿಕ ಹಲ್ಲೆಯಾಗಿತ್ತು, ಇದೆಲ್ಲವನ್ನೂ ಮೀರಿ ಹೋರಾಟದಿಂದಲೇ ಬಡ, ಹಿಂದುಳಿದವರ, ದಲಿತರ ಹಾಗೂ ರೈತರ ಸಲುವಾಗಿ ಜೀವನ ಪರ್ಯಂತ ಶ್ರಮಿಸಿದ್ದಾರೆ.

> ## ಶಕ್ತಿ ಗುರುತಿಸಿ ಕೆಲಸ ವಹಿಸುವ ಧೀಮಂತ
>
> ಯಡಿಯೂರಪ್ಪನವರಿಗೆ ಸಹೋದ್ಯೋಗಿಗಳ ಶಕ್ತಿ ಗುರುತಿಸಿ ಕೆಲಸ ವಹಿಸುವ ವಿಶಿಷ್ಟ ಆಡಳಿತಾತ್ಮಕ ಗುಣವೂ ಅಂತರ್ಗತವಾಗಿದೆ. ಹೀಗಾಗಿಯೇ ನನಗೆ ಭಾರತೀಯ ಜನತಾ ಪಕ್ಷದ ವತಿಯಿಂದ 1994 ರಲ್ಲಿ ಹುಬ್ಬಳ್ಳಿ ನಗರ ವಿಧಾನಸಭಾ ಕ್ಷೇತ್ರಕ್ಕೆ ಟಿಕೆಟ್ ದೊರಕಿಸಿ ಕೊಟ್ಟು ಚುನಾವಣೆಗೆ ಸ್ಪರ್ಧಿಸುವಂತೆ ಹೇಳಿ ನನ್ನ ಗೆಲುವಿಗಾಗಿ ಶ್ರಮಿಸಿದ ಧೀಮಂತ ನಾಯಕ ಯಡಿಯೂರಪ್ಪನವರು. ಅವರು ಅಂದು ನನ್ನ ಶಕ್ತಿ ಗುರುತಿಸಿದ ಪರಿಣಾಮ ನಾನು ಹುಬ್ಬಳ್ಳಿ ನಗರ ವಿಧಾನಸಭಾ ಕ್ಷೇತ್ರದಲ್ಲಿ 1994 ರಿಂದ 1999 ರವರೆಗೆ ಶಾಸಕನಾಗಿ ಜನ ಸೇವೆ ಮಾಡುವಂತಾಯಿತು. ಆ ಚುನಾವಣೆಯಲ್ಲಿ ನಾನು 42,244 ಮತಗಳನ್ನು ಪಡೆಯುವ ಮೂಲಕ ಕಾಂಗ್ರೆಸ್ ಅಭ್ಯರ್ಥಿಯನ್ನು ಪರಾಭವಗೊಳಿಸಿದ್ದೇನು.

> ## ಮಹದಾಯಿ... ಬಿಎಸ್‌ವೈ ಬದ್ಧತೆ
>
> ತಾಂತ್ರಿಕ ಮತ್ತು ಕಾನೂನಾತ್ಮಕ ಕಾರಣಗಳಿಂದಾಗಿ ಕಗ್ಗಂಟಾಗಿರುವ ಮಹದಾಯಿ ಯೋಜನೆಯ ವಿತೀರ್ಪಿನಂತೆ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ನೀರು ತರುವ ಯೋಜನೆ ಜಾರಿಗೊಳಿಸುವುದಕ್ಕೆ ಬಿಎಸ್‌ವೈ ಮಾಡಿದ ಯತ್ನಗಳು ಒಂದೆರಡಲ್ಲ. ಮುಖ್ಯಮಂತ್ರಿಯಾಗಿ ಮಾತ್ರವಲ್ಲ, ವಿಪಕ್ಷದ ನಾಯಕರಾಗಿಯೂ ಅವರು ಈ ಸಂಬಂಧ ಮಾಡಿದ ಕೆಲಸಗಳನ್ನು ಉತ್ತರ ಕರ್ನಾಟಕದ ಜನ ಮರೆಯಲಾರರು. ಮಹದಾಯಿ ಜಾರಿಗೆ ಆಗ್ರಹಿಸಿ 2018 ರಲ್ಲಿ ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಬಿಜೆಪಿಯಿಂದ ಬೃಹತ್ ರ್‍ಯಾಲಿ ಏರ್ಪಡಿಸಲಾಗಿತ್ತು. ಬಿ.ಎಸ್. ಯಡಿಯೂರಪ್ಪ ರ್‍ಯಾಲಿಯ ಮುಖ್ಯ ಭಾಷಣಕಾರರಾಗಿದ್ದರು. 2018ರ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಮಹದಾಯಿ ಜಾರಿ ಮಾಡುತ್ತೇವೆ. ಇದಕ್ಕಾಗಿ ಗೋವಾ ತಕರಾರರು ಇಲ್ಲದಂತೆ ನೋಡಿಕೊಳ್ಳುತ್ತೇವೆ. ಹುಬ್ಬಳ್ಳಿ ರ್‍ಯಾಲಿಯಲ್ಲಿ ಈ ಬಗ್ಗೆ ಲಿಖಿತ ರೂಪದ ಖಚಿತತೆ ಕೊಡುವುದಾಗಿಯೂ ನಮ್ಮ ನಾಯಕ ರ್‍ಯಾಲಿಗೂ ಮುನ್ನ ಸಾರ್ವಜನಿಕವಾಗಿ ಪ್ರಕಟಿಸಿದ್ದರು. ಅದು ಹೇಗೆ ಖಚಿತತೆಯನ್ನು ರ್‍ಯಾಲಿಯಲ್ಲಿ, ಅದೂ ಅಧಿಕಾರ ಇಲ್ಲದಿರುವಾಗ ಕೊಡುತ್ತಾರೆ ಎನ್ನುವ ಕುತೂಹಲ ಬಿಎಸ್‌ವೈ ಘೋಷಣೆಯಿಂದ ಮೂಡುವಂತಾಗಿತ್ತು.

## ಸುದ್ದಿ ಮಿಂಚು

### ಮೇ 11ರಂದು ಸಂದರ್ಶನ

**ಶಿವಮೊಗ್ಗ:** ಶಿವಮೊಗ್ಗ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮೇ 11ರ ಬೆಳಗ್ಗೆ 10ಕ್ಕೆ ಪ್ರಥಮ್ ಆರ್ಕಿಡ್, 2ನೇ ಮಹಡಿ, ದುರ್ಗಿಗುಡಿ ಜೈಲ್ ಸರ್ಕಲ್, ಡಿಸಿಬಿ ಬ್ಯಾಂಕ್ ಹತ್ತಿರ, ಶಿವಮೊಗ್ಗ ಇಲ್ಲಿ ನೇರ ಸಂದರ್ಶನವನ್ನು ಆಯೋಜಿಸಲಾಗಿದೆ. ಈ ನೇರ ಸಂದರ್ಶನದಲ್ಲಿ ರೀಚ್ ಮ್ಯಾನೇಜ್ಮೆಂಟ್ ಸಲ್ಯೂಷನ್ ಕಂಪನಿ ಭಾಗವಹಿಸಲಿದ್ದು, ತಮ್ಮಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ಅಭ್ಯರ್ಥಿ ಗಳನ್ನು ಆಯ್ಕೆ ಮಾಡಿಕೊಳ್ಳಲಿದ್ದಾರೆ. ಪಿಯುಸಿ ಮತ್ತು ಯಾವುದೇ ಡಿಗ್ರಿ ತೇರ್ಗಡೆ ಹೊಂದಿದ 18ರಿಂದ 35 ವರ್ಷದೊಳಗಿನ ಅಭ್ಯರ್ಥಿಗಳು ಬಯೋಡೇಟಾ ಮತ್ತು ಆಧಾರ್ ಕಾರ್ಡ್ ಪ್ರತಿಯೊಂದಿಗೆ ಸಂದರ್ಶನದಲ್ಲಿ ಭಾಗವಹಿಸಬಹುದು. ಉಚಿತ ಪ್ರವೇಶ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9380663606/ 9108235132 ಗಳನ್ನು ಸಂಪರ್ಕಿಸುವಂತೆ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬೈಕ್ ಡಿಕ್ಕಿಯಾಗಿ ಚಿರತೆ ಸಾವು

**ಶಿವಮೊಗ್ಗ:** ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಬಳಿ ಶುಕ್ರವಾರ ಮಧ್ಯಾಹ್ನ ಬೈಕ್ ಡಿಕ್ಕಿಯಾಗಿ ಚಿರತೆಯೊಂದು ಸಾವನ್ನಪ್ಪಿರುವ ಘಟನೆ ಸಂಭವಿಸಿದೆ.
ಶಿವಮೊಗ್ಗದ ಮಾರ್ಗದಿಂದ ತೀರ್ಥಹಳ್ಳಿ ಕಡೆಗೆ ಬೈಕ್ ಸವಾರ ಚಲಿಸುತ್ತಿದ್ದಾಗ, ಮಂಡಗದ್ದೆ ಸಮೀಪದ ಅರಣ್ಯ ಭಾಗದಿಂದ ಚಿರತೆಯು ರಸ್ತೆ ದಾಟಲು ಅಡ್ಡ ಬಂದಿದೆ. ಈ ವೇಳೆ ಬೈಕ್ ನಿಯಂತ್ರಿಸಲು ಸಾಧ್ಯವಾಗದೆ ಚಿರತೆಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಚಿರತೆ ತೀವ್ರ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದೆ. ಇದರ ಪರಿಣಾಮ ಬೈಕ್ ಸಮೇತ ಕೆಳಗೆ ಬಿದ್ದ ಸವಾರನಿಗೆ ಗಂಭೀರ ಗಾಯಗಳಾಗಿದ್ದು ಆತ ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಗಾಜನೂರು ಆರ್‌ಎಫ್‌ಓ ವಿನಯ್‌ಕುಮಾರ್ ಸೇರಿ ದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಧಾವಿಸಿ ಪರಿಶೀಲನೆ ನಡೆಸಿದರು.

# ಇ-ಸ್ವತ್ತು ಪಡೆಯಲು ಜನರ ಪರದಾಟ

**ಹೊಸದುರ್ಗ:** ಇ-ಸ್ವತ್ತು ಖಾತೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬಂದಿವೆ. ಇ-ಸ್ವತ್ತು ಕೊಡಲು ಏಕೆ ಸಾರ್ವಜನಿಕರನ್ನು ಎಳೆದಾಡಿಸುತ್ತೀರಾ ನಿಮ್ಮ ಸಮಸ್ಯೆಯಾದರು ಏನು ಎಂದು ಚಿತ್ರದುರ್ಗ ಉಪ ವಿಭಾಗಾಧಿಕಾರಿ ಹಾಗೂ ಹೊಸದುರ್ಗ ಪುರಸಭಾ ಆಡಳಿತಾಧಿಕಾರಿ ಡಾ. ಕಾಂತರಾಜು ಕೆ.ಟಿ. ಅಧಿಕಾರಿಗಳನ್ನು ಪ್ರಶ್ನೆ ಮಾಡಿದರು.
ಪುರಸಭಾ ಸಭಾಂಗಣದಲ್ಲಿ ಶಾಸಕ ಬಿ.ಜಿ.ಗೋವಿಂದಪ್ಪ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ತುರ್ತು ಸಭೆಯಲ್ಲಿ ಮಾತನಾಡಿದರು.
ಇ-ಖಾತೆ ನಿಮ್ಮಲ್ಲಿ ಸಾಕಷ್ಟು ಪೆಂಡಿಂಗ್ ಇವೆ. ಸರಿಯಾದ ಸಮಯಕ್ಕೆ ಸಾರ್ವಜನಿಕರಿಗೆ ವಿಲೇವಾರಿ ಆಗುತ್ತಿಲ್ಲ, ಈ ವಿಚಾರವಾಗಿ ಸಾರ್ವಜನಿಕರಿಂದ ದೂರುಗಳು ಬಂದಿವೆ, ಇನ್ನು ಮುಂದೆ ಇದನ್ನು ಸರಿಪಡಿಸಿಕೊಂಡು ಹೋಗಿ, ನೀವು ಸರಿಯಾಗಿ ಕೆಲಸ ಮಾಡಿದರೆ ಶಾಸಕರ ಮನೆ ಮುಂದೆ ಸಾರ್ವಜನಿಕರು ಹೋಗಿ ಅವರಿಗೆ ಏಕೆ ದೂರು ನೀಡುತ್ತಾರೆ ಎಂದು ಖಾರವಾಗಿಯೇ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.
ಇ-ಸ್ವತ್ತು, ಖಾತೆ, ನೀರು, ಕಂದಾಯ ಸ್ವಚ್ಛತೆ ಸೇರಿದಂತೆ ಎಲ್ಲಾ ವಿಭಾಗದ ಅಧಿಕಾರಿಗಳು ಯಾವುದೇ ಸಮಸ್ಯೆಗಳು ಬಾರದಂತೆ ಕೆಲಸ ಮಾಡಿಕೊಂಡು ಹೋಗಿ, ನಿಮ್ಮ ನಿಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿಕೊಂಡು ಹೋಗಿ, ಸುಮ್ಮನೆ ತೊಂದರೆ ಸಿಲುಕಿಕೊಳ್ಳಬೇಡಿ ಎಂದು ಎಚ್ಚರಿಕೆ ನೀಡಿದರು. ಈಗ ಬಿರು ಬೇಸಿಗೆಯ ಸಮಯ ನೀರಿನ ಹಾಹಾಕಾರವಿದೆ. ಇಲ್ಲಿನ ವೇದಾವತಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿದೆ, ಜೊತೆಗೆ ಬೋರುಗಳು, ಓವರ್ ಲೋಡ್ ಟ್ಯಾಂಕುಗಳು ಇದ್ದರೂ ಸಹಾ ಪಟ್ಟಣಕ್ಕೆ ಸರಿಯಾದ ಸಮಯಲ್ಲಿ ನೀರು ಬರುತ್ತಿಲ್ಲ ಎಂಬ ದೂರುಗಳು ಇವೆ.

ಹೊಸದುರ್ಗ ನೇರ ವಿದ್ಯುತ್ ಸಂಪರ್ಕ ಕಲ್ಪಿಸಿದ್ದರೂ ಸಹಾ ವಿದ್ಯುತ್ ನೀಡುವಲ್ಲಿ ಏಕೆ ಸಮಸ್ಯೆಯಾಗುತ್ತಿದೆ. ಪಟ್ಟಣಕ್ಕೆ ಇನ್ನೂ 5 ಓವರ್ ಟ್ಯಾಂಕುಗಳ ಅವಶ್ಯಕತೆ ಇದೆ. ಮುಂದಿನ ದಿನಗಳಲ್ಲಿ ಅವುಗಳನ್ನೂ ಸಹಾ ನಿರ್ಮಿಸಲಾಗುವುದು. ಆಗಸ್ಟ್‌ನಲ್ಲಿ ಭದ್ರಾ ನೀರು ಹರಿಸಲಾಗುವುದು.
■ **ಬಿ.ಜಿ.ಗೋವಿಂದಪ್ಪ, ಶಾಸಕರು, ಹೊಸದುರ್ಗ.**

ಪಟ್ಟಣದಲ್ಲಿರುವ 23 ಬಡಾವಣೆಗಳಿಗೂ ಸಹಾ ಎರಡು ದಿನಕ್ಕೊಮ್ಮೆ ನೀರು ಒದಗಿಸಿ ಈ ವಿಚಾರದಲ್ಲಿ ತಾತ್ಸಾರ ಬೇಡ ಎಂದರು.
ಅಧ್ಯಕ್ಷತೆ ವಹಿಸಿದ್ದ ಶಾಸಕ ಬಿ.ಜಿ.ಗೋವಿಂದಪ್ಪ ಮಾತನಾಡಿ, ಇ-ಸ್ವತ್ತು ಪಡೆದುಕೊಳ್ಳಲು ಸಾರ್ವಜನಿಕರು ನಿತ್ಯ ಪರದಾಡುವಂತಹ ಸ್ಥಿತಿ ಇದೆ, ಒಳಗಡೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಇವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎಂದು, ಇ-ಸ್ವತ್ತು ಪಡೆಯುವುದು ಒಂದು ದೊಡ್ಡ ಹಿಂಸೆಯಾಗಿದೆ ಎಂದು ಸಾರ್ವಜನಿಕರು ಬಂದು ನಮ್ಮ ಮುಂದೆ ಹೇಳುತ್ತಾರೆ. ನೀವು ಕುರ್ಚಿಯ ಮೇಲೆ ಕುಳಿತುಕೊಳ್ಳುವುದನ್ನು ಬಿಟ್ಟು ನಿಮ್ಮ ಕಚೇರಿಯಲ್ಲಿ ಹೇಗೆ ಕೆಲಸ ನಡೆಯುತ್ತಿದೆ, ಯಾರ್ಯಾರು ಏನು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಗಮನಿಸಿ, ಆಗ ನಿಮಗೇ ತಿಳಿಯುತ್ತದೆ ಎಂದು ಮುಖ್ಯಾಧಿಕಾರಿ ಹೇಳಿದ ಅವರು, ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಪ್ರಾಮಾಣಿಕವಾಗಿ ಕೆಲಸ ಮಾಡಿ ತೋರಿಕೆ ಕೆಲಸ ಆಗಬಾರದು ಎಂದರು.
ಪಟ್ಟಣಕ್ಕೆ ಸಂಪೂರ್ಣ ವಿದ್ಯುತ್ ಸಮರ್ಪಕವಾಗುತ್ತಿಲ್ಲ. ಯಾವಾಗ ಹೋಗುತ್ತದೆ, ಯಾವಾಗ ಬರುತ್ತದೆ ಎಂಬುದೇ ತಿಳಿಯದಂತಾಗಿದೆ. ಮನೆಗಳಿಗೆ ಮತ್ತು ಪಂಪ್‌ಸೆಟ್‌ಗಳಿಗೆ ಸರಿಯಾಗಿ ವಿದ್ಯುತ್ ನೀಡುತ್ತಿಲ್ಲ, ಏಕೆ ಹೀಗೆ ಮಾಡುತ್ತೀರಾ ಎಂದು ಬೆಸ್ಕಾಂ ಅಧಿಕಾರಿಯನ್ನು ಪ್ರಶ್ನಿಸಿದ ಶಾಸಕರು, ಅಶ್ವಿನಿ ಮತ್ತು ಭರಣಿ ಎರಡೂ ಮಳೆಗಳು ಬರಲಿಲ್ಲ, ಈಗ ನೀರಿನ ಅವಶ್ಯಕತೆ ಮುಖ್ಯವಾಗಿದೆ, ನೀರಿನ ಸಮಸ್ಯೆ ಆದರೆ ಉತ್ತರ ಕೊಡುವವರು ಯಾರು ಎಂದು ಬೆಸ್ಕಾಂ ಅಧಿಕಾರಿಯನ್ನು ಪ್ರಶ್ನೆ ಮಾಡಿದ ಅವರು ಕೆರೆ ಕಟ್ಟೆಗಳು ಒಣಗಿ ಹೋಗಿವೆ. ಈಗ ವಿದ್ಯುತ್ತೇ ಆಶ್ರಯವಾಗಿದೆ. ನೀರು ಸಾಕಷ್ಟಿದೆ. ಆದರೆ ನೀರು ಬಿಡುವುದೇ ಇವರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಹೇಳುವುದನ್ನೇ ಕೆಲಸ ಮಾಡಬಾರದು ಕೆಲಸ ಮಾಡಿ ಹೇಳಬೇಕು ಎಂದರು.

## ಒಡೆದ ತುಂಗಾ ಹಿನ್ನೀರು ಯೋಜನೆ ಪೈಪ್‌ಲೈನ್
# ವಾಸದ ಮನೆಗಳಿಗೆ ನುಗ್ಗಿದ ನೀರು

ಪರಶುರಾಮಪುರ-ಪಿಆರ್‌ಪುರ-ಚಳ್ಳಕೆರೆ ಮಾರ್ಗದ ರಸ್ತೆಯಲ್ಲಿ ಹಾದು ಹೋಗಿರುವ ಪೈಪ್‌ಲೇನ್ ಒಡೆದುಹೋಗಿ ನೀರು ಹರಿಯುತ್ತಿದೆ ಎಂದು ಸಾರ್ವಜನಿಕರ ಮೂಲಕ ಮಾಹಿತಿ ತಿಳಿದಿದೆ. ಕೂಡಲೇ ಸ್ಥಳಕ್ಕೆ ಹೋಗಿ ಪರಿಶೀಲಿಸಿ ಕೂಡಲೇ ದುರಸ್ತಿಗೆ ಕ್ರಮ ಕೈಗೊಳ್ಳಲಾಗುವುದು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುವುದು.
■ **ದಯಾನಂದಸ್ವಾಮಿ ಎಇಇ ಕುಡಿವ ನೀರು ಮತ್ತು ನೈರ್ಮಲ್ಯ ಇಲಾಖೆ ಚಳ್ಳಕೆರೆ.**

ತುಂಗಾ ಹಿನ್ನೀರು ಯೋಜನೆಯ ಪೈಪ್‌ಲೈನ್ ಈಗಾಗಲೇ ಎನ್‌ಪಿಗೇಟ್, ಕ್ಯಾದಿಗುಂಟೆ ಬಳಿ ಒಡೆದು ನೀರು ಪೋಲಾಗಿತ್ತು. ಈಗ ಮತ್ತೆ ಪರಶುರಾಮಪುರ ಗ್ರಾಮದ ಚಳ್ಳಕೆರೆ ರಸ್ತೆಯಲ್ಲೂ ಪೈಪ್‌ಲೈನ್ ಒಡೆದುಕೊಂಡು ಇಲ್ಲಿನ ನೀರು ಜನವಸತಿ ಪ್ರದೇಶಗಳಿಗೆ ನುಗ್ಗಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದೆ ಕೂಡಲೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಹನುಮಂತಪ್ಪ ರೈತ ಸಂಘದ ಪದಾಧಿಕಾರಿ ಜುಂಜರಗುಂಟೆ ಪಿಆರ್‌ಪುರ ಚಳ್ಳಕೆರೆ ರಸ್ತೆಯ ಜನವಸತಿ ಪ್ರದೇಶದ ಹನುಮಂತರಾಯ, ಶ್ರೀನಿವಾಸ, ತಿಮ್ಮಯ್ಯ, ಈರಣ್ಣ, ಚನ್ನಕೇಶವ, ರಾಮಣ್ಣ, ಲಕ್ಷ್ಮೀದೇವಿ, ಸಾಕಮ್ಮ, ಇಲ್ಲಿನ ಅಲೆಮಾರಿ ಕುಟುಂಬಗಳ ಗ್ರಾಮಸ್ಥರು ದೂರಿದ್ದಾರೆ

**ಪರಶುರಾಮಪುರ :** ಇಲ್ಲಿನ ಗ್ರಾಮದ ಪಿಆರ್‌ಪುರ-ಚಳ್ಳಕೆರೆ ಮಾರ್ಗದ ರಸ್ತೆಯ ಸಾಯಿ ಪೆಟ್ರೋಲ್ ಬಂಕ್ ಬಳಿಯಲ್ಲಿನ ಜನವಸತಿ ಪ್ರದೇಶದ ಬಳಿ ಶುಕ್ರವಾರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ತುಂಗಾ ಹಿನ್ನೀರು ಯೋಜನೆಯ ಪೈಪ್‌ಲೈನ್ ಒಡೆದುಕೊಂಡು ನೀರು ಅಕ್ಕಪಕ್ಕದ ವಾಸದ ಮನೆಗಳೂ ಸೇರಿದಂತೆ ಜಮೀನುಗಳಿಗೆ ನುಗ್ಗಿ ಇಲ್ಲಿಯೇ ವಾಸವಿರುವ ಅಲೆಮಾರಿ ಕುಟುಂಬಗಳ ಗುಡಿಸಲುಗಳು ಈ ನೀರಿನಿಂದ ಆವೃತವಾಗಿವೆ ಎಂದು ಗ್ರಾಮದ ರೈತ ಸಂಘದ ಪದಾಧಿಕಾರಿ ಜುಂಜರಗುಂಟೆ ಹನುಮಂತರಾಯಪ್ಪ ಪತ್ರಿಕೆಗೆ ದೂರಿದ್ದಾರೆ.
ಸರ್ಕಾರತೀವ್ರ ಬರಗಾಲ ಎದುರಿಸುತ್ತಿರುವ ಕೂಡ್ಲಿಗಿ, ಚಳ್ಳಕೆರೆ, ಪಾವಗಡ ಮಾರ್ಗದ ನೂರಾರು ಗ್ರಾಮಗಳಿಗೆ ಕುಡಿವ ನೀರು ಪೂರೈಸುವ ಸಲುವಾಗಿ ನೂರಾರು ಕೋಟಿ ಖರ್ಚು ಮಾಡಿ ಈಗಾಗಲೇ ಕಾಮಗಾರಿಯೂ ಸಹ ಸಂಪೂರ್ಣಗೊಂಡಿದೆ. ಆದರೆ ಕಳೆದ ನಾಲ್ಕೈದು ದಿನಗಳಿಂದ ಪರಶುರಾಮಪುರ ಗ್ರಾಮದ ಸಾಯಿ ಪೆಟ್ರೋಲ್ ಬಂಕ್ ಬಳಿ ಹಾದುಹೋಗಿರುವ ಪೈಪ್‌ಲೈನ್ ಒಡೆದುಕೊಂಡು ನೀರು ಹೊರ ಹರಿಯುತ್ತಿತ್ತು. ಶುಕ್ರವಾರ ಇನ್ನೂ ರಭಸವಾಗಿ ನೀರು ಹರಿದು ಈ ಭಾಗದ ಜನವಸತಿ ಪ್ರದೇಶದ ಸುತ್ತಲೂ ಈ ನೀರು ಹರಿದು ಜಲಾವೃತಗೊಂಡಿದೆ ಎಂದು ಸಾರ್ವಜನಿಕರು ಆಗ್ರಹ ಪಡಿಸಿದ್ದಾರೆ.

# ಗೋಧಿ ಹಬ್ಬ ಲಂಬಾಣಿಗರ ಐಕ್ಯತೆಯ ಸಂಕೇತ

**ನಾಯಕನಹಟ್ಟಿ :** ದಸರಾ ವೇಳೆ ಹಸಿರು ಬೆಳೆ ಪೋಷಿಸುವ ಸಂಕೇತವಾಗಿ ಆಚರಿಸುವ ಬುಡಕಟ್ಟು ಜನಾಂಗದ ತೀಜ್ ಹಬ್ಬವನ್ನು ಚಳ್ಳಕೆರೆ ತಾಲ್ಲೂಕಿನ ರೇಖಲಗೆರೆ ತಾಂಡಾದಲ್ಲಿ ಲಂಬಾಣಿಗರು ಸಂಭ್ರಮದಿಂದ ಆಚರಿಸಿದರು.
ಸಕಾಲಕ್ಕೆ ಮಳೆ ಬಂದು, ಸಮೃದ್ಧಿ ಬೆಳೆ ಬರಲಿ, ತಾಂಡಾದಲ್ಲಿ ಆರೋಗ್ಯ ನೆಲೆಸಲಿ ಎಂದು ತೀಜ್(ಹುಲ್ಲಿನ ಬುಟ್ಟಿ) ಹೊತ್ತ ಯುವತಿಯರು ಹಾಡಿನ ಮೂಲಕ ಪ್ರಾರ್ಥಿಸುವ ದೃಶ್ಯಗಳು ಕಂಡುಬಂದಿತು.

ಇದೆ ವೇಳೆ ದೇನಾ ಭಗತ್ ಗುರೂಜೀ ಮಾತನಾಡಿ, ಆಧುನಿಕತೆ ಭರಾಟೆಯಲ್ಲಿ ಮನುಷ್ಯನ ನೆಮ್ಮದಿ, ಶಾಂತಿ ಕಡಿಮೆಯಾಗುತ್ತಿದ್ದು, ಈ ಹಸಿರು ಬೋಧಿ ಸಸಿ ಹಬ್ಬದಿಂದ ಜೀವನವೆಲ್ಲ ಹಸಿರಾಗಿ ಸಮೃದ್ಧಿ ನೆಲಸಲಿ ಎಂದು ಹಾರೈಸಿದರು.
ಗೋಧಿ ಹಬ್ಬವನ್ನು ಲಂಬಾಣಿ ಸಮುದಾಯವರು ಆಚರಿಸುತ್ತಾರೆ. ವಿಶೇಷವಾಗಿ ವಿವಾಹವಾಗದ ಹುಡುಗಿಯರಿಗಾಗಿ ಆಚರಿಸಬಹುದಾದ ಹಬ್ಬವಾಗಿದೆ. ಇಲ್ಲಿ ಹುಡುಗಿಯರು ತಮ್ಮ ಭವಿಷ್ಯದ ಗಂಡನೊಂದಿಗೆ ಉತ್ತಮ ಜೀವನಕ್ಕೆ ಆಶೀರ್ವಾದ ಬೇಡುತ್ತಾರೆ. ಈ ಹಬ್ಬವನ್ನು ಮದುವೆಯ ಕನಸು ಎನ್ನುವ ನಂಬಿಕೆ ಇದೆ. ಲಂಬಾಣಿ ಸಮುದಾಯವು ಗೋಧಿ ಹಬ್ಬದ ಮೂಲಕ ರೈತರ ಸಮೃದ್ಧಿಗಾಗಿ ಪ್ರಾರ್ಥಿಸುತ್ತಾರೆ.
ಆಚರಣೆಯ 9 ದಿನ ಮುಂಚಿತವಾಗಿ ಗೋಧಿ ಬಿತ್ತನೆ ಕಾರ್ಯಕ್ರಮ ನಡೆಯುತ್ತದೆ. ನಾಯಕ್ ಢಾವೋ, ಕಾರ್‌ಬಾರಿ ಪೂಜಾರಿಗಳು ಮತ್ತು ಊರಿನ ಗಣ್ಯರ ಸಮ್ಮುಖದಲ್ಲಿ ತಾಂಡಾದ ನಾಯಕ ಸೇವಾಲಾಲ್ ಮಹಾರಾಜ್ ಭಗತ್ (ಪೂಜಾರಿ) ದೇವಿಗೆ ಹಾಗೂ ಸೇವಾಲಾಲರಿಗೆ ಪೂಜೆ ಮಾಡಿ 9 ಗೋಧಿ ಕಾಳುಗಳನ್ನು ತಾಂಡಾದ ಹಿರಿಯ ಮಹಿಳೆಯರಿಗೆ ನೀಡುತ್ತಾರೆ. ಅದರ ಜೊತೆಗೆ ಹೆಚ್ಚಿನ ಕಾಳುಗಳನ್ನು ಸೇರಿಸಿ ಪ್ರತಿಯೊಂದು ಮನೆಯಲ್ಲಿ ಬಿದುರಿನ ಬುಟ್ಟಿಯಲ್ಲಿ ಮಣ್ಣು, ದೇಶಿ ಆಕಳ ಸಗಣಿ, ಗೊಬ್ಬರ ಹಾಕಿ ಗೋಧಿ ಬೀಜಗಳನ್ನು ನೆಡುತ್ತಾರೆ. ಅದಕ್ಕೆ ಸೂರ್ಯನ ಬೆಳಕು ತಾಗದಂತೆ ಮುಚ್ಚಿ ಇಡುತ್ತಾರೆ. ಪ್ರತಿದಿನ ಅದಕ್ಕೆ ಸ್ವಲ್ಪ ಸ್ವಲ್ಪ ನೀರು ಹಾಕುತ್ತಾರೆ. ಇದಕ್ಕೆ ತೀಜ್ ಬುರೆರೋ (ಮುಚ್ಚಿಡುವುದು) ಎಂದು ಕರೆಯುತ್ತಾರೆ. 9ದಿನಗಳ ನಂತರ ಬಿದಿರಿನ ತಿಜ್ ಹೊತ್ತು ಮೆರವಣಿಗೆಯಲ್ಲಿ ಯುವತಿಯರು ಸಾಗುತ್ತಾರೆ.
ಕೃಷಿ ಪ್ರಧಾನ ಜೀವನ ಶೈಲಿಯನ್ನು ಅನುಸರಿಸುವ ಲಂಬಾಣಿಗರಲ್ಲಿ, ಗೋಧಿ ಹಬ್ಬವು ವರ್ಷಾದೇವಿಯ ಆರಾಧನೆಯಾಗಿದೆ. ಈ ಹಬ್ಬದಲ್ಲಿ ಮಹಿಳೆಯರು ಕೈಯಿಂದಲೇ ಮಾಡಿದ ಬಣ್ಣ ಬಣ್ಣದ ಪೋಷಾಕುಗಳನ್ನು ಧರಿಸಿ, ನೃತ್ಯ ಮತ್ತು ಸಂಗೀತದ ಮೂಲಕ ದೇವಿಯನ್ನು ಪ್ರಾರ್ಥಿಸುತ್ತಾರೆ. ಮಹಿಳೆಯರು ತಮ್ಮ ಇಚ್ಛೆಯ ಗಂಡನ ಆಯ್ಕೆಗಾಗಿ ದೇವಿಯ ಅನುಗ್ರಹವನ್ನು ಬೇಡುವುದೂ ಇದರಲ್ಲಿ ಒಂದು ಪುರಾತನ ನಂಬಿಕೆಯಾಗಿದೆ. ಹಬ್ಬದ ಪ್ರಮುಖ ದಿನದಂದು ವಿವಾಹದ ಕನಸುಕಳ್ಳ ಯುವತಿಯರು ಉಪವಾಸವಿರುತ್ತಾರೆ.
ಮೆರವಣಿಗೆಯ ವೇಳೆ ಮಹಿಳೆಯರು ಗುಂಪು ಗುಂಪಾಗಿ ಸೇರಿ ತಂಬೂರ, ಡೋಲ್, ತಾಳ ಇತ್ಯಾದಿ ವಾದ್ಯಗಳೊಂದಿಗೆ ಹಾಡುಗಳನ್ನು ಹಾಡುತ್ತಾ ಕುಣಿದು ಸಂಭ್ರಮಿಸಿದರು.
ಈ ಸಂದರ್ಭದಲ್ಲಿ ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್. ಜಯಣ್ಣ, ಲಂಬಾಣಿ ಸಮುದಾಯದ ಮುಖಂಡರಾದ ಕೆ.ಸಿ.ತಿಪ್ಪೇಸ್ವಾಮಿ, ತುಕ್ಯಾನಾಯ್ಕ್, ಕೃಷ್ಣ ನಾಯ್ಕ್
ಅರುಣಕುಮಾರ್, ಶಂಕ್ರನಾಯ್ಕ್, ಪಾಂಡುರಂಗ ನಾಯ್ಕ್, ತಿಪ್ಪೇಸ್ವಾಮಿ, ರಾಮಚಂದ್ರ ನಾಯ್ಕ್,
ಸೇವಾಲಾಲ್ ಟ್ರಸ್ಟಿನ ಪದಾಧಿಕಾರಿಗಳು ಯುವಕರು, ಸ್ತ್ರೀಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ತಮಿಳುನಾಡು ರಾಜ್ಯಪಾಲರ ನಡೆಗೆ ಮಧು ಬಂಗಾರಪ್ಪ ಖಂಡನೆ

**ಶಿವಮೊಗ್ಗ:** ತಮಿಳುನಾಡಿನಲ್ಲಿ ರಾಜ್ಯಪಾಲರು ರಾಜಕೀಯ ಮಾಡುತ್ತಿರುವುದು ಸರಿಯಲ್ಲ. ಬಹುಸಂಖ್ಯೆಯಲ್ಲಿರುವ ಪಕ್ಷಕ್ಕೆ ರಾಜ್ಯಪಾಲರು ಅಪಮಾನ ಮಾಡಿ ದ್ದಾರೆ. ಅಲ್ಲಿ ಪ್ರಜಾಪ್ರಭುತ್ವ ಉಳಿಸಬೇಕಾಗಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾಜ್ಯಪಾಲರ ನಡೆಯನ್ನು ಟೀಕಿಸಿದರು. ಬಹುಮತ ಪಡೆದಿರುವ ವಿಜಯ್ ಅವರಿಗೆ ಸರ್ಕಾರ ರಚಿಸಲು ಅವಕಾಶ ನೀಡಬೇಕೆಂದರು. ಸಾಗರ ತಾಲ್ಲೂಕಿನಲ್ಲಿ ಅಣು ವಿದ್ಯುತ್ ಸ್ಥಾವರ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕೇಂದ್ರ ಸರ್ಕಾರ ಏನನ್ನೂ ಕೇಳುವುದಿಲ್ಲ. ನೇರವಾಗಿ ಜಿಲ್ಲಾಧಿಕಾರಿಯನ್ನು ಸಂಪ ರ್ಕಿಸುವ ಕೆಲಸ ಮಾಡುತ್ತಿದೆ. ಅಣು ಸ್ಥಾವರದ ಮೂಲಕ ಜನರಿಗೆ ಬೆಂಕಿ ಇಡುವ ಕೆಲಸ ಮಾಡಲಾಗುತ್ತಿದೆ ಎಂದು ದೂರಿದರು.

# ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ 'ಅರಿವು' ಶೈಕ್ಷಣಿಕ ಸಾಲ ಯೋಜನೆ

**ಶಿವಮೊಗ್ಗ:** ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮವು 2026-27ನೇ ಸಾಲಿನ 'ಅರಿವು' ಶೈಕ್ಷಣಿಕ ಸಾಲ ಯೋಜನೆಯಡಿ ಹೊಸದಾಗಿ ಆಯ್ಕೆಯಾದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.
ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಆಯ್ಕೆಯಾದ ಸಿಇಟಿ/ಎನ್‌ಇಇಟಿ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಾದ ಎಂಬಿಬಿಎಸ್, ಬಿಡಿಎಸ್, ಬಿಇ/ ಬಿ.ಟೆಕ್, ಆಯುಷ್, ಆರ್ಕಿಟೆಕ್ಚರ್, ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶು ಸಂಗೋಪನೆ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ಈ ಸಾಲ ಸೌಲಭ್ಯ ದೊರೆ ಯಲಿದೆ. ಮುಸ್ಲಿಂ, ಜೈನ್, ಬೌದ್ಧ, ಸಿಖ್, ಪಾರ್ಸಿ ಮತ್ತು ಆಂಗ್ಲೋ-ಇಂಡಿ ಯನ್ ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು ಅರ್ಜಿ ಗಳನ್ನು ಮೇ 8ರಿಂದ 31ರವರೆಗೆ ಆನ್‌ಲೈನ್ ಮೂಲಕ ನಿಗಮದ ವೆಬ್‌ಸೈಟ್ ನಲ್ಲಿ ಸಲ್ಲಿಸಬೇಕು.
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ, ಅದರ ಪ್ರಿಂಟೌಟ್‌ನೊಂದಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಅಂಕಪಟ್ಟಿಗಳು, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ವಾರ್ಷಿಕ ಆದಾಯ 8 ಲಕ್ಷ ರೂಪಾಯಿ ಗಳಿಗಿಂತ ಕಡಿಮೆ ಇರಬೇಕು), ವಿದ್ಯಾರ್ಥಿ ಮತ್ತು ಪೋಷಕರ ಭಾವ ಚಿತ್ರಗಳು.
ಸಿಇಟಿ/ಎನ್‌ಇಇಟಿ ಹಾಲ್ ಟಿಕೆಟ್, ನೋಟರಿಯಿಂದ ದೃಢೀಕರಿಸಲ್ಪಟ್ಟ ಇಂಡೆ ಮ್ನಿಟಿ ಬಾಂಡ್, ವಿದ್ಯಾರ್ಥಿ ಮತ್ತು ಪೋಷಕರ ಸ್ವಯಂ ಘೋಷಣಾ ಪತ್ರ ದಾಖ ಲೆಗಳನ್ನು ಲಗತ್ತಿಸಬೇಕು. ಭರ್ತಿ ಮಾಡಿದ ಅರ್ಜಿ ಮತ್ತು ದಾಖಲೆಗಳನ್ನು ಮೇ 31ರೊಳಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತ ಅಭಿ ವೃದ್ಧಿ ನಿಗಮ (ನಿ), ಅಚ್ಯುತರಾವ್ ಲೇಔಟ್, 4ನೇ ತಿರುವು, ನಂಜಪ್ಪ ಆಸ್ಪತ್ರೆ ಮುಂಭಾಗ, ಶಿವಮೊಗ್ಗ ಈ ವಿಳಾಸಕ್ಕೆ ಸಲ್ಲಿಸಲು ಕೋರಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08182-228262ಕ್ಕೆ ಸಂಪರ್ಕಿ ಸಬಹುದು ಎಂದು ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಾ.ರಾಮಪ್ಪ 74ನೇ ಜನ್ಮದಿನದ ಪ್ರಯುಕ್ತ ಹೃದಯ ರೋಗ ತಪಾಸಣೆ

**ಸಾಗರ:** ಸಿಗಂದೂರು ಧರ್ಮದರ್ಶಿ ಡಾ. ರಾಮಪ್ಪ ಅವರ 74ನೇ ಜನ್ಮ ದಿನವನ್ನು ಮೇ 13ರಂದು ಸಿಗಂದೂರು ಶ್ರೀ ಚೌಡೇಶ್ವರಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವಿಜಯ ಕುಮರ್ ಹೆರಬೆಟ್ಟು ತಿಳಿಸಿದರು.
ಇಲ್ಲಿನ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ. ರಾಮಪ್ಪ ಅವರ ಹುಟ್ಟು ಹಬ್ಬವನ್ನು ಅನೇಕ ಸಾಮಾಜಿಕ ಕಾರ್ಯಗಳ ಮೂಲಕ ನಡೆಸಲು ಅವರ ಅಭಿಮಾನಿ ಬಳಗ ಮತ್ತು ಸಿಗಂದೂರು ಚೌಡಮ್ಮ ಎಜ್ಯುಕೇಷನಲ್ ಚಾರಿ ಟೆಬಲ್ ಟ್ರಸ್ಟ್ ನಿರ್ಧರಿಸಿದೆ ಎಂದು.
ಜನ್ಮದಿನದ ಅಂಗವಾಗಿ ಸಹ್ಯಾದ್ರಿ ನಾರಾಯಣ ಆಸ್ಪತ್ರೆ ವತಿಯಿಂದ ಹೃದಯ ರೋಗ ತಪಾಸಣೆ, ಅನಾಥಾಶ್ರಮಗಳಿಗೆ ಒಂದು ದಿನ ಸಂಪೂರ್ಣ ವಿವಿಧ ಸಾಮಗ್ರಿ ವಿತರಣೆ, ಬೇರಾಳ ಸರ್ಕಾರಿ ಶಾಲೆಗೆ ಶ್ರೀಕ್ಷೇತ್ರ ಸಿಗಂದೂರಿನ ಚಿತ್ತ ಸರ್ಕಾರಿ ಶಾಲೆಯತ್ತ ಯೋಜನೆಯಿ ಬಣ್ಣ ದರ್ಪಣ, ರೋಟರಿ ರೆಡ್‌ಕ್ರಾಸ್ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರ, ಶ್ರವಣ ತಪಾಸಣೆ ಮತ್ತು ಸಾಧನಾ ಸಲಕರಣೆ ವಿತರಣೆ, ಸಾಗರದ ಉಪ ವಿಭಾಗೀಯ ಆಸ್ಪತ್ರೆ ಮತ್ತು ಮಹಿಳಾ ಮಕ್ಕಳ ಆಸ್ಪತ್ರೆ ಒಳರೋಗಿಗಳಿಗೆ ಹಣ್ಣುಹಂಪಲು ವಿತರಣೆ ಸೇರಿ ಹಲವು ಕಾರ್ಯಕ್ರಮ ಆಯೋಜಿಸಿದೆ. ಇದರ ಜೊತೆಗೆ ಆನಂದಪುರಂ ಮಲ್ನಾಡ್ ಸೋಲ್ಜರ್ ಕೋಚಿಂಗ್ ಸೆಂಟರ್, ಸಾಗರದ ಯೋಧನಮನ ಬಳಗದ ಸಹಯೋಗದೊಂದಿಗೆ ಅಗ್ನಿವೀರ್ ಮತ್ತು ಪ್ಯಾರಾ ಮಿಲಟರಿ ಸೇರ ಬಯಸುವವರಿಗೆ ಪೂರ್ವ ತಯಾರಿ ಉಚಿತ ತರಬೇತಿ ಇರುತ್ತದೆ. ಆಸಕ್ತರು ಇದರ ಸದುಪಯೋಗ ಪಡೆದುಕೊಳ್ಳಲು ಮನವಿ ಮಾಡಿದರು. ಅಭಿಮಾನಿ ಬಳಗದ ದೇವರಾಜ ಕಪ್ಪದೂರು, ಎಪಿಎಂಸಿ ಮಾಜಿ ಅಧ್ಯಕ್ಷ ಚೇತನರಾಜ್ ಕಣ್ಣೂರು ಮಾತನಾಡಿ, ಡಾ. ರಾಮಪ್ಪ ಅವರ ನೇತೃತ್ವದಲ್ಲಿ ಕ್ಷೇತ್ರದಲ್ಲಿ ಅನೇಕ ಸತ್ಕಾರ್ಯಗಳು ನಡೆಯುತ್ತಿದೆ ಎಂದು ಹೇಳಿದರು.
ಗೋಷ್ಠಿಯಲ್ಲಿ ರವಿ ಅಳೂರು, ಗಣೇಶ್ ಜಾಕಿ, ರವಿ ಹುರುಳಿ, ಉಮೇಶ್ ಹೆಸಿಗೆ, ಗಿರೀಶ್ ಕೋವಿ ಹಾಜರಿದ್ದರು.

## ಪೇಟೆ ಪ್ರಪಂಚ

| | |
|---|---|
| **ಹುಬ್ಬಳ್ಳಿ** | |
| ಅಲಸಂದೆ ಕಾಳು | 3531–3531 |
| ಕಡಲೆಕಾಳು | 1910–5580 |
| ಹೆಸರುಕಾಳು | 801–1525 |
| ಹುರುಳಿ ಕಾಳು | 3639–3639 |
| ಜೋಳ | 1001–3666 |
| ಮೆಕ್ಕೆಜೋಳ | 1909–1909 |
| ಮಡಿಕೆ (ಮಟಕಿ) | 14000–14000 |
| ಈರುಳ್ಳಿ | 500–2000 |
| ಆಲೂಗಡ್ಡೆ | 1200–1800 |
| ಸೋಯಾಬಿನ್ | 6245–6525 |
| ತೊಗರಿ | 4261–4261 |
| ಗೋಧಿ | 2356–2356 |
| **ಗಂಗಾವತಿ** | |
| ಮೆಕ್ಕೆಜೋಳ | 2040–2040 |
| ಕಾವೇರಿ ಸೋನ | 2030–2493 |
| ಭತ್ತ ಆರ್‌ಎನ್‌ಆರ್ ಹೊಸ | 2502–2980 |
| ಭತ್ತ ಹಳೇ ಸೋನ | 3100–3195 |
| ಅಕ್ಕಿ | 2400–2835 |
| **ಗದಗ** | |
| ಕಡಲೆಕಾಳು | 2624–5737 |
| ಉದ್ದಿನಕಾಳು | 2044–5624 |
| ಹರಳು ಬೀಜ | 5369–5369 |
| ಅಲಸಂದೆ | 4006–5929 |
| ಹೆಸರುಕಾಳು | 4170–5570 |
| ನೆಲಗಡಲೆ (ಶೇಂಗಾ) | 4254–6975 |
| ಹುರುಳಿ ಕಾಳು | 2379–4266 |
| ಜೋಳ | 1569–4259 |
| ಮೆಕ್ಕೆಜೋಳ | 1265–1822 |
| ಕುಸುಬೆ | 4820–5509 |
| ಸೂರ್ಯ ಕಾಂತಿ | 6169–6169 |
| ಗೋಧಿ | 2091–4369 |
| **ದಾವಣಗೆರೆ** | |
| ಹಸಿರು ಮೆಣಸಿನಕಾಯಿ | 1200–3200 |
| ನೆಲಗಡಲೆ (ಶೇಂಗಾ) | 3006–7544 |
| ಮೆಕ್ಕೆಜೋಳ | 1660–2071 |
| ಈರುಳ್ಳಿ | 500–1500 |
| ಭತ್ತ | 1209–2555 |
| ರಾಗಿ | 3376–3469 |
| ಅಕ್ಕಿ | 2200–4233 |
| **ವಿಜಯಪುರ** | |
| ಸಜ್ಜೆ | 2248–2248 |
| ಕಡಲೆಕಾಳು | 5282–5520 |
| ಹತ್ತಿ | 8081–9902 |
| ಅಲಸಂದೆ | 5416–5416 |
| ಒಣದ್ರಾಕ್ಷಿ | 6000–12000 |
| ನೆಲಗಡಲೆ (ಶೇಂಗಾ) | 6588–6588 |
| ಜೋಳ | 3106–3106 |
| ಮೆಕ್ಕೆಜೋಳ | 1883–1897 |
| ಸೂರ್ಯ ಕಾಂತಿ | 6284–6284 |
| ತೊಗರಿ | 6800–7000 |
| ಗೋಧಿ | 2305–2411 |
| **ಭದ್ರಾವತಿ** | |
| ಬೆಲ್ಲ | 4350–5300 |
| ಮೆಕ್ಕೆಜೋಳ | 1980–2050 |
| ಭತ್ತ ಸಾಧಾರಣ | 1700–1700 |
| ಅಕ್ಕಿ ಮಧ್ಯಮ | 2500–2500 |

### ಮುಂಬೈ ಪೇಟೆ
ರಾತ್ರಿ 10ರ ಧಾರಣೆ
08-5-2026

| | |
|---|---|
| **ಎಣ್ಣೆ ಬೀಜಗಳು (100 ಕೆಜಿ)** | |
| ಶೇಂಗಾ ಜಾವಾ70/80 | 11000-11200 |
| ಶೇಂಗಾ ಜಾವಾ80/90 | 10400-10500 |
| **ಖಾದ್ಯ ತೈಲಗಳು (10 ಕೆಜಿ)** | |
| ಶೇಂಗಾ ಎಣ್ಣೆ ಕಚ್ಚಾ | 1620 |
| ಸೂರ್ಯಕಾಂತಿ ಎಸ್ | 1530 |
| ಸೂರ್ಯಕಾಂತಿ ಎಕ್ಸ್(ರಿ) | 1640 |
| ಬಿಳಿಕೊಬ್ಬರಿ | 3290 |
| ಆರ್‌ಬಿಡಿ ತಾಳೆಎಣ್ಣೆ | 1480 |
| ಸೋಯಾ ರಿಫೈನ್ಡ್ | 1500 |
| **ಹಿಂಡಿಗಳು (ಟನ್)** | |
| ಶೇಂಗಾ | 39500 |
| ಸೂರ್ಯಕಾಂತಿ | 30000 |
| ಸೋಯಾ | 51800 |

| | |
|---|---|
| **ಶಿಕಾರಿಪುರ** | |
| ಒಣ ಶುಂಠಿ | 10000–10000 |
| ಮೆಕ್ಕೆಜೋಳ | 1800–1930 |
| ಭತ್ತ-1 | 2400–2600 |
| ಸೂರ್ಯ ಕಾಂತಿ | 6800–6800 |
| **ಚಿತ್ರದುರ್ಗ** | |
| ಅಲಸಂದೆ ಕಾಳು | 2325–3825 |
| ಕಡಲೆಕಾಳು | 5326–5701 |
| ಶೇಂಗಾ | 4609–7689 |
| ಮೆಕ್ಕೆಜೋಳ | 1500–2012 |
| ರಾಗಿ | 3150–3562 |
| ಸೂರ್ಯಕಾಂತಿ | 4909–4909 |
| ತೊಗರಿ | 6030–6030 |

### ಅಡಿಕೆ ಪೇಟೆ

| | |
|---|---|
| **ಶಿರಸಿ** | |
| ಬೆಟ್ಟೆ | 42199–49989 |
| ಬಿಳೆ ಗೋಟು | 21600–38229 |
| ಚಾಲಿ | 44600–48730 |
| ಕೆಂಪುಗೋಟು | 24019–37099 |
| ರಾಶಿ | 50009–54699 |
| **ಸಿದ್ಧಾಪುರ** | |
| ಬಿಳೆ ಗೋಟು | 26569–36969 |
| ಚಾಲಿ | 40500–47809 |
| ಕೋಕ | 23299–34019 |
| ಕೆಂಪುಗೋಟು | 34169–37109 |
| ರಾಶಿ | 46899–53699 |
| ತಟ್ಟಿಬೆಟ್ಟೆ | 38339–48399 |
| **ಕುಮಟಾ** | |
| ಚಿಪ್ಪು | 31809–36099 |
| ಕೋಕ | 17569–35099 |
| ಫ್ಯಾಕ್ಟರಿ | 14089–28699 |
| ಹಳೆ ಚಾಲಿ | 47589–49198 |
| ಹೊಸ ಚಾಲಿ | 43029–48099 |
| **ಶಿವಮೊಗ್ಗ** | |
| ಬೆಟ್ಟೆ | 56572–61899 |
| ಗೊರಬಲು | 19010–41799 |
| ರಾಶಿ | 45069–55611 |
| ಸರಕು | 55199–85559 |
| **ಸಾಗರ** | |
| ಸಿಪ್ಪೆಗೋಟು | 8209–22419 |
| ಬಿಳಿಗೋಟು | 18327–34099 |
| ಕೆಂಪುಗೋಟು | 24999–40099 |
| ರಾಶಿ | 35299–56969 |
| **ತುಮ್‌ಕೋಸ್ ಚನ್ನಗಿರಿ** | |
| ರಾಶಿ | 45000–55499 |
| ಬೆಟ್ಟೆ | 41779–41779 |
| **ತೀರ್ಥಹಳ್ಳಿ** | |
| ರಾಶಿ | 54369–54369 |
| ಸಿಪ್ಪೆಗೋಟು | 11600–13000 |
| ಮೆಣಸು | 40000–68299 |
| **ಭದ್ರಾವತಿ** | |
| ಚಾಲಿ | 27000–28000 |
| ಪುಡಿ | 14000–14000 |
| ಸಿಪ್ಪೆಗೋಟು | 11000–12998 |

### ಚಿಕ್ಕಮಗಳೂರು
ಕಾಫಿ ಧಾರಣೆ

| | |
|---|---|
| ಅರೇಬಿಕಾ ಪಾರ್ಚ್‌ಮೆಂಟ್ – | 23,000 |
| ಅರೇಬಿಕಾ ಚೆರ್ರಿ – | 14,000 |
| ರೋಬಸ್ಟಾ ಪಾರ್ಚ್‌ಮೆಂಟ್ – | 18,150 |
| ರೋಬಸ್ಟಾ ಚೆರ್ರಿ – | 9,775 |

### ಷೇರುಪೇಟೆ ವಹಿವಾಟು
08-05-2026

| | | | | | | | |
|---|---|---|---|---|---|---|---|
| ADANIENT | 2,502.00 | COALINDIA | 457.00 | JIOFIN | 249.01 | SBILIFE | 1,875.60 |
| ADANIPORTS | 1,760.00 | DRREDDY | 1,295.00 | JSWSTEEL | 1,277.00 | SBIN | 1,018.40 |
| APOLLOHOSP | 8,105.00 | EICHERMOT | 7,315.00 | KOTAKBANK | 381.00 | SHRIRAMFIN | 1,003.05 |
| ASIANPAINT | 2,600.00 | ETERNAL | 256.15 | KTK BANK | 259.95 | SKF INDIA | 2,151.00 |
| AXISBANK | 1,270.00 | GRASIM | 2,966.00 | LT | 3,978.00 | SUNPHARMA | 1,845.00 |
| BAJAJ-AUTO | 10,696.50 | HCLTECH | 1,199.00 | M&M | 3,331.50 | TATACONSUM | 1,176.60 |
| BAJAJFINSV | 1,814.00 | HDFCBANK | 781.00 | MARUTI | 13,722.00 | TATASTEEL | 214.60 |
| BAJFINANCE | 954.50 | HDFCLIFE | 620.00 | MAXHEALTH | 1,013.00 | TCS | 2,397.20 |
| BEL | 439.60 | HINDALCO | 1,044.70 | NESTLEIND | 1,475.30 | TECHM | 1,460.90 |
| BHARTIARTL | 1,834.70 | HINDUNILVR | 2,286.00 | NTPC | 402.25 | TITAN | 4,517.00 |
| CIPLA | 1,348.00 | ICICIBANK | 1,267.80 | ONGC | 279.30 | TMPV | 355.50 |
| | | INDIGO | 4,522.00 | POWERGRID | 313.85 | TRENT | 4,245.00 |
| | | INFY | 1,179.50 | RELIANCE | 1,436.00 | ULTRACEMCO | 11,951.00 |
| | | ITC | 307.20 | RENUKA SUGAR | 27.61 | WIPRO | 197.88 |

# ಸ್ನಾತಕೋತ್ತರ ಪದವಿಯೊಂದಿಗೆ ಎರಡು ಬಂಗಾರದ ಪದಕ ಪಡೆದ ಶೋಭಾ ಬಿ.ಎಸ್.

**ರಿಪ್ಪನ್‌ಪೇಟೆ:** ಕುವೆಂಪು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಸ್ನಾತ ಕೋತ್ತರ ಪದವಿ ಪಡೆದಿರುವ ಶೋಭಾ ಬಿ.ಎಸ್. ಕೋಂ ರಾಜೇಂದ್ರ ಜಿ.ಪಿ. ಗಿಳಾಲಗುಂಡಿ ಅವರಿಗೆ ವಿಶ್ವವಿದ್ಯಾಲಯದ 35ನೇ ಘಟಿಕೋತ್ಸವ ದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಎರಡು ಬಂಗಾರದ ಪದಕ ನೀಡಿ ಗೌರವಿಸಿದೆ.
ಶೋಭಾ ಬಿ.ಎಸ್.ರವರು ಪ್ರಸ್ತುತ ಎಸ್.ಜೆ.ಜಿ.ಶಿಕ್ಷಣ ಮಹಾವಿದ್ಯಾಲಯ ಮುರುಘಾ ಮಠದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿ ಸುತ್ತಿದ್ದು ಇವರ ಈ ಸಾಧನೆಗೆ ಆನಂದಪುರಂ ಮುರುಘಾಮಠದ ಜಗ ದ್ಗುರು ಡಾ.ಮಲ್ಲಿಕಾರ್ಜುನ ಮುರುಘಾರಾಜೇಂದ್ರ ಮಹಾಸ್ವಾಮೀಜಿ ಮತ್ತು ಮೂಲೆಗದ್ದೆ ಸದಾನಂದ ಶಿವಯೋಗಾಶ್ರಮದ ಅಭಿನವ ಚನ್ನಬಸವ ಮಹಾಸ್ವಾಮೀಜಿ ಆಭಿನಂದಿಸಿದರು.

# ವೈದ್ಯರ ಸಲಹೆ ಸೂಚನೆ ಪಾಲಿಸಿ

**ಹಿರಿಯೂರು :** ನಗರದಲ್ಲಿ ರೆಡ್ ಕ್ರಾಸ್ ಹಾಗೂ ರೋಟರಿ ಸಂಸ್ಥೆ ವತಿಯಿಂದ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಸಾರ್ವಜನಿಕರ ಹಿತದೃಷ್ಟಿಯಿಂದ ಉಚಿತ ಕಣ್ಣಿನ ತಪಾಸಣೆ ಮತ್ತು ಉಚಿತ ಶಸ್ತ್ರಚಿಕಿತ್ಸೆ ನೀಡಲಾಗುತ್ತಿದ್ದು, ವೈದ್ಯರು ನೀಡುವ ಸಲಹೆ ಸೂಚನೆಗಳನ್ನು ತಪ್ಪದೇ ಪಾಲಿಸುವ ಮೂಲಕ ನಿಮ್ಮ ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ರೆಡ್ ಕ್ರಾಸ್ ಚೇರ್ಮನ್ ಹೆಚ್.ಎಸ್.ಸುಂದರ್ ರಾಜ್ ಹೇಳಿದರು.
ನಗರದ ರೋಟರಿ ಸಭಾಭವನದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ರೋಟರಿ ಸಂಸ್ಥೆ ಸರ್ವೋದಯ ಬ್ರಹ್ಮಜ್ಞಾನ ಸಮಾಜ, ಲಯನ್ಸ್ ಐ ಹಾಸ್ಪಟಲ್ ಬೆಂಗಳೂರು, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ಮತ್ತು ಜಿಲ್ಲಾ ಅಂಧತ್ವ ನಿವಾರಣಾ ಸಮಿತಿಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಕಣ್ಣಿನ ತಪಾಸಣೆ ಮತ್ತು ಉಚಿತ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಅವರು ಮಾತನಾಡಿದರು.
ಶಸ್ತ್ರ ಚಿಕಿತ್ಸೆ ಅಗತ್ಯವಿರುವ ಶಿಬಿರಾರ್ಥಿಗಳಿಗೆ ಯಾವುದೇ ಹಣವನ್ನು ಪಡೆಯದೇ ದಾನಿಗಳ ಸಹಕಾರದಿಂದ ಉಚಿತ ಶಸ್ತ್ರ ಚಿಕಿತ್ಸೆ ನೀಡಲಾಗುತ್ತಿದ್ದು, ಶಸ್ತ್ರ ಚಿಕಿತ್ಸೆಗೆ ಒಳಪಡುವ ಶಿಬಿರಾರ್ಥಿಗಳು ಯಾವುದೇ ಕಾರಣಕ್ಕೂ ಹೊರಗೆ ಹೋಗದೇ ವೈದ್ಯರ ಮಾರ್ಗದರ್ಶನದಂತೆ ನಡೆದುಕೊಳ್ಳಬೇಕು ಎಂದು ಹೇಳಿದರು.
ಯೂತ್ ರೆಡ್ ಕ್ರಾಸ್ ಅಧ್ಯಕ್ಷೆ ಶಶಿಕಲಾ ರವಿಶಂಕರ್ ಮಾತನಾಡಿ, ಕಣ್ಣುಗಳು ನಮ್ಮ ದೇಹದ ಅವಿಭಾಜ್ಯ ಅಂಗವಾಗಿದ್ದು, ಕಣ್ಣುಗಳಿಲ್ಲದೆ ಜೀವನ ನಡೆಸುವುದು ತುಂಬಾಕಷ್ಟ, ಈ ನಿಟ್ಟಿನಲ್ಲಿ ಸಾರ್ವಜನಿಕರ ಕಣ್ಣುಗಳ ರಕ್ಷಣೆಗಾಗಿ ನಮ್ಮ ರೆಡ್ ಕ್ರಾಸ್ ಹಾಗೂ ರೋಟರಿ ಸಂಸ್ಥೆಯಿಂದ ಬೆಂಗಳೂರಿನ ಲಯನ್ಸ್ ಐ ಹಾಸ್ಪಟಲ್ ನೆರವಿನೊಂದಿಗೆ ಉಚಿತ ಕಣ್ಣಿನ ತಪಾಸಣೆ ಮತ್ತು ಉಚಿತ ಶಸ್ತ್ರ ಚಿಕಿತ್ಸೆ ಮಾಡಲಾಗುತ್ತಿದೆ, ಕಣ್ಣಿನ ಶಸ್ತ್ರ ಚಿಕಿತ್ಸೆಗೆ ಒಳಪಡುವರಿಗೆ ವೈದ್ಯಕೀಯ ತಪಾಸಣೆ ಮಾಡಲಾಗುತ್ತದೆ, ಬಿಪಿ, ಶುಗರ್, ಹೃದಯ ತೊಂದರೆ ಕಂಡು ಬಂದಲ್ಲಿ ವೈದ್ಯರು ಶಸ್ತ್ರ ಚಿಕಿತ್ಸೆ ಮಾಡುವುದಿಲ್ಲ, ಏಕೆಂದರೆ ರೋಗಿಗಳ ಸುರಕ್ಷತೆ ವೈದ್ಯರಿಗೆ ಮುಖ್ಯವಾಗಿರುತ್ತದೆ ಎಂದು ಹೇಳಿದರು.
ಇದೇ ಸಂದರ್ಭದಲ್ಲಿ ಸುಮಾರು 75 ಜನರಿಗೆ ನೇತ್ರ ತಪಾಸಣೆ ನಡೆಸಿ, 25 ಜನರಿಗೆ ನೇತ್ರ ಶಸ್ತ್ರ ಚಿಕಿತ್ಸೆಗೆ ಬೆಂಗಳೂರಿನ ಲಯನ್ಸ್ ಆಸ್ಪತ್ರೆಗೆ ಹೋಗಲು ಸೂಚಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ವೈಸ್ ಚೇರ್ಮನ್ ಎ.ರಾಘವೇಂದ್ರ, ಕಾರ್ಯದರ್ಶಿ ಎಂ.ಎಸ್.ರಾಘವೇಂದ್ರ, ಎಲ್.ಆನಂದಶೆಟ್ಟಿ, ಸಣ್ಣಭೀಮಣ್ಣ, ಪಿ.ಆರ್.ಸತೀಶ್ ಬಾಬು, ನಾಗಸುಂದರಮ್ಮ ಸುಬ್ಬಣ್ಣಶೆಟ್ಟಿ, ಪಾರ್ವತಮ್ಮ, ಸೌಮ್ಯಸುರೇಶ್, ಶೋಭಾ ನಾಗರಾಜ್, ರೋಟರಿ ಕಾರ್ಯದರ್ಶಿ ವಿಕಾಸ್ ಜೈನ್, ಧನರಾಜ್ ಜೈನ್, ಹೆಚ್.ವೆಂಕಟೇಶ್ ಸೇರಿದಂತೆ ಶಿಬಿರಾರ್ಥಿಗಳಿದ್ದರು.

## 12ಕ್ಕೆ ಅರ್ಹತಾ ಪರೀಕ್ಷೆ

**ಚಿತ್ರದುರ್ಗ:** ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ಮೇ 12ರಂದು ಅರ್ಹತಾ ಪರೀಕ್ಷೆ ನಡೆಯಲಿದೆ. ಜಿಲ್ಲಾ ವ್ಯಾಪ್ತಿಯಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಈ ಪರೀಕ್ಷೆ ನಡೆಯಲಿದ್ದು, ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅರ್ಹ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಆಹ್ವಾನಿಸಲಾಗಿದೆ. ಪರೀಕ್ಷೆಯು ಮೇ 12ರ ಬೆಳಗ್ಗೆ 11 ಗಂಟೆಗೆ ನಗರಸಭೆ ಕಾರ್ಯಾಲಯದ ಹತ್ತಿರವಿರುವ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಪಿ.ಯು ಕಾಲೇಜಿನಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು, ಪೋಷಕರು ಇಲಾಖೆಯ ವೆಬ್‌ಸೈಟ್ ಮೂಲಕ ತಮ್ಮ ಪ್ರವೇಶ ಪತ್ರಗಳನ್ನು ಪಡೆದುಕೊಳ್ಳಬೇಕು. ಪರೀಕ್ಷಾರ್ಥಿಗಳು ಅಂದು ಬೆಳಗ್ಗೆ 10 ಗಂಟೆಗೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## 10ಕ್ಕೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ

**ಚಿತ್ರದುರ್ಗ:** ಮುರುಘರಾಜೇಂದ್ರ ಮಠದಲ್ಲಿ ಮೇ 10ರ ಭಾನುವಾರ ಬೆಳಗ್ಗೆ 8.30ಕ್ಕೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಹಮ್ಮಿಕೊಳ್ಳಲಾಗಿದೆ. ಮಠದ ಆಡಳಿತ ಮಂಡಳಿ ಅಧ್ಯಕ್ಷ ಶಿವಯೋಗಿ ಸಿ. ಕಳಸದ್ ಅಧ್ಯಕ್ಷತೆ ವಹಿಸುವರು. ಸದಸ್ಯರಾದ ಡಾ. ಶ್ರೀ ಬಸವಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ನಿವೃತ್ತ ಉಪನ್ಯಾಸಕಿ ಸಿ.ಬಿ.ಶೈಲಾ ಜಯಕುಮಾರ್ ವಿಷಯಾವಲೋಕನ ಮಾಡಲಿದ್ದು, ವೀರಶೈವ ಲಿಂಗಾಯತ ಹೇಮರಡ್ಡಿ ಮಲ್ಲಮ್ಮ ಸಮಾಜದ ಅಧ್ಯಕ್ಷ ಡಾ.ಎಲ್.ಪಾಲಾಕ್ಷಯ್ಯ, ಗೌರವಾಧ್ಯಕ್ಷ ಜಿ.ಚಿದಾನಂದಪ್ಪ, ಉಪಾಧ್ಯಕ್ಷರಾದ ಎನ್.ಬಿ.ವಿಶ್ವನಾಥ್, ಕಾರ್ಯದರ್ಶಿ ಡಿ.ಟಿ.ಶಿವಾನಂದಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

# ಮಹಿಳಾ ಶೋಷಣೆಗೆ ಇತಿಶ್ರೀ!

ಜಿ.ಆರ್.ಬಿ

ಸಿನಿಸಿಕೆ

ಮಹಿಳಾ ಪ್ರಧಾನ ಸಿನಿಮಾ ಮಾಡಬೇಕಾದರೆ ಯಾವ 'ವಿಷಯ' ಆರಿಸಿಕೊಳ್ಳಬೇಕು ಎಂದು ಆಲೋಚಿಸುವ ಬಹುತೇಕ ನಿರ್ದೇಶಕರಿಗೆ ಥಟ್ ಅಂತ ನೆನಪಾಗುವುದೇ ಹೆಣ್ಣಿನ ಮೇಲೆ ಜರುಗುತ್ತಿರುವ ದೌರ್ಜನ್ಯ, ಶೋಷಣೆ ಇತ್ಯಾದಿ... ಇದನ್ನೇ ಪ್ರಮುಖ ಅಂಶವನ್ನಾಗಿಸಿಕೊಂಡು ನಿರ್ದೇಶಕ ಜಗದೀಶ್ ಧೃತಿ ಎಂಬ ಸಿನಿಮಾ ಮಾಡಿದ್ದಾರೆ. ಪ್ರಮುಖ ಪಾತ್ರಧಾರಿಯ ಹೆಸರು ಧೃತಿ. ಆಕೆ ಧೃತಿಗೆಡುತ್ತಾಳೋ ಅಥವಾ ಧೃತಿಗೆಡದೆ ದಿಟ್ಟವಾಗಿ ನಿಲ್ಲುತ್ತಾಳೋ ಎಂಬುದೇ ಇಡೀ ಸಿನಿಮಾದ ಒನ್‌ಲೈನ್.

ಶೋಷಣೆಗೊಳಗಾದ ಹೆಣ್ಣು ಮಗಳೊಬ್ಬಳ ಸುತ್ತ ಧೃತಿ ಚಿತ್ರದ ಕಥೆ ಸಾಗುತ್ತದೆ. ಈ ಚಿತ್ರದಲ್ಲಿ ಶೋಷಣೆಯನ್ನು ವಿಜೃಂಭಿಸದೇ, ಸಮಸ್ಯೆಗೆ ಪರಿಹಾರ ನೀಡಿರುವುದು ಗಮನಾರ್ಹ. ಹಾಗೆಯೇ ಸಿನಿಮಾದ ಕೊನೆಗೊಂದು ಸಂದೇಶ ನೀಡಲೇಬೇಕೆಂಬ ಉದ್ದೇಶದಿಂದ ಕ್ಲೈಮ್ಯಾಕ್ಸ್‌ನಲ್ಲೊಂದು ಮೆಸೇಜ್ ಪಾಸ್ ಮಾಡಿದ್ದಾರೆ ನಿರ್ದೇಶಕ ಜಗದೀಶ್.

ಮಹಿಳಾ ಪ್ರಧಾನ, ಸಂದೇಶಭರಿತ ಸಿನಿಮಾ ಎಂದಾಕ್ಷಣ ಅದನ್ನು ತೀರಾ ನೀರಸವಾಗಿಸಿಲ್ಲ... ಕಮರ್ಷಿಯಲ್ ಸಿನಿಮಾ ಫಾರ್ಮುಲ ಮಾದರಿಯಲ್ಲಿಯೇ ಚಿತ್ರಿಸಲಾಗಿದೆ. ಹೀಗಾಗಿ ಯಾವುದೇ ಪೇಲವ ದೃಶ್ಯ, ಅನವಶ್ಯಕ ಅಂಶಗಳು ತೂರಿಕೊಳ್ಳದಂತೆ ಎಚ್ಚರವಹಿಸಿರುವುದು ನಿರ್ದೇಶಕರ ಜಾಣ್ಮೆಗೆ ನಿದರ್ಶನದಂತಿದೆ.

ಕಥೆಗೆ ಪೂರಕವಾಗಿರುವ ಸ್ಥಳಗಳು, ಪಾತ್ರಧಾರಿಗಳು ಸಿನಿಮಾದ ಭಾಷ್ಯವನ್ನು ಮತ್ತಷ್ಟು ಚೊಕ್ಕಗೊಳಿಸುವಲ್ಲಿ ಸಹಕಾರಿಯಾಗಿದೆ. ಪ್ರಸನ್ನ ಕುಮಾರ್ ಸಂಗೀತ ಕಥೆಗೆ ಹೊಂದಿಕೊಂಡಿದೆ.

ಸಿನಿಮಾದಲ್ಲಿ ದಿಟ್ಟೆಯಾಗಿ, ಕ್ರೀಡಾಪಟುವಾಗಿ ದಣಿವರಿಯದ ಹಾಗೆ ನಟಿಸಿರುವ ಆಂಚಲ್‌ಗೌಡ ಭರವಸೆ ಮೂಡಿಸಿದ್ದಾರೆ. ಪ್ರಶಾಂತ್ ಸೊಪ್ಪಿಮಠ, ಭಾವನಾ ರೆಡ್ಡಿ, ಮನೋಜ್ ಕುಮಾರ್, ಧನುಷ್, ಪ್ರದೀಪ್, ದೀಪಕ್, ಮಧು ಮಂದಗೆರೆ ಇತರರು ಪಾತ್ರಕ್ಕೆ ಪೂರಕವಾಗಿ ಅಭಿನಯಿಸಿದ್ದಾರೆ. ◆

- ಚಿತ್ರ: ಧೃತಿ
- ನಿರ್ದೇಶನ: ಜಗದೀಶ್
- ನಿರ್ಮಾಣ: ಜಗದೀಶ್
- ತಾರಾಗಣ: ಆಂಚಲ್ ಗೌಡ, ಪ್ರಶಾಂತ್ ಸೊಪ್ಪಿಮಠ, ಭಾವನಾ ರೆಡ್ಡಿ, ಮನೋಜ್ ಕುಮಾರ್, ಧನುಷ್, ಪ್ರದೀಪ್, ದೀಪಕ್ ಹಾಗೂ ಮಧು ಮಂದಗೆರೆ ಮತ್ತಿತರರು.

## ವಿನಯ್ ರಾಜ್ ಹೊಸ ಅವತಾರ

ವಿನಯ್ ರಾಜ್‌ಕುಮಾರ್ ನಟನೆಯ ಹೊಸ ಸಿನಿಮಾ ಅವರ ಹುಟ್ಟುಹಬ್ಬದ ದಿನದಂದು ಅನೌನ್ಸ್ ಆಗಿದೆ. ಮರ್ಫಿ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದ ಬಿ.ಎಸ್.ಪಿ ವರ್ಮ ಮಾಚಿಸ್ ಎಂದು ನಾಮಕರಣ ಮಾಡಿ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಸುರೇಶ್ ಗೌಡ ಹೆಣ್ಣೂರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದು, ಕ್ರಿಯೇಟಿವ್ ಪ್ರೊಡ್ಯೂಸರ್ ಆಗಿ ಶಿವುಗೌಡ ಕಾರ್ಯ ನಿರ್ವಹಿಸಲಿದ್ದಾರೆ.

ಆದರ್ಶ ಆರ್ ಛಾಯಾಗ್ರಹಣ, ಕಿರಣ್ ಸಂಕಲನ, ಡಾ. ಕೆ.ರವಿವರ್ಮಾ ಸಾಹಸ ಸಂಯೋಜನೆ, ಗುಣ ಕಲಾ ನಿರ್ದೇಶಕ ಹಾಗೂ ಕಾರ್ಯಕಾರಿ ನಿರ್ಮಾಪಕರಾಗಿ ಮೋಹನ್ ಎನ್ ಮುನಿ ನಾರಾಯಣಪ್ಪ ಇದ್ದಾರೆ.

ಜುಲೈನಿಂದ 'ಮಾಚಿಸ್' ಚಿತ್ರೀಕರಣ ಆರಂಭವಾಗಲಿದ್ದು, ಅದಕ್ಕೆ ಪೂರಕ ತಯಾರಿಯಲ್ಲಿ ತೊಡಗಿಸಿಕೊಂಡಿದೆ ವರ್ಮ ಮತ್ತವರ ಚಿತ್ರತಂಡ. ◆

## ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೆಂಕಣ್ಣ ಚಿತ್ರಗಾರ ನಿಧನ

ಸಂ.ಕ.ಸಮಾಚಾರ ಗಂಗಾವತಿ



ಪಟ್ಟಣದ ನಿವಾಸಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ರಥ ಶಿಲ್ಪಿ ವೆಂಕಣ್ಣ ಚಿತ್ರಗಾರ (76) ಶುಕ್ರವಾರ ನಿಧನ ರಾದರು.

ಮೃತರಿಗೆ ಪತ್ನಿ, ಇಬ್ಬರು ಪತ್ರರು, ಮೂವರು ಪುತ್ರಿಯರು ಇದ್ದಾರೆ. ಮೂಲತಃ ರಥ ಶಿಲ್ಪಿ ತಯಾರಿಕೆ, ಗಂಗಾವತಿಯ ನಗರದ ಸುಂಕದಕಟ್ಟೆ ಪ್ರಾಣೇಶನ ಪ್ರಥಮ ರಥ ತಯಾರಿಕೆಗಳು ಇವರ ವೈಶಿಷ್ಟ್ಯ. ಅವರ ನಿಧನಕ್ಕೆ ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ ಕಂಬನಿ ಮಿಡಿದಿದ್ದಾರೆ.

---

### ನಗರಸಭಾ ಕಾರ್ಯಾಲಯ
### ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.

Email:itstaff_ulb_gouribidanur@yahoo.co.in,
Website:www.gowribidanurtown.gov.in

ಸಂಖ್ಯೆ: ನಸಗೌ/ಆಶಾ/ಟೆಂಡರ್/ಸಿಆರ್-2/2026-27 ದಿನಾಂಕ:05.05.2026

**ಮರು ಟೆಂಡರ್ ಪ್ರಕಟಣೆ**

ಪೌರಾಯುಕ್ತರು, ನಗರಸಭೆ, ಗೌರಿಬಿದನೂರು ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭಾ ನಿಧಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ/ ಸರಬರಾಜುದಾರರಿಂದ/ ಸಂಘ ಸಂಸ್ಥೆಗಳಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಈ ವೆಬ್‌ಸೈಟ್ **www.kppp.karnataka.gov.in** ಮೂಲಕ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ **www.gouribidanurcity.gov.in** ನಲ್ಲಿ ಪರಿಶೀಲಿಸಬಹುದು. (1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 21.05.2026ರ ಸಂಜೆ 5.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ **ದಿನಾಂಕ: 22.05.2026 ರ ಸಂಜೆ 5.15 ಗಂಟೆಗೆ.**

| ಕ್ರ ಸಂ | ಕಾಮಗಾರಿ | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| | ನಗರಸಭಾ ನಿಧಿ | |
| 1 | ಗೌರಿಬಿದನೂರು ನಗರಸಭೆಯ ಸ.ಕಾ.ಅ (ಪರಿಸರ) ರವರಿಗೆ ಕಚೇರಿ ಕೆಲಸಗಳಿಗಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ಕಾರು ಸರಬರಾಜು ಮಾಡುವುದು | 5.76 |

ಸಹಿ/- ಪೌರಾಯುಕ್ತರು, ನಗರಸಭೆ, ಗೌರಿಬಿದನೂರು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:52/ಕೆ.ಎಸ್.ಎಂ.ಸಿ.ಎ/2026-27

---

### ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

# 59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ) ಬೆಂಗಳೂರು-560025
ದೂರವಾಣಿ ಸಂಖ್ಯೆ: 080-25584102/25594893
ಇ-ಮೇಲ್: eecontractksphc@gmail.com | ವೆಬ್‌ಸೈಟ್: www.ksphc.org

ಸಂಖ್ಯೆ:ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎಸ್‌ಟಿ/ಟೆಂಡರ್/02/2026-27/06/174 ದಿನಾಂಕ:08.05.2026

**ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ**

ಕರಾಪೊವಸ & ಮೂಸೌಅನಿನಿ ಇವರು ಕೆಟಿಪಿಪಿ 2000 ಕಾಯ್ದೆ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳಂತೆ ಕೆಪಿಪಿ https://kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಿದೆ.

| | |
|---|---|
| 2026-27 ಆರ್ಥಿಕ ವರ್ಷಕ್ಕೆ ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್‌ಗೆ ಮಾನವ ಶಕ್ತಿ ಸೇವೆಗಳನ್ನು ಒದಗಿಸುವುದು. | ಸೇವೆಗಳು |

ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಸ್ತಾವೇಜುಗಳು ಇತ್ಯಾದಿಗಳು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 08.05.2026ರಿಂದ ಲಭ್ಯವಿರುತ್ತದೆ.

ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್ ಯಾವುದೇ ಕಾರಣಗಳನ್ನು ನೀಡದೇ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/-
ಕಾರ್ಯಪಾಲಕ ಇಂಜಿನಿಯರ್-ಗುತ್ತಿಗೆ

ಡಿಐಪಿಆರ್/ಸಿಪಿ/573/ಸಿಸಿಎಲ್/2026-27

---

### ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್, ಕೋಲಾರ ಜಿಲ್ಲೆ

ದೂರವಾಣಿ ಸಂಖ್ಯೆ: 08153-200898, e-mail:dsghkgf@gmail.com
ಸಂಖ್ಯೆ: ಸಾಆಕೆ/ಇ-ಟೆಂಡರ್/ಪಥ್ಯಾಹಾರ/02/2026-27 ದಿನಾಂಕ: 06.05.2026

**ಇ-ಟೆಂಡರ್ ಪ್ರಕಟಣೆ**

ಸಾರ್ವಜನಿಕ ಆಸ್ಪತ್ರೆ ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಕೆ.ಜಿ.ಎಫ್ ಕೋಲಾರ ಜಿಲ್ಲೆ ಇಲ್ಲಿನ ಮೂರು ಆಸ್ಪತ್ರೆಗಳ ಒಳರೋಗಿಗಳಿಗೆ ಪಥ್ಯಾಹಾರ ಸಾಮಾಗ್ರಿ/ಸಿದ್ಧಪಡಿಸಿದ ಪಥ್ಯಾಹಾರ ಹಾಗೂ ಬ್ರೆಡ್ ಪೂರೈಕೆ ಸರಬರಾಜುಗಾಗಿ ಕೆ.ಪಿ.ಪಿ.ಪಿ ಪೋರ್ಟಲ್ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆಯಂತೆ ಇ-ಟೆಂಡರ್ ಕರೆಯಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಭಾಗವಹಿಸುವ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು, ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:65/ಕೆಎಸ್‌ಎಂಸಿಎ/2026-27

---

### ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ-584115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ.
ದೂರವಾಣಿ.:(08537)276339/275463
ಇ-ಮೇಲ್: material276339@gmail.com ವೆಬ್‌ಸೈಟ್: www.huttigold.karnataka.gov.in

**ಟೆಂಡರ್ ಪ್ರಕಟಣೆ ನಂ.03/26-27 ದಿನಾಂಕ: 09.05.2026** (KPPP ಮುಖಾಂತರ ಮಾತ್ರ)

ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು) ಇವರಿಂದ ಈ ಕೆಳಗಿನ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

| ಕ್ರ. ಸಂ. | ಸಾಮಾಗ್ರಿ ವಿವರ | ಇ.ಎಂ.ಡಿ. ಮೊತ್ತ ರೂ.ಗಳಲ್ಲಿ |
|---|---|---|
| 1 | 75mm ಹೈಕ್ರೋಮೋ ಗ್ರೈಂಡಿಂಗ್ ಮೀಡಿಯಾ ಬಾಲ್‌ಗಳ ಪೂರೈಕೆ. HGML/2026-27/IND0480 | 6,12,000/- |
| 2 | ಇಂಪ್ರಿವಿಯಸ್ ಫ್ಲೇಯರ್‌ನ ಪೂರೈಕೆ, ಹಾಕುವಿಕೆ, ಪರೀಕ್ಷೆ ಮತ್ತು ಸ್ಥಾಪನೆ. HGML/2026-27/SE0091 | 6,70,000/- |
| 3 | ಭೂಗತ ಮಾರ್ಗವಾಗಿ 18 R25, 315/70 R15, 17.5 R25, 16 R25, 12 R20 ಗಾತ್ರದ ಉಕ್ಕಿನ ರೇಡಿಯಲ್ ಟೈರ್‌ಗಳ ಪೂರೈಕೆ. HGML/2026-27/IND0491 | 5,79,000/- |
| 4 | ಡಬಲ್‌ಆಮರ್ಡ್ ತಾಮ್ರದ ಕೇಬಲ್‌ಗಳ ಪೂರೈಕೆ. HGML/2026-27/IND0489 | 2,54,000/- |

ವೇಳಾ ಪಟ್ಟಿ: (1) ಪ್ರಿ-ಬಿಡ್ ಸಭೆ (Zoom): 16.05.2026 for Sl.No.1 at 10.30 A.M., for Sl.No.2 at 11.00 A.M. for Sl.No.3 at 11.30AM and for Sl.No.4 at 12.00 P.M. (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **09.06.2026 ಸಂಜೆ 4.00 ಗಂಟೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **11.06.2026 ಬೆಳಿಗ್ಗೆ 10.00 ಗಂಟೆಗೆ.** ಆಸಕ್ತಿವುಳ್ಳವರು ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://www.kppp.karnataka.gov.in ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಗಾಗಿ ಕೆಳಗೆ ನಮೂದಿಸಿದ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು KPPP ನೊಂದಾಯಿತರಾಗಿರಬೇಕು.

ಸಹಿ/-ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಪ್ರಮುಖ ಚಿನ್ನದ ಉತ್ಪಾದಕರು

---

### ಉತ್ತರ ಕನ್ನಡ ಜಿಲ್ಲಾ ಪಂಚಾಯತ ಕಾರ್ಯಾಲಯ, ಕಾರವಾರ

ದೂರವಾಣಿ ಕ: 226560 ಮ.: 226246 ಫ್ಯಾಕ್ಸ್: 226470
E-mail: ceo_zp_kwr@nic.in
ಸಂ: ಜಿಪಂಆ/ಸಿಬ್ಬಂದಿ/ಹೊಗುಸಿ/ಇ-143795/2026-27 ದಿನಾಂಕ: 30.04.2026

**ಇ-ಟೆಂಡರ್ ಪ್ರಕಟಣೆ**

ಉತ್ತರ ಕನ್ನಡ ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಖಾಲಿ ಇರುವ ಬೆರಳಚ್ಚುಗಾರರು/ಡಾಟಾ ಎಂಟ್ರಿ ಆಪರೇಟರ್ಸ್, ಮಾನ್ಯ ಅಧ್ಯಕ್ಷರ ಆಪ್ತ ಶಾಖೆಯಲ್ಲಿ ಖಾಲಿ ಇರುವ (ಗ್ರೂಪ್ 'ಸಿ' ವೃಂದದ) ಹುದ್ದೆ, ವಾಹನ ಚಾಲಕರು ಹಾಗೂ ಗ್ರೂಪ್ 'ಡಿ' ಸಿಬ್ಬಂದಿಗಳ ಸೇವೆಯನ್ನು ದಿನಾಂಕ: 01.06.2026 ರಿಂದ 30.04.2027 ರವರೆಗೆ 11 ತಿಂಗಳ ಅವಧಿಗೆ ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಇ-ಟೆಂಡರ್ ಕರೆಯಲಾಗಿದ್ದು, ಆಸಕ್ತ ಟೆಂಡರ್‌ದಾರರು ಕೊನೆಯ ದಿನಾಂಕ: 26.05.2026 ರ ಸಂಜೆ 4.00 ಗಂಟೆಯೊಳಗೆ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರಮೆಂಟ್ ವಿಳಾಸ http://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ: 08.05.2026 (2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: ರೂ. 77,93,181/- (3) ಇ-ಪ್ರೊಕ್ಯೂರಮೆಂಟ್ ಮುಖಾಂತರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26.05.2026 ಸಂಜೆ 4.00 ಗಂಟೆ (4) ಪ್ರಿಬಿಡ್ ಮೀಟಿಂಗ್ ದಿನಾಂಕ: 18.05.2026 ಬೆಳಿಗ್ಗೆ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕಾರವಾರ (5) ಇ-ಪ್ರೊಕ್ಯೂರಮೆಂಟ್ ಮುಖಾಂತರ ಹಾಕಿರುವ ತಾಂತ್ರಿಕ ಬಿಡ್ ದಾಖಲೆ ತೆರೆಯುವ ದಿನಾಂಕ: ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕಾರವಾರ, ದಿನಾಂಕ: 29.05.2026 ಬೆಳಿಗ್ಗೆ 11.00 ಗೆ (6) ಇ-ಪ್ರೊಕ್ಯೂರಮೆಂಟ್ ಮುಖಾಂತರ ಹಾಕಿರುವ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕಾರವಾರ ದಿನಾಂಕ: 02.06.2026 ಬೆಳಿಗ್ಗೆ 11.00ಗೆ (7) ಇ-ಪ್ರೊಕ್ಯೂರಮೆಂಟ್ ಮುಖಾಂತರ ಹಾಕಿರುವ ಆರ್ಥಿಕ ದಾಖಲೆ ಪರಿಶೀಲಿಸುವ ದಿನಾಂಕ: 02.06.2026 ಇ-ಪ್ರೊಕ್ಯೂರಮೆಂಟ್ ಮೂಲಕ ಸಾಧ್ಯವಾದಲ್ಲಿ ಮಾತ್ರ (ತಾಂತ್ರಿಕ ದಾಖಲೆ ಸರಿಯಿರುವ ಟೆಂಡರ್‌ದಾರರ ಆರ್ಥಿಕ ದಾಖಲೆ ಮಾತ್ರ ಪರಿಶೀಲಿಸಲಾಗುವುದು) (8) ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: ರೂ. 1,55,864/- (9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ ಉತ್ತರ ಕನ್ನಡ, ಕಾರವಾರ, 08382-226292

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ ಉತ್ತರ ಕನ್ನಡ ಕಾರವಾರ.

DIPR/KWR/KSMCA/116/26-27 dt.08.05.26

---

### ಹುಬ್ಬಳ್ಳಿ-ಧಾರವಾಡ ಸಿಟಿ ವಾಟರ್ ಕಂಪನಿ ಲಿಮಿಟೆಡ್

(ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸಂಪೂರ್ಣ ಮಾಲೀಕತ್ವದ ಕಂಪನಿ)
ನಂ. 122/124, 1ನೇ ಮಹಡಿ, ಹೆಚ್‌ಡಿಎಂಸಿ, ಸಂಸ್ಕೃತ ಭವನ, ಹುಬ್ಬಳ್ಳಿ
ಟ್ರಾಫಿಕ್ ಐಲ್ಯಾಂಡ್, ಹುಬ್ಬಳ್ಳಿ-ಧಾರವಾಡ - 580029. ದೂರವಾಣಿ: 0836-2000456

No: HDCWCL/HR/CS/RETAINER BASIS/2026/05 Date: 07-05-2026

**ರಿಟೇನರ್ ಆಧಾರದ ಮೇಲೆ ಚಾರ್ಟರ್ಡ್ ಅಕೌಂಟೆಂಟ್ ನೇಮಕಾತಿ ಪ್ರಕಟಣೆ**

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (KUIDFC) ರಿಟೈನರ್ ಆಧಾರದ ಮೇಲೆ ಈ ಕೆಳಗಿನ ಹುದ್ದೆಗೆ ನೇಮಕಾತಿಗಾಗಿ ಅರ್ಹ ಮತ್ತು ಅನುಭವಿ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ.

| ಕ್ರ.ಸಂ. | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ |
|---|---|---|
| 1 | ಚಾರ್ಟರ್ಡ್ ಅಕೌಂಟೆಂಟ್ | 01 |

ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 22-05-2026

ವಿವರವಾದ ಅರ್ಹತಾ ಮಾನದಂಡಗಳು, ಸಂಭಾವನೆ, ಅರ್ಜಿ ಸಲ್ಲಿಸುವ ವಿಧಾನ ಮತ್ತು ಇತರೆ ಮಾಹಿತಿಗಾಗಿ, ದಯವಿಟ್ಟು ಕಚೇರಿಯಲ್ಲಿ ಪ್ರಕಟಿಸಲಾದ ವಿವರವಾದ ಅಧಿಸೂಚನೆಯನ್ನು ನೋಡಿ, ಹೆಚ್ಚಿನ ವಿವರಗಳಿಗಾಗಿ ಆಕಾಂಕ್ಷಿಗಳು ಕಚೇರಿ ವಿಳಾಸವನ್ನು ಸಂಪರ್ಕಿಸಬಹುದು.

ಸಹಿ/-ವ್ಯವಸ್ಥಾಪಕ ನಿರ್ದೇಶಕರು
ಹೆಚ್‌ಡಿಸಿಡಬ್ಲ್ಯುಸಿಎಲ್, ಹುಬ್ಬಳ್ಳಿ

ವಾ.ಸಾ.ಸ/ಧಾರವಾಡ/149/ಆರ್ಟಿಓ/2026-27

---

### ಕರ್ನಾಟಕ ಸರ್ಕಾರ
### ಕರ್ನಾಟಕ ಮೃಗಾಲಯ ಪ್ರಾಧಿಕಾರ
### ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ/ ಉಪ ನಿರ್ದೇಶಕರವರ ಕಾರ್ಯಾಲಯ
### ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ

ಇಮೇಲ್: dcf_tgulbarga@yahoo.co.in ಕಛೇರಿ ದೂ. ಸಂ. 08472-256601
ಸಂಖ್ಯೆ: ಉವಿ/ಕಿ.ಮೃ/ಹೊರಗುತ್ತಿಗೆ ನೌಕರರ/ಟೆಂಡರ್/ಸಿ.ಆರ್/2026-27 ದಿನಾಂಕ : 07-05-2026

**:: ಅಲ್ಪಾವಧಿಯ ಇ-ಟೆಂಡರ್ ಪ್ರಕಟಣೆ ::**

(Karnataka Public Procurement Portal ನಡಿಯಲ್ಲಿ ಮಾತ್ರ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವ ಟೆಂಡರನ್ನು Karnataka Public Procurement Portal ನಡಿಯಲ್ಲಿ ಆಹ್ವಾನಿಸಲಾಗಿದ್ದು, ಸದರಿ ವಿವರ ಈ ಕೆಳಗಿನಂತಿದೆ.

ವಿವರ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ರವರಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ.

1) ಕಾಮಗಾರಿ : ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವ ಟೆಂಡರ್, 2) ಟೆಂಡರ್‌ಗಿಟ್ಟ ಮೊತ್ತ : **ಕನಿಷ್ಠ ರೂ. 57.00 ಲಕ್ಷ, ಗರಿಷ್ಠ ರೂ. 57.00 ಲಕ್ಷ,** 3) ಲೆಕ್ಕ ಶೀರ್ಷಿಕೆ : ZAK, 4) ಅರ್ಹತೆ : As per tender documents, 5) ಟೆಂಡರ್‌ಗೆ ಸಂಬಂಧಿಸಿದಂತೆ, ಪ್ರಶ್ನೆಗಳು ಮತ್ತು ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ : **13-05-2026 ಸಾಯಂಕಾಲ 4.00 ಗಂಟೆಗೆ,** 6) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **14-05-2026 ಸಾಯಂಕಾಲ 4.00 ಗಂಟೆಗೆ,** 7) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **15-05-2026 ರಂದು ಸಾಯಂಕಾಲ 4.30 ಗಂಟೆಗೆ,** 8) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **17-05-2026 ರಂದು ಸಾಯಂಕಾಲ 5.00 ಗಂಟೆಗೆ,** 9) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ, ಎಸ್.ಬಿ. ಟೆಂಪಲ್ ರೋಡ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ : http:kppp.karnataka.gov.in

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು
ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/102/ಕೆ.ಎಸ್.ಎಂ.ಸಿ.&ಎ/2026-27

---

### ಕರ್ನಾಟಕ ಸರ್ಕಾರ
### ಜಿಲ್ಲಾ ಪಂಚಾಯತ್ ಗದಗ
### ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ

ಕೊಠಡಿ ಸಂಖ್ಯೆ-101, ಜಿಲ್ಲಾ ಆಡಳಿತ ಭವನ, ಗದಗ.
ಇ-ಮೇಲ್: dhogadag@gmail.com ದೂರವಾಣಿ: 08372-233996
ಕ್ರಸಂ:ಪೂರೈಕೆ/ಇ-ಟೆಂಡರ್/2025-26 ದಿ: 07.05.2026

**ಟೆಂಡರ್ ಪ್ರಕಟಣೆ**

2026-27 ನೇ ಸಾಲಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಅಧೀನ ಕಚೇರಿ ಹಾಗೂ ಅಧೀನ ಆರೋಗ್ಯ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದ ವಿವಿಧ ವೃಂದದ ನೌಕರರ ಸೇವೆಯನ್ನು ಹೊರ ಸಂಪನ್ಮೂಲದಿಂದ ಒದಗಿಸುವ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹಾಗೂ ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ : 15-05-2026 ರಂದು ಸಾಯಂಕಾಲ ಸಮಯ 04:30 ನಿಗದಿಪಡಿಸಿದೆ. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ Tender Reference No- DHFWS/2026-27/SE2225 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು, ಗದಗ

ವಾ.ಸಾ.ಸಂ/ಗದಗ/55/ಕೆಎಸ್‌ಎಂಸಿಎ/2026-27

---

### ESAF
### ESAF SMALL FINANCE BANK

ನೋಂದಾಯಿತ ಕಚೇರಿ: ESAF ಭವನ, ಮಣ್ಣುತ್ತಿ, ತ್ರಿಶೂರ್ - 680 651, ಕೇರಳ

**ಚಿನ್ನದ ಹರಾಜಿನ ಸೂಚನೆ**

ವಿವಿಧ ಸಾಲ ಖಾತೆಗಳ ವಿರುದ್ಧ ಇಎಸ್‌ಎಎಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಅಡವಿಟ್ಟಿರುವ ಮತ್ತು ಪದೇ ಪದೇ ಸೂಚನೆ ನೀಡಿದರೂ ಬಾಕಿ ಉಳಿದಿರುವ/ಹಿಂಪಡೆಯದಿರುವ ಚಿನ್ನದ ಆಭರಣಗಳನ್ನು, ಬ್ಯಾಂಕಿನ ಬಾಕಿ ವಸೂಲಿಗಾಗಿ, ಅನ್ವಯವಾಗುವ ಬ್ಯಾಂಕಿಂಗ್ ನಿಯಮಗಳು ಮತ್ತು ನೀತಿಗಳಿಗೆ ಅನುಸಾರವಾಗಿ ಹರಾಜು ಮಾಡಲಾಗುವುದು ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

| ಹರಾಜಿನ ವಿವರಗಳು |
|---|
| ಹರಾಜಿನ ವಿಧಾನ: ಆಫ್‌ಲೈನ್ (ಶಾಖೆಗಳ ಮೂಲಕ ಭೌತಿಕ ಹರಾಜು) |
| ಹರಾಜಿನ ದಿನಾಂಕ: 06-06-2026 ಸಮಯ: ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 01:00 ರವರೆಗೆ |
| ಹರಾಜು ಸ್ಥಳಗಳು: ಕರ್ನಾಟಕದ ಈ ಕೆಳಗಿನ ESAF ಸಣ್ಣ ಹಣಕಾಸು ಬ್ಯಾಂಕ್ ಶಾಖೆಗಳಲ್ಲಿ ಹರಾಜು ನಡೆಯಲಿದೆ. |
| ಆಸಕ್ತ ಬಿಡ್ಡರ್‌ಗಳು ಭಾಗವಹಿಸಲು ಆಯಾ ಶಾಖೆಗಳಿಗೆ ಭೇಟಿ ನೀಡಬೇಕೆಂದು ಕೋರಲಾಗಿದೆ. ವಿವರವಾದ ಶಾಖೆಯ ವಿಳಾಸಗಳು ಮತ್ತು ಸಂಪರ್ಕ ಸಂಖ್ಯೆಗಳಿಗಾಗಿ, ದಯವಿಟ್ಟು ಬ್ಯಾಂಕಿನ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ. |
| ಶಾಖೆಯ ಹೆಸರು - ಸಾಲದ ಖಾತೆ ಸಂಖ್ಯೆ |
| ಬೆಳಗಾವಿ: 63250002111695, 75250003630974, ಬೆಂಗಳೂರು ಎಚ್‌ಎಸ್‌ಆರ್ ಲೇಔಟ್: 75250003726124, ಬೆಂಗಳೂರು - ವೈಟ್‌ಫೀಲ್ಡ್:75250003763213, 3908122, ಬೆಂಗಳೂರು: ಎಚ್‌ಬಿಆರ್ ಲೇಔಟ್: 63250002120278, 75250003966981, 3967239, ಬೆಂಗಳೂರು: ಎಚ್‌ಬಿಆರ್ ಲೇಔಟ್: 75250003894155, ಬೆಂಗಳೂರು-ಹೊಸೂರು: 63250002133744, ಬೀದರ್: 75250003677235, 3727962, ಕೊಳ್ಳೇಗಾಲ:75250001115128, 3693704, 3873935, 3972419, ಚಿಕ್ಕಮಗಳೂರು: 75250003768254, ಮಂಗಳೂರು ಸಿಟಿ: 63250002143865, 75250001061288, 1061958, 3730045, 3741995, 3752864, 3826955, 3864483, 3958416, 3970413, 3990185, ಹುಬ್ಬಳ್ಳಿ: 63250002089015, ಹಾಸನ: 75250003683243, 3956620, ಕಲಬುರಗಿ: 75250003632830, 3744319, 3753762, 3809758, 3841126, ಕೋಲಾರ:75250003755588, 3817663, ಮಂಡ್ಯ: 75250003624575, 3920808, ಹೊಸಪೇಟೆ: 63250000668211, 0734177, 75250001038473, 1083806, 1087379, 1100566, 1152327, 3628208, 3719577, 3723849, 3791509, 3807492, 3820806, 3850999, 3861208, 3862826, 3872197, 3878406, 3884565, 3886371, 3899956, 3913282, 3936448, 3989777, ಮೈಸೂರು: 63250002104769, 75250001030617, 1106005, 1138785, 1178798, ಕೃಷ್ಣರಾಜನಗರ: 75250003737873, 3842385, ಮೈಸೂರು: 75250003848824, ನಂಜನಗೂಡು: 75250003697066, 3794274, 3794384, 3811874, 3827444, ರಾಮನಗರ:75250003751865, 3753852, 3784463, 3821745, ತುಮಕೂರು: 63250002120218, 75250003895344, ಹೊಸಕೋಟೆ: 75250003679151, ಬಸವನ ಬಾಗೇವಾಡಿ: 63250002091481, 2108712, 75250003813750. |

ಪ್ರಮುಖ ಸೂಚನೆಗಳು: ಸಾಲಗಾರರು ಹರಾಜು ದಿನಾಂಕಕ್ಕೆ ಕನಿಷ್ಠ ಎರಡು ದಿನಗಳ ಮೊದಲು ಅನ್ವಯವಾಗುವ ಶುಲ್ಕಗಳೊಂದಿಗೆ ಬಾಕಿ ಬಾಕಿಗಳನ್ನು ಪಾವತಿಸುವ ಮೂಲಕ ತಮ್ಮ ಅಡವಿಟ್ಟ ಚಿನ್ನದ ಆಭರಣಗಳನ್ನು ಪಡೆದುಕೊಳ್ಳಬಹುದು. ಆಸಕ್ತ ಬಿಡ್ಡರ್‌ಗಳು ಮಾನ್ಯವಾದ KYC ದಾಖಲೆಗಳನ್ನು ಹೊಂದಿರಬೇಕು. GST ನೋಂದಣಿ ಸಂಖ್ಯೆ ಅನ್ವಯವಾಗುವಲ್ಲೆಲ್ಲ ಸಂಸ್ಥೆಗಳು/ಕಂಪನಿಗಳಿಗೆ ಕಡ್ಡಾಯವಾಗಿದೆ. ಬಿಡ್ಡರ್‌ಗಳು ಹರಾಜಿನಲ್ಲಿ ಭಾಗವಹಿಸುವ ಮೊದಲು ರೂ.2,500 ರ ಅರ್ನೆಸ್ಟ್ ಮನಿ ಠೇವಣಿ (EMD) ಅನ್ನು ಠೇವಣಿ ಮಾಡಬೇಕಾಗುತ್ತದೆ. ಹರಾಜನ್ನು "ಎಲ್ಲಿ ಇದೆಯೋ ಹಾಗೆಯೇ" ಮತ್ತು "ಇರುವಂತೆ" ಆಧಾರದ ಮೇಲೆ ನಡೆಸಲಾಗುತ್ತದೆ. ಯಾವುದೇ ಕಾರಣವನ್ನು ನೀಡದೆ ಹರಾಜನ್ನು ರದ್ದುಗೊಳಿಸುವ/ಮುಂದೂಡುವ ಅಥವಾ ಯಾವುದೇ ಬಿಡ್ ಅನ್ನು ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ಹರಾಜಿನಲ್ಲಿ ಭಾಗವಹಿಸುವುದನ್ನು ಬ್ಯಾಂಕಿನ ಎಲ್ಲಾ ನಿಯಮಗಳು ಮತ್ತು ಷರತ್ತುಗಳ ಸ್ವೀಕಾರವೆಂದು ಪರಿಗಣಿಸಲಾಗುತ್ತದೆ. ಚಿನ್ನದ ಶುದ್ಧತೆಯ ಆಧಾರದ ಮೇಲೆ ಅನ್ವಯವಾಗುವ IBJA ದರದ ಆಧಾರದ ಮೇಲೆ ಕನಿಷ್ಠ ಮೀಸಲು ಬೆಲೆಯನ್ನು ಬ್ಯಾಂಕ್ ನಿಗದಿಪಡಿಸುತ್ತದೆ.

ಸ್ಥಳ: ತ್ರಿಶೂರ್
ದಿನಾಂಕ: 09 ಮೇ 2026

(ಸಹಿ) ಅಧಿಕೃತ ಸಹಿ
ESAF ಸಣ್ಣ ಹಣಕಾಸು ಬ್ಯಾಂಕ್ ಲಿಮಿಟೆಡ್.

---

### ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು - 560 029
ಫೋನ್: 080-26096839/26096855 ಇಮೇಲ್: purchase@kmf.coop

IFT No. KMF/PUR/CFRM-677/2026-27 ದಿನಾಂಕ: 08-05-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ (KPPP GOK Indent No.KMF/2026-27/IND2206)**

ಕರ್ನಾಟಕ ಹಾಲು ಮಹಾಮಂಡಳವು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಘಟಕವಾರು ವಿವಿಧ ಪಶು ಆಹಾರ ಕಚ್ಚಾಮಾಲುಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

| ಕ್ರ. ಸಂ. | ಕಚ್ಚಾಮಾಲುಗಳು | ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ | | | | |
|---|---|---|---|---|---|---|
| | | ರಾಜಾನುಕುಂಟೆ | ಗುಬ್ಬಿ | ಧಾರವಾಡ | ಹಾಸನ | ಶಿಕಾರಿಪುರ |
| 1 | ಡಿ.ಓ.ಆರ್.ಬಿ | 0 | 2500 | 500 | 0 | 800 |
| 2 | ಎಣ್ಣೆರಹಿತ ಹತ್ತಿಬೀಜದ ಹಿಂಡಿ (ಪ್ರೋಟೀನ್-50%) | 0 | 0 | 250 | 350 | 0 |
| 3 | ಎಣ್ಣೆರಹಿತ ಹತ್ತಿಬೀಜದ ಹಿಂಡಿ (ಪ್ರೋಟೀನ್-37%) | 225 | 0 | 0 | 400 | 0 |
| 4 | ಎಣ್ಣೆರಹಿತ ಸಾಸಿವೆ ಹಿಂಡಿ | 250 | 125 | 125 | 750 | 200 |
| 5 | ಎಣ್ಣೆರಹಿತ ಸೋಯಾ ಹಿಂಡಿ | 100 | 100 | 0 | 200 | 0 |
| 6 | ಎಣ್ಣೆರಹಿತ ಸೂರ್ಯಕಾಂತಿ ಹಿಂಡಿ ಗ್ರೇಡ್-1 | 0 | 50 | 100 | 0 | 100 |
| 7 | ಮೈಜ್ ಡಿ.ಡಿ.ಜಿ.ಎಸ್ | 0 | 250 | 0 | 600 | 400 |
| 8 | ಎಣ್ಣೆರಹಿತ ಮೈಜ್ ಡಿ.ಡಿ.ಜಿ.ಎಸ್ | 0 | 250 | 0 | 600 | 300 |
| 9 | ಎಣ್ಣೆರಹಿತ ಕೊಬ್ಬರಿ ಹಿಂಡಿ | 75 | 0 | 0 | 200 | 150 |
| 10 | ಎಣ್ಣೆರಹಿತ ಶೇಂಗಾ ಹಿಂಡಿ | 100 | 75 | 50 | 200 | 150 |

**ಟೆಂಡರ್ ವೇಳಾಪಟ್ಟಿ:** ಟೆಂಡರ್ ಪ್ರಾರಂಭವಾಗುವ ದಿನಾಂಕ: 09-05-2026; ಪೂರ್ವಭಾವಿ ಸಭೆಯ ದಿನಾಂಕ: 14-05-2026 at 11.30AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16-05-2026 at 05:00PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 18-05-2026 at 10.15AM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 18-05-2026 at 10.30AM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

---

### ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ
### ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ

ಪ್ರಾದೇಶಿಕ ವಿಭಾಗ ಕಛೇರಿ ಡಿ.ಸಿ ಕಾಂಪೌಂಡ್, ಶಿವಮೊಗ್ಗ-577201
phone:08182-272210 FAX No: 08182-22565 EmailID: dcf.shivamoga@gmail.com
ಸಂಖ್ಯೆ: ಬಿ2/ಲಾಗಿಂಗ್/ಇ-ಹರಾಜು/ಆಲ್ಕೋಳ/ಸಿಆರ್-28/ ದಿನಾಂಕ: 28.04.2026

**ಅರಣ್ಯ ಉತ್ಪನ್ನಗಳ ಇ-ಹರಾಜಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶಿವಮೊಗ್ಗ ವಿಭಾಗದ ಸರ್ಕಾರಿ ನಾಟಾ ಸಂಗ್ರಹಾಲಯ, ಆಲ್ಕೋಳ, ಶಿವಮೊಗ್ಗ ಇಲ್ಲಿ ದಾಸ್ತಾನು ಇರುವ ನಾಟಾ/ ಸೌದೆ/ ಬಿಲ್ಲೇಟ್/ ಪೋಲ್ಸ್ ಗಳನ್ನು ದಿನಾಂಕ: 30-05-2026 ರಂದು ಇ-ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ಈ ಕಛೇರಿಯ ಸವಿಸ್ತಾರ ಹರಾಜು ಪ್ರಕಟಣೆ ಸಂಖ್ಯೆ: ಬಿ2/ಲಾಗಿಂಗ್/ಇ-ಹರಾಜು/ಆಲ್ಕೋಳ/ಸಿಆರ್-28/2025-26 ದಿನಾಂಕ: 28-04-2026 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.ಹಾಗೂ ಇ-ಹರಾಜಿನ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ www.etimber.in www.mstcecommerce.com ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಇ-ಹರಾಜಿಗೆ ಇಟ್ಟಿರುವ ಅರಣ್ಯ ಉತ್ಪನ್ನಗಳ ವಿವರ

| ಕ್ರ ಸಂ | ಉಗ್ರಾಣದ ಹೆಸರು | ಉತ್ಪನ್ನಗಳ ವಿವರ | | ಲಾಟ್ ಸಂಖ್ಯೆ | ಅಂದಾಜು ಪ್ರಮಾಣ (ಎಂ3 ಗಳಲ್ಲಿ) | ದಿನಾಂಕ ಮತ್ತು ಸೆಷನ್ಸ್ |
|---|---|---|---|---|---|---|
| 1 | ಜಿ.ಟಿ.ಡಿ ಆಲ್ಕೋಳ ಶಿವಮೊಗ್ಗ | ಅಕೇಶಿಯಾ | ನಾಟಾ | 120 | 6819-1173.277 | 30.05.2026 4 ession |
| 2 | | ಅಕೇಶಿಯಾ ಸ್ಪಿಂಗ್ ವೆಲ್ | ನಾಟಾ | 05 | 7=1.353 | |
| 3 | | ಬೀಟೆ | ನಾಟಾ | 51 | 253=20.329 | |
| 4 | | ಸಾಗುವಾನಿ | ನಾಟಾ | 105 | 835=46.873 | |
| 5 | | ಇತರೆ ಜಾತಿ | ನಾಟಾ | 148 | 375=93.488 | |
| 6 | | ಅಕೇಶಿಯಾ | ಸ್ಪೈಜಸ್ | 01 | 5=0.055 | |
| 7 | | ಬೀಟೆ | ಸ್ಪೈಜಸ್ | 03 | 28=1.340 | |
| 8 | | ಸಾಗುವಾನಿ | ಸ್ಪೈಜಸ್ | 12 | 85=2.764 | |
| 9 | | ಇತರೆ ಜಾತಿ | ಸ್ಪೈಜಸ್ | 03 | 20=0.383 | |
| 10 | | ಅಕೇಶಿಯಾ | ಪೋಲ್ಸ್ | 14 | 278 ಸಂಖ್ಯೆ | |
| 11 | | ಅಕೇಶಿಯಾ ಸ್ಪಿಂಗ್ ವೆಲ್ | ಪೋಲ್ಸ್ | 01 | 03 ಸಂಖ್ಯೆ | |
| 12 | | ಬೀಟೆ | ಪೋಲ್ಸ್ | 01 | 04 ಸಂಖ್ಯೆ | |
| 13 | | ಸಾಗುವಾನಿ | ಪೋಲ್ಸ್ | 14 | 229 ಸಂಖ್ಯೆ | |
| 14 | | ಇತರೆ ಜಾತಿ | ಪೋಲ್ಸ್ | 06 | 325ಸಂಖ್ಯೆ | |
| 15 | | ಅಕೇಶಿಯಾ | ಬಿಲ್ಲೇಟ್ಸ್ | 03 | 32.506 | |
| 16 | | ಬೀಟೆ | ಬಿಲ್ಲೇಟ್ಸ್ | 03 | 1.848 | |
| 17 | | ಸಾಗುವಾನಿ | ಬಿಲ್ಲೇಟ್ಸ್ | 04 | 1.061 | |
| 18 | | ಎನ್.ಟಿ.ಎಫ್.ಪಿ | - | 01 | 60 ಸಂಖ್ಯೆ | |
| | | ಒಟ್ಟು ಲಾಟ್ ಸಂಖ್ಯೆ | | 495 | | |

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿವಮೊಗ್ಗ/ಕೆಎಸ್‌ಎಂಸಿಎ/b/26-27/35/05/204

---

### ಕೃಷಿ ಮಾರಾಟ ಇಲಾಖೆ
### ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿರುಗುಪ್ಪ.

(ರಾಜ್ಯ : ಕರ್ನಾಟಕ, ಜಿಲ್ಲೆ : ಬಳ್ಳಾರಿ)
E-Mail ID : apmcsiruguppa220430@gmail.com & apmcsirguppa@rediffmail.com

ಸಂಖ್ಯೆ/ಕೃಮಾಇ/ಕೃಉಮಾಸ/ಸಿ/ಅಭಿವೃದ್ಧಿ/25 /2026-27 ದಿನಾಂಕ:29.04.2026

**ಇ-ಟೆಂಡರ ಪ್ರಕಟಣೆ**

ಸಿರುಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವರ್ಗ-I, ವರ್ಗ-2(ಎ) ಹಾಗೂ ಸಾಮಾನ್ಯ ಗುತ್ತಿಗೆದಾರರಿಗೆ ಮೀಸಲಿಟ್ಟಿರುವ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಹಾಗೂ ನಿಯಮಗಳು 1999-2000 ರನ್ವಯ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ **https://kppp.karnataka.gov.in** ಸ್ಪರ್ಧಾತ್ಮಕ ಧರವಾರು ಟೆಂಡರನ್ನು ಆಹ್ವಾನಿಸಲಾಗಿದೆ ವಿವರ ಈ ಕೆಳಗಿನಂತಿವೆ.

1. APMC/2025-26/OW/WORK_INDENT906
2. APMC/2025-26/OW/WORK_INDENT907
3. APMC/2025-26/OW/WORK_INDENT908
4. APMC/2025-26/OW/WORK_INDENT909
5. APMC/2025-26/OW/WORK_INDENT910
6. APMC/2025-26/OW/WORK_INDENT911
7. APMC/2025-26/OW/WORK_INDENT912
8. APMC/2025-26/OW/WORK_INDENT913
9. APMC/2025-26/OW/WORK_INDENT917

1)ಪ್ರೀಬಿಡ್ ಮೀಟಿಂಗ್ ದಿನಾಂಕ: **ದಿ:22-05-2026 ರಂದು ಬೆಳಿಗ್ಗೆ 11-30 ಗಂಟೆಗೆ** 2)ಭರ್ತಿ ಮಾಡಿದ ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 25-05-2026 ಸಾಯಂಕಾಲ 4-00 ಗಂಟೆ.** 3)ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:27-05-2026 ರಂದು ಸಾಯಂಕಾಲ 4-30 ಗಂಟೆ.** 4)ಆರ್ಥಿಕ ಬಿಡ್ ತೆರೆಯುವ **ದಿನಾಂಕ:08-06-2026 ರಂದು ಬೆಳಿಗ್ಗೆ 11-00 ಗಂಟೆಗೆ**

ಇ.ಎಮ್.ಡಿ. ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರ್ಕಾರ ಸೆಂಟ್ರಲ್ ಪೋಲಿಂಗ್ ಅಕೌಂಟಿನಲ್ಲಿ ಟೆಂಡರ್ ಡಾಕುಮೆಂಟ್ ನಲ್ಲಿ ತಿಳಿಸಿರುವ ಯಾವುದಾದರೊಂದಿಗೆ ಮಾದರಿಯಲ್ಲಿ ಸಂದಾಯ ಮಾಡುವುದು.

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಸಮಿತಿ ಕಛೇರಿ ವೇಳೆಯಲ್ಲಿ ಅಥವಾ ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಸಮಿತಿಯ ದೂರವಾಣಿ ಸಂಖ್ಯೆ:08396-220430 ರಿಂದ ಪಡೆಯಬಹುದಾಗಿದೆ.ಟೆಂಡರ್ ನಿಯಮಾವಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನಲ್ಲಿ ಅಪ್ಲೋಡ್ ಮಾಡಿದ ಬಿಡ್ ಡಾಕುಮೆಂಟ್ ಗಳನ್ನು ನೋಡುವುದು.

ಸಹಿ/-(ನಿಜಲಿಂಗಪ್ಪ ತೋಟದ)
ಕಾರ್ಯದರ್ಶಿ ಕೃ.ಉ.ಮಾ.ಸ., ಸಿರುಗುಪ್ಪ.

ಸಹಿ/-(ಓಂಕಾರ ಎನ್.ಕೆ.)
ಆಡಳಿತಾಧಿಕಾರಿಗಳು ಕೃ.ಉ.ಮಾ.ಸ., ಸಿರುಗುಪ್ಪ.

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/125

# ಓಬವ್ವನ ನಾಡಿನಲ್ಲಿ ಬಿಜೆಪಿ ರಣಕಹಳೆಗೆ ಸಜ್ಜು

## ಅಭಿಮಾನೋತ್ಸವ ಹೆಸರಲ್ಲಿ 2028ರ ಚುನಾವಣೆಗೆ ಸಿದ್ಧತೆ | ಕಾರ್ಯಕ್ರಮದಲ್ಲಿ ಅಮಿತ್ ಶಾ ಭಾಗಿ

■ ಮಂಜುನಾಥ ಗೌರಕ್ಕಳವರ

**ಸಂ.ಕ.ಸಮಾಚಾರ, ದಾವಣಗೆರೆ**

ಒರಿಸ್ಸಾ, ಬಿಹಾರ, ಪಶ್ಚಿಮ ಬಂಗಾಲ ರಾಜ್ಯಗಳಲ್ಲಿ ಕಮಲ ಅರಳಿಸಿದ ಬಿಜೆಪಿ ರಾಷ್ಟ್ರೀಯ ವರಿಷ್ಠರ ಕಣ್ಣು ಈಗ 2028ರಲ್ಲಿ ನಡೆಯಲಿರುವ ಕರ್ನಾಟಕದ ಮೇಲಿದೆ. ಇತ್ತೀಚೆಗೆ ರಾಜ್ಯದಲ್ಲಿ ನಡೆದ ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಗೆದ್ದಿದ್ದರೂ, ತಲೆಕೆಡಿಸಿಕೊಳ್ಳದ ರಾಜ್ಯ ಬಿಜೆಪಿ ನಾಯಕರು ಇನ್ನೆರಡು ವರ್ಷದಲ್ಲಿ ಬರಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷವನ್ನು ಆಡಳಿತಕ್ಕೆ ತರಲು ಸಿದ್ಧತೆ ನಡೆಸಿದ್ದಾರೆ.

ಅದರ ಒಂದು ಭಾಗವಾಗಿ ಮೇ 9ರಂದು ಮಧ್ಯ ಕರ್ನಾಟಕದ ಒನಕೆ ಓಬವ್ವನ ನಾಡು ಚಿತ್ರದುರ್ಗದಲ್ಲಿ ನಡೆಯಲಿರುವ ಬಿ.ಎಸ್.ಯಡಿಯೂರಪ್ಪ ಅವರ 'ಅಭಿಮಾನೋತ್ಸವ' ಎಂದೇ ಹೇಳಬಹುದು. ನಾಡು ಕಂಡ ಅಪರೂಪದ ರಾಜಕಾರಣಿ ಬಿ.ಎಸ್.ಯಡಿಯೂರಪ್ಪ ರಾಜಕೀಯ ಪ್ರವೇಶ ಮಾಡಿ 50 ವರ್ಷ ಸಂದ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು, ಹಿತೈಷಿಗಳು, ಒಡನಾಡಿಗಳು ಬಿಎಸ್‌ವೈ ಅವರಿಗೆ ಅದ್ಧೂರಿ ಸನ್ಮಾನ, ಅಭಿನಂದನೆ ಸಲ್ಲಿಸುವ ಕಾರ್ಯಕ್ರಮ ಇದಾಗಿದೆ. ಸಾವಿರ ಸಂಖ್ಯೆಯಲ್ಲಿ ಮಠಾಧೀಶರು, 10 ಲಕ್ಷಕ್ಕೂ ಹೆಚ್ಚು ಜನರ ಸೇರುವ ನಿರೀಕ್ಷೆ ಇಟ್ಟುಕೊಂಡಿರುವ ಮುಖಂಡರು ಬಂದವರಿಗೆಲ್ಲ ಆತಿಥ್ಯ ನೀಡಲು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ.

ರಾಜ್ಯದ ಮೊದಲ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ಕರ್ಮಭೂಮಿ ಚಿತ್ರದುರ್ಗ ಜಿಲ್ಲೆ. ಹಲವು ಮಠ–ಪೀಠಗಳನ್ನು ಹೊಂದಿರುವ ಕೋಟೆ ನಾಡಿನಲ್ಲಿ ರಾಜ್ಯ ಬಿಜೆಪಿ 'ಬಿಎಸ್‌ವೈ ಅಭಿಮಾನೋತ್ಸವ' ಮೂಲಕ 2028ರ ವಿಧಾನಸಭಾ ಚುನಾವಣೆ ಪ್ರಚಾರದ ದುಂಧುಬಿ ಮೊಳಗಿಸಲಿದೆ. ಇದೊಂದು ರೀತಿಯಲ್ಲಿ ಚುನಾವಣಾ ಪ್ರಚಾರಕ್ಕೆ ಭೂಮಿಪೂಜೆ ಎಂದೇ ಕರೆಯಬಹುದು. 'ಬಿಎಸ್‌ವೈ ಅಭಿಮಾನೋತ್ಸವ'ದ ಮೂಲಕ ಮಧ್ಯ ಕರ್ನಾಟಕ ಮುಂಬರುವ ರಾಜಕೀಯ ಬದಲಾವಣೆಗೆ ನಾಂದಿ ಹಾಡಲಿದೆ ಎನ್ನಲಡ್ಡಿಯಿಲ್ಲ.

**ಅಂದು 'ಸಿದ್ಧರಾಮೋತ್ಸವ' ಇಂದು 'ಬಿಎಸ್‌ವೈ ಅಭಿಮಾನೋತ್ಸವ'**

2023ರ ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೂ ಎರಡು ವರ್ಷ ಬಾಕಿ ಇತ್ತು. ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿತ್ತು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಆಗ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ಧರಾಮಯ್ಯ ಅವರ ಅಭಿಮಾನಿಗಳು 'ಸಿದ್ಧರಾಮೋತ್ಸವ' ಹೆಸರಿನಲ್ಲಿ ಬೃಹತ್ ಸಮಾವೇಶ ಏರ್ಪಡಿಸಿ 2023ರ ರಾಜ್ಯ ವಿಧಾನಸಭಾ ಚುನಾವಣೆ ಪ್ರಚಾರ ಆರಂಭಿಸಿತ್ತು. ಈಗ ಅದೇ ಮಧ್ಯ ಕರ್ನಾಟಕದ ಕೋಟೆ ನಾಡು ಚಿತ್ರದುರ್ಗದಲ್ಲಿ ಬಿಎಸ್‌ವೈ ಅವರ 'ಅಭಿಮಾನೋತ್ಸವ'ವನ್ನು ಅದ್ಧೂರಿಯಾಗಿ ಆಯೋಜಿಸುವ ಮೂಲಕ ಬಿಜೆಪಿ ಚುನಾವಣೆ ಪ್ರಚಾರಕ್ಕೆ ಚಾಲನೆ ನೀಡಲು ನಿರ್ಧರಿಸಿದಂತಿದೆ. ಸುಮಾರು 10 ಲಕ್ಷ ಜನರನ್ನು ಸೇರಿಸಿ ಇಲ್ಲಿಂದಲೇ ಚುನಾವಣೆ ಪ್ರಚಾರ ಆರಂಭಿಸುವ ಸೂಚನೆಯನ್ನೂ ಕಾರ್ಯಕರ್ತರಿಗೆ ನೀಡಲಿದೆ. ಆ ಕಾರಣಕ್ಕಾಗಿಯೇ ಚುನಾವಣಾ ತಂತ್ರಗಾರಿಕೆಗೆ ಹೆಸರಾದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಭಿಮಾನೋತ್ಸವಕ್ಕೆ ಆಗಮಿಸಲಿದ್ದಾರೆ. ದಾವಣಗೆರೆಯ ಹೊರವಲಯದ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿಯೇ ನಡೆದ ಸಿದ್ಧರಾಮೋತ್ಸವದಲ್ಲಿ ಕಾಂಗ್ರೆಸ್ ಪಕ್ಷದ ಯುವನಾಯಕ ರಾಹುಲ್ ಗಾಂಧಿ ಆಗಮಿಸಿ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ಕೈಹಿಡಿದು ಒಂದಾಗಿಸಿದ್ದರು.

> ಐತಿಹಾಸಿಕ ಕೋಟೆನಾಡು, ಅಪ್ರತಿಮ ದೇಶಭಕ್ತೆ ವೀರರಾಣಿ ಒನಕೆ ಓಬವ್ವನ ಕ್ಷೇತ್ರದಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಭವಿಷ್ಯದಲ್ಲಿ ರಾಜ್ಯದ ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆಗೆ ನಾಂದಿ ಹಾಡುವ ಸಾಧ್ಯತೆ ಇದೆ. 2028ರ ರಾಜ್ಯ ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಚಾರವನ್ನೂ ಇಲ್ಲಿಂದಲೇ ಆರಂಭಿಸಲಿದೆ. ಚುನಾವಣಾ ಚಾಣಕ್ಯ ಅಮಿತ್ ಶಾ ಇಲ್ಲಿಂದಲೇ ಚುನಾವಣೆಯ ರಣಕಹಳೆ ಊದಲಿದ್ದಾರೆ.

ಒಟ್ಟಾಗಿ ಚುನಾವಣೆ ಎದುರಿಸುತ್ತೇವೆ ಎಂಬ ಸಂದೇಶ ನೀಡಿದ್ದರು. ಇಂದು ರಾಜ್ಯ ಬಿಜೆಪಿ ಕೂಡ ಹೊರನೋಟಕ್ಕೆ ಎಲ್ಲರೂ ಒಂದಾಗಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದರೂ, ಒಡೆದ ಮನಸುಗಳು ಇನ್ನೂ ದೂರದೂರವಾಗಿವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಈಗ ಇಂತಹ ಒಡೆದ ಮನಸ್ಸುಗಳನ್ನು ಒಗ್ಗೂಡಿಸಿ 2028ರ ಚುನಾವಣೆಯನ್ನು ಒಟ್ಟಾಗಿ ಎದುರಿಸಿ ವಿಧಾನಸೌಧದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಏರುವಂತೆ ಮಾಡುವುದೇ ನಮ್ಮ ಗುರಿ ಎಂಬ ಸಂದೇಶ ಸಾರುವ ನಿಟ್ಟಿನಲ್ಲಿ ಕಾರ್ಯಕ್ರಮದ ಸಿದ್ಧತೆ ನಡೆದಿದೆ. ಇದು ಪಕ್ಷಾತೀತ, ಜಾತ್ಯತೀತ ಕಾರ್ಯಕ್ರಮವಾಗಿದ್ದು, ಬಿಎಸ್‌ವೈ ಅಭಿಮಾನಿಗಳು, ಹಿತೈಷಿಗಳು, ವಿವಿಧ ಪಕ್ಷಗಳ ನಾಯಕರಿಗೆಲ್ಲ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಮಂತ್ರಣ ನೀಡಲಾಗಿದೆ ಎಂದು ಬಿಜೆಪಿ ಮುಖಂಡರು ಹೇಳಿದ್ದಾರೆ.

# ಮುಖಂಡರ ಪರಿಶ್ರಮದಿಂದ ಬಿಜೆಪಿ ಅಧಿಕಾರಕ್ಕೆ ಬಂದಿತ್ತು

**ಸಂ.ಕ.ಸಮಾಚಾರ, ದಾವಣಗೆರೆ**

ನಾನು ಮತ್ತು ಅನಂತಕುಮಾರ್ ಸೈಕಲ್‌ನಲ್ಲಿ ಪ್ರವಾಸ ಮಾಡಿದ್ದೇವೆ. ಜೊತೆಗೆ ಅನೇಕ ಮುಖಂಡರ ಶ್ರಮದ ಫಲವಾಗಿ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಾಯಿತು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ತಮ್ಮ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ತೆರಳಲು ನಗರಕ್ಕೆ ಆಗಮಿಸಿದ್ದ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನರು ಬಹಳ ಪ್ರೀತಿ, ವಿಶ್ವಾಸದಿಂದ ಅಭಿಮಾನೋತ್ಸವ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಜನರು ಸೇರುವ ಸಂದರ್ಭವಾಗಿದೆ. ಇವತ್ತು ಮಾತನಾಡುವುದಿಲ್ಲ, ಕಾರ್ಯಕ್ರಮ ಮುಗಿದ ಮೇಲೆ ಮಾತನಾಡುತ್ತೇನೆ. ಒಂದು ಮಾತು ಸತ್ಯ. ಕೋಟೆನಾಡಿನಲ್ಲಿ ಬಹಳ ವಿಶ್ವಾಸದಿಂದ ಜನರು ಕಾರ್ಯಕ್ರಮ ಮುಂದೆ ನಿಂತು ಮಾಡುತ್ತಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳು. 2028ರ ಚುನಾವಣೆಗೆ ಇದು ಬಿಜೆಪಿ ರಣಕಹಳೆ ಆಗಲಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಕಾದು ನೋಡೋಣ ಎಂದಷ್ಟೇ ಹೇಳಿದರು.

**ಬೆಟ್ಟ ಹತ್ತುವ ಕೆಲಸ: ಬಿವೈಆರ್:** ಯಡಿಯೂರಪ್ಪ ಅವರು ತಮ್ಮ 50 ವರ್ಷಗಳ ರಾಜಕೀಯ ಜೀವನದಲ್ಲಿ ಹೋರಾಟದ ಮೂಲಕ ಸಾಧನೆ ಬೆಟ್ಟ ಹತ್ತುವ ಕೆಲಸ ಮಾಡಿದ್ದಾರೆ ಎಂದು ಸಂಸದ ಬಿ.ವೈ.ರಾಘವೇಂದ್ರ ಹೇಳಿದರು.

ಬಿಜೆಪಿ ಚೌಕಟ್ಟಿನಲ್ಲಿ ಸ್ವಂತ ಸಂಘಟನೆ ಕಟ್ಟಿರೋದು ವಿಶೇಷ. ಯಡಿಯೂರಪ್ಪ ಅವರಿಗೆ ಅಜಾತಶತ್ರು ಅಂತ ಹೇಳುವುದು ಸಮಂಜಸ ಅನಿಸುವುದಿಲ್ಲ. ಸಂಘಟನೆಗಾಗಿ ಸಿಟ್ಟು ಮಾಡುತ್ತಿದ್ದರು; ಸ್ವಾರ್ಥಕ್ಕಾಗಿ ಎಂದೂ ಮಾಡಲಿಲ್ಲ ಎಂದರು.

# ಮೂರು ಜೋಡಿ ಡೆಮು ವಿಶೇಷ ರೈಲು ಕಾಯಂ

## ಮೇ 6ರ ಸಂ.ಕ.ವರದಿಗೆ ಸ್ಪಂದಿಸಿದ ನೈಋತ್ಯ ರೈಲ್ವೆ | ಪ್ರಯಾಣಿಕರಿಗೆ ಅನುಕೂಲ

ಕೇಂದ್ರಕ್ಕೆ ಬಂದ ರೈಲ್ವೆ ಭಾಗ್ಯ ನೈಋತ್ಯಕ್ಕೆ ಎಂದು?
ವಿಶೇಷ ರೈಲುಗಳ ಕಾಯಮಾತಿಗೆ ರೈಲ್ವೆ ಮಂಡಳಿ ಅಸ್ತು | 'ವಿಶೇಷ' ಹಣೆಪಟ್ಟಿ ತೆಗೆದಲ್ಲಿ ದರ ಶೇ. 30 ಅಗ್ಗ

ಸಂಯುಕ್ತ ಕರ್ನಾಟಕ ವರದಿ ಫಲಶ್ರುತಿ

**ಸಂ.ಕ.ಸಮಾಚಾರ ಹುಬ್ಬಳ್ಳಿ**

ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಪ್ರಸ್ತುತ ಸಂಚರಿಸುತ್ತಿದ್ದ (ಟಿಓಡಿ) ಮೂರು ಜೋಡಿ ಡೆಮು ವಿಶೇಷ ರೈಲುಗಳನ್ನು ಕಾಯಂಗೊಳಿಸುವುದಾಗಿ ನೈಋತ್ಯ ರೈಲ್ವೆ ಘೋಷಿಸಿದೆ. 'ಕೇಂದ್ರಕ್ಕೆ ಬಂದ ರೈಲ್ವೆ ಭಾಗ್ಯ ನೈಋತ್ಯಕ್ಕೆ ಇಲ್ಲ' ಎಂದು ಸಂಯುಕ್ತ ಕರ್ನಾಟಕ ವರದಿ ಮಾಡಿತ್ತು.

ರೈಲ್ವೆ ವಲಯ ಕ್ರಮದಿಂದ ಬಳ್ಳಾರಿ–ಹೊಸಪೇಟೆ–ಹುಬ್ಬಳ್ಳಿ ಮತ್ತು ಬಳ್ಳಾರಿ–ದಾವಣಗೆರೆ ಭಾಗಗಳಲ್ಲಿ ಪ್ರಯಾಣಿಸುವ ದೈನಂದಿನ ಪ್ರಯಾಣಿಕರಿಗೆ ಅನುಕೂಲವಾಗಲಿದೆ. 07393/07394 ಹೊಸಪೇಟೆ–ಎಸ್‌ಎಸ್‌ಎಸ್ ಹುಬ್ಬಳ್ಳಿ–ಹೊಸಪೇಟೆ ಡೆಮು ವಿಶೇಷ ರೈಲನ್ನು, 76507/76508 ಹೊಸಪೇಟೆ–ಎಸ್‌ಎಸ್‌ಎಸ್ ಹುಬ್ಬಳ್ಳಿ–ಹೊಸಪೇಟೆ ಡೆಮು ಸೇವೆ ಕಾಯಂಗೊಳಿಸಲಾಗುವುದು. 76508 ಹೊಸಪೇಟೆ–ಎಸ್‌ಎಸ್‌ಎಸ್ ಹುಬ್ಬಳ್ಳಿ ಡೆಮು ರೈಲು ಮೇ 10ರಿಂದ ಜಾರಿಗೆ ಬರುವಂತೆ ಪ್ರತಿ ಭಾನುವಾರ ನಿಯಮಿತವಾಗಿ ಸಂಚರಿಸಲಿದೆ. ಎಸ್‌ಎಸ್‌ಎಸ್ ಹುಬ್ಬಳ್ಳಿ–ಹೊಸಪೇಟೆ ಡೆಮು ರೈಲು ಮೇ 16ರಿಂದ ಜಾರಿಗೆ ಬರುವಂತೆ ಪ್ರತಿ ಶನಿವಾರ ಸಂಚರಿಸಲಿದೆ. 07395/07396 ಬಳ್ಳಾರಿ–ದಾವಣಗೆರೆ–ಬಳ್ಳಾರಿ ಡೆಮು ವಿಶೇಷ ರೈಲನ್ನು, 76509/76510 ಬಳ್ಳಾರಿ–ದಾವಣಗೆರೆ–ಬಳ್ಳಾರಿ ಡೆಮು ಸೇವೆಯಾಗಿ ಕಾಯಂ ಗೊಳಿಸಲಾಗುವುದು. 76509/76510 ಬಳ್ಳಾರಿ–ದಾವಣಗೆರೆ–ಬಳ್ಳಾರಿ ಡೆಮು ಸೇವೆಗಳು ಮೇ.11.05.2026 ರಿಂದ ಜಾರಿಗೆ ಬರುವಂತೆ ಕಾಯಂಗೊಳ್ಳಲಿವೆ ಮತ್ತು ಸೋಮವಾರದಿಂದ ಶನಿವಾರದವರೆಗೆ ಸಂಚರಿಸಲಿವೆ. 07397/07398 ಹೊಸಪೇಟೆ–ಬಳ್ಳಾರಿ–ಹೊಸಪೇಟೆ ಡೆಮು ವಿಶೇಷ ರೈಲನ್ನು, ರೈಲು ಸಂಖ್ಯೆ 76511/76512 ಹೊಸಪೇಟೆ–ಬಳ್ಳಾರಿ–ಹೊಸಪೇಟೆ ಡೆಮು ಸೇವೆಯಾಗಿ ಕಾಯಂಗೊಳಿಸಲಾಗುವುದು.

76511/76512 ಹೊಸಪೇಟೆ–ಬಳ್ಳಾರಿ–ಹೊಸಪೇಟೆ ಡೆಮು ಸೇವೆಗಳು ಸಹ ಮೇ.11ರಿಂದ ಜಾರಿಗೆ ಬರುವಂತೆ ಕಾಯಂಗೊಳ್ಳಲಿವೆ ಮತ್ತು ಸೋಮವಾರದಿಂದ ಶನಿವಾರದವರೆಗೆ ಸಂಚರಿಸಲಿವೆ. ಈ ಹಿಂದೆ ಡೆಮು ವಿಶೇಷ ರೈಲುಗಳಿಗಾಗಿ ನಿಗದಿಪಡಿಸಲಾಗಿದ್ದ ವೇಳಾಪಟ್ಟಿ ಮತ್ತು ನಿಲುಗಡೆಗಳೆ ಕಾಯಂ ರೈಲುಗಳಿಗೂ ಅನ್ವಯವಾಗಲಿವೆ. ಈ ಎಲ್ಲಾ ರೈಲುಗಳು ಎಂಟು ಬೋಗಿಗಳ ಡೆಮು ರೇಕ್ ಸಂಯೋಜನೆಯೊಂದಿಗೆ ಕಾರ್ಯನಿರ್ವಹಿಸಲಿವೆ.

# ಒಳಜಗಳದಿಂದ ಗೆಲುವಿನ ಅಂತರ ಕಡಿಮೆ: ಸತೀಶ್

## ದಾವಣಗೆರೆ ದಕ್ಷಿಣ ಉಪ ಚುನಾವಣೆ

**ಸಂ.ಕ.ಸಮಾಚಾರ ದಾವಣಗೆರೆ**

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ನಮ್ಮಗಳ ಒಳ ಜಗಳದಿಂದ ಪಕ್ಷದ ಅಭ್ಯರ್ಥಿಯ ಗೆಲುವಿನ ಅಂತರ ಕಡಿಮೆಯಾಯಿತು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚುನಾವಣೆಯಲ್ಲಿ ಪಕ್ಷಕ್ಕೆ ಗೆಲುವು ಅಂತರ ಕಡಿಮೆ ಆಗಿರುವುದು ದಾವಣಗೆರೆಯ ಕಾಂಗ್ರೆಸ್‌ಗೆ ಎಚ್ಚರಿಕೆ ಗಂಟೆ. ಎಸ್‌ಡಿಪಿಐ ಹಾಗೂ ಇತರರ ಬಗ್ಗೆ ನಾವುಗಳು ಗಮನಹರಿಸಬೇಕಿದೆ. ಕಾಂಗ್ರೆಸ್‌ನ ಮತಗಳು ಬಿಜೆಪಿಗೆ ಹೋಗಿವೆ, ಆ ಪಕ್ಷದ ಮತಗಳು ನಮಗೆ ಬಂದಿದೆ. ಕಾಂಗ್ರೆಸ್ ಆಡಳಿತ ಯಂತ್ರ ದುರ್ಬಳಕೆ ಮಾಡಿಕೊಂಡಿದ್ದಾರೆ ಅನ್ನುವುದು ಸುಳ್ಳು ಎಂದರು.

ಬಾಗಲಕೋಟೆ ಮತ್ತು ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದು ಗ್ಯಾರಂಟಿಗೆ ಜನರು ಕೈ ಹಿಡಿದಿದ್ದಾರೆ. ಜೊತೆಗೆ ಕಾಂಗ್ರೆಸ್ ಪರವಾದ ಅಲೆ ಇದೆ ಎನ್ನುವುದು ತೋರಿಸಿಕೊಟ್ಟಿದ್ದಾರೆ ಎಂದರು.

**ಗೊಂದಲ ಬಗೆಹರಿಯಲಿದೆ:** ಸಿಎಂ ಬದಲಾವಣೆ ವಿಚಾರಕ್ಕೆ ನಾನು ಉತ್ತರ ಕೊಡೋದಿಲ್ಲ. ಕುರ್ಚಿ ಕದನದ ಗೊಂದಲ ಇದೆ. ಅದಷ್ಟು ಬೇಗ ದೆಹಲಿಯಲ್ಲಿ ಸಭೆ ನಡೆದು ಗೊಂದಲ ಬಗೆಹರಿಯಲಿದೆ. ಯಾರು ಸಿಎಂ ಆಗುತ್ತಾರೋ ಇಲ್ಲೋ ನಮಗೆ ಗೊತ್ತಿಲ್ಲ. ಆದರೆ ಗೊಂದಲ ಮಾತ್ರ ಬಗೆಹರಿಯಬೇಕಿದೆ. ಸಿಎಂಯಲ್ಲಿ ಖರ್ಗೆ ಅವರ ಹೆಸರು ಮುನ್ನಲೆಗೆ ಬಂದಿರುವುದು ನಮಗೆ ಗೊತ್ತಿಲ್ಲ ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಹೈಕಮಾಂಡ್ ಎಲ್ಲವನ್ನು ಗಮನಿಸುತ್ತಿದೆ. ಯಾರಿಗೆ ಯಾವ ಸ್ಥಾನ ಕೊಡಬೇಕು ಅನ್ನುವುದು ಎಲ್ಲವನ್ನು ಹೈಕಮಾಂಡ್ ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಕೆಳ ಹಂತದ ಹೋರಾಟಗಾರರು. ಚಿತ್ರದುರ್ಗದಲ್ಲಿ ನಡೆಯುತ್ತಿರುವ ಬಿಎಸ್‌ವೈ ಅಭಿಮಾನೋತ್ಸವ ಯಶಸ್ವಿಯಾಗಲಿ, ಬಿಎಸ್‌ವೈ ಅವರಿಗೆ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದರು. ಈ ಕಾರ್ಯಕ್ರಮದಿಂದ ಅವರ ಪಕ್ಷದಲ್ಲಿರುವ ಕೆಲವರು ಎಚ್ಚರಿಕೆಯಿಂದ ಇರಬೇಕು. ಅವರನ್ನು ಸ್ಥಾನದಿಂದ ಕೆಳಗೆ ಇಳಿಸಿದ್ದಾರೆ. ಈಗ ಉತ್ಸವ ಮಾಡಲು ಹೊರಟಿದ್ದಾರೆ. ಬಿ.ವೈ.ವಿಜಯೇಂದ್ರ ಕೂಡ ಸಾಕಷ್ಟು ಎಚ್ಚರಿಕೆಯಿಂದ ಹೆಜ್ಜೆ ಇಟ್ಟರೆ ಯಶಸ್ವಿಯಾಗುತ್ತಾರೆ ಎಂದರು.

# ಆಂಜನೇಯನಿಗೆ ₹2.5 ಕೋಟಿ ಚಿನ್ನಾಭರಣ

## ಗಂಗಾವತಿಯ ಅಂಜನಾದ್ರಿ ದೇವಸ್ಥಾನ | ಹರಕೆ ಹೊತ್ತಿದ್ದ ಕುಟುಂಬ

**ಸಂ.ಕ.ಸಮಾಚಾರ, ಕೊಪ್ಪಳ**

ಗಂಗಾವತಿ ತಾಲೂಕಿನ ಅಂಜನಾದ್ರಿಯ ಆಂಜನೇಯ ದೇವಸ್ಥಾನಕ್ಕೆ ಶುಕ್ರವಾರ ಭಾರತದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಎ.ಎಂ.ಆರ್. ಗ್ರೂಪ್‌ನ ಅಧ್ಯಕ್ಷ ಡಾ.ಎ.ಮಹೇಶ ರೆಡ್ಡಿ ಕುಟುಂಬದವರು 2.5 ಕೋಟಿ ಮೌಲ್ಯದ ಭವ್ಯ ಬಂಗಾರದ ಆಭರಣಗಳನ್ನು ಸಮರ್ಪಿಸಿದರು.

ಕಲಾತ್ಮಕವಾಗಿ ವಿನ್ಯಾಸಗೊಳಿಸಲಾದ ಬಂಗಾರದ ಪ್ರಭಾವಳಿ, ಛತ್ರಿ, ಕಿರೀಟ ಹಾಗೂ ಗದೆಯನ್ನು ಆಂಜನೇಯ ಸ್ವಾಮಿಗೆ ಅರ್ಪಿಸುವ ಮೂಲಕ ಭಕ್ತಿ ಸಮರ್ಪಿಸಿದರು. ದೇವಾಲಯದ ಅರ್ಚಕರು ವೇದ–ಮಂತ್ರಗಳೊಂದಿಗೆ ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸಿ, ಆಭರಣಗಳಿಗೆ ಪೂಜೆ ಸಲ್ಲಿಸಿದರು. ಮಹೇಶ ರೆಡ್ಡಿ ಕುಟುಂಬದವರು ಹರಕೆ ಹೊತ್ತಿದ್ದು, ಈಡೇರಿದ್ದಕ್ಕೆ ಆಭರಣ ನೀಡಿದರೆಂದು ತಿಳಿಸಲಾಗಿದೆ. ಅವರಿಗೆ ಶಾಸಕ ಗಾಲಿ ಜನಾರ್ದನ ರೆಡ್ಡಿ ಹಾಗೂ ಅವರ ಧರ್ಮಪತ್ನಿ ಲಕ್ಷ್ಮಿ ಅರುಣಾ ಸಾಥ್ ನೀಡಿದರು. ಗಂಗಾವತಿ ತಹಶೀಲ್ದಾರ್ ವಸಂತ, ಕನಕಗಿರಿ ತಹಶೀಲ್ದಾರ್‌ರಾದ ವಿಶ್ವನಾಥ, ಮಹಾಂತಗೌಡ ಪಾಟೀಲ, ಮಾಜಿ ಸಂಸದ ಶಿವರಾಮೇಗೌಡ, ಮಾಜಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಸಿಂಗನಾಳ, ಇತರರಿದ್ದರು.

# 3 ಲಕ್ಷ ಲಂಚ ಸ್ವೀಕರಿಸಿದ ಎಸ್ಪಿ ಗನ್‌ಮ್ಯಾನ್ ಸೆರೆ

## ಅನ್ನಭಾಗ್ಯ ಅಕ್ಕಿ ಕಳ್ಳರಿಂದ ಹಣ ವಸೂಲಿ ದಂಧೆ ನಡೆಸುತ್ತಿದ್ದ ದೇವರಾಜ

**ಬಳ್ಳಾರಿ:** ತಾಲೂಕಿನ ಮೋಕಾ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಕಳ್ಳ ಸಾಗಣೆ ಮಾಡುತ್ತಿದ್ದವರ ಬಳಿ 5 ಲಕ್ಷಕ್ಕೆ ಡಿಮ್ಯಾಂಡ್ ಇಟ್ಟು 3 ಲಕ್ಷ ರೂ. ಲಂಚ ಸ್ವೀಕರಿಸಿದ ಎಸ್ಪಿ ಗನ್‌ಮ್ಯಾನ್ ದೇವರಾಜ ಸೇರಿ ವಕೀಲ ಗಾದಿಲಿಂಗ ಹಾಗೂ ಸಾಯಿರಾಂ ಎನ್ನುವವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಗನ್‌ಮ್ಯಾನ್ ದೇವರಾಜ ಹಾಗೂ ಸಾಯಿರಾಂ ಇಬ್ಬರನ್ನು ಬಂಧಿಸಲಾಗಿದೆ ಮತ್ತೊಬ್ಬ ಆರೋಪಿ ಗಾದಿಲಿಂಗ ಎನ್ನುವವರಿಗೆ ಹುಡುಕಾಟ ನಡೆದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್ ಹೇಳಿದರು. ಕಳೆದ ಏ. 28ರಂದು ರಾತ್ರಿ ಮೋಕಾ ಪೊಲೀಸ್ ಠಾಣೆ ವ್ಯಾಪ್ತಿಯ ಅರಣ್ಯ ಪ್ರದೇಶ ಮೂಲಕ ಆಂಧ್ರಪ್ರದೇಶಕ್ಕೆ ಪಡಿತರ ಅಕ್ಕಿ ತುಂಬಿದ್ದ ಎರಡು ಲಾರಿಗಳು ಸಾಗುತ್ತಿದ್ದವು. ಈ ವೇಳೆ ಕಾರಿನಲ್ಲಿ ಬಂದಿದ್ದ ಅಪರಿಚಿತರು ತಾವು ಪೊಲೀಸರು, ಎಸ್ಪಿ ಸ್ಕ್ವಾಡ್‌ನವರು ಎಂದೇಳಿ ವಾಹನ ನಿಲ್ಲಿಸಿದ್ದರು. 5 ಲಕ್ಷ ರೂ. ಕೊಡಿ ಇಲ್ಲದಿದ್ದರೆ ನಿಮ್ಮ ವಾಹನ ಜಪ್ತಿ ಮಾಡಿ ನಿಮ್ಮನ್ನು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸುವುದಾಗಿ ಬೆದರಿಕೆಯೊಡ್ಡಿದ್ದರು. ಇವರಿಗೆ ಅಕ್ಕಿ ಸಾಗಣೆ ದಂಧೆಕೋರ ಶರಭಯ್ಯ ಹೆದರಿ 3 ಲಕ್ಷ ರೂ. ನೀಡಿದ್ದರು. ಈ ಬಗ್ಗೆ ಮೇ 6ರಂದು ಮೋಕಾ ಪೊಲೀಸ್ ಠಾಣೆಗೆ ಶರಭಯ್ಯ ಘಟನೆ ಬಗ್ಗೆ ದೂರು ನೀಡಿದ್ದ. ವಿಚಾರಣೆ ನಡೆಸಿದ್ದ ಪೊಲೀಸರಿಗೆ ಅಚ್ಚರಿ ಕಾದಿತ್ತು. ಎಸ್ಪಿ ಅವರ ಹಾಲಿ ಗನ್‌ಮ್ಯಾನ್ ದೇವರಾಜ ಈ ಕೃತ್ಯ ಎಸಗಿದ್ದಾನೆ ಎಂದು ತಿಳಿದುಬಂದಿದೆ. ಗನ್‌ಮ್ಯಾನ್ ಒಬ್ಬರೇ ಇದರಲ್ಲಿ ಭಾಗಿಯಾಗಿದ್ದಾರೆ. ನನ್ನ ನೇತೃತ್ವದಲ್ಲಿಯೇ ಈ ಪ್ರಕರಣ ಕೂಲಂಕಷವಾಗಿ ನಡೆಯಲಿದೆ ಎಂದು ಎಸ್‌ಪಿ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.



ಹಣ ವಸೂಲಿ ಮಾಡಿದ ಗನ್‌ಮ್ಯಾನ್ ದೇವರಾಜನ ಅಮಾನತಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಆರೋಪಿಗಳ ಬಳಿ ಇದ್ದ 3 ಲಕ್ಷ ರೂ. ಹಾಗೂ ಕೃತ್ಯಕ್ಕೆ ಬಳಸಿಕೊಂಡಿದ್ದ ವಾಹನವನ್ನು ಜಪ್ತಿ ಮಾಡಲಾಗಿದೆ.

# ಸಲೂನ್‌ನಲ್ಲಿ ಕೋತಿಗೆ ಕೇಶ ವಿನ್ಯಾಸ

## ಚಾಮರಾಜನಗರದಲ್ಲಿ ವಿಚಿತ್ರ ಘಟನೆ | ಜಾಲತಾಣಗಳಲ್ಲಿ ವೈರಲ್

**ಸಂ.ಕ.ಸಮಾಚಾರ, ಚಾಮರಾಜನಗರ**

ಕೋತಿಯೊಂದಕ್ಕೆ ವ್ಯಕ್ತಿಯೊಬ್ಬ ತನ್ನ ಸಲೂನ್‌ಶಾಪ್‌ನಲ್ಲಿ ಕೇಶ ವಿನ್ಯಾಸ ಮಾಡಿರುವ ವಿಚಿತ್ರವಾದ ಘಟನೆ ತಾಲೂಕಿನ ಸಂತೇಮರಹಳ್ಳಿಯಲ್ಲಿ ನಡೆದಿದೆ. ಇಲ್ಲಿನ ದೇವು ಮೇನ್ಸ್ ವೇರ್ ಹೇರ್ ಕಟಿಂಗ್ ಸಲೂನ್ ಶಾಪ್‌ನ ಮಾಲೀಕ ದೇವರಾಜು ಅವರು ಕೋತಿಗೆ ಕೇಶ ವಿನ್ಯಾಸ ಮಾಡಿದ್ದಾನೆ.

**ಏನಿದು ಘಟನೆ?:** ಸಂತೇಮರಹಳ್ಳಿಯ ಬಸ್ ನಿಲ್ದಾಣದ ಸಮೀಪದಲ್ಲಿರುವ ಸಲೂನ್ ಶಾಪ್‌ನ ಮುಂಭಾಗಕ್ಕೆ ಪ್ರತಿದಿನ ಕೋತಿಯು ತನ್ನ ಗುಂಪಿನೊಂದಿಗೆ ಬಂದು ಸಂಚರಿಸುತ್ತಿತ್ತು. ಮಧ್ಯಾಹ್ನ ಸಲೂನ್ ಒಳಗೆ ಬಂದ ಕೋತಿ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಚೇಷ್ಟೆ ಮಾಡುತ್ತಿತ್ತು. ಬಳಿಕ ದೇವರಾಜು ಹಾಗೂ ಗ್ರಾಹಕರು ಕೋತಿಯನ್ನು ಅಂಗಡಿಯಿಂದ ಹೊರ ಕಳುಹಿಸಲು ಗದರಿಸಿದರೂ ಅದು ಹೋಗಲಿಲ್ಲ.

ನಂತರ ದೇವರಾಜು ಅವರು ಬಾಚಣಿಗೆಯಿಂದ ಅದರ ತಲೆಯನ್ನು ಬಾಚಲಾರಂಭಿಸಿದರು. ಆಗಲೂ ಅದು ಸುಮ್ಮನೆ ಕುಳಿತಿತ್ತು. ಬಾಚಣಿಗೆ ಮತ್ತು ಕತ್ತರಿ ಬಳಸಿ ಅವರು ತಲೆ ಹಾಗೂ ದೇಹದ ಕೂದಲನ್ನು ಕತ್ತರಿಸಲಾರಂಭಿಸಿದರು. ಅದಕ್ಕೂ ತಗಾದೆ ತೆಗೆಯದೇ ಸುಮ್ಮನಿತ್ತು. ಹೀಗಾಗಿ ಅವರು ತಮ್ಮ ಕಾಯಕ ನಿಲ್ಲಿಸದೆ ಕೋತಿಗೆ ಕೇಶ ವಿನ್ಯಾಸ ಮಾಡಿದ್ದಾರೆ. ನಂತರ ಅದು ಅಲ್ಲಿದ್ದವರ ಕೈ ಕುಲುಕಿ ನಿರ್ಗಮಿಸಿತು. ಕೋತಿಗೆ ಕೇಶ ವಿನ್ಯಾಸ ಮಾಡಿದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿದೆ.

# ಕರ್ನಾಟಕ ಪರ ಗೊತ್ತುವಳಿಗೆ ಒತ್ತಾಯ

## ಬೆಳಗಾವಿಯಲ್ಲಿ 13ರಂದು ಕನ್ನಡ ಸಂಘಟನೆಗಳ ಧರಣಿ

**ಸಂ.ಕ.ಸಮಾಚಾರ ಬೆಳಗಾವಿ**

ಗಡಿನಾಡ ಬೆಳಗಾವಿಯಲ್ಲಿ ಕನ್ನಡದ ಗೌರವ, ಕರ್ನಾಟಕದ ಅಸ್ತಿತ್ವ ಮತ್ತು ಕನ್ನಡಿಗರ ಸ್ವಾಭಿಮಾನಕ್ಕೆ ಸಂಬಂಧಿಸಿದ ಪ್ರಶ್ನೆ ಮತ್ತೆ ತೀವ್ರಗೊಂಡಿದೆ.

ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ಪರವಾದ ಗೊತ್ತುವಳಿಯನ್ನು ಅಂಗೀಕರಿಸಬೇಕೆಂದು ಒತ್ತಾಯಿಸಿ ಮಾ. 26ರಿಂದ ಹೋರಾಟ ನಡೆಸುತ್ತಿರುವ ಕನ್ನಡ ಸಂಘಟನೆಗಳ ಹೋರಾಟಕ್ಕೆ ಬೆಂಗಳೂರಿನ ಹಲವು ಕನ್ನಡ ಪರ ಸಂಘಟನೆಗಳು ಬೆಂಬಲ ಸೂಚಿಸಿವೆ. ಮೇ 13ರಂದು ಪಾಲಿಕೆಯ ಸರ್ವಸಾಧಾರಣ ಸಭೆ ನಡೆಯಲಿದ್ದು, ಆ ದಿನ ಪಾಲಿಕೆ ಪರಿಷತ್ ಸಭಾಂಗಣದ ಹೊರಗೆ ಏಳು ಕನ್ನಡ ಪರ ಸಂಘಟನೆಗಳ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಲಾಗಿದೆ.

2005ರ ಅಕ್ಟೋಬರ್ 27ರಂದು ಬೆಳಗಾವಿ ಪಾಲಿಕೆಯಲ್ಲಿ ಮಹಾರಾಷ್ಟ್ರ ಪರವಾದ ಗೊತ್ತುವಳಿ ಅಂಗೀಕರಿಸಲಾಗಿತ್ತು. ಗಡಿ ವಿವಾದ ಪ್ರಕರಣದಲ್ಲಿ ಮಹಾರಾಷ್ಟ್ರ ಸರ್ಕಾರ ಅದನ್ನು ಸುಪ್ರೀಂ ಕೋರ್ಟ್ ಮುಂದೆ ಪೂರಕ ದಾಖಲೆಯಾಗಿ ಬಳಸುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ, ಈಗ ಕನ್ನಡಿಗರೇ ಬಹುಮತ ಹೊಂದಿರುವ ಪಾಲಿಕೆಯಲ್ಲಿ ಕರ್ನಾಟಕ ಪರ ಗೊತ್ತುವಳಿ ಅಂಗೀಕರಿಸುವುದು ಅನಿವಾರ್ಯ ಎಂದು ಕನ್ನಡ ಸಂಘಟನೆಗಳು ಆಗ್ರಹಿಸಿವೆ.

ಏಪ್ರಿಲ್ 18ರ ಪಾಲಿಕೆ ಸಭೆಯಲ್ಲಿ ಕರ್ನಾಟಕ ಪರ ಗೊತ್ತುವಳಿಯನ್ನು ಸ್ವೀಕರಿಸದಿರುವುದು ಕನ್ನಡಪರ ವಲಯದಲ್ಲಿ ಅಸಮಾಧಾನ ಮೂಡಿಸಿದೆ. ಮೇ 13ರ ಸಭೆಯಲ್ಲಾದರೂ ಮಹಾಪೌರರು, ಉಪಮಹಾಪೌರರು ಈ ಗೊತ್ತುವಳಿಯನ್ನು ಅಂಗೀಕರಿಸಬೇಕು ಎಂಬ ಒತ್ತಾಯ ಹೆಚ್ಚಾಗಿದೆ. 58 ಸದಸ್ಯರ ಪಾಲಿಕೆಯಲ್ಲಿ ಬಿಜೆಪಿ 35 ಸದಸ್ಯರ ಬಲ ಹೊಂದಿರುವ ಹಿನ್ನೆಲೆಯಲ್ಲಿ, ಬೆಂಗಳೂರಿನ ಕನ್ನಡ ಸಂಘಟನೆಗಳ ಮುಖಂಡರು ಬಿಜೆಪಿ ರಾಜ್ಯ ನಾಯಕರನ್ನೂ ಭೇಟಿಯಾಗಿ ಒತ್ತಡ ಹೇರಲು ಮುಂದಾಗಿದ್ದಾರೆ.

ಕನ್ನಡ ಸಂಘಟನೆಗಳ ಸ್ಪಷ್ಟ ಸಂದೇಶ ಒಂದೇ–ಬೆಳಗಾವಿ ಕರ್ನಾಟಕದ್ದು. ಎಲ್ಲ ಭಾಷೆಗಳಿಗೆ ಗೌರವ ಇದೆ. ಆದರೆ ಕರ್ನಾಟಕದ ನೆಲದಲ್ಲಿ ಕನ್ನಡಕ್ಕೆ ಅವಮಾನ ಸಹಿಸಲು ಸಾಧ್ಯವಿಲ್ಲ. ಮೇ 13ರ ಪಾಲಿಕೆ ಸಭೆ ಈಗ ಕೇವಲ ಆಡಳಿತಾತ್ಮಕ ಸಭೆಯಲ್ಲ; ಅದು ಬೆಳಗಾವಿಯ ಕನ್ನಡ ಸ್ವಾಭಿಮಾನಕ್ಕೆ ಅಗ್ನಿಪರೀಕ್ಷೆಯಾಗಿದೆ.

## ಸುದ್ದಿ ಸಮಾಚಾರ

### ತಮಿಳ್ನಾಡು ಭರವಸೆ: ದೇವರೇ ವಿಜಯ್‌ರನ್ನು ಕಾಪಾಡಬೇಕು

**ಸಂ.ಕ.ಸಮಾಚಾರ, ಹೊಳೆನರಸೀಪುರ**

ತಮಿಳುನಾಡಿನಲ್ಲಿ ನಟ ವಿಜಯ್ ನೀಡಿರುವ ಭರವಸೆಗಳನ್ನು ಈಡೇರಿಸಲು ಎಷ್ಟು ಹಣಬೇಕು ಎಂಬ ಅರಿವು ಇರಬೇಕು ಅವರನ್ನು 'ದೇವರೇ ಕಾಪಾಡಬೇಕು' ಎಂದು ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನ ವಾರ್ಷಿಕ ಬಜೆಟ್ ಸುಮಾರು 3.40 ಲಕ್ಷ ಕೋಟಿ ರೂಪಾಯಿ ಇದ್ದು, ಈಗ ಭರವಸೆ ಗಳನ್ನು ಈಡೇರಿಸಲು ಅವರಿಗೆ 6 ರಿಂದ 7 ಲಕ್ಷ ಕೋಟಿ ರೂಪಾಯಿ ಅಗತ್ಯವಾಗಬಹುದು. ಇಷ್ಟು ದೊಡ್ಡ ಮೊತ್ತವನ್ನು ಎಲ್ಲಿಂದ ತರಲಾಗುತ್ತದೆ ಎಂಬುದೇ ಪ್ರಶ್ನೆಯಾಗಿದ್ದು, ಈ ರೀತಿಯ ಘೋಷಣೆಗಳಿಗೆ ಯಾರ ಪ್ರಭಾವ, ಕಾರಣವೋ ಗೊತ್ತಿಲ್ಲ ಎಂದು ಟೀಕಿಸಿದರು. ಡಿಎಂಕೆ ಹಾಗೂ ಎಐಎಡಿಎಂಕೆ ಪಕ್ಷಗಳು ಒಂದಾಗಿ ಸರ್ಕಾರ ರಚಿಸುವ ಸಾಧ್ಯತೆಗಳ ಬಗ್ಗೆ ಮಾತನಾಡಿ, ನನ್ನ ರಾಜಕೀಯ ಅನುಭವದ ಪ್ರಕಾರ ಅದು ಕೇವಲ ಊಹಾಪೋಹ. ಎರಡು ದ್ರಾವಿಡ ಪಕ್ಷಗಳು ಸೇರಿ ಸರ್ಕಾರ ರಚಿಸುವುದಿಲ್ಲ. ಆ ರೀತಿಯ ಚಿಂತನೆಗಳೇ ಅಸಂಬದ್ಧ ಎಂದರು.

### ಶೀಘ್ರ ಸಂಪುಟ ವಿಸ್ತರಣೆ, ನನಗೆ ಸಚಿವ ಸ್ಥಾನ ಗ್ಯಾರಂಟಿ: ಸಲೀಂ

**ಸಂ.ಕ.ಸಮಾಚಾರ ಹುಬ್ಬಳ್ಳಿ**

ಮೇ ಅಂತ್ಯದೊಳಗೆ ಸಚಿವ ಸಂಪುಟ ವಿಸ್ತರಣೆ ಆಗಲಿದ್ದು, ನನಗೂ ಸಚಿವ ಸ್ಥಾನ ದೊರೆಯುವ ಭರವಸೆ ಇದೆ ಎಂದು ವಿಧಾನ ಪರಿಷತ್ ಮುಖ್ಯ ಸಂಚೇತಕ ಸಲೀಂ ಅಹ್ಮದ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಉಪ ಚುನಾವಣೆ ಹಿನ್ನೆಲೆ ಸಚಿವ ಸಂಪುಟ ವಿಸ್ತರಣೆ ವಿಳಂಬವಾಗಿದೆ. ಆದಷ್ಟು ಬೇಗ ಹೈಕಮಾಂಡ್ ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂದರು. ಬಿಜೆಪಿ ಮತಗಳ್ಳತನದ ಬಗ್ಗೆ ಹಿಂದಿನಿಂದಲೂ ಕಾಂಗ್ರೆಸ್ ಆರೋಪ ಮಾಡುತ್ತಿದೆ. ಶೃಂಗೇರಿ ಕ್ಷೇತ್ರದಲ್ಲಿ ಚುನಾವಣೆ ಮರು ಎಣಿಕೆಯಲ್ಲಿ ಮತ್ತೊಮ್ಮೆ ಅದು ಸಾಬೀತಾಗಿದೆ. ಮರು ಎಣಿಕೆಯಲ್ಲಿ ದೊಡ್ಡ ಷಡ್ಯಂತ್ರ ನಡೆದಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಮರು ಮತ ಎಣಿಕೆ ಸಮಯದಲ್ಲಿ ತಿದ್ದುಪಡಿ ಮಾಡಿ ಬಿಜೆಪಿ ಮತಗಳ್ಳತನ ಮಾಡಿದೆ. ಪಕ್ಷದ ಕಾನೂನು ತಂಡ ಈ ಬಗ್ಗೆ ಚರ್ಚೆ ಮಾಡುತ್ತಿದೆ. ಮುಂದೆ ಹೋರಾಟ ಮಾಡುತ್ತೇವೆ ಎಂದರು.

### ಪ್ರೇಮಿ ಜೊತೆ ಸೇರಿ ಪತಿಯನ್ನೇ ಕೊಂದಿದ್ದ ಮಹಿಳೆಗೆ ಗಲ್ಲು ಶಿಕ್ಷೆ

**ಸಂ.ಕ.ಸಮಾಚಾರ, ಶಿವಮೊಗ್ಗ**

ಪ್ರೇಮಿ ಜೊತೆ ಸೇರಿ ತನ್ನ ಗಂಡನನ್ನೇ ಕೊಂದಿದ್ದ ಭದ್ರಾವತಿಯ ಸುರಗಿತೋಪಿನ ಫ್ಲೋರಾ ನ್ಯಾನ್ಸಿ ಮತ್ತು ಆಕೆಯ ಪ್ರಿಯಕರ ರಾಜಶೇಖರಯ್ಯನಿಗೆ ಭದ್ರಾವತಿಯ ಘನ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗಲ್ಲು ಶಿಕ್ಷೆ ಹಾಗೂ 14 ಲಕ್ಷ ರೂ. ದಂಡ ವಿಧಿಸಿ ತೀರ್ಪು ಪ್ರಕಟಿಸಿದೆ. 2020ರಂದು ಸುರಗಿತೋಪಿನಲ್ಲಿ ಫ್ಲೋರಾ ನ್ಯಾನ್ಸಿ ಎಂಬ ಮಹಿಳೆ ರಾಜಶೇಖರನ ಜೊತೆ ಅನೈತಿಕ ಸಂಬಂಧ ಹೊಂದಿದ್ದು, ಈ ಸಂಬಂಧಕ್ಕೆ ಅಡ್ಡಿಯಾಗಿದ್ದ ಗಂಡ ಪ್ರಕಾಶ್ ಬಾಬುನನ್ನು ಮತ್ತುಬರುವ ಔಷಧಿ ನೀಡಿ, ಉಸಿರುಗಟ್ಟಿಸಿ ಕೊಲೆ ಮಾಡಿದ್ದರು. ಭದ್ರಾವತಿ ಪೇಪರ್ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆಗಿನ ತನಿಖಾಧಿಕಾರಿ ಇನ್ಸ್‌ಪೆಕ್ಟರ್ ಈ.ಓ.ಮಂಜುನಾಥ್ ಚಾರ್ಜ್‌ಶೀಟ್ ಸಲ್ಲಿಸಿದ್ದರು. ನ್ಯಾಯಾಧೀಶರಾದ ಶ್ರೀಮತಿ ಇಂದಿರಾ ಮೈಲಸ್ವಾಮಿ ಚೆಟ್ಟಿಯಾರ್ ಇಬ್ಬರಿಗೂ ಗಲ್ಲು ಶಿಕ್ಷೆ ನೀಡಿದ್ದಾರೆ.

### ಹು-ಧಾ ಪಾಲಿಕೆಯ 12 ವಲಯ ಕಚೇರಿ ಮೇಲೆ 'ಲೋಕಾ' ದಾಳಿ

**ಸಂ.ಕ.ಸಮಾಚಾರ ಹುಬ್ಬಳ್ಳಿ**

ಇ–ಸ್ವತ್ತು ಮತ್ತು ಭೂ ದಾಖಲೆಗಳ ವರ್ಗಾವಣೆ ಸೇರಿದಂತೆ ಇನ್ನಿತರೆ ದಾಖಲೆಗಳನ್ನು ಮಾಡಿಕೊಡುವಲ್ಲಿ ವಿಳಂಬ ಮಾಡಲಾಗುತ್ತಿದೆ ಎಂಬ ದೂರುಗಳನ್ನು ಆಧರಿಸಿ ಲೋಕಾಯುಕ್ತ ಪೊಲೀಸರು ಶುಕ್ರವಾರ ಬೆಳಗ್ಗೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಎಲ್ಲ 12 ವಲಯ ಕಚೇರಿಗಳ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ. ಲೋಕಾಯುಕ್ತ ಎಸ್ಪಿ ಸಿದ್ದಲಿಂಗಪ್ಪ ಎಸ್.ಟಿ ಅವರ ನೇತೃತ್ವದಲ್ಲಿ ಪ್ರತ್ಯೇಕವಾಗಿ 12 ತಂಡ ಗಳಲ್ಲಿ ಕಾರ್ಯಾಚರಣೆ ನಡೆಸಿದೆ. ಇ–ಸ್ವತ್ತು ಸೇರಿದಂತೆ ವಿವಿಧ ದಾಖಲಾತಿಗಳ ವಿಳಂಬ ಕುರಿತಂತೆ ಸಾಕಷ್ಟು ಆರೋಪಗಳು ಮಹಾನಗರ ಪಾಲಿಕೆಯಲ್ಲಿ ಕೇಳಿಬಂದಿದ್ದವು. ದುಡ್ಡು ಕೊಟ್ಟರೆ ಮಾತ್ರ ಇ–ಸ್ವತ್ತು ನೀಡಲಾಗುತ್ತದೆ. ಇಲ್ಲವಾದರೆ ಅನಗತ್ಯ ವಿಳಂಬ ಮಾಡಲಾಗುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದ್ದರು. ಇದರ ಅಧಾರದ ಮೇಲೆ ಶುಕ್ರವಾರ ಏಕಕಾಲಕ್ಕೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ದೂರುಗಳಿಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳ್ನು ಪರಿಶೀಲಿಸಿದರು. ಅಲ್ಲದೆ, ಬೆಳಗ್ಗೆಯಿಂದ ಸಂಜೆ ಸಮಯದವರೆಗೆ ಎಷ್ಟು ಅರ್ಜಿಗಳು ಬಂದಿವೆ, ಎಷ್ಟು ದಿವಸಗಳಿಂದ ಅರ್ಜಿಗಳ ಪೆಂಡಿಂಗ್ ಇದೆ, ಏತಕ್ಕಾಗಿ ವಿಳಂಬವಾಗುತ್ತಿದೆ ಎಂಬುದು ಸೇರಿದಂತೆ ವಿವಿಧ ಆಯಾಮಗಳಲ್ಲಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದಾರೆ.

■ ಇ–ಸ್ವತ್ತು ಮತ್ತು ಭೂ ದಾಖಲೆಗಳ ವರ್ಗಾವಣೆ ವಿಳಂಬ

### ಸ್ನಾನಕ್ಕೆಂದು ನದಿಗೆ ಇಳಿದಿದ್ದ ಇಬ್ಬರು ವಿದ್ಯಾರ್ಥಿನಿಯರ ಸಾವು

**ಸಂ.ಕ.ಸಮಾಚಾರ ಮಂಗಳೂರು**

ಗುಂಡ್ಯ ಹೊಳೆಯ ಕೊಲ್ಯದಕಟ್ಟ ಡ್ಯಾಂ ಬಳಿ ಸ್ನಾನಕ್ಕಿಳಿದ ಇಬ್ಬರು ವಿದ್ಯಾರ್ಥಿನಿಯರು ನೀರಿನಲ್ಲಿ ಮುಳುಗಿ ಮೃತಪಟ್ಟ ದಾರುಣ ಘಟನೆ ಶುಕ್ರವಾರ ಸಂಜೆ ನಡೆದಿದೆ. ಮೃತ ವಿದ್ಯಾರ್ಥಿನಿಯರನ್ನು ಕುಟ್ರುಪ್ಪಾಡಿ ಗ್ರಾಮದ ವಿಮಲಗಿರಿ ನಿವಾಸಿಗಳಾದ ಅರ್ಪಿತಾ (15) ಹಾಗೂ ಸುನೀತಾ (21) ಎಂದು ಗುರುತಿಸಲಾಗಿದೆ. ರಜೆ ಇರುವುದರಿಂದ ಸ್ನೇಹಿತರ ತಂಡದೊಂದಿಗೆ ನದಿಗೆ ಆಗಮಿಸಿದ್ದ ಐವರು ವಿದ್ಯಾರ್ಥಿನಿಯರು ಸ್ನಾನಕ್ಕಾಗಿ ನೀರಿಗೆ ಇಳಿದಿದ್ದು, ಈ ವೇಳೆ ಇಬ್ಬರು ವಿದ್ಯಾರ್ಥಿನಿಯರು ನೀರಿನ ಆಳ ತಿಳಿಯದೆ ಮುಳುಗತೊಡಗಿದ್ದಾರೆ. ಜೊತೆಯಲ್ಲಿದ್ದವರು ರಕ್ಷಿಸಲು ಯತ್ನಿಸಿದರೂ ಸಾಧ್ಯವಾಗದೆ ದುರಂತ ಸಂಭವಿಸಿದೆ. ವಿಷಯ ತಿಳಿಯುತ್ತಿದ್ದಂತೆಯೇ ಕಡಬ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಸ್ಥಳೀಯರ ಸಹಕಾರದಿಂದ ಮೃತದೇಹಗಳನ್ನು ಮೇಲಕ್ಕೆತ್ತಲಾಗಿದೆ.



### ಮೈಸೂರಲ್ಲಿ ಐಪಿಎಲ್ ಬೆಟ್ಟಿಂಗ್ ನಡೆಸುತ್ತಿದ್ದ 5 ಖದೀಮರ ಬಂಧನ

**ಸಂ.ಕ. ಸಮಾಚಾರ, ಮೈಸೂರು**

ನಗರದಲ್ಲಿ ಪ್ರತ್ಯೇಕ ಘಟನೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಐವರನ್ನು ಪೊಲೀಸರು ಬಂಧಿಸಿದ್ದಾರೆ. ನಗರದ ಪುರಭವನ ಹಿಂಭಾಗದ ಪಾರ್ಕಿಂಗ್ ಜಾಗದಲ್ಲಿ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದ ಮೇರೆಗೆ ಮೂವರನ್ನು ಬಂಧಿಸಿ ಒಂದು ಬೆನ್ಜ್ ಕಾರು, 15900 ನಗದು, ಮೂರು ಮೊಬೈಲ್ ವಶಪಡಿಸಿಕೊಳ್ಳಲಾಗಿದೆ.

ಮಂಡಿಮೊಹಲ್ಲಾ ವಾಸಿ ಸಂಜಯಕುಮಾರ್, ಇಲವಾಲದ ವಿನೋದ್, ಪಡುವಾರಹಳ್ಳಿ ಲಿಖಿತ್‌ಕುಮಾರ್ ಬಂಧಿತರು. ಈ ಬಗ್ಗೆ ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಹೆಬ್ಬಾಳ್ ಠಾಣಾ ವ್ಯಾಪ್ತಿಯ ಹೋಟೆಲ್ ಕೊಠಡಿಯಲ್ಲಿ ಬೆಟ್ಟಿಂಗ್ ನಡೆಸುತ್ತಿದ್ದ ನಾಯ್ಡುನಗರದ ಪ್ರದೀಪ್, ಹೆಬ್ಬಾಳದ ಪ್ರಫುಲ್‌ನನ್ನು ಬಂಧಿಸಿ ಒಂದು ಲ್ಯಾಪ್‌ಟಾಪ್, ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಹೆಬ್ಬಾಳ್ ಠಾಣೆಯಲ್ಲಿ ದೂರು ದಾಖಲಾಗಿದೆ.

# ಅಭಿಮಾನೋತ್ಸವದ ಹಿಂದೆ ರಾಜಕೀಯ ಉದ್ದೇಶವಿಲ್ಲ

## ರಾಜ್ಯದಲ್ಲಿ ಬಿಎಸ್‌ವೈ ಕನಸಿನ ಪರಿಪೂರ್ಣ ಬಿಜೆಪಿ ಸರ್ಕಾರ ಸ್ಥಾಪನೆ ಪಕ್ಷದ ಗುರಿ: ವಿಜಯೇಂದ್ರ

**ರಾಜ್ಯದಲ್ಲಿ ಬಿಜೆಪಿ ಪೂರ್ಣಪ್ರಮಾಣದ ಶಕ್ತಿಯ ಮೇಲೆ ಅಧಿಕಾರಕ್ಕೆ ಬರಬೇಕು ಎಂಬುದು ಬಿ.ಎಸ್.ಯಡಿಯೂರಪ್ಪನವರ ಗುರಿಯಾಗಿತ್ತು. ಆ ಕನಸು ನನಸಾಗುವ ದಿನಗಳು ದೂರವಿಲ್ಲ. ಯಡಿಯೂರಪ್ಪನವರ ಪರಿಪೂರ್ಣ ಶಕ್ತಿಯ ಬಿಜೆಪಿ ಸರ್ಕಾರ ರಚನೆಗೆ ರಾಜ್ಯದ ಬಿಜೆಪಿ ಕಾರ್ಯಕರ್ತರು ಕಂಕಣಬದ್ಧರಾಗಿ ದುಡಿಯುವ ಸಂಕಲ್ಪ ಮಾಡಿದ್ದಾರೆ. ಅವರ 50 ವರ್ಷಗಳ ಹೋರಾಟದ ಶ್ರಮವನ್ನು ವ್ಯರ್ಥವಾಗಲು ಕಾರ್ಯಕರ್ತರು ಬಿಡುವುದಿಲ್ಲ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು. ದಕ್ಷಿಣ ಭಾರತದ ಮೊದಲ ಬಿಜೆಪಿ ಸರ್ಕಾರ ರಚನೆಗೆ ಭೂಮಿಕೆ ಸಿದ್ಧಪಡಿಸಿದ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರನ್ನು ಪ್ರಧಾನಿ ಹುದ್ದೆಗೆ ಮೊದಲ ಬಾರಿ ಬಹಿರಂಗ ಘೋಷಣೆ ಮಾಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಜನಸೇವೆಗೆ ಪಾದಾರ್ಪಣೆ ಮಾಡಿ ಅರ್ಧ ಶತಮಾನದ ಸಂಭ್ರಮ ಆಚರಿಸಲಾಗುತ್ತಿದೆ. ಅಭಿಮಾನೋತ್ಸವದ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವುದು ಅವರ ಕಿರಿಯ ಪುತ್ರ ವಿಜಯೇಂದ್ರ ತಾವೊಬ್ಬ ಪುತ್ರನಾಗಿ, ಬಿಜೆಪಿ ಕಾರ್ಯಕರ್ತನಾಗಿ ಸಂಯುಕ್ತ ಕರ್ನಾಟಕಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ಕೆಲವು ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದಾರೆ.**

ಮುಖಾಮುಖಿ ಸಂದರ್ಶನ

▪ ಶಿವಕುಮಾರ್ ಮೆಣಸಿನಕಾಯಿ

ಸಂ.ಕ. ಸಮಾಚಾರ, ಬೆಂಗಳೂರು

**ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಆಚರಣೆಯ ಉದ್ದೇಶವೇನು? ಇದರ ಪರಿಕಲ್ಪನೆ ಉದ್ಭವವಾಗಿದ್ದು ಹೇಗೆ?**

ಕಳೆದ ಲೋಕಸಭೆ ಚುನಾವಣೆಗೆ ಮೊದಲೇ ಇಂತಹದೊಂದು ಸಮಾರಂಭ ಮಾಡಬೇಕೆಂದು ಕೆಲವು ಮುಖಂಡರು ಅಭಿಪ್ರಾಯಪಟ್ಟಿದ್ದರು. ಆದರೆ ಚುನಾವಣೆ ಇದ್ದುದರಿಂದ ಕಾರ್ಯಕ್ರಮ ಆಯೋಜನೆ ಮೂರ್ತಸ್ವರೂಪ ಪಡೆದಿರಲಿಲ್ಲ. ಆದರೆ ಈಗ್ಗೆ ಸರಿಸುಮಾರು 9 ತಿಂಗಳ ಹಿಂದೆ ಪಕ್ಷದ ಕೆಲವು ಹಿರಿಯ ಮುಖಂಡರು ಯಡಿಯೂರಪ್ಪನವರ ರಾಜಕೀಯ ಜೀವನಕ್ಕೆ 50 ವರ್ಷ ಸಂದಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮ ಮಾಡಬೇಕೆಂದು ಬಯಸಿದ್ದರು. ಅದಾದ ಬಳಿಕ ರಾಜಕೀಯೇತರ ಹಾಗೂ ಪಕ್ಷಾತೀತವಾಗಿ ಕಾರ್ಯಕ್ರಮ ಆಚರಿಸಬೇಕೆಂಬ ಸಲಹೆ ಬಂತು. ಎಲ್ಲರೂ ಸೇರಿಕೊಂಡು ಒಂದು ಸಮಿತಿ ಮಾಡಬೇಕೆಂದು ಹೇಳಿದಾಗ ಕೆಎಲ್‌ಇ ಕಾರ್ಯಾಧ್ಯಕ್ಷರಾಗಿದ್ದ ಡಾ.ಪ್ರಭಾಕರ್ ಕೋರೆ, ಸಂಸದ ಹಾಗೂ ಮಾಜಿ ಡಿಸಿಎಂ ಗೋವಿಂದ ಕಾರಜೋಳ ಮತ್ತು ಮಾಜಿ ಸಚಿವ ಬಿ.ಶ್ರೀರಾಮುಲು ಅವರನ್ನೊಳಗೊಂಡು ಸಮಿತಿ ರಚನೆ ಆಯಿತು. ಆದರೆ ಸಮಿತಿಯ ಜತೆಜತೆಗೆ ರಾಜ್ಯದ ಅನೇಕ ಕಡೆಗಳಿಂದ ಯಡಿಯೂರಪ್ಪ ಅಭಿಮಾನಿಗಳು ಕಾರ್ಯಕ್ರಮಕ್ಕೆ ಕೈಜೋಡಿಸಲು ಆರಂಭಿಸಿದರು. ಈ ವಿಚಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮುಂದೆ ಪ್ರಸ್ತಾಪಿಸಿದಾಗ ತುಂಬಾ ಸಂತೋಷ ವ್ಯಕ್ತಪಡಿಸಿ ದಿನಾಂಕ ಕೂಡ ನಿಗದಿಪಡಿಸಿದರು. ಹೀಗಾಗಿ ಅತಿ ಕಡಿಮೆ ಸಮಯದಲ್ಲಿ ಕಾರ್ಯಕ್ರಮ ಆಯೋಜನೆ ಮಾಡಬೇಕಾಯಿತು.

**ಅಭಿಮಾನೋತ್ಸವದ ಹಿಂದೆ ರಾಜ್ಯ ಬಿಜೆಪಿಗೆ ಅಥವಾ ನಿಮ್ಮ ವೈಯಕ್ತಿಕ ಲಾಭದ ಉದ್ದೇಶ ಇದೆಯೇ? ಇದರಿಂದ ಯಾರಿಗೆ ಅನುಕೂಲ ಆಗಲಿದೆ?**

* ಯಡಿಯೂರಪ್ಪನವರ ಸೇವೆ, ತ್ಯಾಗ ಮತ್ತು ಪರಿಶ್ರಮ ಗೊತ್ತಿರುವ ಯಾರೂ ಕೂಡ ಈ ಕಾರ್ಯಕ್ರಮದ ಬಗ್ಗೆ ಸಂಶಯ ವ್ಯಕ್ತಪಡಿಸಲಾರರು. ರಾಜ್ಯದಲ್ಲಿ ಜಾತಿ, ಜನಾಂಗ, ಲಿಂಗ, ಅಂತಸ್ತು ಎಣಿಸದೇ ಎಲ್ಲರಿಗೂ ಅನುಕೂಲ ಮಾಡುವಂತಹ ಕೆಲಸವನ್ನು ಅವರು ತಮ್ಮ ಕೈಗೆ ಅಧಿಕಾರ ಸಿಕ್ಕಾಗ ಮಾಡಿದ್ದಾರೆ. ಕರ್ನಾಟಕದಲ್ಲಿ ದಲಿತ, ಹಿಂದುಳಿದ, ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಮಠಮಾನ್ಯಗಳಿಂದ ಹಿಡಿದು ಅಲ್ಪಸಂಖ್ಯಾತರ ಸಂಸ್ಥೆಗಳಿಗೂ ತಮ್ಮ ಅವಧಿಯಲ್ಲಿ ಕೈಲಾದ ನೆರವು ಕೊಟ್ಟು ಜನಮನ್ನಣೆ ಗಳಿಸಿದ ಅವರು ಭಾರಿ ಪ್ರವಾಹದಿಂದ ಹಿಡಿದು ಭೀಕರ ಬರಗಾಲದ ಪರಿಸ್ಥಿತಿಯಲ್ಲಿ ನಾಡಿನ ರೈತಾಪಿ ಜನರಿಗೆ ಸಹಾಯಹಸ್ತ ಚಾಚಿದವರು. ಅವರ ಜನಸೇವೆಗೆ 50 ವರ್ಷ ಸಂದಿರುವ ಹೊತ್ತಿನಲ್ಲಿ ಅಭಿಮಾನೋತ್ಸವ ಆಚರಣೆ ಮಾಡುತ್ತಿರುವುದರ ಹಿಂದೆ ಯಾವುದೇ ರಾಜಕೀಯ ಲಾಭದ ಉದ್ದೇಶ ಇಲ್ಲ. ಒಂದು ವೇಳೆ ಅಂತಹ ಉದ್ದೇಶ ಇದ್ದಿದ್ದರೆ ಚುನಾವಣೆ ಹೊಸ್ತಿಲಲ್ಲಿ ಮಾಡಬಹುದಾಗಿತ್ತು. ಅಥವಾ ನನಗೆ ಲಾಭ ಆಗುವುದಾದರೆ ಚುನಾವಣೆ ಸಂದರ್ಭದಲ್ಲೇ ಮಾಡುತ್ತಿದ್ದೆ. ಇದು ಅತ್ಯಂತ ಪರಿಶುದ್ಧದ ಅಭಿಮಾನ ವ್ಯಕ್ತಪಡಿಸುವ ಕಾರ್ಯಕ್ರಮ. ಟೀಕಿಸುವವರೂ ನಮ್ಮವರೇ ಎಂದು ಭಾವಿಸುತ್ತೇನೆ.

**ಅಭಿಮಾನೋತ್ಸವದ ಬಳಿಕ ಯಡಿಯೂರಪ್ಪನವರು ರಾಜಕಾರಣದಿಂದ ಸಂಪೂರ್ಣ ಹಿಂದೆ ಸರಿಯುತ್ತಾರೆಯೇ? ಅಥವಾ ಹಿಂದಿನಂತೆ ರಾಜ್ಯ ಪ್ರವಾಸ ಹೊರಡುವ ಉದ್ದೇಶ ಇದೆಯೇ?**

* ನನ್ನ ಪ್ರಕಾರ ಅವರು ಜನಿಸಿದ ಕ್ಷಣದಿಂದಲೇ ಬಿಜೆಪಿ ಧ್ಯಾನಿಸುತ್ತಿದ್ದಾರೆ. ಏಕೆಂದರೆ ಅವರಿಗೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಬಿಟ್ಟರೆ ಬೇರೆ ಕುಟುಂಬವೇ ಇಲ್ಲ. ನಾನೂ ಮಗನಾಗಿಯೂ ಅವರನ್ನು ನೋಡಿದ್ದೇನೆ, ಒಬ್ಬ ಕಾರ್ಯಕರ್ತನಾಗಿಯೂ ನಾಯಕರ ಸ್ಥಾನದಲ್ಲಿ ನೋಡಿದ್ದೇನೆ. ಅವರು ಕೊನೆ ಉಸಿರಿರುವವರೆಗೂ ಬಿಜೆಪಿ ಕೆಲಸ ಬಿಟ್ಟರೆ ಬೇರೇನೂ ಮಾಡಲಾರರು. ಅವರಿಗೆ ನಿವೃತ್ತಿ ಮತ್ತು ವಿಶ್ರಾಂತಿ ಎಂಬ ಎರಡು ಪದಗಳ ಪರಿಚಯ ಆಗಿಲ್ಲ. ಅಭಿಮಾನೋತ್ಸವ ನಂತರ ಅವರು ರಾಜ್ಯ ಪ್ರವಾಸ ಆರಂಭಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಅವರು ಸಂಘಟನೆ ಕೆಲಸದಿಂದ ದೂರ ಇರುವುದು ಕಷ್ಟ. ನನಗೆ ವೈಯಕ್ತಿಕವಾಗಿ ಮಾತ್ರವಲ್ಲ, ನನ್ನಂತೆ ಪಕ್ಷದಲ್ಲಿರುವ ಅನೇಕ ಮುಖಂಡರಿಗೆ ಅವರು ಈಗಲೂ ಸಲಹೆ ನೀಡುತ್ತಾರೆ. ಹಲವಾರು ಜಿಲ್ಲಾ ಕಾರ್ಯಕ್ರಮಗಳಿಗೆ ಈಗಲೂ ಅನೇಕ ಮುಖಂಡರು ಬಂದು ಆಹ್ವಾನ ನೀಡುತ್ತಾರೆ. ಅನೇಕ ಮಠಾಧೀಶರೂ ಆಹ್ವಾನ ಮಾಡುತ್ತಾರೆ. ಅವರು ಬದುಕಿರುವವರೆಗೂ ರಾಜಕಾರಣದಿಂದ ಹಿಂದೆ ಸರಿಯುವುದಿಲ್ಲ ಎಂಬುದು ನನ್ನ ಭಾವನೆ.

**ರಾಜ್ಯದಲ್ಲಿ ನಿಮ್ಮ ಸರ್ಕಾರ ರಚನೆಗಾಗಿಯೇ ಅಭಿಮಾನೋತ್ಸವ ನಡೆಯುತ್ತಿದೆ ಎಂಬ ಭಾವನೆ ಇದೆ. ಜೆಡಿಎಸ್ ಓವರ್‌ಟೇಕ್ ಮಾಡುವ ಸಲುವಾಗಿ ಇಂತಹ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆಯೇ?**

* ಕೆಲವು ಪ್ರತಿಪಕ್ಷ ನಾಯಕರು ಹಾಗೂ ಮಾಧ್ಯಮಗಳು ಹೀಗೆ ವ್ಯಾಖ್ಯಾನ ಮಾಡಬಹುದು. ಸ್ವತಃ ಪಕ್ಷದ ವರಿಷ್ಠರು ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾರ್ಯಕ್ರಮಕ್ಕೆ ಒಪ್ಪಿಗೆ ನೀಡಿದ್ದಾರೆ. ಜೆಡಿಎಸ್ ಜತೆ ಮೈತ್ರಿಯೂ ಈ ಕಾರ್ಯಕ್ರಮಕ್ಕೂ ಏನು ಸಂಬಂಧ. ಅವರ ರಾಜಕೀಯ ಜೀವನ ಮತ್ತು ಸಾಧನೆಯನ್ನು ಹೊಸ ತಲೆಮಾರಿನ ಕಾರ್ಯಕರ್ತರಿಗೆ ತಿಳಿಸುವ ಮತ್ತು ಯಡಿಯೂರಪ್ಪನವರಿಗೆ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮ ಇದು. ಯಡಿಯೂರಪ್ಪನವರಿಗೆ ಕೃತಜ್ಞತೆ ಹೇಳುವುದನ್ನು ಬಿಟ್ಟು ನಾವು ಇನ್ನೇನು ಕೊಡಲು ಸಾಧ್ಯ? ಹೀಗಾಗಿ ಮೊಸರಲ್ಲಿ ಕಲ್ಲು ಹುಡುಕುವ ಪ್ರಯತ್ನ ಬೇಡ. ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಅತ್ಯಂತ ಗಟ್ಟಿಯಾಗಿ ನಿಂತು ಮುಂದಿನ ಬಾರಿಗೆ ವಿಧಾನಸಭೆ ಚುನಾವಣೆಯಲ್ಲಿ ಜಯಭೇರಿ ಬಾರಿಸಲಿದೆ.

# ಪೆನ್ನಾರ್ ನ್ಯಾಯಮಂಡಳಿ ರಚನೆಗೆ 6 ತಿಂಗಳ ಗಡುವು ನೀಡಿದ ಸುಪ್ರೀಂ

ಸಂ.ಕ.ಸಮಾಚಾರ ನವದೆಹಲಿ

ಪೆನ್ನಾರ್ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ತಮಿಳುನಾಡು ನಡುವಿನ ವಿವಾದವನ್ನು ಬಗೆಹರಿಸಲು ಅಂತಾರಾಜ್ಯ ಜಲ ನ್ಯಾಯಮಂಡಳಿ ಸ್ಥಾಪಿಸಲು ಸುಪ್ರೀಂಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರಕ್ಕೆ ಆರು ತಿಂಗಳ ಗಡುವು ನೀಡಿದೆ. ನ್ಯಾಯಾಧೀಶರಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು ನ್ಯಾಯಮಂಡಳಿ ರಚಿಸಲು ಆರು ತಿಂಗಳ ಕಾಲಾವಕಾಶ ಕೋರಿ ಕೇಂದ್ರವು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿತು. ಈ ವಿಷಯದಲ್ಲಿ ಸರ್ಕಾರ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಪೀಠ ಹೇಳಿತು.

ಶಾಸನಬದ್ಧ ಮತ್ತು ಕಾರ್ಯವಿಧಾನದ ಅವಶ್ಯಕತೆಗಳನ್ನು ಪೂರ್ಣಗೊಳಿಸಲು ಸಮಂಜಸವಾದ ಸಮಯ ಬೇಕಾಗುತ್ತದೆ. ಅರ್ಜಿದಾರರು ಈ ನ್ಯಾಯಾಲಯದ ನಿರ್ದೇಶನಗಳನ್ನು ಆದಷ್ಟು ಬೇಗ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅನುಸರಣೆಯಲ್ಲಿ ವಿಳಂಬವು ಉದ್ದೇಶಪೂರ್ವಕವಲ್ಲ. ಆದರೆ, ಅದರ ನಿಯಂತ್ರಣ ಮೀರಿದ ಸಂದರ್ಭಗಳಿಂದಾಗಿ ಇದು ಸಂಭವಿಸಿದೆ ಎಂದು ನ್ಯಾಯಲಯ ಹೇಳಿದೆ.ಪೆನ್ನಾರ್ ಅಂತಾರಾಜ್ಯ ನದಿ ಕರ್ನಾಟಕದಲ್ಲಿ ಮೇಲ್ಭಾಗ ಮತ್ತು ತಮಿಳುನಾಡು ನದಿಯ ಕೆಳಭಾಗದಲ್ಲಿದೆ. ವಿಚಾರಣೆಯ ಸಮಯದಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ಹಾಜರಾದ ವಕೀಲ ನಿಶಾಂತ್ ಪಾಟೀಲ್, ವಾಸ್ತವವಾಗಿ, ಕೇವಲ 9.77 ಟಿಎಂಸಿ ನೀರಿನ ಉದ್ದೇಶವಿದ್ದು, ಬೇರೆಲ್ಲಾ ಜಲವಿವಾದಗಳಿಗೆ ಹೋಲಿಸಿದರೆ ಇದು ಬಹಳ ಸಣ್ಣ ವಿಷಯ ಎಂದು ವಾದ ಮಂಡಿಸಿದರು. ಕೇಂದ್ರ ತನ್ನ ಅರ್ಜಿಯಲ್ಲಿ, ಅಂತರ-ಸಚಿವಾಲಯ ಸಮಾಲೋಚನೆಗಳು ಪೂರ್ಣಗೊಂಡಿವೆ. ವಿವಿಧ ಸಚಿವಾಲಯಗಳ ಅಭಿಪ್ರಾಯಗಳು ಸೇರಿಸಿದ ನಂತರ, ಕರಡು ಸಂಪುಟ ಟಿಪ್ಪಣಿಯನ್ನು ಜಲಶಕ್ತಿ ಸಚಿವರು ಅನುಮೋದಿಸಿದ್ದಾರೆ. ಕರಡು ಸಂಪುಟ ಟಿಪ್ಪಣಿಯನ್ನು ಕೇಂದ್ರ ಸಚಿವ ಸಂಪುಟದ ಪರಿಗಣನೆಗೆ ಸಂಪುಟ ಸಚಿವಾಲಯಕ್ಕೆ ಕಳುಹಿಸಲಾಗಿದೆ.

# ಜೂನ್ ಅಂತ್ಯದೊಳಗೆ ಜಿಬಿಎ ಚುನಾವಣೆ?

## ಸುಪ್ರೀಂಕೋರ್ಟ್ ಆದೇಶ ಪಾಲಿಸಲು ಮುಂದಾದ ಚುನಾವಣಾ ಆಯೋಗ

ಸಂ.ಕ.ಸಮಾಚಾರ ಬೆಂಗಳೂರು

ಜೂನ್ 14 ರಿಂದ ಜೂನ್ 24ರ ಒಳಗಾಗಿ ಜಿಬಿಎ ವ್ಯಾಪ್ತಿಯ ಐದೂ ನಗರಪಾಲಿಕೆಗಳ ಚುನಾವಣೆಗೆ ಒಂದು ನಿರ್ದಿಷ್ಟ ದಿನಾಂಕವನ್ನು ತಿಳಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಡಾ. ಜಿ.ಎಸ್.ಸಂಗ್ರೇಶಿ ತಿಳಿಸಿದ್ದಾರೆ.

**ಎಲೆಕ್ಷನ್‌ಗೆ ಆಯೋಗ ರೆಡಿ**

ಜಿಬಿಎ ಅಧೀನದ ಐದು ನಗರಪಾಲಿಕೆಗಳ ಚುನಾವಣೆ ದಿನಾಂಕ ನಿಗದಿ ಸಂಬಂಧ ಜಿಬಿಎ ಮುಖ್ಯ ಆಯುಕ್ತರು, ಐದು ನಗರಪಾಲಿಕೆಗಳ ಆಯುಕ್ತರೊಂದಿಗೆ ಸಭೆ ನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಡಾ. ಜಿ.ಎಸ್. ಸಂಗ್ರೇಶಿ, ಇಂದಿನ ಸಭೆ ಜಿಬಿಎ ಚುನಾವಣಾ ದಿನಾಂಕ ನಿಗದಿ ಕುರಿತಾಗಿದೆ. ಸೆಕ್ಷನ್ 34ರನ್ವಯ ಚುನಾವಣೆ ದಿನಾಂಕವನ್ನು ಜಿಬಿಎ ಜೊತೆ ಚರ್ಚಿಸಿಯೇ ಘೋಷಣೆ ಮಾಡಬೇಕು. ಹೀಗಾಗಿ ಜಿಬಿಎ ಮುಖ್ಯ ಆಯುಕ್ತರಿಗೆ ಸಭೆಗೆ ಆಹ್ವಾನ ಮಾಡಿದ್ದೇವೆ. ಜಿಬಿಎ ಮುಖ್ಯ ಆಯುಕ್ತರು ಹಾಗೂ 5 ನಗರ ಪಾಲಿಕೆಗಳ ಆಯುಕ್ತರು ಬಂದಿದ್ದರು. ದಿನಾಂಕ ನಿಗದಿ ಮಾತ್ರ ಬಾಕಿ ಉಳಿದಿದೆ, ಉಳಿದೆಲ್ಲ ಪ್ರಕ್ರಿಯೆಗಳನ್ನು ಆಯೋಗ ಮುಗಿಸಿದೆ ಎಂದು ಹೇಳಿದರು.

**ದಿನಾಂಕ ನಿಗದಿಗೆ ಜಿಬಿಎಗೆ ಸೂಚನೆ**

ಮಳೆಗಾಲ, ಶಾಲಾ ಕಾಲೇಜು, ಕೇಂದ್ರದಿಂದ ನಡೆಯುತ್ತಿರುವ ಜನಗಣತಿ ಇವೆಲ್ಲವನ್ನೂ ಗಮನಿಸಿ ನಿರ್ದಿಷ್ಟ ದಿನಾಂಕ ನಿಗದಿ ಆಗಬೇಕು. ಜೂನ್ 30ರ ಒಳಗಾಗಿ ಜಿಬಿಎ ಚುನಾವಣೆ ಮಾಡಬೇಕು ಎಂದು ಈಗಾಗಲೇ ಸುಪ್ರೀಂಕೋರ್ಟ್ ಆದೇಶಿಸಿದೆ. ಹಾಗಾಗಿ ಕಾಲಮಿತಿಯಲ್ಲಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಿ ಸುಪ್ರೀಂಗೆ ಆಯೋಗ ವರದಿ ಕೊಡಬೇಕು. ನಾವು ನ್ಯಾಯಾಲಯದ ನಿರ್ದೇಶನದಂತೆಯೇ ನಡೆದುಕೊಳ್ಳಬೇಕಾಗುತ್ತದೆ. ಜೂನ್ 14 ರಿಂದ ಜೂನ್ 24ರ ಒಳಗಾಗಿ ಒಂದು ದಿನಾಂಕ ತಿಳಿಸಲು ಸೂಚನೆ ಕೊಟ್ಟಿದ್ದೇನೆ. ಈ ಅಂತರದಲ್ಲೇ ವೇಳಾಪಟ್ಟಿ ಘೋಷಣೆ ಆಗಬೇಕು. ಕೆಲವೇ ದಿನಗಳಲ್ಲಿ ಅಂತಿಮ ದಿನಾಂಕವನ್ನು ಮಾಧ್ಯಮಗಳಿಗೂ ತಿಳಿಸುತ್ತೇವೆ. ಚುನಾಚಣೆ ಮುಂದೂಡಿಕೆ ಮಾಡುವ ಅಧಿಕಾರ ಇರುವುದು ಸುಪ್ರೀಂ ಕೋರ್ಟ್‌ಗೆ ಮಾತ್ರ ಎಂದು ಆಯುಕ್ತರು ವಿವರಿಸಿದರು.

**ಡೇಟ್ ಫಿಕ್ಸ್ ಅಧಿಕಾರ ನಮಗಿದೆ**

ನಿಗದಿತ ಸಮಯದೊಳಗೆ ಜಿಬಿಎ ಒಂದು ದಿನಾಂಕ ತಿಳಿಸದಿದ್ದರೆ ಚುನಾವಣಾ ಆಯೋಗವೇ ತನ್ನ ಅಧಿಕಾರ ಬಳಸಿ ಚುನಾವಣೆ ದಿನಾಂಕ ಘೋಷಣೆ ಮಾಡುತ್ತೇವೆ. ರಾಜ್ಯ ಚುನಾವಣಾ ಆಯೋಗಕ್ಕೆ ದಿನಾಂಕ ಘೋಷಣೆ ಮಾಡುವ ಅಧಿಕಾರವೂ ಇದೆ. ಸಿಬ್ಬಂದಿ ಇಲ್ಲ, ಮತ್ತೊಂದು ಇಲ್ಲ ಎಂದು ನಿರಂತರವಾಗಿ ನೆಪ ಹೇಳಿಕೊಂಡು ಬರಲಾಗುತ್ತಿದೆ. ಸರ್ಕಾರ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಿದೆ. ಇದು ಅಸಹಕಾರ ಎನ್ನಲಾಗದು. ಅವರು ಸಿಬ್ಬಂದಿಗಳನ್ನು ಕೊಡದೇ ಇದ್ದರೆ, ಕೊಠಡಿ ಕೊಡದೇ ಇದ್ದರೆ, ಹಣ ಕೊಡದೆ ಇದ್ದರೆ, ವಾರ್ ರೂಮ್ ವಾಪಸ್ ಪಡೆದರೆ ಮಾತ್ರ ಅದನ್ನು ಅಸಹಕಾರ ಎನ್ನಬಹುದು ಎಂದು ಆಯುಕ್ತರು ವಿಶ್ಲೇಷಿಸಿದರು.

**ಸಬೂಬು ಬೇಡ ಎಂದಿದೆ ಸುಪ್ರೀಂ**

ಜಿಬಿಎ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿಯೇ ಹೇಳಿದೆ. ಚುನಾವಣೆ ಮುಗಿಸಿಯೇ ಬನ್ನಿ ಎಂದಿದೆ. ಮತ್ತೆ ಯಾವುದೇ ಸಬೂಬು ಹಿಡಿದು ಬರಬೇಡಿ ಎಂದೂ ಸೂಕ್ಷ್ಮವಾಗಿ ಸಿಜೆ ನೇತೃತ್ವದ ಪೀಠವೇ ತಿಳಿಸಿದೆ. ಸಿಬ್ಬಂದಿಗಳ ಕೊರತೆ, ಜನಗಣತಿ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. ಆದರೆ, ಆ ವಿಷಯ ಇನ್ನು ಬೋರ್ಡ್‌ಗೆ ಬಂದಿಲ್ಲ. ಹಾಗಿರುವಾಗ ನಾವು ಏನೆಂದು ಅರ್ಥ ಮಾಡಿಕೊಳ್ಳಬೇಕು. ಅದೇನೇ ಇದ್ದರೂ ನಾವು ಚುನಾವಣೆಗೆ ನಡೆಸಲು ಅಗತ್ಯವಿರುವ ಎಲ್ಲಾ ಸಿದ್ದತೆ ಮಾಡಿಕೊಳ್ಳುತ್ತಿದ್ದೇವೆ ಎಂದೂ ಡಾ.ಸಂಗ್ರೇಶಿ ಹೇಳಿದರು.

# ಬೆಂಬಲ ಬೆಲೆಗೆ ಸೂರ್ಯಕಾಂತಿ ಖರೀದಿಗೆ ಸಚಿವರ ನಿರ್ದೇಶನ

**ಬೆಂಗಳೂರು:** ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ 2025-26ನೇ ಸಾಲಿನ ಹಿಂಗಾರು ಹಂಗಾಮಿನ ಸೂರ್ಯಕಾಂತಿಯನ್ನು ಪ್ರತಿ ಕ್ವಿಂಟಾಲ್‌ಗೆ 7,721 ರೂ. ದರದಲ್ಲಿ ಖರೀದಿಗೆ ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಆದೇಶ ಮಾಡಿದ್ದಾರೆ.

ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳ ಅನ್ವಯ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ವಿಜಯನಗರ, ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ನಿರ್ದೇಶನ ನೀಡಿದ್ದಾರೆ. ನಾಫೆಡ್ ಮತ್ತು ಎನ್‌ಸಿಸಿಎಫ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ಹಾಗೂ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳವನ್ನು ರಾಜ್ಯ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ನೇಮಕ ಮಾಡಲಾಗಿದೆ.

ನೋಂದಣಿ ಅವಧಿಯನ್ನು 50 ದಿನ ಹಾಗೂ ಖರೀದಿ ಅವಧಿಯನ್ನು 60 ದಿನ ನಿಗದಿಪಡಿಸಲಾಗಿದ್ದು, ನೋಂದಣಿ ಜೊತೆಗೆ ಖರೀದಿ ಪ್ರಕ್ರಿಯೆ ಆರಂಭಿಸಬೇಕು ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಗ್ರಾಮೀಣ ಭಾಗದ ರೈತರಿಗೆ ಅನುಕೂಲವಾಗುವಂತೆ ತಾಂತ್ರಿಕ ಮತ್ತು ವೈಜ್ಞಾನಿಕ ಸೌಲಭ್ಯದಿಂದ ಕೂಡಿರುವ ಗೋದಾಮುಗಳನ್ನು ಹೊಂದಿರುವ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಖರೀದಿ ಕೇಂದ್ರಗಳನ್ನು ತೆರೆಯಬೇಕು . ನೋಂದಣಿ ಮತ್ತು ಖರೀದಿಯಲ್ಲಿ ಯಾವುದೇ ಸಮಸ್ಯೆಗಳಾಗದಂತೆ ಸಿದ್ದತೆ ಮಾಡಿಕೊಂಡು ಪ್ರಕ್ರಿಯೆ ಆರಂಭಿಸಬೇಕು ಎಂದು ಸೂಚಿಸಿದ್ದಾರೆ.

ಖರೀದಿ ಪ್ರಗತಿಯ ವಿವರವನ್ನು ಪ್ರತಿ ದಿನ ರಾಜ್ಯ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ ಒದಗಿಸಬೇಕು ಎಂದು ತಿಳಿಸಿದ್ದಾರೆ.

# ಕೆರೆ, ಅಣೆಕಟ್ಟಲ್ಲಿ ನೀರು ಸೋರಿಕೆ ನಿಲ್ಲಿಸಲು ಬೋಸರಾಜು ಸೂಚನೆ

ಸಂ.ಕ. ಸಮಾಚಾರ ಬೆಂಗಳೂರು

ಎಲ್‌ನೀನೋ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಎದುರಾಗಬಹುದಾದ ಜಲ ಸಂಕಷ್ಟವನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಜಲ ಭದ್ರತೆಯನ್ನು ಖಚಿತಪಡಿಸಲು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವತಿಯಿಂದ ಮಹತ್ವದ ತಾಂತ್ರಿಕ ಸಮಾಲೋಚನಾ ಹಾಗೂ ಪರಿಶೀಲನಾ ಸಭೆಯನ್ನು ನಡೆಸಲಾಯಿತು.



ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್ ಬೋಸರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಐಐಎಸ್‌ಸಿ ವಿಜ್ಞಾನಿಗಳು, ಕೆಎಸ್‌ಆರ್‌ಎಸ್‌ಎಸಿ, ಕೆಎಸ್‌ಎನ್‌ಡಿಎಂಸಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಅಧಿಕಾರಿಗಳು, ತಜ್ಞರ ಜೊತೆಗೆ ಸಣ್ಣ ನೀರಾವರಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್‌ಗಳು ಭಾಗವಹಿಸಿ ಮಹತ್ವದ ಸಲಹೆಗಳನ್ನು ನೀಡಿದರು. ಸಭೆಯಲ್ಲಿ ಭಾಗವಹಿಸಿದ್ದ ತಜ್ಞರು, ರಾಜ್ಯದಲ್ಲಿ ಪ್ರಸ್ತುತ ಲಭ್ಯವಿರುವ ನೀರನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಇದರ ಜೊತೆಗೆ, ಸಾರ್ವಜನಿಕರಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸುವ ಅಗತ್ಯವನ್ನು ತಜ್ಞರು ಒತ್ತಿ ಹೇಳಿದರು.

ಸಭೆಯನ್ನು ಉದ್ದೇಶಿಸಿ ಸಚಿವ ಬೋಸರಾಜು ಮಾತನಾಡಿದ, ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಎಲ್‌ನೀನೋ ಪ್ರಭಾವವನ್ನು ಸಮರ್ಥವಾಗಿ ಎದುರಿಸಲು ನಾವು ಇಂದಿನಿಂದಲೇ ಸಜ್ಜಾಗಬೇಕಿದೆ. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳು, ಪಿಕ್-ಅಪ್ ಡ್ಯಾಂಗಳು ಹಾಗೂ ಕಿಂಡಿ ಅಣೆಕಟ್ಟುಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿ ಸೋರಿಕೆಯಾಗದಂತೆ ಎಚ್ಚರವಹಿಸಬೇಕು ಎಂದು ನಿರ್ದೇಶನ ನೀಡಿದರು.

ತಜ್ಞರ ಸಲಹೆಗಳಿಗೆ ಸ್ಪಂದಿಸಿದ ಸಚಿವರು, ಇಲಾಖೆಯ ಅಧೀನದಲ್ಲಿರುವ ಎಲ್ಲಾ 18ವಲಯಗಳ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಖಡಕ್ ಸೂಚನೆ ನೀಡಿದರು. ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳು, ಅಣೆಕಟ್ಟುಗಳು ಹಾಗೂ ಜಲಾಶಯಗಳ ನಿರ್ವಹಣೆಯ ಸಂಪೂರ್ಣ ಉಸ್ತುವಾರಿಯನ್ನು ಕಾರ್ಯಪಾಲಕ ಇಂಜಿನಿಯರ್‌ಗಳು ವಹಿಸಿಕೊಳ್ಳಬೇಕು. ಸಣ್ಣ ಪ್ರಮಾಣದ ನೀರಿನ ಸೋರಿಕೆಯೂ ಆಗದಂತೆ ತಕ್ಷಣವೇ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲದೇ ಈಗಾಗಲೇ ಇಲಾಖೆಯ ವತಿಯಿಂದ ಪ್ರಾರಂಭಿಸಲಾಗಿರುವ ನೀರಿದ್ದರೆ ನಾಳೆ ಯೋಜನೆಯನ್ನು ಜನರ ಬಳಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಸೂಚನೆ ನೀಡಿದರು.

# ಮೇ 18– 25ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ–2

**ಬೆಂಗಳೂರು:** 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ನ್ನು ಮೇ 18ರಿಂದ 25ರವರೆಗೆ ನಡೆಸಲಾಗುತ್ತಿದೆ. ಈ ಕುರಿತು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ತಿಳಿಸಿದ್ದು ಪರೀಕ್ಷೆಗೆ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪರೀಕ್ಷೆಗೆ 1,14,444 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, 358 ಪರೀಕ್ಷಾ ಕೇಂದ್ರಗಳನ್ನು ರಚಿಸಲಾಗಿದೆ. ಪರೀಕ್ಷೆ-2ನ್ನು ಹಿಂದಿನ ವರ್ಷಗಳಂತೆ ವ್ಯವಸ್ಥಿತವಾಗಿ ಮತ್ತು ಪಾರದರ್ಶಕತೆಯಿಂದ ನಡೆಸಲಾಗುವುದು ಎಂದಿದೆ. ಪರೀಕ್ಷಾ ಪೂರ್ವದಲ್ಲಿ ಹಾಗೂ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಸಂಬಂಧಿತ ವದಂತಿಗಳ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳುವುದು. ಪರೀಕ್ಷಾ ಸಮಯದಲ್ಲಿ ವಿಶೇಷವಾಗಿ ಕೆಲವು ಕೋಚಿಂಗ್/ಟ್ಯೂಷನ್ ಕೇಂದ್ರಗಳು, ಕಂಪ್ಯೂಟರ್/ಸೈಬರ್ ಕೇಂದ್ರಗಳು. ಜೆರಾಕ್ಸ್ ಅಂಗಡಿಗಳು ಇತ್ಯಾದಿಯವರಿಂದ ಸುಳ್ಳು ವದಂತಿಗಳು ಹರಡಲು ಅವಕಾಶ ನೀಡದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಪರೀಕ್ಷಾ ಕೇಂದ್ರಗಳ ಸಮೀಪ ಪರೀಕ್ಷಾ ಅಕ್ರಮಗಳಿಗೆ ಪ್ರಚೋದಿಸುವವರ ವಿರುದ್ಧ ಅಗತ್ಯ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

## ಸುದ್ದಿ ಸಮಾಚಾರ

### ಜಾತಿ ನಿಂದನೆ ಕೇಸ್: ಶಾಸಕ ಹರೀಶ್‌ಗೆ ಸಾವಿರ ರೂ. ದಂಡ

**ಬೆಂಗಳೂರು:** ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಾರಂಟ್ ಜಾರಿಯಾದ ಹಿನ್ನೆಲೆಯಲ್ಲಿ ಹರಿಹರ ಶಾಸಕ ಬಿ.ಪಿ. ಹರೀಶ್ ವಿಶೇಷ ನ್ಯಾಯಾಲಯದ ಮುಂದೆ ಖುದ್ದು ಹಾಜರಾಗಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಬಿ.ಪಿ. ಹರೀಶ್ ಅವರಾಗಲಿ ಅಥವಾ ಅವರ ಪರವಾಗಿ ವಕೀಲರಾಗಲೀ ಹಾಜರಾಗದ ಕಾರಣ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಕಳೆದ ಸೋಮವಾರ ಶಾಸಕರ ವಿರುದ್ಧ ಬಂಧನ ವಾರಂಟ್ ಹೊರಡಿಸಿದ್ದರು. ಈ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ ಹರೀಶ್ ಅವರು ತಮ್ಮ ವಕೀಲರೊಂದಿಗೆ ಹಾಜರಾಗಿ ಹಿಂದಿನ ವಿಚಾರಣೆ ವೇಳೆ ಹಾಜರಾಗದೇ ಇರುವುದಕ್ಕೆ ಕಾರಣ ನೀಡಿದ ಹಿನ್ನೆಲೆಯಲ್ಲಿ ಅದನ್ನು ಪುರಸ್ಕರಿಸಿದ ನ್ಯಾಯಾಲಯ 1000 ರೂ. ದಂಡ ವಿಧಿಸಿ ವಾರಂಟ್ ಅನ್ನು ಹಿಂದಕ್ಕೆ ಪಡೆಯಿತು. ಮುಂದಿನ ವಿಚಾರಣೆಯನ್ನು ಮೇ 27ಕ್ಕೆ ನಿಗದಿ ಮಾಡಲಾಗಿದ್ದು ಅಂದು ಹಾಜರಾಗಬೇಕು ಎಂದು ಸೂಚಿಸಲಾಗಿದೆ.

### ಸಕಾಲ ಸೇವೆ ನಿಗದಿತ ಕಾಲಕ್ಕೆ ನೀಡಲು ಸಚಿವ ಕೃಷ್ಣ ತಾಕೀತು

**ಬೆಂಗಳೂರು:** ಸಕಾಲ ಯೋಜನೆಗಳು ಜನರಿಗೆ ಕಾಲಕ್ಕೆ ಸರಿಯಾಗಿ ಸಿಗುವಂತೆ ಮಾಡಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ತಾಕೀತು ಮಾಡಿದರು. ಸಕಾಲ ಸೇವೆಗಳ ಅಡಿಯಲ್ಲಿ ನೀಡಲಾಗುತ್ತಿರುವ ಕೃಷಿ, ಸಾರಿಗೆ, ಶಿಕ್ಷಣ ಹಾಗೂ ಆದಾಯ ತೆರಿಗೆ ಇಲಾಖೆಗಳ ಇ-ಆಡಳಿತ ಕ್ಕೆ ಮತ್ತಷ್ಟು ವೇಗ ತುಂಬುವ ಮತ್ತು ಲಂಚಮುಕ್ತಗೊಳಿಸುವ ಸಂಬಂಧ ಇಂದು ನಡೆದ ಸಭೆಯಲ್ಲಿ ಸಕಾಲ ಗ್ಯಾರಂಟಿ ಸೇವೆಯನ್ನು ನಿಗದಿತ ಸಮಯಕ್ಕೆ ನೀಡಬೇಕು. ಸಕಾಲ ಸೇವೆ ನಿಗದಿತ ಸಮಯಕ್ಕೆ ಸಿಗಬೇಕು ಎಂದರೆ ಸಕಾಲಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಯ ಸೇವೆಯ ಬಗೆಗಿನ ಡೇಟಾ ಬೆರಳ ತುದಿಯಲ್ಲಿರಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಳೆದ ಎರಡೂವರೆ ವರ್ಷದಿಂದ ನಿರಂತರವಾಗಿ ಸಕಾಲ ಕುಟುಂಬ ಡೇಟಾಬೇಸ್ ಅಪ್‌ಡೇಟ್ ಮಾಡಲಾಗುತ್ತಿದೆ. ಕೆಲವು ಸೇವೆಗಳನ್ನು ಆಟೋಮೇಷನ್ ಮಾಡಬೇಕು. ಆಟೋಮೇಷನ್ ಮಾಡಿದರೆ ಜನರಿಗೆ ಸೇವೆ ಶೀಘ್ರ ಲಂಚ, ವಿಳಂಬಕ್ಕೆ ವಿರಾಮ. ಜನರ ಶೋಷಣೆಯಿಂದ ಮುಕ್ತಿ ಸಿಗಲಿದೆ ಎಂದು ಹೇಳಿದರು. ಸಕಾಲದಲ್ಲಿ ಹತ್ತಾರು ಇಲಾಖೆಗಳಿದ್ದು ಹಲವು ಸೇವೆಗಳನ್ನು ಹೊರಗುತ್ತಿಗೆಗೆ ನೀಡಲಾಗಿದೆ. ಹೊರಗುತ್ತಿಗೆ ನೌಕರರ ಸಂಬಳವನ್ನು ಕುಟುಂಬ ಆಪ್ ಮೂಲಕ ನೀಡುವಂತಾಗಬೇಕು. ವೃತ್ತಿಪರ ತೆರಿಗೆ ಸಹ ಕುಟುಂಬಕ್ಕೆ ಏಕೀಕರಣವಾಗಬೇಕು. ವೃತ್ತಿಪರ ತೆರಿಗೆ ಆನ್‌ಲೈನ್ ಮೂಲಕವೇ ಸಂಗ್ರಹಿಸುತ್ತಿರುವುದರಿಂದ ಅದನ್ನು ಏಕೀಕರಣ ಮಾಡುವುದು ಕಷ್ಟವಾಗದು ಎಂದು ಸಚಿವರು ಹೇಳಿದರು. ಆಸ್ತಿ ನೋಂದಣಿಯಲ್ಲಿ ಆಧಾರ್, ಪ್ಯಾನ್ ಕಾರ್ಡ್, ಪಾಸ್ಪೋರ್ಟ್ ಈ ಮೂರು ದಾಖಲೆಗಳಲ್ಲಿ ಒಂದನ್ನು ಕಡ್ಡಾಯ ಮಾಡಿದ್ದೇವೆ. ವಾಹನ ನೋಂದಣಿಯೂ ಆಸ್ತಿ ಪ್ರಕಾರವೇ ಆಗಿದ್ದು ಆಧಾರ್ ಇಕೆವೈಸಿ ಕಡ್ಡಾಯ ಮಾಡುವುದು ಸೂಕ್ತ ಎಂದು ಹೇಳಿದರು.

### ವಾರದೊಳಗೆ ಸೀಟ್‌ಮ್ಯಾಟ್ರಿಕ್ ಅಪ್‌ಲೋಡ್‌ಗೆ ಕೆಇಎ ಸೂಚನೆ

**ಬೆಂಗಳೂರು:** ವಿವಿಧ ಇಲಾಖೆಗಳು ಸೀಟ್ ಮ್ಯಾಟ್ರಿಕ್ಸ್‌ಗಳನ್ನು ತಡವಾಗಿ ಕಳುಹಿಸುತ್ತಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅವುಗಳನ್ನು ಮೇ ಎರಡನೇ ವಾರದೊಳಗೆ ಸಿಇಟಿ ಕೌನ್ಸೆಲಿಂಗ್‌ಗಾಗಿ ಅಪ್‌ಲೋಡ್ ಮಾಡಲು ಸೂಚಿಸಿದೆ. ಕೆಇಎ ಇಂಜಿನಿಯರಿಂಗ್, ಕೃಷಿ, ನರ್ಸಿಂಗ್ ಮತ್ತು ಫಾರ್ಮಸಿ ಸೇರಿದಂತೆ ಹಲವು ಕೋರ್ಸ್‌ಗಳಿಗೆ ಸಿಇಟಿ ಕೌನ್ಸೆಲಿಂಗ್ ನಡೆಸುತ್ತದೆ. ವಿದ್ಯಾರ್ಥಿಗಳು ಸರಿಯಾದ ಆಯ್ಕೆ ಮಾಡಿಕೊಳ್ಳಲು ಈ ಎಲ್ಲಾ ಕೋರ್ಸ್‌ಗಳ ಕೌನ್ಸೆಲಿಂಗ್ ಸಾಮಾನ್ಯವಾಗಿ ಒಟ್ಟಿಗೆ ನಡೆಯುತ್ತದೆ. ಸಿಇಟಿ ಆನ್‌ಲೈನ್ ಸೀಟ್ ಆಯ್ಕೆ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ತಮ್ಮ ಆದ್ಯತೆಯ ಕ್ರಮದಲ್ಲಿ ಕೋರ್ಸ್‌ಗಳನ್ನು ಆಯ್ಕೆ ಮಾಡುತ್ತಾರೆ. ಕೆಇಎ ಉನ್ನತ ಶಿಕ್ಷಣ ಇಲಾಖೆ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದಿದೆ. ಕೋರ್ಸ್‌ಗಳ ಸೀಟ್ ಮ್ಯಾಟ್ರಿಕ್ಸ್ ಅನ್ನು ಮೇ ಎರಡನೇ ವಾರದೊಳಗೆ ಕೆಇಎ ಸೀಟ್ ಮ್ಯಾಟ್ರಿಕ್ಸ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಅದರ ಪ್ರಮಾಣಿತ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಜೊತೆಗೆ ಶುಲ್ಕ ವಿವರಗಳನ್ನು ಒಳಗೊಂಡ ಸರ್ಕಾರಿ ಆದೇಶವನ್ನೂ ಹೊರಡಿಸಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ. ಸಮನ್ವಯಕ್ಕಾಗಿ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಕ ಮಾಡಬೇಕು. ಮೇಲ್ಕಂಡ ಎಲ್ಲಾ ಕ್ರಮಗಳಿಗೆ ಸೀಟ್ ಮ್ಯಾಟ್ರಿಕ್ಸ್ ಸ್ವೀಕರಿಸಿದ ನಂತರ ಕನಿಷ್ಠ 20 ದಿನಗಳ ಅವಧಿ ಬೇಕಾಗುತ್ತದೆ. ಜೊತೆಗೆ ಪ್ರಾಧಿಕಾರ ನಡೆಸುವ ಎಲ್ಲಾ ಸೀಟ್ ಹಂಚಿಕೆ ಸುತ್ತುಗಳು ಎಐಸಿಟಿಇ ಸಂಬಂಧಿತ ಪ್ರಾಧಿಕಾರಗಳ ವೇಳಾಪಟ್ಟಿಯ ಪ್ರಕಾರ ನಡೆಯಬೇಕು ಎಂದು ಕೆಇಎ ತಿಳಿಸಿದೆ.

### ಮೇ 15ಕ್ಕೆ ಡಿಕೆಶಿಗೆ ಸಿಹಿಸುದ್ದಿ, ವರಿಷ್ಠರ ಮೇಲೆ ನಂಬಿಕೆ: ಡಿಕೆಸು

**ಬೆಂಗಳೂರು:** ನಾಯಕತ್ವ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ ಮೇ 15ರಂದು ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಹೈಕಮಾಂಡ್‌ನಿಂದ ಸಿಹಿಸುದ್ದಿ ಸಿಗುವ ನಂಬಿಕೆ ಇದೆ ಎಂದು ಮಾಜಿ ಸಂಸದ ಹಾಗೂ ಸೋದರ ಡಿ.ಕೆ.ಸುರೇಶ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಮನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲ ಶ್ರಮ ಇದೆಯೋ ಅಲ್ಲಿ ಫಲ ಇದ್ದೇ ಇರುತ್ತದೆ. ನಾನು ಇದನ್ನು ಹಲವು ಬಾರಿ ಉಲ್ಲೇಖಿಸಿದ್ದೇನೆ. ನಮ್ಮದು ಹೈಕಮಾಂಡ್ ಪಕ್ಷ ಏನೇ ನಿರ್ಧಾರಗಳಿದ್ದರೂ ಅಲ್ಲಿಯೇ ಅಂತಿಮವಾಗಬೇಕಿದೆ. ನಾಯಕತ್ವ ಬದಲಾವಣೆ ವಿಚಾರವೂ ಕೂಡಾ ವರಿಷ್ಠರ ಹಂತದಲ್ಲಿ ತೀರ್ಮಾನ ಆಗಬೇಕಿದ್ದು, ನಾವೂ ಕೂಡಾ ನಮ್ಮ ನಾಯಕರ ಮೇಲೆ ನಂಬಿಕೆ ಮತ್ತು ವಿಶ್ವಾಸ ಹೊಂದಿರುವುದಾಗಿ ತಿಳಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶನಿವಾರ ಬೆಂಗಳೂರಿನಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಪಾಂಡಿಚೇರಿಯ ಕರೈಕಲ್ ಜಿಲ್ಲೆಯ ತಿರುನಲ್ಲೂರಿಗೆ ತೆರಳಲಿದ್ದು, ಪ್ರಸಿದ್ಧ ಶನೀಶ್ವರ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಲಿದ್ದಾರೆ.

# ಅವಿರತ ಸೇವೆಯ ಫಲಶ್ರುತಿಯೇ ಅಭಿಮಾನೋತ್ಸವ

## ಅಭಿಮಾನದ ಅಲೆಯ ಮೇಲೆ ತೇಲುತ್ತಿರುವ ಜನ ನಾಯಕ ಬಿಎಸ್‌ವೈ

ಅರ್ಧಶತಮಾನದ ಅವಿರತ ಸೇವೆ. ಜನಮಾನಸದಲ್ಲಿ ಅವಿಚ್ಛಿನ್ನ ಸ್ಥಾನ. ಅದರ ಫಲಶ್ರುತಿಯೇ ಇಂದು ಬಿಎಸ್‌ವೈಗೆ ಅಭಿಮಾನೋತ್ಸವದ ಮೂಲಕ ಅಭಿನಂದನೆ.




ಬಿಎಸ್‌ವೈ (ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ) ಸಾರ್ವಜನಿಕ ಜೀವನ ಪ್ರವೇಶಿಸಿ 5 ದಶಕಗಳಾದ ಸಂದರ್ಭದಲ್ಲಿ ಅವರ ಅಭಿಮಾನಿಗಳಿಂದ ಸ್ಮರಣೀಯ ಗೌರವಾರ್ಪಣೆ ಇಂದು (9.5.2026) ಗಂಡು ಮೆಟ್ಟಿದ ನಾಡು ಚಿತ್ರದುರ್ಗದಲ್ಲಿ ಸೇವೆಯನ್ನೇ ಏಕೈಕ ಕೈಂಕರ್ಯವನ್ನಾಗಿಸಿಕೊಂಡಿರುವ ನಾಯಕನಿಗೆ ಸಾರ್ವಜನಿಕರು ಗೌರವಿಸುವ ಅಪರೂಪದ ಪರಿ ಇದು. ಕನ್ನಡಿಗರು ವಿಶಾಲ ಹೃದಯಿಗಳು ಎಂಬುದಕ್ಕೆ ಇದು ಮತ್ತೊಂದು ಸಾಕ್ಷಿ.

ದಕ್ಷಿಣ ಭಾರತದ ಹೆಬ್ಬಾಗಿಲನ್ನು ತಮ್ಮ ಪಕ್ಷಕ್ಕೆ ತೆರೆದ ಅಪರೂಪದ ಸಾಹಸಿ ಬಿಎಸ್‌ವೈ. ಇದು ಸಾಹಸವೂ ಹೌದು ಮತ್ತು ತಂತ್ರಗಾರಿಕೆಯೂ ಹೌದು. ಈ ಸಾಹಸ ಮತ್ತು ತಂತ್ರಗಾರಿಕೆ ಫಲಿಸದೆ ಹೋಗಿದ್ದರೆ ಬಿಜೆಪಿ ಇಂದಿಗೂ ವಿಂಧ್ಯ ಪರ್ವತದ ಆಚೆಗೇ ಸೀಮಿತವಾಗಿ ಉಳಿಯುತ್ತಿತ್ತು. 4 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಿಎಸ್‌ವೈ ಅವರಿಗೆ ತಮ್ಮ ಧ್ಯೇಯೋದ್ದೇಶಗಳನ್ನು ಈಡೇರಿಸಲು ಪೂರ್ಣ ಅವಧಿ ಅವಕಾಶ ದೊರೆಯಲೇ ಇಲ್ಲ. ಆದರೆ ಛಲ ಬಿಡದ ತ್ರಿವಿಕ್ರಮನಂತೆ ತಮ್ಮ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಬಿಎಸ್‌ವೈ ಯಶಸ್ವಿಯಾಗಿದ್ದಾರೆ. ನಾಡಿನ ರೈತರ ಬೆನ್ನೆಲುಬನ್ನು ಭದ್ರಪಡಿಸುವ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಹೆಗ್ಗಳಿಕೆ ಅವರದು. ಸಹಕಾರಿ ಕೃಷಿ ಸಾಲದ ಮೇಲಿನ ಬಡ್ಡಿಯ ಹಿಡಿಕೆ ಮೂಲಕ ರೈತರಿಗೆ ನೆರವಾದ ಬಿಎಸ್‌ವೈ ಕೃಷಿ ಮತ್ತು ನೀರಾವರಿ ಕ್ಷೇತ್ರಗಳ ವಿಸ್ತರಣೆ ಮತ್ತು ಬಲಪಡಿಸುವಿಕೆಗೆ ನೀಡಿರುವ ಕೊಡುಗೆ ದಾಖಲಾರ್ಹ. ನಿಜವಾದ ಅರ್ಥದಲ್ಲಿ ಅವರು ಮಣ್ಣಿನ ಮಗ ಎಂಬುದನ್ನು ನಾಡು ಒಪ್ಪಿದೆ.

ಎನ್ . ಭೃಂಗೀಶ್

ಅರ್ಧಶತಮಾನದ ಕಾಲ ಜನಮಾನಸದಲ್ಲಿ ನಿಜ ನಾಯಕನಾಗಿ ಉಳಿಯುವುದು ಅಷ್ಟು ಸುಲಭವಲ್ಲ. ಬಿಎಸ್‌ವೈ ಈ ಅಸಾಧ್ಯವನ್ನು ಸಾಧ್ಯವಾಗಿಸಿದ್ದಾರೆ. ಜನ ಅದನ್ನು ಮರೆಯದೆ ಸ್ಮರಿಸಿ ಗೌರವಿಸುತ್ತಿದ್ದಾರೆ. 83 ವರ್ಷಗಳ ಸನಿಹವಿರುವ ಯಡಿಯೂರಪ್ಪ ಈಗ ಸಾರ್ವಜನಿಕ ಜೀವನದಲ್ಲಿ ಗಳಿಸಬೇಕಾದದ್ದು ಏನೂ ಇಲ್ಲ. ಆದರೂ ಇಂತಹ ಸಮಾರಂಭ ಈ ಸನ್ನಿವೇಶದಲ್ಲಿ ಏಕೆ ಎಂಬುದು ಬಹು ಚರ್ಚಿತ ವಿಷಯ. ಇದು ಬಿಎಸ್‌ವೈ ಅಭಿಮಾನಿಗಳ ಏಕೈಕ ನಿರ್ಧಾರವೋ ಅಥವಾ ಅವರ ಪಕ್ಷದ ನಿರ್ಧಾರವೋ ಎಂಬುದು ಕೂಡ ಚರ್ಚಿತವಾಗುತ್ತಿದೆ. ಈ ಎರಡು ಕಾರಣಗಳು ಇರಬಹುದು. ಏಕೆಂದರೆ 2021 ರಲ್ಲಿ ದಿಢೀರೆಂದು ಅಧಿಕಾರ ತ್ಯಾಗ ಮಾಡಲು ಒತ್ತಾಯಿಸಿದ ಪಕ್ಷದ ನಾಯಕತ್ವ ಇಂದು ಅದೇ ಬಿಎಸ್‌ವೈ ಅವರನ್ನು ಓಲೈಸುತ್ತಿದೆ. ಬೇಕಾದಾಗ ಬಳಸಿಕೊಳ್ಳುವ, ಬೇಡವಾದಾಗ ದೂರ ಸರಿಸುವ ಜಾಯಮಾನ ರಾಜಕಾರಣದಲ್ಲಿ ಸಾಮಾನ್ಯ ಆದರೂ ಕಹಿ ಭಾವನೆ ತೋರದೆ ಬಿಎಸ್‌ವೈ ಉತ್ಸಾಹದಿಂದ ಭಾಗವಹಿಸುತ್ತಿರುವುದು ವಿಶೇಷ.

# ಅಪಘಾತ ಪ್ರಕರಣದಲ್ಲಿ ತಪ್ಪು ಮಾಹಿತಿ ಕೆಕೆಆರ್‌ಟಿಸಿಗೆ 25 ಸಾವಿರ ರೂ. ದಂಡ

ಸಂ.ಕ. ಸಮಾಚಾರ ಬೆಂಗಳೂರು

ರಸ್ತೆ ಅಪಘಾತ ಪ್ರಕರಣವೊಂದರಲ್ಲಿ ತನ್ನದೇ ತಪ್ಪನ್ನು ಮುಚ್ಚಿಟ್ಟು ತಪ್ಪು ಮಾಹಿತಿ ನೀಡುವ ಮೂಲಕ ನ್ಯಾಯಾಲಯದ ಹಾದಿ ತಪ್ಪಿಸಲು ಪ್ರಯತ್ನಿಸಿದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಕೆಕೆಆರ್‌ಟಿಸಿ)ಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, 25 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದೆ.

ಅಲ್ಲದೆ, ತನ್ನದೇ ಸಿಬ್ಬಂದಿಯ ತಪ್ಪನ್ನು ಒಪ್ಪಿಕೊಂಡು ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಿದ ಬಳಿಕವೂ ಸಂತ್ರಸ್ತರದ್ದೇ ತಪ್ಪು ಎಂಬುದಾಗಿ ದ್ವಂದ್ವ ನಿಲುವು ಪ್ರದರ್ಶನ ಮಾಡುವುದು ನ್ಯಾಯಾಂಗ ಪ್ರಕ್ರಿಯೆಯ ದುರುಪಯೋಗ ಎಂದು ತಿಳಿಸಿದೆ.

ಅಪಘಾತಗಳ ಪರಿಹಾರ ನ್ಯಾಯಾಧೀಕರಣದ ಆದೇಶವನ್ನು ಪ್ರಶ್ನಿಸಿ ಕೆಕೆಆರ್‌ಟಿಸಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಮತ್ತು ನ್ಯಾಯಮೂರ್ತಿ ಡಾ. ಚಿಲ್ಲಕೂರು ಸುಮಲತಾ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದ್ದು, ದಂಡದ ಮೊತ್ತವನ್ನು ದ್ವಂದ್ವ ನಿಲುವಿಗೆ ಕಾರಣರಾದ ಅಧಿಕಾರಿಗಳಿಂದಲೇ ವಸೂಲಿ ಮಾಡಬೇಕು ಎಂದು ಸೂಚನೆ ನೀಡಿದೆ.

ನಿಗಮದ ವಾದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ಅಪಘಾತಕ್ಕೆ ಸಂಬಂಧಿಸಿದಂತೆ ನಿಗಮವು ಈಗಾಗಲೇ ಆಂತರಿಕ ಶಿಸ್ತು ಕ್ರಮ ಕೈಗೊಂಡು, ಅಪಘಾತಕ್ಕೆ ಕಾರಣನಾದ ಗುತ್ತಿಗೆ ಆಧಾರಿತ ಚಾಲಕನನ್ನು ಸೇವೆಯಿಂದ ವಜಾಗೊಳಿಸಿದೆ. ಅಲ್ಲದೆ, ನಿರ್ವಾಹಕನ ವಾರ್ಷಿಕ ವೇತನ ಬಡ್ತಿಯನ್ನು ಕಡಿತಗೊಳಿಸಿದೆ. ಪ್ರಕರಣದಲ್ಲಿ ತನ್ನದೇ ನೌಕರರ ತಪ್ಪು ಎಂದು ಒಪ್ಪಿಕೊಂಡು ಶಿಕ್ಷೆ ನೀಡಿದೆ. ಹೀಗಿದ್ದರೂ ಮೃತರದ್ದೇ ತಪ್ಪು ಎಂದು ಹೈಕೋರ್ಟ್‌ನಲ್ಲಿ ವಾದಿಸಿರುವುದು ಸರಿಯಲ್ಲ. ಒಂದೆಡೆ ನೌಕರರನ್ನು ವಜಾ ಮಾಡಿ, ಮತ್ತೊಂದೆಡೆ ಮೃತ ವ್ಯಕ್ತಿ ಕಾರಣ ಎಂದು ಹೇಳುವುದು ದ್ವಂದ್ವ ನಿಲುವು ಮತ್ತು ಕಾನೂನುಬಾಹಿರ. ಅಲ್ಲದೆ, ನ್ಯಾಯಾಲಯಕ್ಕೆ ಬರುವ ದಾವೆದಾರರು ಶುದ್ಧ ಹಸ್ತದಿಂದ ಬರಬೇಕಾಗಿದ್ದು, ತಪ್ಪು ಮಾಹಿತಿ ನೀಡದಲ್ಲಿ ಯಾವುದೇ ಪರಿಹಾರ ಪಡೆಯುವುದಕ್ಕೆ ಅರ್ಹರಾಗಿರುವುದಿಲ್ಲ. ಈ ರೀತಿಯ ಕ್ರಮ ನ್ಯಾಯಾಂಗ ಪಾವಿತ್ರ್ಯತೆಗೆ ಧಕ್ಕೆ ತರುತ್ತದೆ. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ 25 ಸಾವಿರ ರೂ.ಗಳ ದಂಡ ಪಾವತಿಸಬೇಕು. ದಂಡದ ಮೊತ್ತವನ್ನು ಈ ಮೊಕದ್ದಮೆ ಹೂಡಲು ಕಾರಣರಾದ ಅಧಿಕಾರಿಗಳಿಂದಲೇ ವಸೂಲಿ ಮಾಡಬೇಕೆಂದು ನಿರ್ದೇಶನ ನೀಡಿದೆ.

ಸಂಯುಕ್ತ ಕರ್ನಾಟಕ ಸಂಪಾದಕೀಯ

# ಉಚಿತ ಟಿಕೆಟ್ ಹಾವಳಿಯಿಂದ ಐಪಿಎಲ್ ಶಿಫ್ಟ್: ನಾಚಿಕೆಗೇಡು

ಮೇ 31ರಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್‌ನ ಫೈನಲ್ ಪಂದ್ಯ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂಗೆ ಸ್ಥಳಾಂತರಗೊಂಡಿದೆ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಈ ಪಂದ್ಯ ನಡೆಯಬೇಕಿತ್ತು. ಅದಕ್ಕಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ (ಕೆಎಸ್‌ಸಿಎ) ಈ ಹಿಂದೆಯೇ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ನಿಂದ ಸೂಚನೆಯೂ ಬಂದಿತ್ತು. ಬೆಂಗಳೂರಿನಲ್ಲಿ ಫೈನಲ್ ಪಂದ್ಯ ನಡೆಯುತ್ತದೆ ಎಂದು ಕರ್ನಾಟಕದ ಕ್ರಿಕೆಟ್ ಪ್ರೇಮಿಗಳು ಉನ್ಮತ್ತರಾಗಿದ್ದರು. ಈ ಸಲವೂ ಆರ್‌ಸಿಬಿ ತಂಡ ಫೈನಲ್‌ಗೆ ಹೋಗುತ್ತದೆ, ಅದರ ಆಟವನ್ನು ನಾವು ಆರ್‌ಸಿಬಿಯ ಹೋಂ ಪಿಚ್‌ನಲ್ಲೇ ನೋಡುತ್ತೇವೆ ಎಂಬ ಆಸೆಯಲ್ಲಿದ್ದರು. ಆದರೆ ಬಿಸಿಸಿಐ ಈಗ ಏಕಾಏಕಿ ಫೈನಲ್ ಪಂದ್ಯವನ್ನು ಗುಜರಾತ್‌ಗೆ ಸ್ಥಳಾಂತರ ಮಾಡಿದೆ. ಇದು ಕೆಎಸ್‌ಸಿಎ ಹಾಗೂ ಕರ್ನಾಟಕದ ಕ್ರೀಡಾಭಿಮಾನಿಗಳಿಗೆ ತೀವ್ರ ನಿರಾಸೆ ಉಂಟುಮಾಡಿದೆ. ಶಾಸಕರು ಉಚಿತ ಟಿಕೆಟ್ ಕೇಳಿದ್ದಕ್ಕೆ ಬಿಸಿಸಿಐ ಈ ನಿರ್ಧಾರ ಕೈಗೊಂಡಿದೆ ಎಂದು ಮೊದಲು ವರದಿಯಾದಾಗ ರಾಜ್ಯ ಸರ್ಕಾರ ಅದನ್ನು ನಿರಾಕರಿಸಿತ್ತು. ಈಗ ಬಿಸಿಸಿಐ ಈ ಬಗ್ಗೆ ಸ್ಪಷ್ಟನೆ ನೀಡಿ, ಹತ್ತು ಸಾವಿರ ಹೆಚ್ಚುವರಿ ಉಚಿತ ಟಿಕೆಟ್ ಕೇಳಿದ್ದರಿಂದಲೇ ಪಂದ್ಯವನ್ನು ಸ್ಥಳಾಂತರ ಮಾಡಿದ್ದೇವೆ ಎಂದು ತಿಳಿಸಿದೆ. ಶಾಸಕರು ಹಾಗೂ ರಾಜ್ಯ ಸರ್ಕಾರಕ್ಕೆ ಟಿಕೆಟ್ ಕೊಡಬೇಕು ಎಂಬ ಸೂಚನೆ ನಮಗೆ ಅಚ್ಚರಿ ಉಂಟುಮಾಡಿದೆ ಎಂದು ಬಿಸಿಸಿಐನ ಕಾರ್ಯದರ್ಶಿ ಹೇಳಿದ್ದಾರೆ. ಆದ್ದರಿಂದ ಪಂದ್ಯವು ಬೆಂಗಳೂರಿನಿಂದ ಗುಜರಾತಿಗೆ ಸ್ಥಳಾಂತರಗೊಂಡಿದ್ದಕ್ಕೆ ಕಾರಣವೇನು ಎಂಬ ಬಗ್ಗೆ ಇನ್ನೇನೂ ಅನುಮಾನವಿಲ್ಲ.

> ಕ್ರೀಡೆಯಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ಅತಿಯಾದರೆ ಏನಾಗುತ್ತದೆ ಎಂಬುದಕ್ಕೆ ಇದು ಇನ್ನೊಂದು ನಿದರ್ಶನ. ನಷ್ಟ ಅನುಭವಿಸಿದ್ದು ಕರ್ನಾಟಕದ ಕ್ರಿಕೆಟ್ ಪ್ರೇಮಿಗಳು.

ಚಿನ್ನಸ್ವಾಮಿ ಕ್ರಿಕೆಟ್ ಸ್ಟೇಡಿಯಂನಲ್ಲಿ 33000 ಆಸನಗಳಿವೆ. ಅದರಲ್ಲಿ ಶೇ.15ರಷ್ಟು ಟಿಕೆಟ್‌ಗಳನ್ನು ಕೆಎಸ್‌ಸಿಎಗೆ ಉಚಿತವಾಗಿ ಬಿಸಿಸಿಐ ನೀಡುತ್ತದೆ. ಏಕೆಂದರೆ ಪಂದ್ಯ ಆಯೋಜಿಸುವವರು ಸ್ಥಳೀಯ ಕ್ಲಬ್‌ಗಳಿಗೆ ಹಾಗೂ ಕೆಲ ವಿಐಪಿಗಳಿಗೆ ಉಚಿತ ಟಿಕೆಟ್ ನೀಡಬೇಕಾಗುತ್ತದೆ. ಆದರೆ ಇತ್ತೀಚೆಗೆ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ಶಾಸಕರು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯುವ ಐಪಿಎಲ್ ಹಾಗೂ ಇನ್ನಿತರ ಎಲ್ಲಾ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಗೂ ಶಾಸಕರಿಗೆ ತಲಾ ನಾಲ್ಕು ಉಚಿತ ಟಿಕೆಟ್‌ಗಳನ್ನು ನೀಡಬೇಕೆಂದು ಬೇಡಿಕೆ ಇರಿಸಿದ್ದರು. ಕೊನೆಗೆ, ಪ್ರತಿ ಶಾಸಕರಿಗೆ ಎರಡು ಉಚಿತ ಟಿಕೆಟ್‌ಗಳನ್ನು ನೀಡುವಂತೆ ಸರ್ಕಾರ ಸೂಚನೆ ನೀಡಿತ್ತು. ಅದಕ್ಕೆ ಕೆಎಸ್‌ಸಿಎ ಕೂಡ ಒಪ್ಪಿತ್ತು. ಆ ಉಚಿತ ಟಿಕೆಟ್ ಯಾರು ಕೊಡುತ್ತಾರೆ ಎಂಬ ಬಗ್ಗೆ ಗೊಂದಲವಿತ್ತು. ಒಮ್ಮೆ ಬಿಸಿಸಿಐ ಕೊಡಬೇಕೆಂದೂ, ಇನ್ನೊಮ್ಮೆ ಕೆಎಸ್‌ಸಿಎ ನೀಡುತ್ತದೆ ಎಂದೂ, ಮಗದೊಮ್ಮೆ ಆರ್‌ಸಿಬಿ ನೀಡುತ್ತದೆ ಎಂದೂ ಹೇಳಲಾಗುತ್ತಿತ್ತು. ಈ ಮಧ್ಯೆ ನಡೆದ ಕೆಲ ಪಂದ್ಯಗಳಿಗಾಗಿ ಕೆಎಸ್‌ಸಿಎ ಶೇ.15ಕ್ಕಿಂತ ಹೆಚ್ಚು ಉಚಿತ ಟಿಕೆಟ್‌ಗಳನ್ನು ಬಿಸಿಸಿಐನಿಂದ ಪಡೆದುಕೊಂಡಿದೆ ಎಂದು ಸ್ವತಃ ಬಿಸಿಸಿಐ ಹೇಳಿದೆ. ಅದರ ಬಗ್ಗೆ ಕೆಎಸ್‌ಸಿಎ ಬಳಿ ಬಿಸಿಸಿಐ ಸ್ಪಷ್ಟನೆ ಕೇಳಿದಾಗ, ಶಾಸಕರಿಗೆ ನೀಡಬೇಕಾದ ಉಚಿತ ಟಿಕೆಟ್‌ಗಳೂ ಸೇರಿದಂತೆ ಇನ್ನಿತರ ಅಗತ್ಯಗಳ ಬಗ್ಗೆ ಮಾಹಿತಿ ನೀಡಿದೆ. ಅದನ್ನು ಕಂಡು ಬಿಸಿಸಿಐಗೆ ಅಚ್ಚರಿಯಾಗಿದೆಯಂತೆ. ಅಂದರೆ ಬೇರಾವ ರಾಜ್ಯಗಳ ಕ್ರಿಕೆಟ್ ಸಂಸ್ಥೆಗಳಲ್ಲೂ ಶಾಸಕರು ಉಚಿತ ಟಿಕೆಟ್‌ಗೆ ದುಂಬಾಲು ಬೀಳುವ ವ್ಯವಸ್ಥೆಯಿಲ್ಲ ಎಂದಾಯಿತು. ಹಾಗಿದ್ದರೆ ಕರ್ನಾಟಕದ ಶಾಸಕರಿಗೆ ಏಕೆ ಇಂತಹ ವಿಐಪಿ ಟ್ರೀಟ್‌ಮೆಂಟ್ ಸಿಗಬೇಕು? ಶಾಸಕರು ವಿಧಾನಮಂಡಲದಲ್ಲಿ ಉಚಿತ ಟಿಕೆಟ್‌ಗಾಗಿ ತೋರಿದ ಒಗ್ಗಟ್ಟು ಹಾಗೂ ನಂತರ ಅವರ ಪಿಎಗಳು ವಿಧಾನಸೌಧದಲ್ಲಿ ಉಚಿತ ಟಿಕೆಟ್‌ನ ಶಿಫಾರಸು ಪತ್ರಕ್ಕಾಗಿ ಕ್ಯೂ ನಿಂತಿದ್ದನ್ನು ನೋಡಿ ರಾಜ್ಯದ ಜನಸಾಮಾನ್ಯರು ಅತೀವ ಬೇಸರ ವ್ಯಕ್ತಪಡಿಸಿದ್ದರು. ಹಣ ಕೊಟ್ಟು ಕ್ರಿಕೆಟ್ ಪಂದ್ಯದ ಟಿಕೆಟ್ ಖರೀದಿಸಲು ಆಗದಷ್ಟು ದಾರಿದ್ರ್ಯ ಶಾಸಕರಿಗೆ ಬಂದಿದೆಯೇ ಎಂದು ಪ್ರಶ್ನಿಸಿದ್ದರು. ಆದರೆ ಅದ್ಯಾವುದನ್ನೂ ಲೆಕ್ಕಿಸದೆ ಬಹುತೇಕ ಶಾಸಕರು ಐಪಿಎಲ್ ಟಿಕೆಟ್‌ಗೆ ಮುಗಿಬಿದ್ದಿದ್ದರು. ಕೆಲವೇ ಶಾಸಕರು ತಮಗೆ ಟಿಕೆಟ್ ಬೇಡ ಎಂದಿದ್ದರು. ಮೊದಲಿಗೆ ಮುಗುಮ್ಮಾಗಿ ಟಿಕೆಟ್ ಪಡೆದ ವಿಪಕ್ಷದ ಕೆಲ ಶಾಸಕರು ಕೂಡ ನಂತರ ಜನರ ವಿರೋಧವನ್ನು ಗಮನಿಸಿ ಉಚಿತ ಟಿಕೆಟ್‌ಗೆ ತಮ್ಮ ವಿರೋಧವಿದೆ ಎಂದು ಹೇಳತೊಡಗಿದರು. ಅದೆಲ್ಲ ಮುಗಿದ ಅಧ್ಯಾಯ. ಈಗ ಇರುವುದು ಜ್ವಲಂತ ಪ್ರಶ್ನೆ. ಉಚಿತ ಟಿಕೆಟ್ ಹಾವಳಿಯಿಂದಾಗಿ ರಾಜ್ಯದಲ್ಲಿ ನಡೆಯಬೇಕಾದ ಮಹತ್ವದ ಪಂದ್ಯಗಳು ಬೇರೆಡೆಗೆ ಸ್ಥಳಾಂತರವಾಗುತ್ತವೆ ಎಂದಾದರೆ ಈ ಸಂಸ್ಕೃತಿ ಮುಂದುವರೆಯಬೇಕೇ? ರಾಜ್ಯ ಸರ್ಕಾರ ಖಚಿತ ನಿಲುವು ತಾಳಿ, ಸಮಸ್ಯೆ ಬಗೆಹರಿಸಲಿ. ರಾಜಕಾರಣಿಗಳ ಚಪಲಕ್ಕೆ ಕ್ರೀಡೆ ಸೋಲಬಾರದು. ■

# ಮುಹೂರ್ತ ನೋಡಿ ಕುರ್ಚಿಯ ಮೇಲೆ ಕೂಡು

ತಾರಾತಿಗಡಿ
ನರಸಿಂಹ ಪುಲಿಹೈದರ್
ಮುಖ್ಯ ವರದಿಗಾರ

ಅಬ್ಬ..! ಆ ತಮಿಳಿನ ವಿಜ್ಯಪ್ಪನನ್ನು ನೋಡಿ ಕಲಿಯಿರಿ..ಆತ ಲಗ್ನವಾಗದವರಿಗೆ ಲಗ್ನ ಮಾಡಿಸುತ್ತೇನೆ ಎಂದು ಹೇಳಿದ್ದಾನೆ. ಲಗ್ನವಾದರೆ ಬಂಗಾರ ಕೊಡುತ್ತೇನೆ. ಸಂಸಾರ ಮಾಡಲು ಸಿಲಿಂಡರ್ ಕೊಡುತ್ತೇವೆ.ಸಿಲಿಂಡರ್ ಬೇಡ ಅಂದವರಿಗೆ ಹಸಿ ಕಟ್ಟಿಗೆ ತುಂಡು ಮಾಡಿ ಕೊಡುತ್ತೇನೆ. ಹೊಗೆ ಆದರೆ ಬೀಸಣಿಗೆ ತೆಗೆದುಕೊಂಡು ಗಾಳಿ ಬೀಸುತ್ತೇನೆ. ಚಳಿ ಆದರೆ ರಗ್ಗು ತಂದು ಕೊಡುತ್ತೇನೆ. ನಿಮಗೆ ಅಡ್ಡಾಡುವ ಹಾಗೆ ಆದರೆ ಅಡ್ಡಾಡಿಸುತ್ತೇನೆ...ಕೂಡುವ ಹಾಗಾದರೆ ಕೂಡಿಸುತ್ತೇನೆ ಹೀಗೆ ಒಂದೇ ಎರಡೇ..ಎಲ್ಲವನ್ನು ಕೊಡಿಸುತ್ತೇನೆ ಎಂದು ಹೇಳಿದ್ದಕ್ಕೆ ಈಗ ಕುರ್ಚಿ ಮೇಲೆ ಕೂಡಲು ಹೊರಟಿದ್ದಾನೆ. ಎಂದು ಮೇಕಪ್ ಮರೆಮ್ಮ ಆತನನ್ನು ಹಾಡಿ ಹೊಗಳುತ್ತಿದ್ದಳು. ನಡುವೆ ಬಾಯಿ ಹಾಕಿದ ಕರಿಭಾಗೀರತಿ ಹಾಗಾದರೆ ಆತ ಇನ್ನೂ ಯಾಕೆ ಕುರ್ಚಿ ಮೇಲೆ ಕುಳಿತಿಲ್ಲ ಎಂದು ಕೇಳಿದರೆ ಅದಕ್ಕೆ ಮೇಕಪ್ ಮರೆಮ್ಮ ಅದಕ್ಕೆಲ್ಲ ಮಹೂರ್ತ, ಗಳಿಗೆ ನೋಡಬೇಕು..ಸುಮ್ಮನೇ ಹೋಗಿ ಕೂಡಬಾರದು ಅಂದಳು. ಮದ್ರಾಮಣ್ಣನವರೇನು ಮಹೂರ್ತ ನೋಡಿದ್ದರೆ..? ಏನೂ ಇಲ್ಲವಲ್ಲ ಅಂದಾಗ..ಅಹುದಹುದು ಅದಕ್ಕೆ ಈಗ ಗೋಟ್ಯಾಳ ಆಗುತ್ತಿದೆ...ಅದಕ್ಕೆ ನಾನು ವಿಜ್ಯಪ್ಪನಿಗೆ ಹೇಳಿದ್ದೇನೆ. ಮಹೂರ್ತ ನೋಡಿ ಕುರ್ಚಿ ಮೇಲೆ ಕೂಡು ಅಂತ...ನೀವು ಏನೇ ಹೇಳಿ ಆ ವಿಜ್ಯಪ್ಪ ಮಾತ್ರ ಅಂತ ಮೇಕಪ್ ಮರೆಮ್ಮ ಮತ್ತೆ ಆತನನ್ನು ಹೊಗಳ ತೊಡಗಿದಳು. ಅಯ್ಯೋ ನಿನಗಿಂತ ನಂಗೆ ಕ್ಲೋಸು ಅವನು ಎಂದು ಕಂಟ್ರಂಗಮ್ಮತ್ತಿ ಹೇಳಿದಳು. ನಿನ್ನೆ ಕಾಲ್ ಮಾಡಿ ಏನತ್ತಿ? ಅಂತ ಮಾತಾಡಿದ...ಚುನಾವಣೆ ಬರುವುದಕ್ಕಿಂತ ಮುಂಚೆ ನಾನು ಅವನಿಗೆ ಹೇಳಿದ್ದೆ.. ಅದರಂತೆ ಮಾಡಿದ ಅಂದಳು. ಏನು ಕೇಳಿದ? ನೀನೇನು ಹೇಳಿದೆ ಅಂದಾಗ...ನೀನು ಕಂಟಿದುರುಗಮ್ಮನನ್ನು ನೆನಪಿಸಿಕೊಂಡು ಮಲಗಿಕೋ ಎಂದು ಹೇಳಿದ್ದೆ. ಅದರಂತೆ ಅವನು ಮಾಡಿದ..ಅವತ್ತು ರಾತ್ರಿ ಕಂಟಿದುರುಗಮ್ಮ ಆತನ ಕನಸಿನಲ್ಲಿ ಬಂದು...ನೀನು ಕೊಡು ಕೇಳಿದ್ದು ಕೊಡು ಅಂದರೆ ನಾನು ನಿನಗೆ ಕುರ್ಚಿ ಕೊಡುತ್ತೇನೆ ಎಂದು ಹೇಳಿದ ಹಾಗೆ ಆಯಿತಂತೆ...ಅದಕ್ಕೆ ಅವನು ಅದರಂತೆ ಮಾಡಿದ..ಕುರ್ಚಿಯಂತೂ ಪಡೆದಿದ್ದಾನೆ ಎಂದು ಅಂದು ಸ್ವಲ್ಪ ಹೊತ್ತು ಸುಮ್ಮನಿದ್ದು ನಂತರ...ಇಲ್ಲಿನವರಿಗೂ ನಾನು ಹೇಳುತ್ತೇನೆ ಎಂದು ಅಂದಾಗ..ಹಾಗೆ ಮಾಡಿ..ಹಾಗೆ ಮಾಡಿ ಎಂದು ಎಲ್ಲರೂ ಒಕ್ಕೊರಲಿನಿಂದ ಹೇಳಿದರು. ■

75 ವರ್ಷಗಳ ಹಿಂದೆ.. ಅಮೃತ ಸಮಾಚಾರ 09-05-1951 ಬುಧವಾರ

## ಸುಂಕ ಮಂಡಳದ ಸಲಹೆ ಬಂಧನಕಾರಿಯಲ್ಲ

**ಹೊಸದಿಲ್ಲಿ 8–** ಶಾಶ್ವತವಾದ ಸುಂಕ ಮಂಡಳವೊಂದನ್ನು ರಚಿಸಲು ಸರಕಾರಕ್ಕೆ ಅಧಿಕಾರ ಕೊಡಬೇಕೆಂಬ ಮಸೂದೆಯನ್ನು ಪಾರ್ಲಿಮೆಂಟು ಇಂದು ಪರಿಶೀಲಕ ಸಮಿತಿಗೆ ಒಪ್ಪಿಸಿತು. ಶ್ರೀ ರಾಮನಾಥ ಗೋಯೆಂಕಾರು ನಿನ್ನಿನ ತಮ್ಮ ಭಾಷಣವನ್ನು ಮುಂದುವರಿಸಿ ಸರಕಾರವು ಸುಂಕದ ಮಂಡಳದ ಸೂಚನೆಗಳನ್ನು ಎರಡು ತಿಂಗಳಲ್ಲಿ ಕಾರ್ಯಕಾರಿಯಾಗಿಸಬೇಕು ಎಂದು ಆರ್ಥಿಕ ಸಮಿತಿಯು ಮಾಡಿದ ಸೂಚನೆಯನ್ನು ಈ ಮಸೂದೆಯಲ್ಲಿ ಸೇರಿಸಬೇಕು. ಯಾವದೊಂದು ಉದ್ಯೋಗವನ್ನು ದೇಶದ ಒಂದು ಆರ್ಥಿಕ ವಿಭಾಗದಿಂದ ಇನ್ನೊಂದು ಆರ್ಥಿಕ ವಿಭಾಗಕ್ಕೆ ಸ್ಥಾನಾಂತರಿಸುವ ಕುರಿತು ಸಲಹೆ ನೀಡಲು ಈ ಸುಂಕ ಮಂಡಳಕ್ಕೆ ಅಧಿಕಾರವಿರಬೇಕು ಎಂದು ಹೇಳಿದರು.

## ಸೋಮನಾಥ ಮೂರ್ತಿ ಪ್ರತಿಷ್ಠಾಪನೆ

**ಪ್ರಭಾಸಪಟ್ಟಣ ತಾ. 8–** ಸುಪ್ರಸಿದ್ಧ ಸೋಮನಾಥ ದೇವಾಲಯದ ಮೂರ್ತಿ ಪ್ರತಿಷ್ಠಾಪನೆಯ ಪ್ರಾಸ್ತಾವಿಕ ಕ್ರಿಯೆಗಳು ಇಂದಿನಿಂದ ಪ್ರಾರಂಭವಾದವು. ದೇವಾಲಯದ ಸಮೀಪದಲ್ಲಿ ಸಮುದ್ರತೀರದಲ್ಲಿ ರಚಿತವಾದ ವಿಸ್ತೃತವಾದ ವ್ಯಾಸಪೀಠದ ಮೇಲೆ 160 ಪಂಡಿತರು ವೇದ ಘೋಷಗಳನ್ನು ಪ್ರಾರಂಭಿಸಿದರು.

# ಗೌರ್ನರ್ ಹೆಜ್ಜೆ ಸರಿ–ಆದರೆ ಗೆಜ್ಜೆಯಲ್ಲಿ ದೋಷ

ನಾ ಕಂಡ ನಿಜ
ಹುಣಸವಾಡಿ ರಾಜನ್

> ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಟಿವಿಕೆಗೆ ಸರ್ಕಾರ ರಚನೆಗೆ ಮಾತಿನ ಮೂಲಕ ಆಹ್ವಾನ ಕೊಡುವ ವಿಚಾರದಲ್ಲಿ ರಾಜ್ಯಪಾಲರ ನಿಲುವು ಸರಿ. ಆದರೆ, ಇದನ್ನು ಲಿಖಿತ ರೂಪದಲ್ಲಿ ಕೊಡಬೇಕಾದರೆ ಸರ್ಕಾರ ರಚನೆಗೆ ಬೆಂಬಲಿಸುವ ಬೇರೆ ಪಕ್ಷಗಳ ಶಾಸಕರ ಕಡೆಯಿಂದ ಅಧಿಕೃತ ಸಮ್ಮತಿ ಪತ್ರದ ಷರತ್ತು.

ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಖಚಿತ ಬಹುಮತ ಬಾರದೆ ತ್ರಿಶಂಕು ಪರಿಸ್ಥಿತಿ ಸೃಷ್ಟಿಯಾದರೆ ಆಗ ತಲೆದೋರುವ ಬಿಕ್ಕಟ್ಟಿಗೆ ಅಳತೆಯೂ ಇಲ್ಲ ಆಯಾಮವಂತೂ ಮೊದಲೇ ಇಲ್ಲ. ಏಕೆಂದರೆ, ಇದೇ ಸರಿ ಎಂದು ಹೇಳುವ ಸ್ಥಿತಿಯಲ್ಲಿ ಯಾರೊಬ್ಬರೂ ಇರುವುದಿಲ್ಲ. ಎಲ್ಲರದೂ ಭಾವ ಭಕುತಿಗೆ ಸೀಮಿತವಾದ ನಿಲುವು. ಸಂವಿಧಾನದಲ್ಲಿ ಇಂತಹ ಪರಿಸ್ಥಿತಿಯ ನಿವಾರಣೆಗಿರುವ ಸೂತ್ರದ ಜಾರಿಯಲ್ಲಿಯೂ ಕೂಡಾ ಗೊಂದಲ ಇರುವ ನಿದರ್ಶನಗಳೇ ಹೆಚ್ಚು. ಸುಪ್ರೀಂಕೋರ್ಟಿನ ತೀರ್ಪನ್ನು ಜಾರಿಗೆ ತರಲು ಹೊರಟಾಗಲೂ ಪೂರ್ವ ನಿದರ್ಶನಗಳ ಪರಿಸ್ಥಿತಿ ಬದಲಾಗಿರುವುದು ಈಗಿನ ನಿಲುವು ಸ್ಪಷ್ಟವಾಗದಿರಲು ಒಂದು ಕಾರಣ. ಇದರ ಒಟ್ಟಾರೆ ಪರಿಣಾಮವೆಂದರೆ ಬಲವಿದ್ದವನೇ ಭಾಗ್ಯಶಾಲಿ.

ತಮಿಳುನಾಡಿನಲ್ಲಿ ಪ್ರಸ್ತುತ ತಲೆದೋರಿರುವ ಬಿಕ್ಕಟ್ಟಿನ ವಿಚಾರದಲ್ಲಿ ಸಾರ್ವತ್ರಿಕವಾಗಿ ಚರ್ಚೆಯಾಗುವ ವಿಚಾರವೆಂದರೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೆಕರ್ ಕೈಗೊಂಡಿರುವ ಕ್ರಮ. ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಟಿವಿಕೆಗೆ ಸರ್ಕಾರ ರಚನೆಗೆ ಮಾತಿನ ಮೂಲಕ ಆಹ್ವಾನ ಕೊಡುವ ವಿಚಾರದಲ್ಲಿ ರಾಜ್ಯಪಾಲರ ನಿಲುವು ಸರಿ. ಆದರೆ, ಇದನ್ನು ಲಿಖಿತ ರೂಪದಲ್ಲಿ ಕೊಡಬೇಕಾದರೆ ಸರ್ಕಾರ ರಚನೆಗೆ ಬೆಂಬಲಿಸುವ ಬೇರೆ ಪಕ್ಷಗಳ ಶಾಸಕರ ಕಡೆಯಿಂದ ಅಧಿಕೃತ ಸಮ್ಮತಿ ಪತ್ರದ ಷರತ್ತು. ನಿಜ. ರಾಜ್ಯಪಾಲರ ಈ ಷರತ್ತು ಹಲವರ ದೃಷ್ಟಿಯಲ್ಲಿ ಹಲವು ರೀತಿಯ ಸಾಧ್ಯಾಸಾಧ್ಯತೆಗಳಿಗೆ ಪ್ರೇರಕ. ಕೆಲವರಂತೂ ಇದರ ಹಿಂದೆ ಪಿತೂರಿಯನ್ನು ಗುರುತಿಸಿರುವುದೂ ಉಂಟು. ಇತ್ತೀಚಿನ ವರದಿಗಳನ್ನು ನೋಡಿದರೆ ಎಲ್ಲವೂ ಸುಗಮ ಎಂಬಂತೆ ಭಾಸವಾಗುತ್ತಿದೆ.

ಟಿವಿಕೆ ಪಕ್ಷದ ನಾಯಕ ಹಾಗೂ ಚುನಾವಣೆಯಲ್ಲಿ ಜಯಭೇರಿ ಹೊಡೆಯಲು ಕಾರಣವಾಗಿರುವ ವಿಜಯ್ ಸರ್ಕಾರ ರಚನೆ ಸಂಬಂಧದಲ್ಲಿ ಮೂರು ಬಾರಿ ರಾಜ್ಯಪಾಲರ ಜೊತೆ ಸಮಾಲೋಚಿಸಿದ್ದರೂ ನಿಶ್ಚಿತ ಪ್ರಮಾಣದ ಪರಿಹಾರ ಹೊರಬೀಳದಿರುವುದು ಮುಂದೇನು ಎಂಬ ಕುತೂಹಲಕ್ಕೆ ಕಾರಣ. ಹಾಗೆ ನೋಡಿದರೆ, ಸರ್ಕಾರ ರಚನೆಗೆ ಅಗತ್ಯವಿರುವ 234 ಸದಸ್ಯ ಬಲದ ವಿಧಾನಸಭೆಯಲ್ಲಿ 118 ಶಾಸಕರ ಬೆಂಬಲ ಅತ್ಯಗತ್ಯ. ಟಿವಿಕೆಗೆ ಈಗಿರುವುದು 107 ಶಾಸಕರ ಬಲ. ಬಾಕಿ ಉಳಿದಿರುವ 11 ಶಾಸಕರ ಬೆಂಬಲದ ಸಮ್ಮತಿ ಪತ್ರ ಕೊಟ್ಟರೆ ರಾಜ್ಯಪಾಲರ ಷರತ್ತು ಈಡೇರಿಸಿದಂತೆ. ಆಯಾರಾಂ ಗಯಾರಾಂ ರಾಜಕಾರಣದ ಕಾಲದಲ್ಲಿ ರಾಜ್ಯಪಾಲರು ಹಾಕಿರುವ ಷರತ್ತಿಗೆ ಅರ್ಥವುಂಟು. ಬೆಂಬಲ ಘೋಷಿಸಲು ಮುಂದಾಗಿರುವ ಕಾಂಗ್ರೆಸ್, ಕಮ್ಯುನಿಸ್ಟ್ ಹಾಗೂ ಇನ್ನಿತರ ಪಕ್ಷಗಳು ಸಮ್ಮತಿ ಪತ್ರವನ್ನು ಮೊದಲೇ ವಿಜಯ್‌ಗೆ ಕೊಟ್ಟಿದ್ದರೆ ಈ ವಿವಾದ ಸೃಷ್ಟಿಯಾಗುತ್ತಲೇ ಇರಲಿಲ್ಲ. ಕೆಲವರು ಹೇಳುವಂತೆ ವಿಜಯ್ ಬಣದ ಅನುಭವ ಇಲ್ಲದಿರುವುದೇ ಇದಕ್ಕೆ ವಿಜಯ್ ಅವರು ಇದೀಗ ಪ್ರಕಟಿಸಿರುವಂತೆ 121 ಶಾಸಕರು ಬೆಂಬಲಿಸುವ ಸಮ್ಮತಿ ಪತ್ರಗಳು ನಮಗೆ ಸಿಕ್ಕಿವೆ ಎಂದು ಹೇಳಿರುವುದು ಸರ್ಕಾರ ರಚನೆ ಹಾದಿ ಸುಗಮ ಎಂಬಂತೆ ಕಾಣಿಸುತ್ತಿದೆ.

ಈ ಹಿಂದೆ ಕರ್ನಾಟಕದಲ್ಲಿ 2004ರಲ್ಲಿ ವಿಧಾನಸಭೆಯಲ್ಲಿ ಬಿಜೆಪಿ 79 ಸ್ಥಾನಗಳನ್ನು ಗಳಿಸಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆಗ ರಾಜ್ಯಪಾಲರು ಶಾಸಕಾಂಗ ಪಕ್ಷದ ನಾಯಕ ಯಡಿಯೂರಪ್ಪ ಅವರನ್ನು ಸರ್ಕಾರ ರಚಿಸಲು ಆಹ್ವಾನ ನೀಡಿದ್ದರು. ಆದರೆ, ಬಹುಮತ ಸಾಬೀತು ಪಡಿಸಲು ಸಾಧ್ಯವಾಗದೆ ಯಡಿಯೂರಪ್ಪನವರು ತಮ್ಮ ಸ್ಥಾನದಿಂದ ಇಳಿದರು. ಇದೇ ರೀತಿಯ ಪ್ರಸಂಗಗಳು ಬೇರೆ ರಾಜ್ಯಗಳಲ್ಲೂ ಜರುಗಿವೆ. ಕೇಂದ್ರದಲ್ಲಿ ವಾಜಪೇಯಿ ನೇತೃತ್ವದ ಬಿಜೆಪಿ ಲೋಕಸಭೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದಾಗ ರಾಷ್ಟ್ರಪತಿಗಳು ಸರ್ಕಾರ ರಚನೆಗೆ ಆಹ್ವಾನ ನೀಡಿದರೂ ಬಹುಮತ ಸಾಬೀತುಪಡಿಸಲಾಗದೆ ವಾಜಪೇಯಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ರಾಜ್ಯಪಾಲರಿಗೆ ಬಹುಶಃ ನಿದರ್ಶನವಾಗಿರಬಹುದು. ಬಾಯಿ ಮಾತಿನ ಬೆಂಬಲವನ್ನು ಆಧರಿಸದೆ ಲಿಖಿತ ರೂಪದಲ್ಲಿ ಬೆಂಬಲ ಸಾಬೀತುಪಡಿಸುವ ವಿಧಾನವನ್ನು ಅನುಸರಿಸುವುದು ಸೂಕ್ತ ಎಂಬ ನಿಲುವಿಗೆ ತಮಿಳುನಾಡಿನ ರಾಜ್ಯಪಾಲ ಅರ್ಲೆಕರ್ ಬಂದಿದ್ದರೆ ಅದನ್ನು ಆಕ್ಷೇಪಿಸುವಂತಿಲ್ಲ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಅಧಿಕಾರ ಕೈತಪ್ಪಿ ಹೋದ ನಂತರ ರೇಸಿನಲ್ಲಿ ಸೋತ ಕುದುರೆಗಳಂತಾಗಿರುವ ಅಣ್ಣಾ ಡಿಎಂಕೆ ಹಾಗೂ ಡಿಎಂಕೆ ಪಕ್ಷಗಳು ಹೊಸ ಸರ್ಕಾರ ರಚನೆ ಸಾಧ್ಯತೆಯನ್ನು ಹಿಮ್ಮೆಟ್ಟಿಸಿ ಅದೃಷ್ಟ ಖುಲಾಯಿಸಿದರೆ ಸರ್ಕಾರ ರಚಿಸುವ ಯತ್ನದ ಕಡೆ ಹೆಜ್ಜೆ ಹಾಕುತ್ತಿರುವುದು ರಾಜಕಾರಣದಲ್ಲಿ ಶಾಶ್ವತ ವೈರಿಗಳೂ ಇಲ್ಲ ಶಾಶ್ವತ ಗೆಳೆಯರೂ ಇಲ್ಲ ಎಂಬ ಮಾತಿಗೆ ನಿದರ್ಶನ. ದಶಕಗಳಿಂದ ವೈರತ್ವದಿಂದ ಕತ್ತಿ ಮಸೆಯುತ್ತಿದ್ದ ಇವೆರಡೂ ಪಕ್ಷಗಳು ಈಗ ಮೈತ್ರಿ ಸರ್ಕಾರ ರಚನೆಗೆ ಸಾಣೆ ಮಸೆಯುತ್ತಿರುವುದು ಸಹಜವಾಗಿಯೇ ವಿಜಯ್ ಮಿತ್ರ ಮಂಡಳಿಯ ಹೊಟ್ಟೆಯಲ್ಲಿ ಅವಲಕ್ಕಿ ಕುಟ್ಟಿದಂತಾಗಿದ್ದರೆ ಅದು ಸಹಜ. ಇದಲ್ಲದೆ ಇಂತಹ ಡೋಲಾಯಮಾನ ಪರಿಸ್ಥಿತಿಯನ್ನು ಬಳಸಿಕೊಂಡು ಸರ್ಕಾರ ರಚನೆ ಸಾಧ್ಯವಾಗದೇ ಹೋದಾಗ ರಾಷ್ಟ್ರಪತಿ ಆಡಳಿತ ಹೇರುವ ಬ್ರಹ್ಮಾಸ್ತ್ರ ಪ್ರಯೋಗಕ್ಕೆ ಬಿಜೆಪಿ ಮಿತ್ರ ಮಂಡಳಿಯವರು ಲೆಕ್ಕ ಹಾಕಿದರೆ ಶಕ್ತಿ ರಾಜಕಾರಣದಲ್ಲಿ ಅದು ಸಹಜವೇ. ಏನೇ ಆದರೂ ತಮಿಳುನಾಡಿನ ಈಗಿನ ಸ್ಥಿತಿ ಒಂದು ಅರ್ಥವಾಗದ ಒಗಟು.

ಈಗಿರುವಂತೆ ಸರ್ಕಾರ ರಚನೆಗೆ ರಾಜ್ಯಪಾಲರು ಮುಂದಿಟ್ಟಿರುವ ಷರತ್ತುಗಳನ್ನು ಪೂರೈಸಿ ಭಾನುವಾರದ ಒಳಗೆ ಸರ್ಕಾರ ರಚಿಸುವಲ್ಲಿ ವಿಜಯ್ ಯಶಸ್ವಿಯಾಗಬೇಕು. ಹಾಗಾಗದಿದ್ದರೆ ತುಪ್ಪದಲ್ಲಿ ರೊಟ್ಟಿ ಜಾರಿ ತುಪ್ಪಕ್ಕೆ ಬೀಳುವಂತಹ ಸ್ಥಿತಿಗೆ ಡಿಎಂಕೆ ಹಾಗೂ ಅಣ್ಣಾ ಡಿಎಂಕೆ ಪಕ್ಷಗಳು ಕಾಯುತ್ತಿವೆ. ಮುಂದೆ ದೊಡ್ಡಾಟ ಇರುವುದು ಖಾತರಿ ಇದ್ದರೂ ಸದ್ಯದಲ್ಲಿ ಅಧಿಕಾರ ಅನುಭವಿಸುವ ಏಕೈಕ ಉದ್ದೇಶದಿಂದ ಸರ್ಕಾರ ರಚನೆಗೆ ಜೈ ಎನ್ನುವುದಂತೂ ಖಂಡಿತ. ಇಂತಹ ಬೆಳವಣಿಗೆಯಿಂದ ಅನಾಥವಾಗುವುದು ವಿಧಾನಸಭೆ ಚುನಾವಣೆಯಿಂದ ಸೃಷ್ಟಿಯಾದ ಹೊಸ ಜನಾದೇಶ. ಇತಿಹಾಸ ಸೃಷ್ಟಿಸುವ ರೀತಿಯಲ್ಲಿ ವಿಜಯ್ ನಾಯಕತ್ವಕ್ಕೆ ತಮಿಳುನಾಡಿನ ಜನ ಬೆಂಬಲಿಸಿರುವ ರೀತಿ ನಿರರ್ಥಕ ಎನ್ನುವ ಭಾವನೆ ಮೂಡಿಸಿದರೂ ಸತ್ಯಕ್ಕೆ ಅಂತಿಮ ಜಯ ಎಂಬ ಮಾತು ಈ ವಿಚಾರಕ್ಕೂ ಅನ್ವಯವಾಗುವುದು ಖಂಡಿತ. ಏಕೆಂದರೆ, ಅಧಿಕಾರ ವಹಿಸಿಕೊಳ್ಳುವ ವಿಜಯ್‌ಗಿಂತಲೂ ಅಧಿಕಾರ ಕೈತಪ್ಪಿದ್ದಿದ್ದರೆ ವಿಜಯ್ ಎದುರಾಳಿಗಳ ಮಟ್ಟಿಗೆ ಸಿಂಹಸ್ವಪ್ನವಾಗಿ ಮುಂಬರುವ ಚುನಾವಣೆಗಳಲ್ಲಿ ಸಾಟಿಯಿಲ್ಲದ ನಾಯಕನಾಗುವ ಸಾಧ್ಯತೆಗಳು ಸ್ಪಷ್ಟ, ಹೀಗಾಗಿಯೇ ಮುಂದಿನ ಬೆಳವಣಿಗೆಗಳು ಯಾವ ಜಾಡಿನಲ್ಲಿ ಸಾಗುತ್ತವೆ ಎಂಬುದನ್ನು ಊಹಿಸುವುದು ಕಷ್ಟ.

ಬೇರೆ ಮೈತ್ರಿಕೂಟಕ್ಕೆ ಸರ್ಕಾರ ರಚನೆಗೆ ರಾಜ್ಯಪಾಲರು ಅವಕಾಶ ಕೊಡುವುದನ್ನು ತಪ್ಪಿಸಲು ಟಿವಿಕೆ ಪಕ್ಷದ ಶಾಸಕರು ಸಾಮೂಹಿಕ ರಾಜೀನಾಮೆ ಕೊಡುವ ಮಾತನ್ನು ತೇಲಿಬಿಡಲಾಗಿತ್ತು. ಹಾಗೊಮ್ಮೆ ಇದು ನಿಜವಾಗಿದ್ದರೆ ತಮಿಳುನಾಡಿನ ರಾಜಕಾರಣದ ಭೂಪಟವನ್ನು ಬದಲಾಯಿಸುವ ಸಾಮರ್ಥ್ಯ ಈ ಸಾಮೂಹಿಕ ರಾಜೀನಾಮೆಗೆ ಇರುತ್ತಿತ್ತು. ಆದರೆ, ಮಾತಿನಲ್ಲಿ ರಾಜೀನಾಮೆ ಕೊಡುವುದಕ್ಕೂ ಕಾರ್ಯತಃ ರಾಜೀನಾಮೆ ಕೊಡುವುದಕ್ಕೂ ಇರುವ ವ್ಯತ್ಯಾಸ ಅಜಗಜಾಂತರ. ಅಂತಹ ವಾತಾವರಣ ಸೃಷ್ಟಿಯಾದರೆ ಮತ್ತೆ ಹೊಸದಾಗಿ ವಿಧಾನಸಭೆ ಚುನಾವಣೆ ನಡೆಯಬೇಕು. ಇಂತಹ ಸನ್ನಿವೇಶವನ್ನು ಬರಮಾಡಿಕೊಳ್ಳಲು ಯಾವ ರಾಜಕೀಯ ಪಕ್ಷವೂ ಬಯಸುವುದಿಲ್ಲ. ಜನರಿಗೂ ಕೂಡಾ ಅಷ್ಟೇ ನಿರಾಸಕ್ತಿ. ಇದಲ್ಲದೆ ಕೋಟ್ಯಂತರ ರೂಪಾಯಿ ಹಣದ ವೆಚ್ಚ. ಜನತಂತ್ರವೆಂಬುದು ಪುಗಸಟ್ಟೆ ಪುನುಗಲ್ಲ ಎಂಬ ಸಮಾಜವಾದಿ ಚಿಂತಕರ ಮಾತನ್ನು ಒಪ್ಪಿಕೊಂಡರೂ ಕೂಡಾ ಪುನುಗು ಎಂದು ಹೇಳಿ ಅದನ್ನು ಇಡೀ ದೇಹಕ್ಕೆ ಲೇಪಿಸಿಕೊಳ್ಳುವುದು ನಿಜವಾಗಲೂ ದೊಡ್ಡ ಐಲು. ಇಂತಹ ಐಲುಗಳ ಸಾಮ್ರಾಜ್ಯದಲ್ಲಿ ಉಂಡವರೇ ಜಾಣರು ಎಂಬ ಮಾತು ನೆನಪಿಗೆ ಬರುವಂತಹ ಸನ್ನಿವೇಶಗಳು ನೆರೆ ರಾಜ್ಯದಲ್ಲಿ ಸೃಷ್ಟಿಯಾಗುತ್ತಿರುವುದು ನೋಡಿ 'ಪ್ರಜಾಪ್ರಭುತ್ವ ಒಂದು ಲೊಳಲೊಟ್ಟೆ' ಎಂಬ ಶ್ರೀರಂಗರ ನಾಟಕವನ್ನು ನೆನಪಿಸಿಕೊಳ್ಳಬೇಕಷ್ಟೆ. ■

# ಎಕ್ಸ್‌ಪಾರ್ಟಿ ಆದೇಶಕ್ಕೆ ಕೇವಿಯೆಟ್ ಮುಂಜಾಗ್ರತೆ

ಅಡ್ವೊಕೇಟ್ ಡೈರಿ
ಪ್ರಕಾಶ್ ವಸ್ತ್ರದ ಮುಧೋಳ

ಅವನು ದಂಗು ಬಡೆದು ಬಿಟ್ಟಿದ್ದನು. ನನ್ನ ಅನುಪಸ್ಥಿತಿಯಲ್ಲಿ, ತನಗೆ ಗೊತ್ತಾಗದ ಹಾಗೆ, ತನ್ನ ಗಮನಕ್ಕೆ ಬಾರದೆ, ಎಕ್ಸ್‌ಪಾರ್ಟಿ/ಏಕತರ್ಫೆ ಆದೇಶ ಹೇಗಾಯಿತು ಎಂದು ಕಂಗಾಲಾಗಿದ್ದನು. ಎಷ್ಟರಮಟ್ಟಿಗೆ ಧೈರ್ಯ ಕಳೆದುಕೊಂಡಿದ್ದನೆಂದರೆ, ಇದೆಂತ ನ್ಯಾಯ ವ್ಯವಸ್ಥೆ, ಇಲ್ಲಿ ಹೇಳೋರು ಕೇಳೋರು ಯಾರು ಇಲ್ಲವೆ ಎಂದು ಇಡಿ ವ್ಯವಸ್ಥೆಯ ಬಗ್ಗೆ ನಂಬಿಕೆ ಕಳೆದುಕೊಂಡುಬಿಟ್ಟಿದ್ದನು. ಕೋಪ ಶಮನ ಆಗುವವರೆಗೆ ಏನು ತಿಳಿಹೇಳಿದರೂ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಅವನ ಅಭಿಪ್ರಾಯ ಏನೇ ಇದ್ದರೂ ಸುಮ್ಮನೆ ಕೇಳಿದೆ.

"ನಾನು ಇಂಜಿನಿಯರ್, ಪ್ರಗತಿಪರ ರೈತ. ತಂದೆ ಬಡತನದಲ್ಲಿ ಐದು ಎಕರೆ ಒಣ ಬೇಸಾಯದ ಜಮೀನಿನಲ್ಲಿ ಕಷ್ಟಪಟ್ಟು ದುಡಿದು ನನ್ನನ್ನು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿಸಿದ್ದಾನೆ. ಬೆಂಗಳೂರಲ್ಲಿ ಹಲವು ವರ್ಷ ಪ್ರೈವೇಟ್ ಕಂಪನಿಯಲ್ಲಿ ಸರ್ವಿಸ್ ಮಾಡಿದೆನು. ಆದರೆ ವಿದ್ಯೆಗೆ ತಕ್ಕಂತೆ ನೆಮ್ಮದಿ, ಸಂಬಳ ಸಂತೃಪ್ತಿ ದೊರೆಯಲಿಲ್ಲ. ನೌಕರಿ ಬಿಟ್ಟು ಹಳ್ಳಿಗೆ ಬಂದೆನು. ತಂದೆಗೆ ಸಿಡಿಲು ಬಡಿದ ಹಾಗಾಯಿತು. ಹಳ್ಳಿಯಲ್ಲಿ ಇದ್ದು, ಒಕ್ಕಲುತನ ಮಾಡುವುದಾಗಿ ತಿಳಿಸಿದೆನು. ತಾನು ಪಟ್ಟ ನೋವು, ಕಷ್ಟ, ಸಂಕಟ ಪಡಬಾರದೆಂದು ಇಂಜಿನಿಯರಿಂಗ್ ಓದಿಸಿದ್ದನು. ಆದರೆ ಮರಳಿ ಹಳ್ಳಿಗೆ ಬಂದು ಕೃಷಿ ಪ್ರಾರಂಭ ಮಾಡಿದ್ದರಿಂದ ಹತಾಶನಾದನು. ಇರುವ ಒಬ್ಬನೇ ಮಗನಿಗೆ ನೋವು ಆಗಬಾರದು ಎಂದು ನನ್ನನ್ನು ಕೃಷಿಯಲ್ಲಿ ತೊಡಗಿಸಿಕೊಂಡನು. ತಂದೆ ಪಾರಂಪರಿಕ ಕೃಷಿಗೆ ತೊಡಗಿಕೊಂಡಿರುವುದರಿಂದ ಪ್ರಗತಿ ಆಗಿಲ್ಲವೆಂದು ಮನಗಂಡೆನು. ಏನಾದರು ಹೊಸದನ್ನು ಕೃಷಿಯಲ್ಲಿ ಪ್ರಯೋಗಿಸಬೇಕು ಎಂದು ಕೃಷಿ ವಿಜ್ಞಾನಿಗಳ, ತಜ್ಞರ ಸಲಹೆ ಪಡೆದೆನು. ಆರ್ಥಿಕ ನೆರವಿಗಾಗಿ ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಿದೆನು. ಹೊಸ ಕೃಷಿ ಪ್ರಯೋಗಕ್ಕೆ ಜಮೀನಿನ ಮಣ್ಣು ಯೋಗ್ಯವಿತ್ತು. ಆದರೆ ನೀರಿನ ಅವಶ್ಯಕತೆ ಇತ್ತು. ಅಂತರ್ಜಲ ತಜ್ಞರನ್ನು ಸಂಪರ್ಕಿಸಿ ವೈಜ್ಞಾನಿಕವಾಗಿ ಜಾಗೆಯನ್ನು ಗುರುತಿಸಿದೆನು. ಮನೆ ದೇವರನ್ನು ಸ್ಮರಿಸಿ ಬೋರ್‌ವೆಲ್ ಕೊರೆಯಿಸಿದೆನು. ಪವಾಡ ಅನ್ನುವಂತೆ ಹತ್ತು ಎಕರೆ ಜಮೀನಿಗೆ ನೀರು ಉಣಿಸುವಷ್ಟು ನೀರಿನ ಬುಗ್ಗೆ ಹರಿಯಿತು. ಬ್ಯಾಂಕಿನಲ್ಲಿ ಸಾಲ ಪಡೆದೆನು. ಕಬ್ಬು, ಬಾಳೆ ಇತರೆ ತೋಟಗಾರಿಕೆ ಬೆಳೆ ಬೆಳೆದೆನು.

ಸುತ್ತ ಬರಡು ಭೂಮಿ, ನಡುವೆ ಹಚ್ಚಹಸಿರಿನಿಂದ ಜಮೀನು ಕಂಗೊಳಿಸಿತು. ಜಮೀನಿನ ಉತ್ತರ ದಿಕ್ಕಿನಲ್ಲಿ ಸರ್ಕಾರಿ ರಸ್ತೆ ಇತ್ತು. ಪಕ್ಕದ ಪೂರ್ವ ಪಶ್ಚಿಮ ದಿಕ್ಕಿನ ಜಮೀನುಗಳ ಮಾಲೀಕರ ಮನವೊಲಿಸಿ, ಬೆಳೆ ಬೆಳೆದು ಇಂತಿಷ್ಟು ಪ್ರತಿವರ್ಷ ಪ್ರತಿಫಲ ಕೊಡುವ ಕರಾರಿನಂತೆ ಸಾಗುವಳಿ ಮಾಡಲಾರಂಭಿಸಿದೆನು. ದಕ್ಷಿಣ ದಿಕ್ಕಿನ ಜಮೀನಿನ ಮಾಲೀಕನನ್ನು ವಿಚಾರಿಸಿದೆನು. ಅವನು ನಿರಾಕರಿಸಿ, ಬೋರ್‌ವೆಲ್ ನೀರನ್ನು ಹಣ ಪಡೆದು ತನ್ನ ಜಮೀನಿಗೆ ಕೊಡುವಂತೆ ಕೇಳಿಕೊಂಡನು. ನಾನು ನಿರಾಕರಿಸಿದೆನು. ಹೀಗೆ ಇಬ್ಬರ ನಡುವೆ ಮನಸ್ತಾಪ, ವೈಮನಸ್ಸು ಹುಟ್ಟಿತು. ಆತ ನಿನ್ನ ಜಮೀನಿನಲ್ಲಿ ನನಗೆ ದಾರಿ ಹಕ್ಕು ಇದೆ ಎಂದು ಕ್ಯಾತೆ ತೆಗೆದನು. ನಿನ್ನ ಜಮೀನಿಗೆ ಹೋಗಲು ಜಮೀನಿನ ದಕ್ಷಿಣಕ್ಕೆ ದಾರಿ ಇದೆ, ನಿನಗೇಕೆ ದಾರಿ ಕೊಡಲಿ?. ನನ್ನ ಜಮೀನಿನಲ್ಲಿ ನಿನಗೆ ದಾರಿ ಇಲ್ಲ, ದಾರಿ ಹಕ್ಕು ಇಲ್ಲ ಎಂದು ವಾದಿಸಿದೆ. ದಾರಿ ಹೇಗೆ ಪಡೆಯಬೇಕು ಎಂದು ಗೊತ್ತಿದೆ ಎಂದು ಆತ ವಾದಿಸಿದ. ಹೀಗೆ ಪ್ರಾರಂಭವಾದ ಮನಸ್ತಾಪ ವ್ಯಾಜ್ಯವಾಯಿತು."

ಇಷ್ಟೆಲ್ಲ ಹೇಳುವುದೆಲ್ಲ ಕೇಳಿದೆ. ಮಾತು ಮುಂದುವರೆಸಿದನು. "ವಕೀಲರೊಬ್ಬರನ್ನು ಭೇಟಿಯಾದೆ. ಅವನು ಕೋರ್ಟಿಗೆ ಹೋಗಬಹುದು, ಕೇವಿಯೆಟ್ ಅರ್ಜಿ ದಾಖಲಿಸಿದರೆ ಸುರಕ್ಷಿತ ಅಂತ ಸಲಹೆ ನೀಡಿದರು. ಸಲಹೆಯಂತೆ ನಡೆದುಕೊಳ್ಳಲಿಲ್ಲ.". ಸುಮ್ಮನೆ ನಕ್ಕು ಹೇಳಿದೆ, "ನೀವು ವಕೀಲರ ಸಲಹೆಯಂತೆ ನಡೆದುಕೊಂಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ನಿಮ್ಮ ಮೇಲೆ ಯಾರಾದರೂ ದಾವೆ ದಾಖಲಿಸಿ, ಆ ದಾವೆಯಲ್ಲಿ ನಿಮಗೆ ಸಮನ್ಸ್, ನೋಟಿಸ್ ತಲುಪುವ ಮುಂಚೆ ನಿಮ್ಮ ಗೈರುಹಾಜರಿಯಲ್ಲಿ ಏಕತರ್ಫೆ ಮಧ್ಯಂತರ ಆದೇಶವನ್ನು ಕೇಳಬಹುದು. ಮೇಲ್ನೋಟಕ್ಕೆ ಕೇಸು ನಿಮ್ಮ ಪರ ಇದೆ. ಪ್ರತಿವಾದಿಯಿಂದ ಹಾನಿ ಆಗುವುದೆಂದು ನ್ಯಾಯಾಲಯಕ್ಕೆ ಕಂಡುಬಂದರೆ ಏಕತರ್ಫೆ ತಡೆಯಾಜ್ಞೆ ಆದೇಶ ಮಾಡುತ್ತಾರೆ. ವಾದಿ ನಿಮ್ಮ ಜಮೀನಿನಲ್ಲಿ ತನಗೆ ಇಜಮೆಂಟ್/ವಹಿವಾಟಿನ ದಾರಿ ಹಕ್ಕು ಇದೆ ಎಂದು ಸಾಧಿಸಿ ಕೇಸು ಮಾಡಿದ್ದು, ನ್ಯಾಯಾಲಯ ನಿಮ್ಮ ಜಮೀನಿನಲ್ಲಿ ವಾದಿಗೆ ದಾರಿ ಹಕ್ಕು ಇದೆ ಎಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ವಾದಿಯ ದಾರಿ ಹಕ್ಕಿಗೆ ತೊಂದರೆ, ಅಡೆತಡೆ ಮಾಡಬಾರದು ಎಂದು ಎಕ್ಸ್‌ಪಾರ್ಟಿ/ಏಕತರ್ಫೆ ಮಧ್ಯಂತರ ತಡೆಯಾಜ್ಞೆ ಆದೇಶ ಮಾಡಿದೆ. ನೀವು ವಕೀಲರ ಸಲಹೆಯಂತೆ ಕೇವಿಯೆಟ್ ಅರ್ಜಿ ದಾಖಲಿಸಿದ್ದರೆ ಕೋರ್ಟ್ ಎಕ್ಸ್‌ಪಾರ್ಟಿ ಆದೇಶ ಮಾಡುತ್ತಿರಲಿಲ್ಲ.". ಮಾತು ಶ್ರದ್ಧೆಯಿಂದ ಕೇಳುತ್ತಿದ್ದನು "ಕೇವಿಯೆಟ್ ಅರ್ಜಿ ದಾಖಲಿಸಿದ 90 ದಿನಗಳು ಅವಧಿಗೆ ಅರ್ಜಿ ಅಸ್ತಿತ್ವದಲ್ಲಿ ಇರುತ್ತದೆ. ಆ ಅವಧಿಯಲ್ಲಿ ವಾದಿ ದಾವೆ ದಾಖಲಿಸಿ, ಏಕ ತರ್ಫೆ ಮಧ್ಯಂತರ ಆದೇಶ ಕೋರಿದರೆ ಕೋರ್ಟ್ ಯಾವುದೇ ಆದೇಶವನ್ನು ನೀಡದೆ, ನಿಮಗೆ ಮುಂಚಿತ ನೋಟಿಸ್ ನೀಡಿ, ತಕರಾರು ದಾಖಲಿಸಲು ಅವಕಾಶ ಕೊಟ್ಟು ನಿಮ್ಮ ವಾದ ಕೇಳಿ ಗುಣಾತ್ಮಕ ಮಧ್ಯಂತರ ಆದೇಶ ಮಾಡುತ್ತದೆ. ಕೇವಿಯೆಟ್ ಇಲ್ಲದಿದ್ದರೆ ಏಕತರ್ಫೆ ಆದೇಶ ಆಗುವಾಗ ನ್ಯಾಯಾಲಯ ವಾದಿ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಆದೇಶ ಮಾಡುತ್ತದೆ. ಪ್ರತಿವಾದಿ ಕೋರ್ಟಿಗೆ ಹಾಜರಾಗಿ ಏಕತರ್ಫೆ ಆದೇಶವನ್ನು ರದ್ದುಪಡಿಸಲು ಕೋರ್ಟಿಗೆ ಮನವರಿಕೆ ಮಾಡಬಹುದು". ಕೇವಿಯೆಟ್ ಬಗ್ಗೆ ಸಮಗ್ರ ಮಾಹಿತಿ ಪಡೆದು ನಿರಾಳನಾದನು.

ಪ್ರತಿವಾದಿ ಪರವಾಗಿ ಕೋರ್ಟಿಗೆ ಹಾಜರಾಗಿ, ಮಧ್ಯಂತರ ಅರ್ಜಿಗೆ ತಕರಾರು ಸಲ್ಲಿಸಿ, ಲಿಖಿತ ದಾಖಲಾತಿ, ಫೋಟೋ, ಗೂಗಲ್ ಫೋಟೋ ಹಾಜರುಪಡಿಸಿ ನಿಜ ಸಂಗತಿ ಅರುಹಿದೆ. ಮಧ್ಯಂತರ ಅರ್ಜಿಯ ಮೇಲೆ ವಾದಿ ಪ್ರತಿವಾದಿಗಳ ವಾದವನ್ನು ಕೇಳಿ ನ್ಯಾಯಾಲಯ, ವಾದಿಯು ಅಸ್ತಿತ್ವದಲ್ಲಿ ಇಲ್ಲದ ದಾರಿಯಲ್ಲಿ ಇಜಮೆಂಟ್ ಹಕ್ಕನ್ನು ಸಾಧಿಸಿ, ಹೊಸದಾಗಿ ದಾರಿ ನಿರ್ಮಿಸುವ ಸಂಭವ ಇದೆ, ಪರ್ಯಾಯ ದಾರಿ ಎಂದು ಅಭಿಪ್ರಾಯಪಟ್ಟು ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿ, ಏಕತರ್ಫೆ ಆದೇಶವನ್ನು ತೆರವುಗೊಳಿಸಿತು. ಮಧ್ಯಂತರ ಆದೇಶದ ಮೇಲೆ ವಾದಿ ಮೇಲ್ಮನವಿ ಕೋರ್ಟಿನಲ್ಲಿ ಅಪೀಲು ಸಲ್ಲಿಸಿ ಸ್ಟೇ ಆರ್ಡರ್ ತರುವ ಸಂಭವ ಇರುತ್ತದೆ. ಅಭಿಪ್ರಾಯಕ್ಕೆ, ತಕ್ಷಣ ಹೇಳಿದ್ದು "ಸರ್, ಮೊದಲು ಕೇವಿಯಟ್ ಅರ್ಜಿ ದಾಖಲಿಸಿ"! ■

## ಸಂಯುಕ್ತ ಬಂಧ 5952



**ಉತ್ತರ: 5951**

**ಎಡದಿಂದ ಬಲಕ್ಕೆ:** 1.ಮಾನವ 3.ಸನಾದಿ 5.ಭೇರಿ 6.ನಟ 7.ಹಣಸಂಗ್ರಹ 9.ನಗರ 11.ವಾಮನ 13.ಚರಮ 15.ಗರತಿ 16.ನಕಲಿಹಣ 19.ದ್ವಾರ 21.ಗಲ್ಲ 22.ಸರಣಿ 23.ರಮಣಿ

**ಮೇಲಿನಿಂದ ಕೆಳಕ್ಕೆ:** 1.ಮಾರಿ 2.ವರುಣ 3.ಸಮಗ್ರ 4.ದಿನ 7.ಹರ 8.ಹವಾ 10.ಗಮಾರ 12.ಮಕರ 14.ಮನ 15.ಗಣ 17.ಕಲ್ಯಾಣಿ 18.ಹಮ್ಮೀರ 20.ರಸ 21.ಗಣಿ

### ಎಡದಿಂದ ಬಲಕ್ಕೆ

1 ದೊಡ್ಡ ದೇವಸ್ಥಾನ ಸಹಾಯ ಮಾಡುವಂತಿದೆ 4
3 ಒಳ್ಳೆಯ ಮಂದಹಾಸ ಬೀರುತ್ತಿರುವ ಹೆಣ್ಣು 4
5 ಹಿಮದಲ್ಲಿ ಸೇರಿಕೊಂಡ ಪೂಜ್ಯ ವ್ಯಕ್ತಿ 3
6 ಸದಾ ಸುಹಾಸ ಬೀರುವ ನಿರುಪದ್ರವಿ ದನ 2
7 ಗಾಡಿಯಲ್ಲಿ ನೊಗವನ್ನು ಕಟ್ಟುವ ಭಾಗ 2
8 ಸತಿ ವಿರಹದಿಂದಿರುವಾಗ ಚುಚ್ಚು 2
10 ತವರುಮನೆಯಿಂದ ತಂದ ಲೋಹ 3
12 ಪಲ್ಲವಿಯ ಜತೆಯಾದ ಸಂಗೀತದ ವಿಧಾನ 2
13 ಅಬ್ಬರ ಮಾಡಿದಾಗ ಬಡಿದ ಕ್ಷಾಮ 2
14 ಸರಸರ ಅರಮನೆಗೆ ಬಂದ ರಾಜ 3
16 ಕಲಾವಿದನಲ್ಲಿ ಹುಟ್ಟಿದ ಕವನ ರಚನಾಕಾರ 2
18 ಹುಟ್ಟಿನಿಂದ ಸಾಯುವವರೆಗಿನ ಅವಧಿ 2
19 ಮೋಡ ಕರಗಿ ಆಕಾಶದಿಂದ ಸುರಿವ ವೃಷ್ಟಿ 2
20 ಸರದ ದರ ತುಂಬ ಸಲೀಸು 3
21 ಹಣದೊಡತಿಯ ಕೃಪೆಯ ಕೈ 4
22 ಸರ ಧರಿಸಿದ ವಿದ್ಯಾಧಿದೇವತೆ 4

### ಮೇಲಿನಿಂದ ಕೆಳಕ್ಕೆ

1 ವೃಕ್ಷದ ಮೇಲೆ ಮಂಗ ಹತ್ತಿಳಿವ ಬಾಲ್ಯದ ಆಟ 4
2 ನರಕಾಧಿಪತಿಯ ಪುತ್ರನಾದ ಧರ್ಮರಾಯ 4
3 ಅತ್ಯಂತ ಚೆನ್ನಾದ ಸಿಹಿ 4
4 ಮನೆ ಕಟ್ಟಲು ಅನುಕೂಲವಾದ ಖಾಲಿ ಜಾಗ 4
9 ಹಲವು ವಿಧದ ಈತ ಮಹಾಭಾರತದ ಸಜ್ಜನ 3
11 ಹಲವು ಮನೆಗಳ ಸಂಕೀರ್ಣದಂಥ ಅಂಗಳ 3
12 ತಾರ ಬಂದಾಗ ಕಂಡ ಉನ್ನತ 3
13 ಇಬ್ಬರ ನಡುವಿನ ಶಕ್ತಿ 4
14 ಅವನಿಗೆ ಸರ ಧರಿಸುವ ಆತುರ 4
15 ಜೀವನದಲ್ಲಿ ಎಲ್ಲವೂ ಏರುಪೇರಿಲ್ಲದಂತಿದೆ 4
17 ಲೋಕಕ್ಕೆ ಒಡೆಯನಾದವನು 4

## ದಿನ ವಿಶೇಷ

ಶನಿವಾರ: 09.05.2026

- ಶ್ರೀ ಶಾಲಿವಾಹನ ಶಕೆ 1948
- ಸೌರಮಾಸ: ಮೇಷ, ದಿನ: 25
- ಮು. ಮಾಸ: ದುಲ್ ಖದಾ, ದಿನ: 22

ಪರಾಭವ ಸಂವತ್ಸರ, ಉತ್ತರಾಯಣ, **ಋತು:** ವಸಂತ, **ಮಾಸ:** ವೈಶಾಖ, **ಪಕ್ಷ:** ಕೃಷ್ಣ, **ತಿಥಿ:** ಸಪ್ತಮೀ (14.03), **ನಿತ್ಯನಕ್ಷತ್ರ:** ಶ್ರವಣಾ (23.22), **ಯೋಗ:** ಶುಕ್ಲ (26.35), **ಕರಣ:** ಬಾಲವ (26.40) **ಮಾಸ ನಿಯಾಮಕ:** ಕಮಲಾಲಯ ಮಧುಸೂದನ **ಸೂರ್ಯೋದಯ:** 06.00 (**ನಾಳೆ:** 05.58) **ಸೂರ್ಯಾಸ್ತ:** 06.48 (**ನಾಳೆ:** 06.50) **ಮಳೆನಕ್ಷತ್ರ:** ಭರಣೀ ನಾಲ್ಕನೆಯ ಪಾದ ಮಾಸಿಕ ಕಾಲಾಷ್ಟಮೀ. ವಿಷ್ಣುಪಂಚಕ ಉಪವಾಸ. ಅನಧ್ಯಯನದ್ವಯ. ರಾ. 11.23ರ ನಂತರ ಧನಿಷ್ಠಾ ನವಕ ಆರಂಭ. ಆಂಧ್ರದ ನಾರಾಯಣಪೇಟೆ ಶ್ರೀ ಶಿವಾನಂದ ಸರಸ್ವತಿ ಯೋಗೀಶ್ವರರ, ರಾಜವಳ್ಳಿ ಶ್ರೀ ಭುವನೇಂದ್ರ ತೀರ್ಥರ, ಕೃಷ್ಣಾಪುರ ಮಠದ ಶ್ರೀ ವಿದ್ಯಾಧಿರಾಜ ತೀರ್ಥರ ಆರಾಧನೆ. ಮದ್ದೂರು ನೃಸಿಂಹಸ್ವಾಮಿ ತೆಪ್ಪೋತ್ಸವ. ಮೈಸೂರು ಎನ್.ಆರ್. ಮೊಹಲ್ಲಾ ವೆಂಕಟೇಶ್ವರ ದೀಪೋತ್ಸವ. ಹೊಸೂರು ವೀರಮಾರುತಿ ಉತ್ಸವ. ಮುನಿರಾಬಾದ್ ತಾ. ಹುಲಿಗೆ ಹುಲಿಗೆಮ್ಮನ ಜಾತ್ರೆ. ಲಿಂಗಸೂರು ತಾ. ಅಂಕಲಿಮಠ ನಿರುಪಾಧಿ ರಥ. ಸಿದ್ಧಾಪುರಸ್ವಾಮಿ ವಸಂತೋತ್ಸವ. ಮಹಾರಾಣಾ ಪ್ರತಾಪ ಜಯಂತಿ. ಸ್ವಾತಂತ್ರ್ಯ ಹೋರಾಟಗಾರ ಗೋಪಾಲಕೃಷ್ಣ ಗೋಖಲೆ, ಕಾದಂಬರಿಕಾರ ಅ.ನ.ಕೃ. ಜನ್ಮದಿನ.

# ಪದಗಳಾಚೆಯ ಪರಮ ಸತ್ಯ

ಮಾತುಗಳಿಂದ ಸತ್ಯವನ್ನು ಅಭಿವ್ಯಕ್ತಿಸಲು ಸಾಧ್ಯವಿಲ್ಲ. ಭಾಷೆಯೂ ತನ್ನದೇ ಮಿತಿಯನ್ನು ಹೊಂದಿರುತ್ತದೆ. ಭಗವಂತನ ಬಗ್ಗೆ ಯಾವಾಗ ಮಾತನಾಡಬೇಕಾಗಿ ಬಂದರೂ ಮಾತುಗಳ, ಭಾಷೆಯ ಈ ಮಿತಿ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಪದಗಳಿಂದ ಸತ್ಯವನ್ನು ಸೆರೆಹಿಡಿಯಲು ಸಾಧ್ಯವಿಲ್ಲ. ಭಗವಂತನೊಡನೆ ಸಂಬಂಧವನ್ನು ವ್ಯಕ್ತಪಡಿಸಲು ಬಳಸುವ ಪದಗಳು ಭಗವಂತನಿಂದ ಬೇರ್ಪಡಿಕೆಯನ್ನೂ ಸೂಚಿಸುತ್ತವೆ. ನೀವು ಭಗವಂತನೊಡನೆ ಸದಾ ಸಂಬಂಧಪಟ್ಟಿರುವಿರಿ ಎಂದಾಗ ಅದು; ನೀವು ಭಗವಂತನಿಂದ ಯಾವುದೋ ಒಂದು ರೀತಿಯಲ್ಲಿ ಬೇರ್ಪಟ್ಟವರು, ಭಗವಂತನಿಂದ ಸ್ವತಂತ್ರರಾಗಿರುವವರು ಮತ್ತು ಭಗವಂತನಿಂದ ಹೊರಗಿರುವವರು ಎಂಬುದನ್ನು ಸೂಚಿಸುತ್ತದೆ. ಆದರೆ ವಿಷಯ ಆ ರೀತಿಯಾಗಿಲ್ಲ.

ಗುರುಬೋಧೆ
ಗುರುದೇವ್ ಶ್ರೀ ಶ್ರೀ ರವಿಶಂಕರ್
ಆರ್ಟ್ ಆಫ್ ಲಿವಿಂಗ್
ಬೆಂಗಳೂರು

ಒಂದು ಮೀನು ನೀರಿನಿಂದ ಹೊರಗೆ ಬಂದಾಕ್ಷಣ ಅದರಲ್ಲಿರುವ ಜೀವವೂ ನೀರಿನಿಂದ ಹೊರಗೆ ಬರುತ್ತದೆ. ಒಂದೇ ಸಮಯದಲ್ಲಿ ಜೀವವು ಸಮುದ್ರವನ್ನೂ ಹಾಗೂ ಮೀನನ್ನೂ ಬಿಡುತ್ತದೆ. ಮೀನಿನ ಹೆಣ ನೀರಿನಿಂದ ಹೊರಗೆ ಬರುತ್ತದೆ. ನೀವು ಹಿಡಿಯುವ ಮೀನು ದೇಹವಾಗಿ ಮಾತ್ರ ಹೊರಬರುತ್ತದೆ, ಮೀನಾಗಿ ಅಲ್ಲ. ಮೀನಿನ ಜೀವವು ಸಮುದ್ರಕ್ಕೆ ಪರ್ಯಾಯವಾಗಿದೆ. ಮೀನಿನ ಜೀವವು ಸಮುದ್ರದಿಂದ ಹೊರಗೆ ಇರಲು ಸಾಧ್ಯವಿಲ್ಲ. ಇದರ ಅರ್ಥ, ಸಮುದ್ರವೇ ಮೀನು ಎಂದು.

ಒಂದು ನಿರ್ದಿಷ್ಟ ಚಿಪ್ಪಿನೊಳಗೆ, ಒಂದು ನಿರ್ದಿಷ್ಟ ಸಮಯದಲ್ಲಿ ಸಮುದ್ರವು ಪ್ರಕಟವಾಗುವುದನ್ನು ಮೀನು ಎನ್ನುತ್ತೇವೆ. ಇದು ಬಹಳ ವಿಚಿತ್ರವಾದರೂ ಸತ್ಯ. ಒಂದು ಮೀನಿನ ಜೀವವನ್ನು ಸಮುದ್ರದಿಂದ ಬೇರ್ಪಡಿಸಲು ಸಾಧ್ಯವೇ ಇಲ್ಲ. ಅದರ ಜೀವವೇ ಸಮುದ್ರ. ಸಮುದ್ರದಿಂದ ಹೊರಗೆ, ಅದರಿಂದ ದೂರವಾಗಿ ಮೀನು ಜೀವಿಸಲು ಸಾಧ್ಯವೇ ಇಲ್ಲ. ಅಲೆಗಳು ಸಮುದ್ರದಿಂದ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿ ಜೀವಿಸಲು ಸಾಧ್ಯವಾಗದಿರುವಂತೆ ಇದು ಕೂಡ. ಅಲೆಗಳು ಸಮುದ್ರದ ಅವಿಭಾಜ್ಯ ಅಂಗ. ಒಂದು ಮೀನನ್ನು ಸಮುದ್ರದ ಘನೀಕೃತ ಅಲೆಯ ಒಂದು ರೂಪ ಎನ್ನಬಹುದು, ಅದನ್ನು ಸಮುದ್ರದ ಅಭಿವ್ಯಕ್ತಿಯಂತೆ ಪರಿಗಣಿಸಬಹುದು.

'ಭಗವಂತನೊಡನೆ ಸದಾ ಸಂಬಂಧಪಟ್ಟಿದ್ದೇನೆ' ಎಂದು ನೀವು ಹೇಳಿದಾಗ ಸದಾ ಮತ್ತು ಸಂಬಂಧ ಎಂಬ ಪದಗಳು ಜೊತೆಜೊತೆಯಾಗಿ ಹೋಗುವುದಿಲ್ಲ. 'ಸಂಬಂಧ' ಎಂದರೆ ಮೊದಲು ಸಂಬಂಧವನ್ನು ಹೊಂದಿರದೆ ಈಗ ಸಂಬಂಧಪಟ್ಟಿದೆ, ಮೊದಲು ಬೇರ್ಪಟ್ಟಿತ್ತು ಎಂದು ಸೂಚಿಸುತ್ತದೆ. 'ಸದಾ' ಎಂದಾಗ 'ಸಂಬಂಧ' ಎಂಬ ಪದವು ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ.

ನೀವು ಸದಾ ದೈವ. ನೀವೆಲ್ಲೇ ಇರಲಿ, ನೀವೇನೇ ಆಗಿರಲಿ ನೀವು ಭಗವಂತ. ಒಂದು ಮೀನು ನೀರಿನಲ್ಲಿ ಮೇಲೆ ಕೆಳಗೆ ಹೋಗಿ, ಮೇಲೆ ಕೆಳಗೆ ತಿರುಗಿ, ಬಾಲವನ್ನು ಅಲುಗಾಡಿಸಿದರೂ, ತಿಂದರೂ, ಮಲಗಿದರೂ ಅದು ಸಮುದ್ರದಲ್ಲೇ ಇರುತ್ತದೆ. ಭಗವಂತನ ಅಸ್ತಿತ್ವ ಕಾಲಾತೀತವಾದದ್ದು. ಭಗವಂತ ಸದಾ ಇದ್ದಾನೆ. ಆದರೆ ನೀವು ಸದಾ ಭಗವಂತ ಎಂದಾಗ ಎಲ್ಲೋ ಭಗವಂತನಿಂದ ಬೇರ್ಪಡಿಸಿಕೊಳ್ಳುತ್ತಿದ್ದೀರಿ. ಆದ್ದರಿಂದ ಭಾಷೆಯ ಮೂಲಕ ಭಗವಂತನನ್ನು ಅಭಿವ್ಯಕ್ತಿಸಲು ಅಸಾಧ್ಯ. ■

## ಇಂದಿನ ಭವಿಷ್ಯ

ಡಾ. ವೈ.ಎಸ್.ಕೆ. ಆಚಾರ್ಯ
ಜ್ಯೋತಿಷಿಗಳು,
ಶ್ರೀ ಕಾಮಾಕ್ಯ ಪ್ರತ್ಯಂಗಿರಾದೇವಿ ಉಪಾಸಕರು
76767 78568

**ರಾಹು ಕಾಲ** ಬೆ. 09ರಿಂದ 10.30
**ಗುಳಿಕ ಕಾಲ** ಬೆ. 06ರಿಂದ 07.30
**ಯಮಗಂಡ ಕಾಲ** ಮ. 01.30ರಿಂದ 03
**ಶುಭ ಸಂಖ್ಯೆ** 1–2–3–9

**ಮೇಷ:** ಬಂಧುಗಳಿಂದ ನೆರವು. ಅನಿರೀಕ್ಷಿತ ಧನಲಾಭ. ಮೇಲಧಿಕಾರಿಗಳ ಸಹಕಾರ. ಮನೆಯಲ್ಲಿ ನೆಮ್ಮದಿ.

**ವೃಷಭ:** ಸಾಹಿತ್ಯ ಕ್ಷೇತ್ರದವರಿಗೆ ಶುಭ. ಗುರು ದರ್ಶನ. ವೈರಿಗಳಿಂದ ತೇಜೋವಧೆ. ಬಾಲ್ಯಮಿತ್ರರ ಭೇಟಿ.

**ಮಿಥುನ:** ಪ್ರೀತಿಸಿದವರ ಜೊತೆಗೆ ವಿರಸ. ಅನಗತ್ಯ ದುಂದು ವೆಚ್ಚ ಸಂಭವ. ಉನ್ನತ ವಿದ್ಯಾಭ್ಯಾಸಕ್ಕೆ ಶುಭ.

**ಕರ್ಕ:** ಮಾನಸಿಕ ಒತ್ತಡ. ಮಕ್ಕಳ ಶಿಕ್ಷಣದ ಚಿಂತೆ. ಸ್ನೇಹಿತರ ಸಹಾಯ. ಮನೆಯ ಸಮಸ್ಯೆಗಳಿಗೆ ವಿಮುಕ್ತಿ.

**ಸಿಂಹ:** ಸ್ಥಿರಾಸ್ತಿಗಳಿಂದ ಧನ ಲಾಭ. ಪ್ರಯಾಣದಲ್ಲಿ ಅಡಚಣೆ. ಬಂಧು ಸನ್ಮಾನ. ಶಾಸ್ತ್ರಪಂಡಿತರಿಗೆ ಶುಭ.

**ಕನ್ಯಾ:** ಮಾನಸಿಕವಾಗಿ ನಿರಾಶೆ. ಆತ್ಮೀಯರ ಜತೆಗೆ ಕಾಲಯಾಪನೆ. ವೃತ್ತಿಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆ.

**ತುಲಾ:** ಸಂಗೀತ ನೃತ್ಯಗಾರರಿಗೆ ಶುಭ. ಅಂಧವಿಶ್ವಾಸ ಮುಳುವಾದೀತು. ಪುಣ್ಯಕ್ಷೇತ್ರ ಸಂದರ್ಶನ ಯೋಗ.

**ವೃಶ್ಚಿಕ:** ಹೋಟೆಲ್ ಉದ್ಯಮಿಗಳಿಗೆ ಲಾಭ. ವೃತ್ತಿಯಲ್ಲಿ ಹೊಸ ಅವಕಾಶ. ಸ್ವಂತದ ಜನರಿಂದ ಅವಮಾನ.

**ಧನು:** ಹಿರಿಯ ನಾಗರಿಕರಿಗೆ ಸನ್ಮಾನ. ವಾಹನ ಬಿಡಿಭಾಗ ವ್ಯಾಪಾರಸ್ಥರಿಗೆ ಲಾಭ. ವಿದೇಶಯಾನಕ್ಕೆ ಶುಭ.

**ಮಕರ:** ಕ್ರೀಡಾಪಟುಗಳಿಗೆ ಶುಭ. ಪ್ರಯಾಣದಲ್ಲಿ ಸೌಖ್ಯ. ಸೋದರರ ಮಧ್ಯೆ ಕಲಹ. ಹೂಡಿಕೆಯಲ್ಲಿ ಲಾಭ.

**ಕುಂಭ:** ವಿದ್ಯುತ್ ಗುತ್ತಿಗೆದಾರರಿಗೆ ಶುಭ. ಕೃಷಿಕರಿಗೆ ಲಾಭ. ಉನ್ನತ ಶಿಕ್ಷಣಕ್ಕೆ ಶುಭ. ಪ್ರಯಾಣದಲ್ಲಿ ನಷ್ಟ.

**ಮೀನ:** ಹೊಸಬರ ಪರಿಚಯ. ದಿನಸಿ ವ್ಯಾಪಾರಸ್ಥರಿಗೆ ಹಾಗೂ ಹಾರ್ಡ್‌ವೇರ್ ವ್ಯಾಪಾರಸ್ಥರಿಗೆ ಲಾಭ.

**Editor : Mahabaleshwar V.Bhat,** Printed and Published by **Ashok Shanbhag** on behalf of Loka Shikshana Trust, Printed & Published at Samyukta Karnataka Press, Special Plot No.20, Indistrial Area, Lokikere Road, Davanagere-577 005 Phone No.Office. 9902008412, e-mail:samkarnataka.dvg@gmail.com, RNI Regn.No.KARKAN/2003/11480 **Executive Editor : Mohan Hegde**

# ಗಾಂಧಿ ಹೇಳಿದ ನೈತಿಕ ಪಾಠ ಕಾಂಗ್ರೆಸ್ ಮರೆತಿದೆ: ಅಯ್ಯರ್

## ಟಿವಿಕೆ ಜತೆ ಸೇರಿದ್ದಕ್ಕೆ ಕೈ ನಾಯಕ ಕೆಂಡ

**ಚೆನ್ನೈ:** ತಮಿಳುನಾಡಿನಲ್ಲಿ ಟಿವಿಕೆ ಜತೆ ಮೈತ್ರಿ ಮಾಡಿಕೊಳ್ಳುವ ಕಾಂಗ್ರೆಸ್ ನಿರ್ಧಾರಕ್ಕೆ ಇಂಡಿಯಾ ಕೂಟದಲ್ಲಿ ಮಾತ್ರವಲ್ಲದೇ ಈಗ ಕಾಂಗ್ರೆಸ್ಸಿನಲ್ಲೂ ಆಕ್ಷೇಪ ವ್ಯಕ್ತವಾಗಿದೆ.

ಡಿಎಂಕೆ ಜತೆಗಿನ ಮೈತ್ರಿಯನ್ನು ರಾತ್ರೋರಾತ್ರಿ ಮುರಿದುಕೊಂಡು ಟಿವಿಕೆ ಜತೆ ಕೈಜೋಡಿಸಿದ ನಡೆಗೆ ಕಾಂಗ್ರೆಸ್ ಹಿರಿಯ ನಾಯಕ ಮಣಿಶಂಕರ್ ಅಯ್ಯರ್ ಕಿಡಿಕಾರಿದ್ದು, ಮಹಾತ್ಮ ಗಾಂಧಿ ಅವರು ಹಾಕಿಕೊಟ್ಟ 'ಸರ್ಕಾರವನ್ನು ನಡೆಸುವ ನೈತಿಕ ನೆಲೆಗಟ್ಟ'ನ್ನೇ ಕಾಂಗ್ರೆಸ್ ಉಲ್ಲಂಘಿಸಿದೆ ಎಂದಿದ್ದಾರೆ.

ನವೆಂಬರ್ 1925ರಲ್ಲಿ, ಮಹಾತ್ಮ ಗಾಂಧಿಯವರು ತಮ್ಮ ಗುಜರಾತಿ ಪತ್ರಿಕೆ 'ನವಜೀವನ್'ನಲ್ಲಿ ಸ್ವರಾಜ್ ಎಂದರೆ ನೈತಿಕತೆಯ ಆಧಾರದ ಮೇಲೆ ಸರ್ಕಾರ ಮಾಡುವುದು ಎಂದರ್ಥ ಎಂದು ವ್ಯಾಖ್ಯಾನಿಸಿದ್ದರು. ಆದರೆ ಡಿಎಂಕೆ ಬಿಟ್ಟು ಟಿವಿಕೆ ಜತೆ ಕೈಜೋಡಿಸಿದ ಕಾಂಗ್ರೆಸ್ ಪಕ್ಷ ಮಹಾತ್ಮ ಗಾಂಧಿ ಅವರ ಮಾತನ್ನು ಉಲ್ಲಂಘಿಸಿದೆ ಎಂದರು. ಚುನಾವಣೆಯಲ್ಲಿ ಟಿವಿಕೆಯನ್ನು ವಿರೋಧಿಸಿಯೇ ಕಾಂಗ್ರೆಸ್ ಕಣಕ್ಕೆ ಇಳಿದಿತ್ತು. ಆದರೆ ಈಗ ಅನುಕೂಲ ರಾಜಕೀಯ ಮಾಡುತ್ತಿರುವುದು ಸರಿಯಲ್ಲ ಎಂದು ಮಣಿಶಂಕರ್ ಅಯ್ಯರ್ ಹೇಳಿದ್ದಾರೆ. ವಿಜಯ್ ಅವರ ಜತೆ ಸೇರುವ ಮೂಲಕ ನಾವು ಅನೈತಕತೆಯನ್ನು ಪ್ರದರ್ಶಿಸಿದ್ದೇವೆ. ಅಷ್ಟೇ ಅಲ್ಲ, ರಾಜಕೀಯ ಮೂರ್ಖತನವನ್ನು ಪ್ರತಿಬಿಂಬಿಸಿದ್ದೇವೆ ಎಂದಿದ್ದಾರೆ.

# ಸುವೇಂದು-ವಿಜಯ್ ದಿಗ್ವಿಜಯ ಹಾದಿ

## ಉಭಯ ನಾಯಕರ ರಾಜಕೀಯ ಪಯಣದ ಫೈವ್ ಫ್ಯಾಕ್ಟ್ಸ

1 ಸುವೇಂದು ಅಧಿಕಾರಿ ಅವರು ಜನಿಸಿದ್ದು 1970. ಅವರ ತಂದೆ ಸಿಸಿರ್ ಅಧಿಕಾರಿ ಕೂಡ ರಾಜಕಾರಣಿ. ಕಾಂಗ್ರೆಸ್, ಟಿಎಂಸಿಯಲ್ಲಿದ್ದರು. ಮಗ ಬಿಜೆಪಿಗೆ ಬಂದ ಮೇಲೆ ಅವರೂ ಮೋದಿ ಟೀಂ ಸೇರಿದರು.

2 2006ರಲ್ಲಿ ಮೊದಲ ಸಲ ಶಾಸಕರಾಗಿ ವಿಧಾನಸಭೆ ಪ್ರವೇಶ ಮಾಡಿದ ಸುವೇಂದು. 10 ವರ್ಷದ ಬಳಿಕ 2016ರಲ್ಲಿ ಮಮತಾ ಕ್ಯಾಬಿನೆಟ್‌ನಲ್ಲಿ ಸಚಿವ ಸ್ಥಾನ

3 ಮಮತಾ ಜತೆ ನಿಂತು ಪ.ಬಂಗಾಳದಲ್ಲಿ ಟಿಎಂಸಿ ಕಟ್ಟಿದ್ದೇ ಸುವೇಂದು ಅಧಿಕಾರಿ. ಕಮ್ಯುನಿಸ್ಟ್ ಕೋಟೆ ಭೇದಿಸಿ ಮಮತಾ ಅಧಿಕಾರಕ್ಕೇರಿಸುವಲ್ಲಿ ಇವರದ್ದು ಮುಖ್ಯ ಪಾತ್ರ.

4 2020ರಲ್ಲಿ ದೀದಿ ಜತೆಗೆ ರಾಜಕೀಯ ಜಗಳ, ಸಾಂಗತ್ಯ ಕಟ್. ಬಿಜೆಪಿ ಸೇರ್ಪಡೆ. ಮಮತಾ ಜತೆ ಸೈದ್ಧಾಂತಿಕ ಹೋರಾಟ ಶುರು. ಸೋದರ ಎಂದಿದ್ದ ಸುವೇಂದುವನ್ನು ವೈರಿಯಂತೆ ಕಾಣಲು ಶುರು ಮಾಡಿದ ದೀದಿ.

5 2021ರಲ್ಲಿ ಬಿಜೆಪಿ ಸೋತರೂ, ಮಮತಾ ಸೋಲಿಸಿದ್ದ ಸುವೇಂದು. ಮತ್ತೈದು ವರ್ಷ ಪಟ್ಟು ಬಿಡದೆ ಪಕ್ಷ ಕಟ್ಟಿ ಈಗ ಬಂಗಾಳದ ಸಿಎಂ.

1 2010ರಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಆಗಿದ್ದ ವಿಜಯ್. ಆಗಲೇ ದಳಪತಿಯ ರಾಜಕೀಯ ಪ್ರವೇಶದ ಬಗ್ಗೆ ಭಾರೀ ಸುದ್ದಿಯಾಗಿತ್ತು. ಆದರೆ ಎಲ್ಲಾ ಸುದ್ದಿಗೂ ತಣ್ಣೀರೆರಚಿದ್ದ ನಟ.

2 2014ರಲ್ಲಿ ಅಂದಿನ ಬಿಜೆಪಿ ಪ್ರಧಾನಿ ಅಭ್ಯರ್ಥಿ ಮೋದಿ ಜೊತೆ ಭೇಟಿ, ಆಗಲೂ ರಾಜಕೀಯ ಪ್ರವೇಶದ ಗುಲ್ಲು. ಭೇಟಿ ಬಗ್ಗೆ ಏನೂ ಮಾತಾಡದೆ ನುಣುಚಿಕೊಂಡಿದ್ದ ವಿಜಯ್

3 ಈ ಎಲ್ಲಾ ಬೆಳವಣಿಗೆಗಳ ಮಧ್ಯೆಯೂ ಯಾವುದೇ ಪಕ್ಷಗಳ ಜತೆ ಗುರುತಿಸಿಕೊಳ್ಳದ ದಳಪತಿ ವಿಜಯ್, ಡಿಎಂಕೆ–ಎಐಎಡಿಎಂಕೆ ಪಕ್ಷಗಳಿಂದಲೂ ಅಂತರ.

4 2011ರಲ್ಲಿ ಶುರುವಾದ ಅಣ್ಣಾ ಹಜಾರೆ ಚಳವಳಿಯಲ್ಲೂ ಭಾಗಿಯಾಗಿ, ಸಹಕಾರ ನೀಡಿದ್ದ ವಿಜಯ್. ಆಗ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ್ದರು. ಭ್ರಷ್ಟಾಚಾರದ ವಿರುದ್ಧ ಧ್ವನಿಯನ್ನು ಎತ್ತಿದ್ದರು

5 2024ರಲ್ಲಿ ತಮ್ಮದೇ ಪಕ್ಷ ಟಿವಿಕೆ ಘೋಷಣೆ. ಸತತ 1 ವರ್ಷ ಪ್ರಚಾರ. ಭಾರೀ ವಿರೋಧ ಮಧ್ಯೆಯೂ ಬಗ್ಗಲಿಲ್ಲ. ಈಗ ತಮಿಳುನಾಡು ಸಿಎಂ.

# ಸುವೇಂದು ಅಧಿಕಾರಿ, ಬಿಜೆಪಿಗೆ ಶೇಖ್ ಹಸೀನಾ ಅಭಿನಂದನೆ

## ಅವಾಮಿ ಲೀಗ್‌ನಿಂದ ಹೇಳಿಕೆ ಬಿಡುಗಡೆ

**ನವದೆಹಲಿ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಭರ್ಜರಿ ಗೆಲುವಿಗೆ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅಭಿನಂದನೆ ಸಲ್ಲಿಸಿದ್ದಾರೆ.

ಜತೆಗೆ ಮುಖ್ಯಮಂತ್ರಿ ಹುದ್ದೆಗೇರಲು ಸಜ್ಜಾಗಿ ನಿಂತಿರುವ ಸುವೇಂದು ಅಧಿಕಾರಿ ಅವರಿಗೂ ಶುಭ ಕೋರಿದ್ದಾರೆ. ಈ ಬಗ್ಗೆ ಆವಾಮಿ ಲೀಗ್ ಹೇಳಿಕೆ ಬಿಡುಗಡೆ ಮಾಡಿದ್ದು, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಎಲ್ಲರಿಗೂ ಅವಾಮಿ ಲೀಗ್ ಅಧ್ಯಕ್ಷೆ ಮತ್ತು ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಕಡೆಯಿಂದ ಅಭಿನಂದನೆಗಳು ಮತ್ತು ಶುಭಾಶಯಗಳು ಎಂದು ತಿಳಿಸಿದೆ. ಇನ್ನು ಮುಖ್ಯಮಂತ್ರಿಯಾಗಿ ಆಯ್ಕೆಯಾದ ಸುವೇಂದು ಅಧಿಕಾರಿ ಅವರಿಗೆ ಶೇಖ್ ಹಸೀನಾ ಅವರು ವಿಶೇಷ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಇದೇ ವೇಳೆ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೂ ಅವರು ಶುಭ ಹಾರೈಸಿದ್ದಾರೆ. ಜತೆಗೆ ಭಾರತದ ಜನತೆಗೆ ಅವರು ಶುಭ ಕೋರಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಬಾಂಗ್ಲಾದೇಶಕ್ಕೆ ಭಾರಿ ಸಮಸ್ಯೆ ಆಗಲಿದೆ ಎಂದು ಕೆಲ ದಿನಗಳ ಹಿಂದೆಯಷ್ಟೇ ಅಲ್ಲಿನ ಎಂಪಿಯೊಬ್ಬರು ಬಾಂಗ್ಲಾ ಸಂಸತ್ತಿನಲ್ಲೇ ಹೇಳಿಕೆ ನೀಡಿದ್ದರು. ಆದರೆ ಈಗ ಮಾಜಿ ಪಿಎಂ ಶೇಖ್ ಹಸೀನಾ ಅವರೇ ಬಿಜೆಪಿಗೆ ಶುಭಕೋರಿದ್ದಾರೆ.

# ವಿದೇಶ ಸಮಾಚಾರ

## ವಿದೇಶಗಳಿಗೆ 10% ತೆರಿಗೆ ಹಾಕಿದ್ದು ತಪ್ಪು: ಕೋರ್ಟ್ ಟ್ರಂಪ್‌ಗೆ ಮತ್ತೆ ಛೀಮಾರಿ

### ಬೇರೆ ರೀತೀಲಿ ಮತ್ತೆ ಟ್ಯಾಕ್ಸ್: ಟ್ರಂಪ್

**ನ್ಯೂಯಾರ್ಕ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಾಗತಿಕ ಮಟ್ಟದಲ್ಲಿ ವಿಧಿಸಿರುವ ಶೇ.10ರ ಸುಂಕ ಕಾನೂನುಬಾಹಿರ ಎಂದು ಅಮೆರಿಕದ ಫೆಡರಲ್



ನ್ಯಾಯಾಲಯ ತೀರ್ಪು ನೀಡುವುದರೊಂದಿಗೆ ಈ ಸುಂಕ ರದ್ದು ಗೊಳಿಸಿದೆ. ಹೀಗಾಗಿ ಟ್ರಂಪ್ ಅವರ ವ್ಯಾಪಾರ ನೀತಿಗೆ ಮತ್ತೊಮ್ಮೆ ಹಿನ್ನಡೆಯಾಗಿದೆ.

1974ರ ವ್ಯಾಪಾರ ಕಾಯ್ದೆಯ 122ನೇ ಸೆಕ್ಷನ್‌ನಡಿ ಸುಂಕಗಳನ್ನು ಸಮರ್ಥಿಸುವಲ್ಲಿ ಟ್ರಂಪ್ ಆಡಳಿತ ವಿಫಲವಾಗಿದೆ ಎಂದು ಯುಎಸ್ ಕೋರ್ಟ್ ಆಫ್ ಇಂಟರ್‌ನ್ಯಾಷನಲ್ ಟ್ರೇಡ್ ಎನ್ನುವ ನ್ಯಾಯಾಲಯ ಹೊರಡಿಸಿರುವ 2–1 ವಿಭಜನೆಯ ತೀರ್ಪಿನಲ್ಲಿ ಉಲ್ಲೇಖಿಸಿದೆ.

122ರ ಸೆಕ್ಷನ್ ಅಡಿಯಲ್ಲಿ, ಅಮೆರಿಕದ ಅಧ್ಯಕ್ಷರು ನಿರ್ದಿಷ್ಟ ಷರತ್ತುಗಳ ಅಡಿಯಲ್ಲಿ ಕಾಂಗ್ರೆಸ್ ಅನುಮೋದನೆಯಿಲ್ಲದೆ ಶೇ. 15 ಸುಂಕ ವಿಧಿಸಬಹುದು. ಆದಾಗ್ಯೂ, ಈ ಪ್ರಕರಣದಲ್ಲಿ ಆ ಷರತ್ತುಗಳನ್ನು ಪೂರೈಸಲಾಗಿಲ್ಲ ಎಂದು ನ್ಯಾಯಾಲಯ ವಿವರಿಸಿದೆ. ಅಧ್ಯಕ್ಷ ಟ್ರಂಪ್ ಈ ತೀರ್ಪಿನ ಬಗ್ಗೆ ಪ್ರತಿಕ್ರಿಯಿಸಿ, ತಮ್ಮ ಆಡಳಿತವು ತನ್ನ ವ್ಯಾಪಾರ ಕಾರ್ಯಸೂಚಿಯನ್ನು ಮುಂದುವರಿಸಲು ಪರ್ಯಾಯ ಕ್ರಮಗಳನ್ನು ಅನ್ವೇಷಿಸುತ್ತದೆ ಎಂದರು. ವರ್ಷದ ಆರಂಭದಲ್ಲಿ ಟ್ರಂಪ್ ಆಡಳಿತವು ಪರಿಚಯಿಸಿದ ಸುಂಕಗಳನ್ನು ಯುಎಸ್ ಸುಪ್ರೀಂಕೋರ್ಟ್ ಅಮಾನ್ಯಗೊಳಿಸಿದ ನಂತರ ಶೇ.10ರ ಸುಂಕಗಳನ್ನು ವಿಧಿಸಲಾಗಿತ್ತು.

## ಸಿಂದೂರ್ ವೇಳೆ ಪಾಕಿಸ್ತಾನಕ್ಕೆ ನೆರವು ನೀಡಿದ್ದು ಒಪ್ಪಿದ ಚೀನಾ

**ಬೀಜಿಂಗ್:** ಕಳೆದ ವರ್ಷ ಪಾಕ್ ವಿರುದ್ಧ ನಡೆದ ಆಪರೇಷನ್ ಸಿಂದೂರದ ನಾಲ್ಕು ದಿನಗಳ ಯುದ್ಧದ ವೇಳೆ ತಾನು ಪಾಕಿಸ್ತಾನಕ್ಕೆ ತಾಂತ್ರಿಕ ಬೆಂಬಲ

ಮತ್ತು ಯುದ್ಧ ಭೂಮಿಯಲ್ಲೇ ನೆರವು ನೀಡಿದ್ದಾಗಿ ಚೀನಾ ಮೊದಲ ಬಾರಿಗೆ ಬಹಿರಂಗವಾಗಿ ಒಪ್ಪಿಕೊಂಡಿದೆ.

ಚೀನಾದ ಸರ್ಕಾರಿ ಸ್ವಾಮ್ಯದ ದೂರದರ್ಶನ ವಾಹಿನಿ 'ಸಿಸಿ ಟಿವಿ' ಬಿಡುಗಡೆ ಮಾಡಿದ ವಿಶೇಷ ಸಂದರ್ಶನವೊಂದರಲ್ಲಿ ಈ ಮಾಹಿತಿ ಹೊರಬಿದ್ದಿದೆ. ಈ ಮೂಲಕ ನೆರೆಯ ರಾಷ್ಟ್ರಗಳ ನಡುವಿನ ಯುದ್ಧದ ಸಮಯದಲ್ಲಿ ಚೀನಾ ನೇರವಾಗಿ ಪಾಕಿಸ್ತಾನದ ಪರವಾಗಿ ಕಾರ್ಯ ನಿರ್ವಹಿಸಿರುವುದು ಈಗ ಸಾಬೀತಾಗಿದೆ. ಅಲ್ಲದೇ ಯುದ್ಧದ ಸಂದರ್ಭದಲ್ಲಿ ಚೀನಾ ಇಂಜಿನಿಯರ್‌ಗಳು ಪಾಕಿಸ್ತಾನದಲ್ಲೇ ಬೀಡುಬಿಟ್ಟಿದ್ದರು ಎಂದು ಹೇಳಲಾಗಿದೆ. ಇಲ್ಲಿಯವರೆಗೆ ಪಾಕ್‌ಗೆ ಸಿಂದೂರ ವೇಳೆ ನೆರವು ನೀಡಿದ್ದನ್ನು ಚೀನಾ ಮಾಧ್ಯಮಗಳು ಅಲ್ಲಗಳೆಯುತ್ತಲೇ ಬಂದಿದ್ದವು.

## ಇರಾನಿಂದ ಹೊರ್ಮುಜ್‌ನಲ್ಲಿ ವಿಶೇಷ ಟ್ಯಾಕ್ಸ್ ಸಂಗ್ರಹ ಏಜೆನ್ಸಿ

**ಟೆಹ್ರಾನ್:** ಒಂದೆಡೆ ಅಮೆರಿಕದೊಂದಿಗೆ ಶಾಂತಿ ಒಪ್ಪಂದದ ಮಾತುಕತೆಗಳು ನಡೆಯುತ್ತಿದ್ದರೂ, ಇತ್ತ ಇರಾನ್ ಜಾಗತಿಕವಾಗಿ ಅತ್ಯಂತ ಪ್ರಮುಖವಾದ ಹೊರ್ಮುಜ್ ಜಲಸಂಧಿಯ ಮೇಲೆ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿದೆ. ಈ ಜಲಮಾರ್ಗದ ಮೂಲಕ ಹಾದುಹೋಗುವ ವಾಣಿಜ್ಯ ಹಡಗುಗಳ ಮೇಲೆ ತೆರಿಗೆ ವಿಧಿಸಲು ಇರಾನ್ ಸರ್ಕಾರ ಹೊಸ ವಿಶೇಷ ಏಜೆನ್ಸಿಯೊಂದನ್ನು ಸ್ಥಾಪಿಸಿದೆ. ಹೊರ್ಮುಜ್ ಜಲಸಂಧಿಯ ಮೂಲಕ ಸಂಚರಿಸುವ ಹಡಗುಗಳನ್ನು ಪರಿಶೀಲಿಸಲು ಮತ್ತು ಅವುಗಳಿಗೆ ಶುಲ್ಕ ವಿಧಿಸಲು ಈ ಹೊಸ ಪ್ರಾಧಿಕಾರವನ್ನು ರಚಿಸಲಾಗಿದೆ. ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಶಾಂತಿ ಮಾತುಕತೆ ನಡೆಯುತ್ತಿದ್ದರೂ, ಆರ್ಥಿಕ ಲಾಭಕ್ಕಾಗಿ ಇರಾನ್ ಈ ನಿರ್ಧಾರ ಕೈಗೊಂಡಿದೆ.

## ದೀದಿ ಮಣಿಸಿ ಬಂಗಾಳ ಗೆದ್ದ ಅಧಿಕಾರಿಗೆ ಸಿಎಂ ಪಟ್ಟ

# ಇನ್ನು ಸುವೇಂದು ಅಧಿಕಾರ

### ಶಾ ನೇತೃತ್ವದಲ್ಲಿ ಆಯ್ಕೆ | ಇಂದು ಮೋದಿ ಸಮ್ಮುಖದಲ್ಲಿ ಪ್ರಮಾಣ

### ದೀದಿ ಬಳಿಕ ಬಂಗಾಳಕ್ಕೀಗ ಮತ್ತೊಬ್ಬ ಅವಿವಾಹಿತ ಮುಖ್ಯಮಂತ್ರಿ

**ಕೋಲ್ಕತಾ:** ಹೆಚ್ಚೂ ಕಡಿಮೆ 7 ವರ್ಷಗಳ ದೀರ್ಘಾವಧಿಗೆ ಮಮತಾ ಬ್ಯಾನರ್ಜಿ ವಿರುದ್ಧ ಸೆಣಸಿ ವಂಗಭೂಮಿಯಲ್ಲಿ ಬಿಜೆಪಿಗೆ ಗಟ್ಟಿ ಬುನಾದಿ ಹಾಕಿದ ಸುವೇಂದು ಅಧಿಕಾರಿ ಇಂದು ಬಂಗಾಳ ಸಿಎಂ ಆಗಿ ಅಧಿಕಾರ ಸ್ವೀಕರಿಸಲಿದ್ದು, ಕಮಲ ಪಕ್ಷದ ಮೊದಲ ಮುಖ್ಯಮಂತ್ರಿ ಎಂಬ ಅಗ್ಗಳಿಕೆ ಪಾತ್ರರಾಗಲಿದ್ದಾರೆ. ಆ ಮೂಲಕ 15 ವರ್ಷಗಳ ದೀದಿ ಆಡಳಿತಕ್ಕೆ ಈಗ ಅಧಿಕೃತ ಬ್ರೇಕ್ ಬಿದ್ದಿದೆ.

ಶುಕ್ರವಾರ ಕೇಂದ್ರ ಸಚಿವ, ಬಿಜೆಪಿ ವರಿಷ್ಠ ಅಮಿತ್ ಶಾ ಅವರ ನೇತೃತ್ವದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಸುವೇಂದು ಅವರನ್ನು ಅವಿರೋಧವಾಗಿ ಪಕ್ಷದ ನಾಯಕ ಎಂದು ಆಯ್ಕೆ ಮಾಡಲಾಯಿತು. ಜತೆಗೆ ಅವರನ್ನು ಮುಖ್ಯಮಂತ್ರಿ ಮಾಡಲು ಒಪ್ಪಿಗೆ ಇದೆ ಎಂದು ಎಲ್ಲರೂ ಒಕ್ಕಂಠದಿಂದ ಘೋಷಿಸಿದರು.

ಮೇ 9ರ ಶನಿವಾರದಂದು ಕೋಲ್ಕತಾದ ಐತಿಹಾಸಿಕ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಸುವೇಂದು ಅಧಿಕಾರಿ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ಭವಾನಿಪುರ ಮತ್ತು ನಂದಿಗ್ರಾಮ ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಸುವೇಂದು ಅಧಿಕಾರಿ, ಟಿಎಂಸಿ ಅಧಿನಾಯಕಿ ಮಮತಾ ಬ್ಯಾನರ್ಜಿ ಅವರ ಭದ್ರಕೋಟೆಯಲ್ಲೇ

ಅವರನ್ನು ಮಣಿಸುವ ಮೂಲಕ ಬಿಜೆಪಿಗೆ ಐತಿಹಾಸಿಕ ಜಯ ತಂದುಕೊಟ್ಟಿದ್ದಾರೆ. ಒಂದು ಕಾಲದಲ್ಲಿ ಮಮತಾ ಬ್ಯಾನರ್ಜಿ ಅವರ ಆಪ್ತ ವಲಯದಲ್ಲಿದ್ದ ಸುವೇಂದು, 2020ರಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದರು. ಅಂದಿನಿಂದಲೂ ಬಂಗಾಳದಲ್ಲಿ ಬಿಜೆಪಿ ಸಂಘಟನೆಗೆ ಶಕ್ತಿಯಾಗಿದ್ದ ಅವರು ಈಗ ಮುಖ್ಯಮಂತ್ರಿ ಗಾದಿಗೇರಲಿದ್ದಾರೆ. ಬಂಗಾಳದ 15 ವರ್ಷಗಳ ಟಿಎಂಸಿ ಆಡಳಿತವನ್ನು ಅಂತ್ಯಗೊಳಿಸುವಲ್ಲಿ ಬಿಜೆಪಿ ಸಫಲವಾಗಿದೆ. ಚುನಾವಣೋತ್ತರ ಹಿಂಸಾಚಾರದಲ್ಲಿ ಸ್ವತಃ ತಮ್ಮ ಪಿಎಯನ್ನೇ ಕಳೆದುಕೊಂಡಿರುವ ಸುವೇಂದು ಹಿಂಸಾ ಮುಕ್ತ ಆಡಳಿತ ನೀಡುತ್ತೇವೆ ಎಂದು ಭರವಸೆ ನೀಡಿದ್ದಾರೆ.

### ಮಹಿಳೆ ಸೇರಿ ಇಬ್ಬರು ಡಿಸಿಎಂ ಆಗಿ ಪ್ರಮಾಣ?

ಆಡಳಿತದಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ಸಮತೋಲನ ಕಾಯ್ದುಕೊಳ್ಳಲು ಇಬ್ಬರು

ಉಪಮುಖ್ಯಮಂತ್ರಿಗಳನ್ನು ನೇಮಿಸಲು ಬಿಜೆಪಿ ಗಂಭೀರ ಚಿಂತನೆ ನಡೆಸಿದೆ ಎಂದು ವರದಿಯಾಗಿದೆ. ಇಬ್ಬರು ಉಪಮುಖ್ಯಮಂತ್ರಿಗಳ ಪೈಕಿ ಒಬ್ಬರು ಮಹಿಳೆ ಡಿಸಿಎಂ ಆಗುವುದು ಬಹುತೇಕ ಖಚಿತ ಎನ್ನಲಾಗಿದೆ. ಈ ರೇಸ್‌ನಲ್ಲಿ ಆಸನ್ಸೋಲ್ ದಕ್ಷಿಣ ಕ್ಷೇತ್ರದ ಶಾಸಕಿ ಹಾಗೂ ಬಿಜೆಪಿಯ ನಾಯಕಿ ಅಗ್ನಿಮಿತ್ರ ಪಾಲ್ ಅವರ ಹೆಸರು ಮುಂಚೂಣಿಯಲ್ಲಿ ಕೇಳಿಬರುತ್ತಿದೆ. ಇನ್ನುಳಿದಂತೆ ಮತ್ತೊಂದು ಉಪಮುಖ್ಯಮಂತ್ರಿ ಸ್ಥಾನಕ್ಕೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಹೆಸರು ಕೇಳಿಬರುತ್ತಿದೆ.

# ಲೋಕಸಭೆಯಲ್ಲಿ ಕಾಂಗ್ರೆಸ್ ಜೊತೆ ಕೂರಲ್ಲ, ಬೇರೆ ಸೀಟ್ ನೀಡಿ: ಡಿಎಂಕೆ

### ಲೋಕಸಭಾಧ್ಯಕ್ಷರಿಗೆ ಸ್ಟಾಲಿನ್ ಪಕ್ಷದಿಂದ ಪತ್ರ | ಇಂಡಿ ಕೂಟ ಛಿದ್ರ?

**ನವದೆಹಲಿ:** ತಮಿಳುನಾಡಿನಲ್ಲಿ ಡಿಎಂಕೆ ಸೋತ ನಂತರ ಕಾಂಗ್ರೆಸ್ ಟಿವಿಕೆ ಸಖ್ಯ ಬೆಳೆಸಿರುವ ಹಿನ್ನೆಲೆಯಲ್ಲಿ ಡಿಎಂಕೆ–ಕಾಂಗ್ರೆಸ್ ನಡುವಿನ ನಂಟು ಅಂತ್ಯಗೊಂಡಿದೆ. ಲೋಕಸಭೆಯಲ್ಲಿಯೂ ಕಾಂಗ್ರೆಸ್ ಜೊತೆಗಿರಲು ಬಯಸದ ಡಿಎಂಕೆ ಈಗ ತಮ್ಮ ಪಕ್ಷದ ಸದಸ್ಯರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡುವಂತೆ ಲೋಕಸಭಾ ಸಭಾಪತಿಗೆ ಮನವಿ ಮಾಡಿದೆ. ಡಿಎಂಕೆ ಸಂಸದೆ ಕನಿಮೋಳಿ ಅವರು ಶುಕ್ರವಾರ ಲೋಕಸಭಾ ಸ್ಪೀಕರ್‌ಗೆ ಪತ್ರ ಬರೆದು ಪ್ರತ್ಯೇಕ ಆಸನ ವ್ಯವಸ್ಥೆಗೆ ವಿನಂತಿ ಮಾಡಿಕೊಂಡಿದ್ದಾರೆ.

ತಮಿಳುನಾಡಿನ ಚುನಾವಣೆಯಲ್ಲಿ ಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡು ಐದು ಸ್ಥಾನಗಳನ್ನು ಗೆದ್ದಿರುವ ಕಾಂಗ್ರೆಸ್, 10 ಸ್ಥಾನಗಳ ಬಹುಮತದ ಕೊರತೆ ಎದುರಿಸುತ್ತಿರುವ ಟಿವಿಕೆಗೆ ಷರತ್ತುಬದ್ಧ ಬೆಂಬಲ ನೀಡಿದೆ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಹಾಗೂ ಕಾಂಗ್ರೆಸ್ಸಿನೊಂದಿಗಿನ ಮೈತ್ರಿ ಕೊನೆಗೊಂಡಿರುವುದರಿಂದ ಆ ಪಕ್ಷದ ಜೊತೆ ಕುಳಿತುಕೊಳ್ಳುವುದು ಸರಿಯಲ್ಲ ಎಂದು ಭಾವಿಸಿರುವ ಕನಿಮೋಳಿ, ಡಿಎಂಕೆ ಸಂಸದರ ಆಸನ ವ್ಯವಸ್ಥೆ ಬದಲಾವಣೆ ಮಾಡಲು ವಿನಂತಿಸಿದ್ದಾರೆ.

ಈ ಮಧ್ಯೆ ಸಮಾಜವಾದಿ ಪಕ್ಷ ನಾಯಕ ಅಖಿಲೇಶ್ ಯಾದವ್ ಅವರು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಹಾಗೂ ಡಿಎಂಕೆ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಅವರನ್ನು ಶುಕ್ರವಾರ ಕೋಲ್ಕತ್ತಾದಲ್ಲಿ ಭೇಟಿಯಾದ ಬಳಿಕ ಕಾಂಗ್ರೆಸ್ ಧೋರಣೆಯನ್ನು ಟೀಕಿಸಿದ್ದಾರೆ. ಕಷ್ಟದ ಸಮಯದಲ್ಲಿ ಕೈಬಿಡುವವರಲ್ಲ ಎಂಬ ಶೀರ್ಷಿಕೆಯೊಂದಿಗೆ ಮಮತಾ ಹಾಗೂ ಸ್ಟಾಲಿನ್ ಫೋಟೋಗಳನ್ನೂ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

### ಕಾಂಗ್ರೆಸ್ ಮತ್ತು ಡಿಎಂಕೆ ಕಾರ್ಯಕರ್ತರ ಮಾರಾಮಾರಿ

**ಮೈಲಾಡುತುರೈ:** ವಿಜಯ್‌ಗೆ ಟಿವಿಕೆ ಸರ್ಕಾರ ರಚಿಸಲು ರಾಜ್ಯಪಾಲರು ಆಹ್ವಾನ ನೀಡದಿರುವುದನ್ನು ಪ್ರತಿಭಟಿಸಿದ ಕಾಂಗ್ರೆಸ್ ಸದಸ್ಯರಿಗೆ ಡಿಎಂಕೆ ಕಾರ್ಯಕರ್ತರು ಥಳಿಸಿದ ಘಟನೆ ಮೈಲಾಡುತುರೈ ಮಾರುಕಟ್ಟೆ ಬಳಿ ಸಂಭವಿಸಿದೆ. ಕಿಟ್ಟಪ್ಪ ಮಾರುಕಟ್ಟೆ ಬಳಿ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಭಾನುಪ್ರಕಾಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯ ವೇಳೆ ಅಲ್ಲಿಗೆ ಬಂದ ಡಿಎಂಕೆ ಸದಸ್ಯರು ತಮ್ಮ ಪಕ್ಷದ ನಾಯಕನಿಗೆ ದ್ರೋಹ ಬಗೆದು ಪ್ರತಿಭಟಿಸಲು ಬಂದಿದ್ದೀರಾ? ಎಂದು ಪ್ರಶ್ನಿಸಿ ಕಾಂಗ್ರೆಸಿಗರಿಂದ ಧ್ವಜಗಳನ್ನು ಕಸಿದು ರಸ್ತೆಗೆ ಎಸೆದಿರುವುದಲ್ಲದೆ, ಮನಸೋಇಚ್ಛೆ ಥಳಿಸಿದರು. ಆಗ ಕಾಂಗ್ರೆಸ್ಸಿಗರ ಓಡಿ ಹೋದರು ಎಂದು ವರದಿಯಾಗಿದೆ.

# ಮಕ್ಕಳ ಅಶ್ಲೀಲ ಕಂಟೆಂಟ್ ಶೇರ್ ಮಾಡುವ ಕೇಸ್ ಹೆಚ್ಚಳ: ವರದಿ

**ಚೆನ್ನೈ:** ದೇಶಾದ್ಯಂತ ಅಪರಾಧ ಪ್ರಕರಣಗಳ ಒಟ್ಟಾರೆ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿದ್ದರೂ ಮಕ್ಕಳ ಮೇಲಿನ ಅಪರಾಧಗಳು ಹೆಚ್ಚುತ್ತಲೇ ಇವೆ ಎಂದು



ಎನ್‌ಸಿಆರ್‌ಬಿಯ ಇತ್ತೀಚಿನ ಅಂಕಿಅಂಶಗಳು ಹೇಳಿವೆ.

ಮಕ್ಕಳ ಕುರಿತು ದಾಖಲಾಗುವ ಪ್ರತಿ 10 ಸೈಬರ್ ಅಪರಾಧಗಳಲ್ಲಿ ಸುಮಾರು 9 ಪ್ರಕರಣಗಳು ಮಕ್ಕಳನ್ನು ಲೈಂಗಿಕವಾಗಿ ಚಿತ್ರಿಸಿರುವ ಕಂಟೆಂಟ್‌ಗಳನ್ನು ಶೇರ್ ಮಾಡುವ ಪ್ರಕರಣಗಳೇ ಆಗಿವೆ ಎಂದು ವರದಿ ತಿಳಿಸಿದೆ.

2023ರಲ್ಲಿ ಮಕ್ಕಳ ವಿರುದ್ಧದ ಅಪರಾಧ ಪ್ರಕರಣಗಳ ಸಂಖ್ಯೆ 177335 ಇತ್ತು. 2024ರಲ್ಲಿ ಇದು 5.8%ಗೆ ಏರಿಕೆಯಾಗಿದ್ದು, ದಾಖಲಾದ ಪ್ರಕರಣಗಳ ಸಂಖ್ಯೆ 187702 ಆಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಕಳೆದ ನಾಲ್ಕು ವರ್ಷಗಳಲ್ಲಿ ಭಾರತದಲ್ಲಿ ಒಟ್ಟಾರೆ ಅಪರಾಧಗಳು ಶೇ.10.8ರಷ್ಟು ಕಡಿಮೆಯಾಗಿದೆ ಎಂದು ಎನ್‌ಸಿಆರ್‌ಬಿಯ ವರದಿ ಹೇಳಿದೆ.

# 2010ರಲ್ಲಿ 76 ಭದ್ರತಾ ಸಿಬ್ಬಂದಿ ಹತ್ಯೆಗೈದ 10 ನಕ್ಸಲರು ಖುಲಾಸೆ

**ರಾಯಪುರ:** ದೇಶವನ್ನೇ ಬೆಚ್ಚಿಬೀಳಿಸಿದ್ದ 2010ರ ತಡ್ಮೆಟ್ಲಾ ನಕ್ಸಲ್ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹತ್ವದ ತೀರ್ಪು ನೀಡಿರುವ ಛತ್ತೀಸ್‌ಗಢ ಹೈಕೋರ್ಟ್, 10



ಮಂದಿ ಆರೋಪಿಗಳನ್ನು ಖುಲಾಸೆಗೊಳಿಸಿ ಕೆಳ ನ್ಯಾಯಾಲಯ ನೀಡಿದ್ದ ಆದೇಶವನ್ನು ಎತ್ತಿ ಹಿಡಿದಿದೆ. ಏ.6, 2010 ರಂದು ದಂತೇವಾಡ ಜಿಲ್ಲೆಯ ತಡ್ಮೆಟ್ಲಾ ಕಾಡುಗಳಲ್ಲಿ ನಕ್ಸಲರು ಭೀಕರ ಹೊಂಚುದಾಳಿ ನಡೆಸಿದ್ದರು. ಈ ದಾಳಿಯಲ್ಲಿ ಸಿಆರ್‌ಪಿಎಫ್‌ನ 75 ಯೋಧರು ಮತ್ತು ಒಬ್ಬ ರಾಜ್ಯ ಪೊಲೀಸ್ ಸಿಬ್ಬಂದಿ ಸೇರಿದಂತೆ ಒಟ್ಟು 76 ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದರು. ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿದ ನ್ಯಾ.ರಮೇಶ್ ಸಿನ್ಹಾ ಮತ್ತು ನ್ಯಾ.ರವೀಂದ್ರ ಕುಮಾರ್ ಅವರ ಪೀಠ, ಆರೋಪಿಗಳ ವಿರುದ್ಧ ಸಾಕ್ಷ್ಯವಿಲ್ಲ, ಕೇವಲ ಸಂಶಯದ ಆಧಾರದ ಮೇಲೆ ಶಿಕ್ಷೆ ನೀಡಲು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ.

# ಶಾಲೆ ಕಟ್ಟಲು 800 ವರ್ಷ ಹಳೆ ಶಿವನ ದೇವಸ್ಥಾನವೇ ನೆಲಸಮ!

**ವಾರಾಂಗಲ್:** ವಾರಂಗಲ್ ಜಿಲ್ಲೆಯ ಖಾನಾಪುರದ ಅಶೋಕ ನಗರದಲ್ಲಿ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಸುಮಾರು 800 ವರ್ಷಗಳ ಹಳೆಯ ಕಾಕತೀಯ ಕಾಲದ ಶಿವ

ದೇವಾಲಯವನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸಲಾಗಿದೆ. ಸರ್ಕಾರದ ಈ ಕ್ರಮಕ್ಕೆ ಇತಿಹಾಸಕಾರರು ಹಾಗೂ ಭಕ್ತರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಈ ಸಂಬಂಧ ಪ್ರಕರಣ ದಾಖಲಾಗಿದೆ. ಸರ್ಕಾರದ ವಸತಿ ಶಾಲೆ ನಿರ್ಮಾಣಕ್ಕಾಗಿ ಗುರುತಿಸಲಾದ 30 ಎಕರೆ ಜಾಗದಲ್ಲಿ ಈ ಪುರಾತನ ದೇವಾಲಯವಿತ್ತು. ಮೇ 6ರಂದು ಭೂಮಿ ಸಮತಟ್ಟು ಮಾಡುವ ವೇಳೆ ದೇವಾಲಯವನ್ನು ಧ್ವಂಸಗೊಳಿಸಲಾಗಿದೆ ಎಂದು ಆರೋಪಿಸಲಾಗಿದೆ. ಈ ದೇವಾಲಯವು 13ನೇ ಶತಮಾನದ ಕಾಕತೀಯ ದೊರೆ ಗಣಪತಿ ದೇವನ ಕಾಲಕ್ಕೆ ಸೇರಿದ್ದಾಗಿದ್ದು, ಇಲ್ಲಿ ಕ್ರಿ.ಶ. 1231ರ ಅಪರೂಪದ ತೆಲುಗು ಶಾಸನಗಳಿದ್ದವು ಎಂದು ಇತಿಹಾಸಕಾರರು ತಿಳಿಸಿದ್ದಾರೆ.

# ಸಿಂದೂರ್‌ಗೆ 1 ವರ್ಷ ತುಂಬಿದ ದಿನವೇ ಮತ್ತೊಬ್ಬ ಉಗ್ರ ಫಿನಿಶ್

**ಮುಜಫರಾಬಾದ್:** ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಭಾರತ ವಿರೋಧಿ ಕೃತ್ಯಗಳಲ್ಲಿ ತೊಡಗಿದ್ದ ಲಷ್ಕರ್–ಎ–ತೋಯ್ಬಾ ಸಂಘಟನೆಯ ಮತ್ತೊಬ್ಬ ಉಗ್ರ ಇಸ್ಮಾಯಿಲ್

ಅಹ್ಮದ್ ನಿಗೂಢವಾಗಿ ಹತನಾಗಿದ್ದಾನೆ. ಕಳೆದ ವರ್ಷ ಭಾರತವು ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ ನಡೆಸಿದ್ದ ಐತಿಹಾಸಿಕ ಆಪರೇಷನ್ ಸಿಂದೂರ್ ಕಾರ್ಯಾಚರಣೆಯ ಮೊದಲ ವರ್ಷದ ವಾರ್ಷಿಕೋತ್ಸವದಂದೇ ಈ ಹತ್ಯೆ ನಡೆದಿರುವುದು ಈಗ ಚರ್ಚೆಗೆ ಗ್ರಾಸವಾಗಿದೆ. ವರದಿಗಳ ಪ್ರಕಾರ, ಇಸ್ಮಾಯಿಲ್ ಅಹ್ಮದ್ ಪಿಒಕೆಯ ಉಗ್ರರ ಸುರಕ್ಷಿತ ಅಡಗುತಾಣವೊಂದರಲ್ಲಿ ಶವವಾಗಿ ಪತ್ತೆಯಾಗಿದ್ದಾನೆ.

ಅಪರಿಚಿತ ದುಷ್ಕರ್ಮಿಗಳು ಈತನನ್ನು ಹತ್ಯೆ ಮಾಡಿರಬಹುದು ಅಥವಾ ಆಂತರಿಕ ಕಲಹದಿಂದ ಈ ಘಟನೆ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಈತ ಜಮ್ಮು ಮತ್ತು ಕಾಶ್ಮೀರದಲ್ಲಿ ಹಲವು ಉಗ್ರಗಾಮಿ ದಾಳಿಗಳಿಗೆ ಸಂಚು ರೂಪಿಸಿದ್ದ ಎನ್ನಲಾಗಿದೆ. ಈತನ ಸಾವಿಗೆ ಕಾರಣ ಏನು ಹಾಗೂ ಯಾರು ಈ ಉಗ್ರನ ಹತ್ಯೆ ಮಾಡಿದರು ಎಂಬುದು ನಿಗೂಢವಾಗಿದೆ.

# ಗೌರ್ನರ್‌ಗೆ ಹೀಗೇ ಮಾಡಿ ಎಂದು ಹೇಳಲಾಗದು!




ಚುನಾವಣೆಗಳ ನಂತರ ಯಾವುದೇ ರಾಜ್ಯದಲ್ಲಿ ಯಾವ ಪಕ್ಷಕ್ಕೂ ಬಹುಮತ ಸಿಗದೆ 'ತ್ರಿಶಂಕು' ಅಥವಾ ಅತಂತ್ರ ಸ್ಥಿತಿ ನಿರ್ಮಾಣವಾದರೆ ಆಗ ಸರ್ಕಾರ ರಚನೆಯ ಸಂಪೂರ್ಣ ವಿವೇಚನಾಧಿಕಾರ ರಾಜ್ಯಪಾಲರ ಕೈಯಲ್ಲಿರುತ್ತದೆ ಎಂಬುದು ಈ ಹಿಂದೆ ಹಲವು ರಾಜ್ಯಪಾಲರು ಕೈಗೊಂಡ ಹಲವು ನಿರ್ಣಯಗಳೇ ನಿದರ್ಶನಗಳಾಗಿವೆ. ಸುಪ್ರೀಂ ಕೋರ್ಟ್ ಅಥವಾ ರಾಷ್ಟ್ರಪತಿಗಳ ಮಧ್ಯಪ್ರವೇಶಿಸಿದ ಸಂದರ್ಭ ಹೊರತುಪಡಿಸಿ, ಹೊರಗಿನಿಂದ 'ನೀವು ಹೀಗೇ ಮಾಡಿ', 'ಹಾಗೇ ಮಾಡಿ' ಎಂದು ಯಾರೊಬ್ಬರೂ ರಾಜ್ಯಪಾಲರಿಗೆ ತಾಕೀತು ಮಾಡುವಂತಿಲ್ಲ. ಈ ಕುರಿತು ಇಲ್ಲಿ ಈ ಹಿಂದಿನ ಕೆಲವು ನಿದರ್ಶನಗಳತ್ತ ಒಂದು ಹಿನ್ನೋಟ ಬೀರಲಾಗಿದೆ.

**ಅತಂತ್ರ ಫಲಿತಾಂಶ ಬಂದಾಗ ವಿವೇಚನೆ ಬಳಸಿ ನಿರ್ಧಾರ ಕೈಗೊಳ್ಳಬಹುದು: ಸಂವಿಧಾನ**

**ಗೌರ್ನರ್ ನಡೆ ಸಂವಿಧಾನ ಬದ್ಧವಲ್ಲ ಎನಿಸಿದಾಗ ಕೋರ್ಟ್ ನಿರ್ದೇಶನವನ್ನು ನೀಡಬಹುದು**

### ಅತಿದೊಡ್ಡ ಪಕ್ಷ ಆಹ್ವಾನಿಸುವುದು ಪದ್ಧತಿ ಅಷ್ಟೇ..

ಸಂವಿಧಾನದ ವಿಧಿ 164 (1) ರನ್ವಯ ಒಂದು ರಾಜ್ಯಕ್ಕೆ ಮುಖ್ಯಮಂತ್ರಿಯನ್ನು ನೇಮಿಸುವ ಅಧಿಕಾರ ರಾಜ್ಯಪಾಲರಿಗೆ ಇದೆ. ವಿಧಿ 163ರ ಪ್ರಕಾರ ಒಂದು ರಾಜ್ಯದಲ್ಲಿ ಯಾರಿಗೂ ಸ್ಪಷ್ಟ ಬಹುಮತ ಬರದೆ ಅತಂತ್ರ ಸ್ಥಿತಿ ನಿರ್ಮಾಣವಾದಾಗ ಮುಂದಿನ ನಿರ್ಧಾರ ಕೈಗೊಳ್ಳುವ ವಿವೇಚನಾಧಿಕಾರ ರಾಜ್ಯಪಾಲರಿಗೆ ಇದೆ. ಆದರೆ ಎಸ್.ಆರ್. ಬೊಮ್ಮಾಯಿ ವರ್ಸಸ್ ಕೇಂದ್ರ ಸರ್ಕಾರದ ಪ್ರಕರಣ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಸೇರಿದಂತೆ ಯಾವುದೇ ಸಂದರ್ಭದಲ್ಲೂ ಸರ್ಕಾರ ರಚಿಸಿದವರು ಶಾಸನಸಭೆಯಲ್ಲೇ ತಮ್ಮ ಬಹುಮತ ಸಾಬೀತುಪಡಿಸಬೇಕಾಗುತ್ತದೆ. ಆದರೆ ಬಹುಮತ ಇಲ್ಲದಿದ್ದರೂ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಪಕ್ಷವನ್ನೇ ಸರ್ಕಾರ ರಚನೆಗೆ ಆಹ್ವಾನಿಸಬೇಕೆಂಬ ನಿಯಮವೇನೂ ಇಲ್ಲ. ಇದು ನಡೆದುಕೊಂಡು ಬಂದ ಪದ್ಧತಿ ಅಷ್ಟೇ.

## ರಾಜ್ಯಪಾಲರ ವಿವೇಚನೆಯ ಇತ್ತೀಚಿನ ಪ್ರಕರಣಗಳು

### 1) ಮಹಾರಾಷ್ಟ್ರ-2019

ಮಹಾರಾಷ್ಟ್ರದಲ್ಲಿ ಬಿಜೆಪಿ ಹಾಗೂ ಅವಿಭಜಿತ ಶಿವಸೇನೆ ನಡುವಿನ ಚುನಾವಣಾ ಪೂರ್ವ ಮೈತ್ರಿಯು ಚುನಾವಣೆ ನಂತರ ಮುರಿದುಬಿದ್ದಿತ್ತು. ಈ ಹಿನ್ನೆಲೆಯಲ್ಲಿ ಆಗ ರಾಜ್ಯಪಾಲ ಭಗತ್‌ಸಿಂಗ್ ಕೊಶ್ಯಾರಿಯವರು ಏಕೈಕ ದೊಡ್ಡ ಪಕ್ಷವಾಗಿ 105 ಸ್ಥಾನ ಗಳಿಸಿದ್ದ ಬಿ.ಜೆ.ಪಿ.ಯ ದೇವೇಂದ್ರ ಫಡ್ನವೀಸ್‌ರನ್ನು ನವೆಂಬರ್ 23ರಂದು ಸರ್ಕಾರ ರಚನೆಗೆ ಆಹ್ವಾನಿಸಿದ್ದರು.

### 2) ಕರ್ನಾಟಕ-2018

ಬಿಜೆಪಿ 104 ಸ್ಥಾನಗಳೊಂದಿಗೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಸರ್ಕಾರ ರಚನೆಗೆ 113 ಸ್ಥಾನಗಳ ಅಗತ್ಯ ವಿತ್ತು. ಆಗ 2ನೇ ಅತಿದೊಡ್ಡ ಪಕ್ಷವಾಗಿ 80 ಸ್ಥಾನ ಗಳಿಸಿದ್ದ ಕಾಂಗ್ರೆಸ್, 37 ಸ್ಥಾನ ಗಳಿಸಿದ್ದ ಜೆಡಿಎಸ್‌ಗೆ ಬೆಂಬಲ ಸೂಚಿಸಿ ಒಟ್ಟು 117 ಸ್ಥಾನಗಳನ್ನು ತೋರಿಸಿ ಸರ್ಕಾರ ರಚನೆಗೆ ಮುಂದಾಗಿತ್ತು. ಆದರೆ ರಾಜ್ಯಪಾಲ ವಜುಭಾಯ್ ವಾಲ ದೊಡ್ಡ ಪಕ್ಷ ಬಿಜೆಪಿಯ ಯಡಿಯೂರಪ್ಪರಿಗೆ ಸರ್ಕಾರ ರಚನೆಗೆ ಆಹ್ವಾನಿಸಿದರು.

### 3) ಗೋವಾ-2017

40 ಸದಸ್ಯ ಬಲದ ಗೋವಾ ವಿಧಾನಸಭೆಯಲ್ಲಿ ಕಾಂಗ್ರೆಸ್ 17 ಹಾಗೂ ಬಿಜೆಪಿ 13 ಸ್ಥಾನ ಗಳಿಸಿದ್ದವು. ರಾಜ್ಯಪಾಲ ಮೃದುಲ ಸಿನ್ಹಾ ಏಕೈಕ ದೊಡ್ಡ ಪಕ್ಷ ಕಾಂಗ್ರೆಸನ್ನು ಸರ್ಕಾರ ರಚನೆಗೆ ಆಹ್ವಾನಿಸಬಹುದು ಎಂಬ ನಿರೀಕ್ಷೆ ಸುಳ್ಳಾಯಿತು. ರಾಜ್ಯಪಾಲರು ಬಿಜೆಪಿಯ ಮನೋಹರ ಪರಿಕ್ಕರ್‌ರನ್ನು ಆಹ್ವಾನಿಸಿದರು. ಕೂಡಲೇ ಪರಿಕರ್ ಸಣ್ಣಪುಟ್ಟ ಪಕ್ಷಗಳ ಜತೆ ಸೇರಿ ಬಹುಮತ ಸಾಬೀತು ಮಾಡಿದರು.

### 4) ಮಣಿಪುರ-2017: ಆಗಿದ್ದು ಏನು..?

ಕಾಂಗ್ರೆಸ್ 28 ಹಾಗೂ ಬಿಜೆಪಿ 22 ಸ್ಥಾನ ಗಳಿಸಿದ್ದವು. ಆದರೆ ಬಿಜೆಪಿ ತಲಾ 4 ಸ್ಥಾನ ಹೊಂದಿದ್ದ ಎನ್‌ಪಿಪಿ ಮತ್ತು ಎನ್‌ಪಿಎಫ್ ಜತೆ ಮೈತ್ರಿ ಮಾಡಿಕೊಂಡಿತು. ಈ ಮೈತ್ರಿಗೆ ನಂತರ ಎಲ್‌ಜೆಪಿ, ಟಿಎಂಸಿ ಶಾಸಕರು ಸಹ ಕೈ ಜೋಡಿಸಿದರು. ಹೀಗಾಗಿ ಈ ಮೈತ್ರಿಕೂಟಕ್ಕೆ ಸರ್ಕಾರ ರಚಿಸಲು ಆಗ ರಾಜ್ಯಪಾಲರಾಗಿದ್ದ ನಜ್ಮಾ ಹೆಫ್ತುಲ್ಲಾ ಆಹ್ವಾನಿಸಿದರು. ಬಿಜೆಪಿಯ ಬೀರೇನ್ ಸಿಂಗ್ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದರು.

### 5) ದೆಹಲಿ-2013: ಆಗಿದ್ದು ಇದು..!

ದೆಹಲಿಯ 70 ಸದಸ್ಯ ಬಲದ ಶಾಸನ ಸಭೆಗೆ 2013ರಲ್ಲಿ ನಡೆದ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ 36 ಸ್ಥಾನಗಳ ಸ್ಪಷ್ಟ ಬಹುಮತ ಲಭಿಸಿರಲಿಲ್ಲ. ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ 31 ಸ್ಥಾನ ಗಳಿಸಿತ್ತು. ಆದರೂ ಬಹುಮತವಿಲ್ಲ ಎಂದು ಬಿಜೆಪಿ ಸರ್ಕಾರ ರಚಿಸಲಿಲ್ಲ. ಆಗ ರಾಜ್ಯಪಾಲರು ತಮ್ಮ ವಿವೇಚನೆ ಬಳಸಿ 28 ಸ್ಥಾನ ಗಳಿಸಿದ್ದ ಆಮ್ ಆದ್ಮಿ ಪಕ್ಷವನ್ನು ಅಹ್ವಾನಿಸಿದರು.

## ಸುದ್ದಿ ಮಿಂಚು

### ಆಣೆ–ಪ್ರಮಾಣಕ್ಕೆ ಮೂರೆಹೊದ ಅಂಚೆ ಮತ ಮರುಎಣಿಕೆ

**ಚಿಕ್ಕಮಗಳೂರು:** ಶೃಂಗೇರಿ ಕ್ಷೇತ್ರದ ಅಂಚೆ ಮತ ಮರುಎಣಿಕೆಯಲ್ಲಿ ಬಿಜೆಪಿ ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಕ್ಷೇತ್ರದಲ್ಲಿ ಆಣೆ–ಪ್ರಮಾಣದ–ಪ್ರಾರ್ಥನೆ ರಾಜಕೀಯ ಜೋರಾಗಿ ನಡೆಯುತ್ತಿದೆ. ಯಾರೇ ತಪ್ಪು ಮಾಡಿದ್ದರೂ ಶಿಕ್ಷೆಯಾಗಲಿ ಎಂದು ಶನಿವಾರ ಕೊಪ್ಪದ ವೀರಭದ್ರಸ್ವಾಮಿ ದೇಗುಲದಲ್ಲಿ ಕಾಂಗ್ರೆಸ್ಸಿನಿಂದ ಪ್ರಾರ್ಥನೆಗೆ ಸಿದ್ಧತೆ ನಡೆದಿದೆ. ಬಿಜೆಪಿ ಬೂತ್ ಏಜೆಂಟರುಗಳು ಶುಕ್ರವಾರ ದೇವರ ಮುಂದೆ ಕೌಂಟಿಂಗ್ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ಬಿಜೆಪಿ ಕಾರ್ಯಕರ್ತರು, ಬೂತ್ ಏಜೆಂಟ್‌ರಿಂದಲೇ ಸೋಲುಂಟಾಗಿದೆ ಎನ್ನುವ ವದಂತಿ ಹಿನ್ನೆಲೆಯಲ್ಲಿ ಕಾಂಗ್ರೆಸ್ಸಿಗರೊಂದಿಗೆ ಕೈಕೋಡಿಸಿ ಬಿಜೆಪಿ ಸೋಲಿಗೆ ಬಿಜೆಪಿಗರೇ ಸಹಕರಿಸಿದ ಆರೋಪ ಕೇಳಿಬರುತ್ತಿದೆ. ಶುಕ್ರವಾರ ಕೊಪ್ಪದ ದೇವಸ್ಥಾನದಲ್ಲಿ ಮತ ಎಣಿಕೆ ಬಗ್ಗೆ ಪ್ರಮಾಣ ಮಾಡಿದ ಕೌಂಟಿಂಗ್ ಬಿಜೆಪಿ ಏಜೆಂಟರ್‌ಗಳು ಕೊಪ್ಪದ ವೀರಭದ್ರಸ್ವಾಮಿ ದೇಗುಲ, ಗಬ್ಗಾನೆ ಬೂತರಾಯ ದೇವಸ್ಥಾನದಲ್ಲಿ ಆಣೆ–ಪ್ರಮಾಣ ಮಾಡಿದ್ದಾರೆಂದು ಹೇಳಲಾಗುತ್ತಿದೆ. 2023ರ ಮತದಾನದ ಎಣಿಕೆಯಲ್ಲಿ ಪಾಲ್ಗೊಂಡ ಏಜೆಂಟರುಗಳಾದ ಅದ್ದಡ ಸತೀಶ್, ಶೆಟ್ಟಿಗದ್ದೆ ರಾಮಸ್ವಾಮಿ, ಕಿರಣ್ ಮಡಬಳ್ಳಿ, ಅನು ನಾರ್ವೆ ಅವರುಗಳು ಮತ ಎಣಿಕೆಯಲ್ಲಿ ಯಾವುದೇ ಲೋಪವಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆಂದು ತಿಳಿದುಬಂದಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಸೋಲು–ಗೆಲುವಿನ ಹಿಂದೆ ಸುಳ್ಳು–ಸತ್ಯದ ರಾಜಕೀಯ ಆರಂಭಗೊಂಡಿದೆ. ಮರು ಮತ ಎಣಿಕೆಯಲ್ಲಿ 52 ಮತಗಳಿಂದ ಬಿಜೆಪಿ ಅಭ್ಯರ್ಥಿ ಜೀವರಾಜ್ ಗೆಲುವು ಕಂಡಿದ್ದಾರೆ.

### ಹೇಮರೆಡ್ಡಿ ಮಲ್ಲಮ್ಮ ಜಯಂತಿ

**ಅಜ್ಜಂಪುರ:** ಇಂದಿನಿಂದ ಎರಡು ದಿನಗಳ ಕಾಲ ಜರುಗಲಿರುವ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜಿಲ್ಲಾಮಟ್ಟದ ಜಯಂತ್ಯುತ್ಸವಕ್ಕೆ ತಾಲ್ಲೂಕಿನ ಗೊಂಡೇದಹಳ್ಳಿ ಗ್ರಾಮ ಸಜ್ಜುಗೊಂಡಿದೆ. ಇಂದು ಮಧ್ಯಾಹ್ನ ೩ಕ್ಕೆ ಹುಣಸಘಟ್ಟ ಗುರುಮೂರ್ತಿ ಶಿವಾಚಾ ರ್ಯ ಸ್ವಾಮೀಜಿ, ತಾವರೆಕೆರೆ ಶಿಲಾಮಠದ ಅಭಿನವ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಉತ್ಸವ ಮೂರ್ತಿ ಹಾಗೂ ಬಸವೇಶ್ವರ, ರುದ್ರದೇವರ ಉತ್ಸವಮೂರ್ತಿ ಮೆರವಣಿಗೆ ಜಾನಪದ ಕಲಾತಂಡ ಹಾಗೂ ಕೊಂಬು–ಕಹಳೆ, ಮಂಗಳವಾದ್ಯದೊಂದಿಗೆ ಕಾರ್ಯಕ್ರಮ ಚಾಲನೆಗೊಳ್ಳಲಿದೆ. ಸಂಜೆ ೫.೩೦ಕ್ಕೆ ಯಡಿಯೂರು ರೇಣುಕಾ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿರುವ ವೇದಿಕೆ ಕಾರ್ಯಕ್ರಮವನ್ನು ಸಂಸದ ಕೋಟ ಶ್ರೀನಿವಾಸ ಪೂಜಾರಿ ಉದ್ಘಾಟಿಸಲಿದ್ದಾರೆ. ಬಡಗನಾಡು ಹೇಮರೆಡ್ಡಿ ವೀರಶೈವ ಜನಾಂಗ ಕೇಂದ್ರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ವೇಳೆ ಶಾಸಕ ಜಿ.ಎಚ್.ಶ್ರೀನಿವಾಸ್, ವೈದ್ಯಕೀಯ ಶಿಕ್ಷಣ ವಿದ್ಯಾರ್ಥಿಗಳಿಗೆ, ನಾಡೋಜ ಗೊ.ರು. ಚನ್ನಬಸಪ್ಪ, ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕಅಂಕ ಪಡೆದ ವಿದ್ಯಾರ್ಥಿಗಳಿಗೆ, ಮಾಜಿ ಶಾಸಕ ಡಿ.ಎಸ್.ಸುರೇಶ್, ಎಸ್.ಎಂ.ನಾಗರಾಜ್, ಬೆಳ್ಳಿ ಪ್ರಕಾಶ್ ಪಿಯುಸಿಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಮಾಜಿ ಶಾಸಕ ವೈಎಸ್‌ವಿ ದತ್ತ ನೀಟ್, ಸಿಇಟಿಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಿದ್ದಾರೆ. ಜಿಪಂ ಮಾಜಿ ಸದಸ್ಯ ಕೆ.ಆರ್. ಆನಂದಪ್ಪ, ಗ್ರಾಮದ ಹಿರಿಯ ನಾಗರಿಕರಿಗೆ ಗೌರವ ಸಮರ್ಪಿಸಲಿದ್ದಾರೆ. ಚಲನಚಿತ್ರ ನಿರ್ದೇಶಕ ಚಂದೋಡಿ ಬಂಗಾರೇಶ್, ಹೇಮರೆಡ್ಡಿ ವೀರಶೈವ ಜನಾಂಗ ಸಂಘ ಗಿರಿಯಾಪುರ ಅಧ್ಯಕ್ಷ ಮುರುಗೇಶ್ ಪಾಲ್ಗೊಳ್ಳಲಿದ್ದಾರೆ. ರಾತ್ರಿ ೯ಕ್ಕೆ 'ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ' ನಾಟಕ ಪ್ರದರ್ಶನ ನಡೆಯಲಿದೆ.

# ಶೇ.56% ಮೀಸಲು ಕಾಯ್ದೆ: ಶೀಘ್ರ ತೀರ್ಮಾನ ಕೈಗೊಳ್ಳಿ

## ಇಲ್ಲದಿದ್ದರೆ ರಾಜ್ಯಾದ್ಯಂತ ಜನಾಂದೋಲನದ ಮೂಲಕ ಹೋರಾಟ | ಕೇಂದ್ರ, ರಾಜ್ಯ ಸರ್ಕಾರಗಳಿಗೆ ವಿ.ಎಸ್.ಉಗ್ರಪ್ಪ ಎಚ್ಚರಿಕೆ

**ಚಿಕ್ಕಮಗಳೂರು:** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಶೇ.56ರಷ್ಟು ಮೀಸಲಾತಿ ನೀಡುವ ಕಾಯ್ದೆಯನ್ನು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರ ಶೀಘ್ರ ತೀರ್ಮಾನ ಕೈಗೊಳ್ಳದಿದ್ದಲ್ಲಿ, ರಾಜ್ಯಾದ್ಯಂತ ಜನಾಂದೋಲನದ ಮೂಲಕ ಹೋರಾಟ ಕೈಗೊಳ್ಳುವುದಾಗಿ ಮಾಜಿ ವಿಧಾನಪರಿಷತ್ ನಾಯಕ, ಮಾಜಿ ಸಂಸದ ಹಾಗೂ ಮೀಸಲಾತಿ ಹೋರಾಟ ಸಮಿತಿಯ ರಾಜ್ಯ ಸಂಚಾಲಕ ವಿ.ಎಸ್ ಉಗ್ರಪ್ಪ ಎಚ್ಚರಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಎಸ್ಸಿ/ಎಸ್ಟಿ ಮೀಸಲಾತಿ ಶೇ.56ರ ಕಾಯ್ದೆಯನ್ನು 9ನೇ ಶೆಡ್ಯೂಲ್‌ನಲ್ಲಿ ಸೇರಿಸಲು ಪ್ರಧಾನಮಂತ್ರಿಗಳಿಗೆ ಆಯಾ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಗುತ್ತಿದೆ ಎಂದು ತಿಳಿಸಿದರು.

ದೇಶದಲ್ಲಿ ಎಸ್ಸಿ ಸಮುದಾಯಕ್ಕೆ ಶೇ.17ರಷ್ಟು, ಎಸ್ಟಿ ಸಮುದಾಯಕ್ಕೆ ಶೇ.7 ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಶೇ.32ರಷ್ಟು ಮೀಸಲಾತಿ ಜಾರಿಯಲ್ಲಿದ್ದು, ಇದು 1957ನೇ ಇಸವಿಯ ಜನಗಣತಿ ಆಧಾರದಲ್ಲಿದೆ ಈಗ ಜನಸಂಖ್ಯೆಗ ನುಗುಣವಾಗಿ ಮೀಸಲಾತಿ ಪ್ರಮಾಣ ವನ್ನು ಹೆಚ್ಚಿಸಲು ಹೋರಾಟ ನಡೆಸಲಾಗುತ್ತಿದೆ ಎಂದರು. ಈಗಿನ ಜನಸಂಖ್ಯೆಗ ನುಗುಣವಾಗಿ ಎಸ್ಸಿ/ಎಸ್ಟಿ ಸಮುದಾಯಗಳಿಗೆ ಶೇ.56 ರಷ್ಟು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವಂತೆ 2023ರಲ್ಲಿ ಬಸವರಾಜ್ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಸರ್ವಾನುಮತದ ಒಪ್ಪಿಗೆಯೊಂದಿಗೆ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು ಆದರೆ ಈ ಕಾಯ್ದೆಯನ್ನು ಇದುವರೆಗೆ ಜಾರಿ ಮಾಡದೆ ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಿಲ್ಲ ಎಂದು ದೂರಿದರು.

ಹಿಂದುಳಿದವರು ಹಾಗೂ ಓಬಿಸಿಗಳ ಬಗ್ಗೆ ಮಾತನಾಡುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಈ ಬಗ್ಗೆ ಮಾತನಾಡುತ್ತಿಲ್ಲ, ಕಾಯ್ದೆಯನ್ನು ಜಾರಿಗೆ ತಂದ ಬಿಜೆಪಿ ಸರ್ಕಾರದಲ್ಲಿದ್ದ ಮುಖಂಡರು, ಬಸವರಾಜ್ ಬೊಮ್ಮಾಯಿ, ಸಿ.ಟಿ.ರವಿ, ಶೋಭಾ ಕರಂದ್ಲಾಜೆ, ಕೋಟಾ ಶ್ರೀನಿವಾಸ್ ಪೂಜಾರಿ ಸೇರಿದಂತೆ ಯಾರು ಚಕಾರ ಎತ್ತುತ್ತಿಲ್ಲ. ಎಸ್ಸಿ/ಎಸ್ಟಿ ಸಮುದಾಯದವರ ಮತ ಪಡೆದು ಗೆದ್ದಿರುವ ಶಾಸಕ ಹೆಚ್.ಡಿ.ತಮ್ಮಯ್ಯ ಸಹಿತ ಎಲ್ಲಾ ಪಕ್ಷಗಳ ಜನ ಪ್ರತಿನಿಧಿಗಳು 56ರ ಮೀಸಲಾತಿ ಪ್ರಮಾಣವನ್ನು 9ನೇ ಶೆಡ್ಯೂಲ್‌ನಲ್ಲಿ ಸೇರ್ಪಡೆಗೊಳಿಸಲು ಧ್ವನಿ ಎತ್ತಬೇಕೆಂದು ಆಗ್ರಹಿಸಿದರು.

ತಮಿಳುನಾಡು ರಾಜ್ಯದಲ್ಲಿ ಜನಸಂಖ್ಯೆಗ ನುಗುಣವಾಗಿ ಶೇ.56 ರಷ್ಟು ಪ್ರಮಾಣದ ಮೀಸಲಾತಿಯನ್ನು ಜಾರಿಗೊಳಿಸಲಾಗಿದೆ ಅದನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸಿರುವ ಭಾರತ ಸರ್ಕಾರ ಕರ್ನಾಟಕದ ಈ ಕಾಯ್ದೆಯನ್ನು ಸೇರ್ಪಡೆ ಮಾಡುತ್ತಿಲ್ಲ ಎಂದು ಆರೋಪಿಸಿದರು.

ತಾವು ರಾಜ್ಯ ಸರ್ಕಾರಕ್ಕೆ ಪತ್ರ ಬರೆದ ಹಿನ್ನೆಲೆಯಲ್ಲಿ ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಶೇ.56ರಷ್ಟು ಮೀಸಲಾತಿ ಪ್ರಮಾಣವನ್ನು ಜಾರಿಗೊಳಿಸಲು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಪ್ರಧಾನಮಂತ್ರಿಗೆ ಪತ್ರ ಬರೆದಿದ್ದಾರೆ, ಕೇವಲ ಪತ್ರ ಬರೆದರೆ ಸಾಲದು ಈ ಕಾಯ್ದೆಯನ್ನು ಜಾರಿಗೊಳಿಸಲು ವೇಗವರ್ಧಕವಾಗಿ ಅನುಷ್ಠಾನಗೊಳಿಸಬೇಕು ಈ ಸಂಬಂಧ ಕೂಡಲೇ ಸರ್ವಪಕ್ಷ ಸಭೆ ಕರೆದು ಚರ್ಚಿಸಿ ಪ್ರಧಾನಿ ಬಳಿಗೆ ಸರ್ವಪಕ್ಷಗಳ ಮುಖಂಡರ ನಿಯೋಗ ಕರೆದೊಯ್ಯುವಂತೆ ಮುಖ್ಯಮಂತ್ರಿಗಳನ್ನು ಆಗ್ರಹಿಸಿದರು.

ಈಗಾಗಲೇ 22 ಜಿಲ್ಲೆಗಳಲ್ಲಿ ಭೇಟಿ ನೀಡಿ ಸಮುದಾಯದ ಮುಖಂಡರಿಗೆ ಮನವರಿಕೆ ಮಾಡಿದ್ದು, ಮೇ 11ರಂದು ಬೆಂಗಳೂರಿನಲ್ಲಿ ವಿಚಾರವಂತರ ಸಭೆ ಕರೆಯಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಮುಖಂಡರಾದ ಮಲ್ಲೇಶ್ ಸ್ವಾಮಿ, ನಾಗಲಕ್ಷ್ಮೀ, ಲೋಲಾಕ್ಷಿ ಬಾಯಿ, ಹೇಮಾವತಿ, ರಾಜಪ್ಪ, ನರಸಿಂಹಯ್ಯ, ಕೃಷ್ಣಪ್ಪ, ಗಂಗಾಧರ ಉಪಸ್ಥಿತರಿದ್ದರು.

### ಒಳ ಮೀಸಲಾತಿಯಿಂದ ಹಿಂದುಳಿದ ಸಮುದಾಯಕ್ಕೆ ಹೆಚ್ಚು ಅನುಕೂಲ ಆಗಲ್ಲ

ಒಳ ಮೀಸಲಾತಿ ಜಾರಿ ಬಗ್ಗೆ ಗಮನ ಸೆಳೆದಾಗ ಪ್ರತಿಕ್ರಿಹಿಸಿದ ವಿ.ಎಸ್.ಉಗ್ರಪ್ಪ, ಅನೇಕ ಸಮುದಾಯಗಳು ಅವಕಾಶ ವಂಚಿತರಾಗಿ ಅತ್ಯಂತ ಹಿಂದುಳಿದಿವೆ. ಅಂತವರನ್ನು ಗುರು ತಿಸಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ವಿಶೇಷ ಪ್ರೋತ್ಸಾಹದಾಯಕ ಕಾರ್ಯಕ್ರ ಮಗ ಳನ್ನು ಅನುಷ್ಠಾನಗೊಳಿಸಿ ಮುಖ್ಯ ವಾಹಿನಿಗೆ ತರಬೇಕೆ ಹೊರತು ಕೇವಲ ಒಳ ಮೀಸಲಾತಿ ಜಾರಿಯಿಂದ ಹಿಂದುಳಿದ ಸಮುದಾಯಗಳಿಗೆ ಹೆಚ್ಚೇನು ಅನು ಕೂಲವಾ ಗುವುದಿಲ್ಲ ಎಂದು ಅಭಿಪ್ರಾಯಿಸಿದರು.

## ಲಲಿತಾ ರವಿನಾಯ್ಕ್ ಅಧಿಕಾರ ಸ್ವೀಕಾರ

**ಚಿಕ್ಕಮಗಳೂರು:** ನಗರಸಭೆ ಪ್ರಭಾರಿ ಅಧ್ಯಕ್ಷರಾಗಿ ಲಲಿತಾ ರವಿನಾಯ್ಕ್ ಶುಕ್ರವಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ನಿರ್ಗಮಿತ ಅಧ್ಯಕ್ಷೆ ಶೀಲಾ ದಿನೇಶ್ ರಾಜೀನಾಮೆ ಅಂಗೀಕಾರದ ಹಿನ್ನೆಲೆ ಪ್ರಭಾರಿ ಅಧ್ಯಕ್ಷರಾಗಿ ಲಲಿತಾ ನಾಯ್ಕ್ ಅಧಿಕಾರ ವಹಿಸಿಕೊಂಡರು.

ಅಭಿನಂದನೆ ಸಲ್ಲಿಸಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಿಂದ ನಗರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಮುಂದಿನ 10 ತಿಂಗಳ ಅವಧಿಗೆ ಎರಡು ಪಕ್ಷಗಳ ವರಿಷ್ಠರ ತೀರ್ಮಾನದಿಂದ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಆರ್. ದೇವರಾಜ್‌ಶೆಟ್ಟಿ ಮಾತನಾಡಿ, ಅಧಿಕಾರ ಶಾಶ್ವತವಲ್ಲ, ಅಧಿಕಾರದಲ್ಲಿದ್ದಾಗ ಎಷ್ಟು ಒಳ್ಳೆ ಕೆಲಸ ಮಾಡುತ್ತೇವೆ ಎಂಬುದು ಮುಖ್ಯ, ನೂತನವಾಗಿ ಆಯ್ಕೆಯಾಗಿರುವ ನಗರಸಭೆ ಪ್ರಭಾರಿ ಅಧ್ಯಕ್ಷರು ಸಿಕ್ಕಿರುವ ಕಡಿಮೆ ಅವಧಿಯಲ್ಲಿ ಉತ್ತಮ ಕೆಲಸಗಳನ್ನು ಮಾಡಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ಪುಷ್ಪರಾಜ್, ನಗರಸಭೆ ಸದಸ್ಯರಾದ ಕವಿತಾ ಶೇಖರ್, ಮಾಜಿ ಉಪಾಧ್ಯಕ್ಷ ಕಾಯಿರವಿ, ಬಿಜೆಪಿ ಮುಖಂಡ ಎಚ್.ಕೆ.ಕೇಶವಮೂರ್ತಿ, ಕಾರ್ಯಕರ್ತರು, ಸಂಘ ಸಂಸ್ಥೆಯವರು ಉಪಸ್ಥಿತರಿದ್ದರು.

## ಐಟಿಐ ವಿದ್ಯಾರ್ಥಿಗಳಿಗೆ ಇವೆ ಸಹಸ್ರಾರು ಉದ್ಯೋಗವಕಾಶ

**ಬಾಳೆಹೊನ್ನೂರು:** ಐಟಿಐ ವಿದ್ಯಾರ್ಥಿಗಳಿಗೆ ಸಹಸ್ರಾರು ಉದ್ಯೋಗವಕಾಶಗಳು ಇವೆ. ವಿದ್ಯಾರ್ಥಿಗಳು ತಮ್ಮ ಸಂಕುಚಿತ ಭಾವನೆ ದೂರವಿಟ್ಟು ಉತ್ತಮವಾಗಿ ತರಬೇತಿ ಪಡೆದು, ಉತ್ತಮ ಅಂಕಗಳಿಸಿದರೆ ಸರ್ಕಾರಿ ಸ್ವಾಮ್ಯದ ಕೆಎಸ್‌ಆರ್‌ಟಿಸಿ, ಕೆಪಿಟಿಸಿಎಲ್, ರೈಲ್ವೆ, ಎಚ್‌ಎಎಲ್ ಇನ್ನು ಮುಂತಾದ ಉದ್ಯಮಗಳಲ್ಲಿ ಉದ್ಯೋಗವಕಾಶಗಳಿವೆ ಎಂದು ಉದ್ಯೋಗಾಧಿಕಾರಿ ಜಯಶ್ರೀ ತಿಳಿಸಿದರು.

ಇಲ್ಲಿನ ರೇಣುಕನಗರದಲ್ಲಿರುವ ಶ್ರೀ ಜಗದ್ಗುರು ರೇಣುಕಾಚಾರ್ಯ ಐಟಿಐ ಕಾಲೇಜಿನಲ್ಲಿ ಚಿಕ್ಕಮಗಳೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ಐಟಿಐ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಉದ್ಯೋಗ ನೋಂದಣಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಹಾಗೂ ನಿರುದ್ಯೋಗಿಗಳಿಗೆ ಮುಂದಿನ ದಿನಗಳಲ್ಲಿ ಉದ್ಯೋಗ ಸಿಗುವುದಕ್ಕೆ ಸಹಕಾರ ಆಗಲಿ ಎಂಬ ಸದುದ್ದೇಶದಿಂದ ಐಟಿಐ ಕಾಲೇಜಿನಲ್ಲಿ ಉಚಿತವಾಗಿ ಉದ್ಯೋಗ ನೋಂದಣಿ ಶಿಬಿರವನ್ನು ಹಮ್ಮಿಕೊಳ್ಳ ಲಾಗಿದೆ ಎಂದು ತಿಳಿಸಿದರು. ಉದ್ಯೋಗ ನೋಂದಣಿ ಮಾಡಿಸಿದ ನಂತರ ಪ್ರತಿ ಮೂರು ವರ್ಷಕ್ಕೊಮ್ಮೆ ನೋಂದಣಿಯನ್ನು ನವೀಕರಣ ಮಾಡಿಸಬೇಕು. ನಿರುದ್ಯೋಗಿಗಳು ಉದ್ಯೋಗ ವಿನಿಮಯ ಕಚೇರಿಯೊಂದಿಗೆ ನಿರಂತರ ಸಂಪರ್ಕ ವನ್ನು ಇಟ್ಟುಕೊಂಡರೆ ಉದ್ಯೋ ಗದ ಬಗ್ಗೆ ಮಾಹಿತಿ ನೀಡಲಾಗುವು ದೆಂದರು.

ಐಟಿಐ ಪ್ರಾಚಾರ್ಯ ಎಚ್.ಆರ್.ಆನಂದ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ಬಳಿಕ ಪ್ರತಿಯೊಬ್ಬರೂ ಉದ್ಯೋಗ ನೋಂದಣಿ ಮಾಡಿಸಿದರೆ ಉದ್ಯೋಗ ಪಡೆಯುವುದಕ್ಕೆ ಸಹಕಾರಿಯಾಗುತ್ತದೆ ಎಂದರು.

ನಿರುದ್ಯೋಗಿಗಳಿಗೆ ಉದ್ಯೋಗ ನೋಂದಣಿ ಬಗ್ಗೆ ಮಾಹಿತಿಯನ್ನು ಎಲ್ಲಾ ದಿನಪತ್ರಿಕೆಗಳಲ್ಲಿ ಮಾಧ್ಯಮ ಮಿತ್ರರು ಪ್ರಕಟಿಸಿ ಪ್ರಚಾರ ನೀಡಿದರೂ ಸಾಕಷ್ಟು ಸಂಖ್ಯೆಯಲ್ಲಿ ಅಭ್ಯರ್ಥಿಗಳು ಉದ್ಯೋಗ ನೋಂದಣಿ ಶಿಬಿರಕ್ಕೆ ಹಾಜರಾಗದಿರುವುದು ವಿಷಾದನೀಯ ಎಂದರು. ಐಟಿಐ ಕಾಲೇಜಿನ 62 ವಿದ್ಯಾರ್ಥಿಗಳು ಹಾಗೂ 23 ನಿರುದ್ಯೋಗಿ ವಿದ್ಯಾವಂತರು ಉದ್ಯೋಗ ನೋಂದಣಿ ಮಾಡಿಸಿದರು. ಶಿಕ್ಷಕರಾದ ಚಂದ್ರಶೇಖರ್ ನಿರೂಪಿಸಿದರು. ಅಶೋಕ್ ಸ್ವಾಗತಿಸಿದರು. ಶ್ರೀನಿವಾಸ್ ವಂದಿಸಿದರು. ನೌಕರರಾದ ಪ್ರಕಾಶ್ ಹಾಗೂ ತರಬೇತಿದಾರರು ಭಾಗವಹಿಸಿದ್ದರು.

ಸುದ್ದಿ ಮಿಂಚು

## ಖಾಸಗಿ ಬಸ್ ಪಲ್ಟಿ: ತಪ್ಪಿದ ಭಾರೀ ದುರಂತ

**ಹೊಸನಗರ:** ತಾಲ್ಲೂಕು ಮೇಲಿನಬೆಸಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಚಾಮುಂಡಿ ಬೆಟ್ಟದ ಕೆಳಗೆ ಹೊಂಬಲಯ ರಾಜ್ಯ ಹೆದ್ದಾರಿ 766ಸಿ ರಸ್ತೆಯಲ್ಲಿ ಬೆಳಿಗ್ಗೆ ಸುಮಾರು 5.15ರ ಸಮಯದಲ್ಲಿ ಬೆಂಗಳೂರಿನಿಂದ ಕುಂದಾಪುರಕ್ಕೆ ತೆರಳುತ್ತಿದ್ದ ಸಾಗರ್ ಹೆಸರಿನ ಖಾಸಗಿ ಬಸ್ ಚಾಲಕನ ನಿಯಂತ್ರಣ ತಪ್ಪಿ ತಿರುವಿನ ಎಡಭಾಗಕ್ಕೆ ಪಲ್ಟಿಯಾಗಿದೆ. ಬಸ್‌ನಲ್ಲಿದ್ದ 11 ಪ್ರಯಾಣಿಕರಿಗೆ ಸಣ್ಣ-ಪುಟ್ಟ ಗಾಯ ಗಳಾಗಿದ್ದು ಭಾರೀ ದುರಂತ ತಪ್ಪಿದ್ದು ಗಾಯಾಳುಗಳನ್ನು ಹೊಸನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ.

ಬಸ್‌ನಲ್ಲಿರುವ ಪ್ರಯಾಣಿಕರು ಕೊಲ್ಲೂರು ದೇವ ಸ್ಥಾನದಲ್ಲಿ ಮದುವೆ, ಗೃಹ ಪ್ರವೇಶ ಕಾರ್ಯಕ್ರಮಗಳಿಗೆ ತೆರಳುತ್ತಿದ್ದರು ಎನ್ನಲಾಗಿದೆ.

## ಆಕಸ್ಮಿಕ ವಿದ್ಯುತ್ ತಗುಲಿ ಮರಾಠಿ ಸುರೇಶ್ ಸಾವು

**ತ್ಯಾಗರ್ತಿ:** ಅಡಿಕೆ ತೋಟಕ್ಕೆ ನೀರು ಹಾಯಿಸಲು ಹೋಗಿದ್ದ ಮರಾಠಿ ಸುರೇಶ್ (49) ಆಕಸ್ಮಿಕ ವಿದ್ಯುತ್ ತಗುಲಿ ಶುಕ್ರ ವಾರ ಬೆಳಗ್ಗೆ ಸಾವನ್ನಪ್ಪಿದ್ದಾರೆ.

ಸಾಗರ ತಾಲ್ಲೂಕಿನ ತ್ಯಾಗರ್ತಿಯ ತಮ್ಮ ಜಮೀನಿನಲ್ಲಿ ಅಡಿಕೆ ಬೆಳೆದಿದ್ದು ಕೊಳವೆ ಬಾವಿ ಮೂಲಕ ಪ್ರತಿದಿನ ನೀರು ಹಾಯಿಸುತ್ತಿದ್ದರು. ಎಂದಿನಂತೆ ಇಂದು ಬೆಳಿಗ್ಗೆ 6.30ರ ಸುಮಾರಿಗೆ ನೀರು ಹಾಯಿಸಲು ಹೋದಾಗ ಕೊಳವೆ ಬಾವಿಗೆ ಎಳೆದಿರುವ ವಿದ್ಯುತ್ ವೈರ್ ಡ್ಯಾಮೇಜ್ ಆಗಿರುವುದು ತಿಳಿಯದೇ ಕಾಲು ತಗುಲಿ ಸ್ಥಳದಲ್ಲಿಯೆ ಮೃತಪಟ್ಟಿದ್ದಾರೆ. ಆನಂದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಸಾಗರ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಸಾಗರ ಶಾಸಕ ಗೋಪಾಲಕೃಷ್ಣ ಬೇಳೂರು ಸ್ಥಳಕ್ಕೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

### ನಿಧನವಾರ್ತೆ

**ಹೊರಬೈಲು ಪ್ರಭಾಕರ್‌ಗೌಡ**

**ಚಂದ್ರಗುತ್ತಿ:** ಸಮೀಪದ ಹೊರಬೈಲು ಗ್ರಾಮದ ಪ್ರಗತಿಪರ ಕೃಷಿಕರಾದ ಪ್ರಭಾಕರ್‌ಗೌಡ (71) ಗುರುವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ತಾಪಂ ಮಾಜಿ ಸದಸ್ಯ ಸುನೀಲ್‌ಗೌಡ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿ ದ್ದಾರೆ. ಮೃತರ ಅಂತ್ಯ ಸಂಸ್ಕಾರವನ್ನು ಅವರ ಸ್ವಂತ ಕೃಷಿ ಭೂಮಿ ಯಲ್ಲಿ ಶುಕ್ರವಾರ ಸಕಲ ವಿಧಿ-ವಿಧಾನಗ ಳೊಂದಿಗೆ ನೆರವೇರಿಸಲಾಯಿತು.

**ಸಂತಾಪ:** ಪ್ರಭಾಕರ್‌ಗೌಡ್ರು ನಿಧನಕ್ಕೆ ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ಸಾಂತ್ವನ ಹೇಳಿದರು. ವಿವಿಧ ರಾಜಕೀಯ ಮುಖಂಡರು ಹಾಗೂ ಗ್ರಾಮಸ್ಥರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

### ಕುವೆಂಪು ವಿ.ವಿ.35ನೇ ಘಟಿಕೋತ್ಸವ | ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಭೇಟಿ-ಅಭಿನಂದನೆ

# ಕೋಣಂದೂರು ಲಿಂಗಪ್ಪಗೆ ಗೌರವ ಡಾಕ್ಟರೇಟ್ ಪ್ರದಾನ

**ಶಿವಮೊಗ್ಗ:** ತೀರ್ಥಹಳ್ಳಿ ತಾಲ್ಲೂಕಿನ ಕೋಣಂದೂರಿನ ಹಿರಿಯ ಸಮಾಜವಾದಿ ನಾಯಕರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಕೋಣಂದೂರು ಲಿಂಗಪ್ಪನವರಿಗೆ ಕುವೆಂಪು ವಿಶ್ವವಿದ್ಯಾಲಯ 35ನೇ ಘಟಿಕೋತ್ಸವದಲ್ಲಿ ಘೋಷಿಸಲಾದ ಗೌರವ ಡಾಕ್ಟರೇಟ್ ಪದವಿ (ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರ)ಯನ್ನು ಶುಕ್ರವಾರ ವಿಶ್ವವಿದ್ಯಾ ಲಯದ ಕುಲಪತಿಗಳು, ಕುಲಸಚಿವರು, ಸಿಂಡಿಕೇಟ್ ಸದಸ್ಯರು, ಇತರೆ ಅಧಿಕಾರಿಗಳು ಅವರ ಮನೆಗೆ ತೆರಳಿ ಪ್ರದಾನ ಮಾಡಿದರು. ಅನಾರೋಗ್ಯದ ಹಿನ್ನೆಲೆಯಲ್ಲಿ ಅವರು ಘಟಿಕೋತ್ಸವದಲ್ಲಿ ಪದವಿ ಸ್ವೀಕರಿ ಸಲು ಸಾಧ್ಯವಾಗಿರಲಿಲ್ಲ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್ ಮಧು ಬಂಗಾರಪ್ಪನವರು, ಕೋಣಂದೂರು ಲಿಂಗಪ್ಪನವರ ಮನೆಗೆ ಭೇಟಿ ನೀಡಿ, ಅಭಿನಂದಿಸಿ, ಹಿರಿಯರಿಂದಿಗೆ ಮಾತನಾಡಿದರು. ತಮ್ಮಂತಹ ಹಿರಿಯರಿಗೆ ಡಾಕ್ಟರೇಟ್ ಲಭಿಸಿರುವುದು ಅತ್ಯಂತ ಸಂತಸದ ವಿಷಯ. ನಿಮ್ಮನ್ನು ಭೇಟಿ ಮಾಡಿ ಮಾತನಾಡುತ್ತಿರುವುದು ನಮ್ಮ ಪುಣ್ಯ ಎಂದು ಹಿರಿಯರ ಆಶೀರ್ವಾದ ಪಡೆದ ಅವರು, ಇದೇ ಸಮಯದಲ್ಲಿ ತಮ್ಮ ತಂದೆಯವರಾದ ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರ ರಾಜ ಕೀಯ ಜೀವನದ ಘಟನೆಯೊಂದನ್ನು ಸ್ಮರಿಸಿಕೊಂಡು, ಹಿರಿಯರೊಂ ದಿಗೆ ಹಂಚಿಕೊಂಡರು.

ಇದೇ ವೇಳೆ ಕೋಣಂದೂರು ಲಿಂಗಪ್ಪನವರು ಶಿಕ್ಷಣ ವ್ಯವಸ್ಥೆ, ಫಲಿತಾಂಶ ಕುರಿತು ಮಾತನಾಡಿ ಸಚಿವರು, ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಯಲ್ಲಿ ಶೇ. 94.10 ಫಲಿತಾಂಶ ಪಡೆಯುವ ಮೂಲಕ ಈ ಬಾರಿ ಐತಿಹಾಸಿಕ ಸಾಧನೆ ದಾಖಲಾಗಿದೆ ಎಂದು

ಕುವೆಂಪು ವಿಶ್ವವಿದ್ಯಾಲಯ 35ನೇ ಘಟಿಕೋತ್ಸವದಲ್ಲಿ ಘೋಷಿಸಲಾದ ಗೌರವ ಡಾಕ್ಟರೇಟ್ ಪದವಿಯನ್ನು ಶುಕ್ರವಾರ ಅವರ ಸ್ವಗೃಹದಲ್ಲಿ ಕೋಣಂದೂರು ಲಿಂಗಪ್ಪನವರಿಗೆ ಪ್ರದಾನ ಮಾಡಲಾಯಿತು.

ಹರ್ಷ ವ್ಯಕ್ತಪಡಿಸಿ, ಹಿಂದೆ ಈ ಪ್ರಮಾಣವು ಶೇ. 70–80ರಷ್ಟಿರುತ್ತಿತ್ತು, ಪೂರಕ ಪರೀಕ್ಷೆಯ ಬದಲಾಗಿ ವರ್ಷಕ್ಕೆ ಮೂರು ಪರೀಕ್ಷೆಗಳನ್ನು ನಡೆಸುವ ಸರ್ಕಾರದ ಹೊಸ ನೀತಿಯು ವಿದ್ಯಾರ್ಥಿಗಳಿಗೆ ವರದಾನವಾಗಿದೆ. ಪರೀಕ್ಷೆ ಮುಗಿದ 20 ದಿನಗಳಲ್ಲೇ ಮತ್ತೊಂದು ಅವಕಾಶ ನೀಡುವುದರಿಂದ ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಿದೆ ಎಂದ ಅವರು, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರುವ ಮೂಲಕ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವುದೇ ನಮ್ಮ ಸರ್ಕಾರದ ಗುರಿ ಎಂದು ಸಚಿವರು ಈ ಸಂದರ್ಭದಲ್ಲಿ ಪುನರುಚ್ಚರಿಸಿದರು.

ಈ ವೇಳೆ ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಶರತ್ ಅನಂತ ಮೂರ್ತಿ, ಕುಲಸಚಿವ ಹೇಮಂತ್ ಎನ್, ವಿವಿ ಸಿಂಡಿಕೇಟ್ ಸದಸ್ಯರು, ಇತರೆ ಮುಖಂಡರು, ಜನಪ್ರತಿನಿಧಿಗಳು ಹಾಜರಿದ್ದರು.

## ಬಿಎಸ್‌ವೈ ಅಭಿಮಾನೋತ್ಸವ: ಕೆ.ಎಸ್.ಈಶ್ವರಪ್ಪಗೆ ಆಹ್ವಾನ

ಸಂಸದ ಬಿ.ವೈ. ರಾಘವೇಂದ್ರ ಅವರು ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಪಾಲ್ಗೊಳ್ಳು ವಂತೆ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪಗೆ ಆಹ್ವಾನ ನೀಡಿದರು.

**ಶಿವಮೊಗ್ಗ:** ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಪಾಲ್ಗೊ ಳ್ಳುವಂತೆ ಸಂಸದ ಬಿ.ವೈ.ರಾಘವೇಂದ್ರ ಅವರು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪನವರ ಸ್ವಗೃಹಕ್ಕೆ ತೆರಳಿ ಆಹ್ವಾನ ನೀಡಿ ದ್ದಾರೆ.

ಜನನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಅರ್ಧ ಶತಮಾ ನದ ರಾಜಕೀಯ ಜೀವನಕ್ಕೆ ಅಭಿನಂದನೆ ಸಲ್ಲಿಸಲು ಚಿತ್ರದುರ್ಗದಲ್ಲಿ ಪಕ್ಷಾತೀತ ವಾಗಿ ನಡೆಯುತ್ತಿರುವ ಬೃಹತ್ ಅಭಿಮಾನೋತ್ಸವದಲ್ಲಿ ನಾಡಿನ ಎಲ್ಲಾ ಸ್ವಾಮೀಜಿಗಳು, ಸಂತರು, ಧಾರ್ಮಿಕ ಮುಖಂಡರು, ಕೇಂದ್ರ ಗೃಹ ಸಚಿವರು ಸೇರಿದಂತೆ ಗಣ್ಯಾತಿಗಣ್ಯರು ಪಾಲ್ಗೊಳ್ಳುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಹಿರಿಯರು, ಕರ್ನಾಟಕದ ಮಾಜಿ ಸಭಾಪತಿ ಗಳಾದ ಡಿ. ಹೆಚ್.ಶಂಕರಮೂರ್ತಿ ಹಾಗೂ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರ ಪ್ಪನವರ ಮನೆಗೆ ತೆರಳಿ ಆಹ್ವಾನವನ್ನು ಸಂಸದ ಬಿ.ವೈ.ರಾಘವೇಂದ್ರ ಅವರು ನೀಡಿ ದರು. ಚಿತ್ರದುರ್ಗದಲ್ಲಿ ನಡೆಯಲಿರುವ “ಬಿ.ಎಸ್.ವೈ.ಅಭಿಮಾ ನೋತ್ಸವ” ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಗೌರವಪೂರ್ವಕವಾಗಿ ಆಹ್ವಾನ ನೀಡಿದರು. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಮತ್ತು ಕೆ.ಎಸ್.ಈಶ್ವರಪ್ಪನವರು ಬಿಜೆಪಿಯಲ್ಲಿ ಒಟ್ಟಿಗೆ ರಾಜ ಕೀಯದಲ್ಲಿ ಹೆಜ್ಜೆ ಹಾಕಿದವರು. ಸಾಕಷ್ಟು ಏಳುಬೀಳುಗಳನ್ನು ಕಂಡವರಾಗಿದ್ದಾರೆ.

### ‘ಕಾಪಿಕಾನ್ 2026’: ಮೂರು ದಿನದ ಸಮ್ಮೇಳನಕ್ಕೆ ಚಾಲನೆ

# ವೈದ್ಯಕೀಯ ಸಂಶೋಧನೆ ಜನರಿಗೆ ತಲುಪುವಂತಾಗಲಿ

**ಶಿವಮೊಗ್ಗ:** ವೈದ್ಯಕೀಯ ಕ್ಷೇತ್ರದ ಸುಧಾರಣೆಯೇ ಆರೋಗ್ಯವಂತ ಸಮಾಜದ ಬುನಾದಿ. ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ವೈದ್ಯರ ಪಾತ್ರ ಅನನ್ಯ. ವೈದ್ಯ ಕೀಯ ಕ್ಷೇತ್ರದಲ್ಲಿನ ಸಂಶೋಧನೆಗಳು ಸಾಮಾನ್ಯ ಜನರಿಗೂ ತಲುಪುವಂತಾಗಲಿ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು. ಶಿವಮೊಗ್ಗ ನಗರದ ಸಿಮ್ಸ್ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಕರ್ನಾಟಕ ಘಟಕದ 43ನೇ ವಾರ್ಷಿಕ ಸಮ್ಮೇಳನ “ಕಾಪಿಕಾನ್ 2026”ಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಸುಮಾರು 22 ವರ್ಷಗಳ ಸುದೀರ್ಘ ಅವಧಿಯ ನಂತರ ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗದಲ್ಲಿ ಇಂತಹದೊಂದು ಬೃಹತ್ ರಾಜ್ಯಮಟ್ಟದ ತಜ್ಞ ವೈದ್ಯರ ಸಮ್ಮೇಳನ ನಡೆಯುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ವೈದ್ಯರ ಹಿತರಕ್ಷಣೆ ಮತ್ತು ಆರೋಗ್ಯ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ ಸದಾ ಬದ್ಧವಾಗಿದೆ ಎಂದರು. ರೋಗಿಯ ಜೀವ ಉಳಿಸುವಲ್ಲಿ ವೈದ್ಯರ ಪಾತ್ರ ಮಹತ್ವದ್ದಾಗಿದೆ. ವೈದ್ಯರೆಂದರೆ ಆಸ್ಪತ್ರೆಗಳಲ್ಲಿ ಸಾಕ್ಷಾತ್ ದೇವರು ಇದ್ದಂತೆ. ಕೋವಿಡ್ ಸಂದರ್ಭದಲ್ಲೂ ತಮ್ಮ ಪ್ರಾಣ ಪಣಕ್ಕಿಟ್ಟು ಕರ್ತವ್ಯ ನಿರ್ವಹಿಸಿದರು. ಮೆಗ್ಗಾನ್ ಆಸ್ಪತ್ರೆಯನ್ನು ಸಿಮ್ಸ್‌ಗೆ ಸೇರಿಸಿದ್ದು ಅನುಕೂಲವೇ ಆಗಿದೆ. ರಾಜ್ಯ ಮತ್ತು ಕೇಂದ್ರದಿಂದ ಬರುವ ಅನು ದಾನಗಳಿಂದ ಮತ್ತಷ್ಟು ಅಭಿವೃದ್ಧಿ ಹೊಂದಲು ಸಹಕಾರಿಯಾಗಿದೆ. ಮೆಗ್ಗಾನ್ ಸುತ್ತಮುತ್ತಲಿನ 23 ತಾಲ್ಲೂಕುಗಳ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದೆ. ಹಾಗಾಗಿ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಯ ಒತ್ತಡ ಹೆಚ್ಚುತ್ತಿದೆ. ಇದನ್ನು ಪರಿಹರಿ ಸಲು ಸರ್ಕಾರ ಚಿಂತನೆ ನಡೆಸಿದೆ ಎಂದರು.

ಕಾರ್ಯಕ್ರಮದಲ್ಲಿ ಸಿಎಂ ನಿರ್ದೇಶಕ ಡಾ.ವಿರೂ ಪಾಕ್ಷಪ್ಪ, ಡಾ.ಎಸ್.ಬಿ.ಹೆಗಡೆ, ಡಾ.ಪೃಥ್ವಿ ಬಿ.ಸಿ, ಡಾ.ಶ್ರೀಕ ಾಂತ್ ಎನ್.ಹೆಗಡೆ, ಡಾ.ಬಿ.ರಮೇಶ್, ಡಾ. ಜ್ಯೋತಿ ರ್ಮಯಿ ಪಾಲ್,ಡಾ.ನಾಗೇಂದ್ರ, ಡಾ.ನಂದಿನಿ ಪಾಲ್ಗೊಂಡಿದ್ದರು.

ಕರ್ನಾಟಕ ಘಟಕದ 43ನೇ ವಾರ್ಷಿಕ ಸಮ್ಮೇಳನ “ಕಾಪಿಕಾನ್ 2026”ಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಚಾಲನೆ ನೀಡಿದರು.

## ಬಿಎಸ್‌ವೈ ಸಾರ್ವಜನಿಕ ಜೀವನ ಮತ್ತು ಸಾಧನೆ ಒಂದು ಮಾದರಿ

**ತೀರ್ಥಹಳ್ಳಿ:** ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪನವರ ಸಾರ್ವಜನಿಕ ಜೀವನ ಮತ್ತು ಸಾಧನೆಗಳು ಇಂದಿನ ಮತ್ತು ಮುಂದಿನ ಪೀಳಿಗೆ ಒಂದು ಮಾದರಿಯಾಗಿವೆ ಎಂದು ಶಾಸಕ ಆರಗ ಜ್ಞಾನೇಂದ್ರ ಅಭಿಪ್ರಾಯಪಟ್ಟರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಇವರು ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮವು ಯಡಿಯೂರಪ್ಪನವರ ರಾಜಕೀಯ ಜೀವನದ ಸಾರ್ಥಕ 50 ವರ್ಷದ ಕಾರ್ಯಕ್ರಮವಾಗಿದೆ. ಇದು ಒಂದು ಪಕ್ಷ ಅಥವಾ ಕುಟುಂಬಕ್ಕೆ ಸೀಮಿತವಾದ ಕಾರ್ಯ ಕ್ರಮವಲ್ಲ. ಜಿಲ್ಲೆಯ ಎಲ್ಲ ಜನತೆ ಇದರಲ್ಲಿ ಪಾಲ್ಗೊಳ್ಳಬೇಕು. ತಾಲೂಕಿನಿಂದ 5ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮಕ್ಕೆ 10ಲಕ್ಷಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆಯಿದೆ. ಎಲ್ಲಾ ಸಮುದಾಯದ ಮಠಾಧೀಶರನ್ನು ಸಮಾರಂಭಕ್ಕೆ ಆಹ್ವಾನಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಅಕ್ರಮ ಮರಳು ದಂಧೆಯ ಕುರಿತು ಮಾತನಾಡಿದ ಇವರು ತಹಶೀಲ್ದಾರ್, ಮಾಳೂರು ಪೊಲೀಸ್ ಠಾಣಾ ಅಧಿಕಾರಿಗಳು ಮತ್ತು ಗಣಿ ಇಲಾಖೆಯು ಶಾಮೀಲಾಗಿದ್ದಾರೆಂದು ಆರೋಪಿಸಿದರು. ತಹಶೀಲ್ದಾರ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಇವರು ಮರಳು ಕೋರೆಗೆ ತಹಶೀಲ್ದಾರರು ಹೋಗುತ್ತಾರೆ. ಅಲ್ಲಿ ಮಾತನಾಡಿಕೊಂಡು ಬರುತ್ತಾರೆ. ಪರವಾನಗಿ ಪರಿಶೀಲಿಸುವು ದಾಗಲೀ ಕೋರೆಯಲ್ಲಿ ನ್ಯೂನ್ಯತೆಗಳ ಕುರಿತು ಪತ್ತೆ ಮಾಡುವುದಾಗಲೀ ಮಾಡಿಲ್ಲ. ತಾಲೂಕು ದಂಡಾಧಿಕಾರಿಯಾಗಿ ಲಾರಿಯನ್ನು ಬಿಟ್ಟು ಕಳಿಸಿದೆ ಎನ್ನುತ್ತಾರೆ. ತಪ್ಪಿತಸ್ಥರೆಲ್ಲರ ವಿರುದ್ಧವೂ ಎಫ್.ಐ.ಆರ್. ದಾಖಲಾಗಬೇಕು ಎಂದು ಆಗ್ರಹಿಸಿದರು.

ಬೇಗುವಳ್ಳಿ ಸತೀಶ್, ಸಂದೇಶ್ ಜವಳಿ, ಸಂತೋಷ್ ದೇವಾಡಿಗ, ಸೊಪ್ಪುಗುಡ್ಡೆ ರಾಘವೇಂದ್ರ, ಹೆದ್ದೂರು ನವೀನ್ ಉಪಸ್ಥಿತರಿದ್ದರು.

## ಅಭಿಮಾನೋತ್ಸವಕ್ಕೆ 10 ಲಕ್ಷ ಜನ ಸೇರುವ ನಿರೀಕ್ಷೆ: ನಿರಾಣಿ

**ಸಂ.ಕ.ಸಮಾಚಾರ ಶಿವಮೊಗ್ಗ:** ಬಿಎಸ್‌ವೈ ಅಭಿಮಾನೋತ್ಸವಕ್ಕೆ 10 ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಜಿ ಸಚಿವ ಮುರು ಗೇಶ್ ನಿರಾಣಿ ಹೇಳಿದರು.

ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಚಿವ ಮಧು ಬಂಗಾರಪ್ಪನವರ ಟೀಕೆಗೆ ಪ್ರತಿಕ್ರಿಯೆ ನೀಡಿದ ಅವರು, ಆನೆ ಮುಟ್ಟಿದವರಿಗೆ ಬಾಲ ಮುಟ್ಟಿದರೆ ಬಾಲದ ತರಹ ಕಾಣುತ್ತದೆ. ಕಾಲು ಮುಟ್ಟಿ ದರೆ ಕಾಲಿನ ತರ ಆನೆ ಇದೆ ಎಂದುಕೊಳ್ಳುತ್ತಾರೆ. ಯಡಿಯೂರಪ್ಪನವರು ನಡೆದು ಬಂದ ಹಾದಿ ಎಲ್ಲರಿಗೂ ಗೊತ್ತಿದೆ. ಜೀವದ ಹಂಗು ತೊರೆದು ಪಕ್ಷವನ್ನು ಕಟ್ಟಿದ್ದಾರೆ. ಒಳ್ಳೆಯ ಕಾರ್ಯ ನಡೆಯಲಿದೆ ಎಂದು ಹೇಳಿದರು.

# ಶಿವಮೊಗ್ಗ-ವಿಜಯನಗರದಲ್ಲಿ ಕಂಠೀರವ ಸ್ಟುಡಿಯೋದ ನೂತನ ಘಟಕಗಳ ಸ್ಥಾಪನೆ

**ಶಿವಮೊಗ್ಗ:** ಚಿತ್ರೀಕರಣದ ಚಟುವಟಿಕೆಗಳನ್ನು ವಿಕೇಂದ್ರೀಕರಿಸುವ ಮತ್ತು ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ಶಿವಮೊಗ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಕಂಠೀರವ ಸ್ಟುಡಿಯೋಸ್‌ನ ನೂತನ ಘಟಕ ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ಕಂಠೀರವ ಸ್ಟುಡಿಯೋಸ್ ಅಧ್ಯಕ್ಷ ಮೆಹಬೂಬ್ ಪಾಷ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಂಠೀರವ ಸ್ಟುಡಿಯೋಸ್ ಘಟಕ ಸ್ಥಾಪನೆಗೆ ಜಮೀನು ಮಂಜೂರು ಮಾಡುವಂತೆ ಜಿಲ್ಲಾಧಿಕಾರಿ ಎನ್. ಹೇಮಂತ್ ಅವ ರೊಂದಿಗೆ ಚರ್ಚಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಶಿವಮೊಗ್ಗದಲ್ಲಿ ಕಂಠೀರವ ಸ್ಟುಡಿಯೋ ನಿರ್ಮಾಣಕ್ಕಾಗಿ ಸುಮಾರು 25 ಎಕರೆ ಜಮೀನು ಮಂಜೂರು ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾ ಗಿದೆ. ಈ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳು ಈಗಾಗಲೇ ಪತ್ರ ಬರೆದಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿದೆ.

ಪ್ರಸ್ತುತ ಚಿತ್ರೀಕರಣದ ಚಟುವಟಿಕೆಗಳು ಕೇವಲ ಬೆಂಗಳೂರಿಗೆ ಸೀಮಿತವಾಗಿವೆ. ಇದರಿಂದ ಅಲ್ಲಿ ಜಾಗದ ಕೊರತೆ ಎದುರಾಗುತ್ತಿದ್ದು, ಇತರೆ ಜಿಲ್ಲೆಗಳಿಗೂ ಈ ಸೌಲಭ್ಯಗಳನ್ನು ವಿಸ್ತರಿಸುವುದರಿಂದ ಆ ಭಾಗದ ಕಲೆ, ಸಂಸ್ಕೃತಿ ಮತ್ತು ಕಲಾ ವಿದರಿಗೆ ಹೆಚ್ಚಿನ ಉತ್ತೇಜನ ಸಿಗಲಿದೆ ಎಂದರು.

ಶಿವಮೊಗ್ಗ ತಾಲ್ಲೂಕಿನ ಹಾರನಹಳ್ಳಿ ಹೋಬಳಿಯ ಜಾಜುಹಳ್ಳಿ ಗ್ರಾಮದಲ್ಲಿ ಲಭ್ಯವಿರುವ ಜಮೀನಿನಲ್ಲಿ 25 ಎಕರೆ ಜಮೀನನ್ನು ನೀಡುವಂತೆ ಕೋರಲಾಗಿದೆ.

ಹೊಸದಾಗಿ ಸ್ಥಾಪನೆಯಾಗುವ ಸ್ಟುಡಿಯೋದಲ್ಲಿ ಕೇವಲ ಚಿತ್ರೀಕರಣ ಮಾತ್ರ ವಲ್ಲದೆ, ರೆಕಾರ್ಡಿಂಗ್ ಮತ್ತು ಲ್ಯಾಬ್ ಡೆವಲಪ್‌ಮೆಂಟ್‌ನಂತಹ ಅತ್ಯಾಧುನಿಕ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ಈ ಯೋಜನೆಯ ಕುರಿತು ಈಗಾಗಲೇ ಕಂದಾಯ ಸಚಿವರಾದ ಕೃಷ್ಣಬೈರೇಗೌಡ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದ್ದು, ಅವರು ಸಹ ಸಕಾರಾತ್ಮಕ ವಾಗಿ ಸ್ಪಂದಿಸಿದ್ದಾರೆ ಎಂದು ಮೆಹಬೂಬ್ ಪಾಷ ಅವರು ಈ ಸಂದರ್ಭದಲ್ಲಿ ತಿಳಿಸಿದರು.

## ಸುಪ್ರೀಂಕೋರ್ಟ್ ಲೋಕ್ ಅದಾಲತ್ ಸದುಪಯೋಗಪಡಿಸಿಕೊಳ್ಳಿ

**ಹೊಸನಗರ;** ಸುಪ್ರೀಂ ಕೋರ್ಟ್ ನ್ಯಾಯಾಲಯವು ಕಕ್ಷಿದಾರರು ಬಹಳ ವರ್ಷಗಳಿಂದ ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣಗಳನ್ನು ನಡೆಸು ತ್ತಿದ್ದರೆ ಅವುಗಳು ಇನ್ನೂ ಇತ್ಯರ್ಥವಾಗದೆ ಉಳಿದುಕೊಂಡಿದ್ದರೆ ಅಂತಹ ಕಕ್ಷಿದಾರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ‘ಸಮಾಧಾನ್ ಸಮಾರೋಹ್’ ಎಂಬ ಶೀರ್ಷಿಕೆಯಲ್ಲಿ ಆಗಸ್ಟ್ 21, 22 ಮತ್ತು 23 ರಂದು ಬಾಕಿ ಉಳಿದಿರುವ ಪ್ರಕರಣಗಳನ್ನು ಲೋಕ್ ಅದಾಲತ್ ನಡೆಸುತ್ತಿದೆ.

ತಾಲ್ಲೂಕಿನಲ್ಲಿ ಯಾರಾದರೂ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ನಡೆಸುತ್ತಿದ್ದರೆ ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೊಸನಗರ ನ್ಯಾಯಾಲಯದ ಪ್ರಧಾನ ವ್ಯವಹಾರ ನ್ಯಾಯಾಲಯದ ನ್ಯಾಯಾಧೀಶರಾದ ಮಾರುತಿ ಶಿಂಧೆರವರು ತಿಳಿಸಿದ್ದಾರೆ.

ಹೊಸನಗರ ನ್ಯಾಯಾಲಯದ ಕಚೇರಿಯಲ್ಲಿ ಗುರುವಾರ ಸುಪ್ರೀಂ ಕೋರ್ಟ್‌ನ ಸಮಾಧಾನ್ ಸಮಾರೋಹ್ ಕಾರ್ಯಕ್ರಮದಲ್ಲಿ ಆಯೋ ಜಿಸಿದ್ದ ವಿಡಿಯೋ ಕಾನ್ಫರೆನ್ಸ್ ವೀಕ್ಷಿಸಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಸುಪ್ರೀಂ ಕೋರ್ಟ್‌ನಲ್ಲಿ ಯಾರಾದರೂ ಮೊಕದ್ದಮೆ ನಡೆಸುತ್ತಿದ್ದರೆ ರಾಜ್ಯದಲ್ಲಿಯೇ ಆಯಾ ತಾಲ್ಲೂಕು ನ್ಯಾಯಾಲಯದ ಕಾನೂನು ಸೇವಾ ಪ್ರಾಧಿಕಾರಕ್ಕೆ ಹಾಗೂ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿ ಸಲು ಅವಕಾಶವಿದೆ. ಈ ಸಂಬಂಧ ಸುಪ್ರೀಂಕೋರ್ಟ್ ಒಂದು ಲಿಂಕ್‌ನ್ನು ಕಳುಹಿಸುತ್ತದೆ ಅದರ ಮೂಲಕ ಎರಡೂ ಕಡೆಯವರು ಭಾಗಿಯಾಗಿ ರಾಜಿ ಮಾಡಿಕೊಳ್ಳಲು ಅವಕಾಶವಿದೆ ಎಂದ ಅವರು, ಕ್ರೈಂ ಕ್ರಿಮಿನಲ್ ಪ್ರಕರಣ ಹೊರತುಪಡಿಸಿ ಯಾವುದೇ ರೀತಿಯ ಸಿವಿಲ್ ಮತ್ತು ವಾಣಿಜ್ಯ ವಿಷಯಗಳ ಮೊಕದ್ದಮೆಗಳನ್ನು ಇಲ್ಲಿ ಬಗೆ ಹರಿಸಿಕೊಳ್ಳಲು ಅವಕಾಶವಿದೆ ಎಂದರು.

# ಮೂಲಭೂತ ಸೌಕರ್ಯ ಕಲ್ಪಿಸಲಾಗದಿದ್ದರೆ ಬೇರೆ ಕಡೆ ವರ್ಗಾವಣೆ ಮಾಡಿಕೊಳ್ಳಿ: ಎಚ್ಚರಿಕೆ

**ಸಾಗರ:** ಜನಸಾಮಾನ್ಯರ ಕೆಲಸವನ್ನು ಮಾಡಬೇಕು. ಸ್ವಚ್ಛತೆ ಹಾಗೂ ಮೂಲಭೂತ ಸೌಕರ್ಯ ನೀಡಲು ನಿಮ್ಮಿಂದ ಸಾಧವಾಗದೆ ಇದ್ದರೆ ನೀವು ಬೇರೆ ಕಡೆ ವರ್ಗಾವಣೆಯನ್ನು ಮಾಡಿಕೊಳ್ಳಿ ಇಲ್ಲವೇ ನಿಮ್ಮ ಮೇಲೆ ಕ್ರಮಕೈಗೊಳ್ಳುವುದು ಖಚಿತ ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ಎಚ್ಚರಿಕೆ ನೀಡಿದರು.

ಇಲ್ಲಿನ ನಗರಸಭೆಯಲ್ಲಿ ಶುಕ್ರವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕಳೆದ ಎರಡೂವರೆವರ್ಷದಿಂದಈಸ್ವತ್ತುಮಾಡಿಕೊಡುತ್ತಿಲ್ಲ ಎಂದು ದೂರು ಬಂದಿದೆ. ಇಲ್ಲಿಯವರೆಗೆ ನೀವೇನು ಮಾಡುತ್ತಿದ್ದೀರಿ? ಎಂದು ಕಂದಾಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಇನ್ನೊಮ್ಮೆ ಇಂತಹ ವಿಳಂಬ ನೀತಿ ಅನುಸರಿಸಿದರೆ ಸುಮ್ಮನಿರುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ನಗರದ ಮಾರ್ಕೆಟ್ ರಸ್ತೆ ಅಗಲೀಕರಣಕ್ಕೆ 35 ಕೋಟಿ ಹಣ ಬಿಡುಗಡೆ ಯಾಗಿದೆ. ಆದರೆ ಕೆಲವರು ಜಾಗ ಬಿಡುತ್ತಿಲ್ಲ ಎನ್ನುವ ದೂರುಗಳಿವೆ. ಕಾನೂನು ಪ್ರಕಾರ ಅವರಿಗೆ ನೋಟಿಸ್ ನೀಡಿ, ಅದಕ್ಕೂ ಬಗ್ಗದೆ ಹೋದಲ್ಲಿ ದಂಡಂ ದಶಗುಣಂ ಎಂಬಂತೆ ಒಡೆದು ಹಾಕಿ ರಸ್ತೆ ಅಗಲೀ ಕರಣ ಕಾಮಗಾರಿ ಕೈಗೊಳ್ಳಿ ಎಂದು ಸೂಚನೆ ನೀಡಿದ ಶಾಸಕರು, ಸಾಕಷ್ಟು ಬಾರಿ ರಸ್ತೆಗೆ ಜಾಗ ಕೊಡಿ ಎಂದು ಮನವಿ ಮಾಡಿದ್ದೇವೆ. ಇನ್ನು ಎಷ್ಟು ದಿನ ಸಹಿಸಿಕೊಳ್ಳುವುದು. ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತ ರಾಗಿ ಕೊನೆ ಬಾರಿಗೆ ಸ್ಥಳೀಯ ನಿವಾಸಿಗಳ ಮನವೊಲಿಸಿ ಕೂಡಲೆ ರಸ್ತೆ ಅಗಲೀಕರಣ ಮಾಡಿ ಎಂದು ತಿಳಿಸಿದರು.

ನಗರವ್ಯಾಪ್ತಿಯಲ್ಲಿ ಆಶ್ರಯ ನಿವೇಶನಕ್ಕೆ ಸಂಬಂಧಪಟ್ಟಂತೆ 20 ಎಕರೆ ಜಾಗ ಗುರುತಿಸಲಾಗಿದ್ದು, ಶೀಘ್ರ ಸರ್ಕಾರದಿಂದ ಮಂಜೂರಾತಿ ಪಡೆದು ನಿವೇಶನವಾಗಿ ಪರಿವರ್ತಿಸಿ ಫಲಾನುಭವಿಗಳಿಗೆ ಹಂಚಲಾಗುತ್ತದೆ. ಜನ್ನತ್ ನಗರದ ಇಕ್ಕೇರಿ ಅಘೋರೇಶ್ವರ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ 136 ಕುಟುಂಬಗಳು ಅನೇಕ ವರ್ಷಗಳಿಂದ ಮನೆ ಕಟ್ಟಿಕೊಂಡಿದ್ದು ಅವರಿಗೆ ಇ ಸ್ವತ್ತು ಸಿಗುತ್ತಿಲ್ಲ. ಇದರಿಂದ ಅವರು ಸರ್ಕಾರಿ ಸೌಲಭ್ಯ ಪಡೆಯಲು ಆಗು ತ್ತಿಲ್ಲ ಎಂದು ತಮ್ಮ ಅಳಲು ತೋಡಿಕೊಂಡಿದ್ದಾರೆ. ತಕ್ಷಣ ಜಾಗದ ಸರ್ವೆ ನಡೆಸಿ ವರದಿ ನೀಡಿ, ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ ಆ ಕುಟುಂಬಗಳಿಗೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಲಾಗುತ್ತದೆ. ತರಕಾರಿ ಮಾರುಕಟ್ಟೆಯ ಶೌಚಾಲಯವನ್ನು ಸರಿಪಡಿಸಿ. 31 ವಾರ್ಡ್ ಗಳಲ್ಲೂ ಸ್ವಚ್ಛತಾ ಲೋಪ ಆಗದಂತೆ ಗಮನಹರಿಸಿ ಎಂದು ತಿಳಿಸಿದರು.

ಉಪವಿಭಾಗಾಧಿಕಾರಿ ವಿರೇಶ್‌ಕುಮಾರ್, ನಗರಸಭೆ ಯೋಜನಾಧಿಕಾರಿ ರಂಗಸ್ವಾಮಿ, ಪೌರಾಯುಕ್ತ ಎಚ್.ಕೆ.ನಾಗಪ್ಪ, ತಹಶೀಲ್ದಾರ್ ಪ್ರದೀಪ್, ಶಾಸಕರ ಆಪ್ತ ಕಾರ್ಯದರ್ಶಿಗಳಾದ ಶ್ರೀನಿವಾಸ್, ರಮೇಶ್ ಟಿ.ಪಿ., ಮದನ್, ಬಾಲಚಂದ್ರ, ಸುರೇಶ್ ಬಾಬು, ಗಣಪತಿ ಮಂಡಗಳಲೆ, ಮಧು ಮಾಲತಿ, ಮಕ್ಬೂಲ್ ಇನ್ನಿತರರು ಹಾಜರಿದ್ದರು.

ಸಾಗರ ನಗರಸಭೆಯಲ್ಲಿ ಶುಕ್ರವಾರ ನಗರಸಭೆ ವ್ಯಾಪ್ತಿಯ ವಿವಿಧ ಕಾಮಗಾರಿ ಸೇರಿದಂತೆ ಪ್ರಗತಿ ಪರಿಶೀಲನಾ ಸಭೆ ಶಾಸಕ ಬೇಳೂರು ಗೋಪಾಲಕೃಷ್ಣ ನಡೆಸಿದರು.

### 136 ಕುಟುಂಬದ ಸಮಸ್ಯೆಗೆ ಶೀಘ್ರದಲ್ಲಿ ಪರಿಹಾರದ ಭರವಸೆ

# ‘ಸಂ.ಕ. ಲೇಖನಕ್ಕೆ ಶಾಸಕರ ಪ್ರಶಂಸೆ

**ಸಾಗರ:** ಇಲ್ಲಿನ ಜನ್ನತ್‌ಗಲ್ಲಿ ಬಡಾವಣೆಯ ಜನರ ಸಂಕಷ್ಟವನ್ನು ಅರಿತ ಶಾಸಕ ಬೇಳೂರು ಗೋಪಾಲಕೃಷ್ಣ ಅವರು ಕೂಡಲೆ ಅಲ್ಲಿಯ ನಿವಾಸಿ ಗಳ ಸಮಸ್ಯೆ ಬಗೆಹರಿಸಲು ಮುಂದಾಗಿದ್ದಾರೆ. ‘ಸಂಯುಕ್ತ ಕರ್ನಾಟಕ’ ಪತ್ರಿಕೆಯ ವರದಿಯ ಹಿನ್ನಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಶಾಸಕರು ನಿರ್ಧರಿಸಿದ್ದಾರೆ.

ಇಲ್ಲಿನ ಜನ್ನತ್‌ಗಲ್ಲಿ ಬಡಾವಣೆಯ 136 ಕುಟುಂಬದ ನಿವೇಶನವು ಇಕ್ಕೇರಿ ಅಘೋರೇಶ್ವರ ದೇವಸ್ಥಾನಕ್ಕೆ ಸೇರಿ ಮುಜರಾಯಿ ಇಲಾ ಖೆಯ ವ್ಯಾಪ್ತಿಗೆ ಒಳಪಡುತ್ತಿದೆ. ಇದಕ್ಕೆ ಪರ್ಯಾ ಯವಾದ ವ್ಯವಸ್ಥೆಯನ್ನು ನಗರಸಭೆ ಯವರು ಕಲ್ಪಿಸಬೇಕು. ಈ ಬಗ್ಗೆ ಸ್ಥಳೀಯ ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಮತ್ತು ನಗರಸಭೆಯ ಅಧಿ ಕಾರಿಗಳು ಗಮನಿಸಬೇಕು ಎನ್ನುವ ಲೇಖನವನ್ನು ಪ್ರಕಟಿಸಲಾಗಿತ್ತು. ಅದ ರಂತೆ ಶಾಸಕ ಬೇಳೂರು ಗೋಪಾಲಕೃಷ್ಣ ಅವರು ನಗರ ಸಭೆಯ ಅಧಿಕಾರಿಗಳು ಹಾಗೂ ಉಪವಿಭಾಗಾ ಧಿಕಾರಿಗಳ ನೇತೃ ತ್ವದಲ್ಲಿ ಸಭೆ ನಡೆಸಿ ಅಲ್ಲಿಯ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆ ಯನ್ನು ಹೇಗೆ ಕಲ್ಪಿಸಬೇಕು ಎಂದು ಚರ್ಚೆಯನ್ನು ನಡೆಸಿ ಶೀಘ್ರದಲ್ಲಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

**ಪ್ರಕರಣದ ಹಿನ್ನಲೆ:**

ಈ ಹಿಂದೆ 2016ರಲ್ಲಿಯೂ ಸಹ ‘ಸಂಯುಕ್ತ ಕರ್ನಾಟಕ’ ಪತ್ರಿಕೆ ಯಲ್ಲಿ ‘ಇಕ್ಕೇರಿ ಅಘೋರೇಶ್ವರ ದೇವಸ್ಥಾನಕ್ಕೆ ಸೇರಿದ 9 ಎಕರೆ 35 ಗುಂಟೆ ಜಾಗ ಒತ್ತುವರಿಯಾಗಿದ್ದು ನ್ಯಾಯಾಲ ಯದಲ್ಲಿ ಒತ್ತುವರಿ ತೆರವು ಆದೇಶವಿ ದ್ದರೂ ಕ್ರಮ ಕೈಗೊಳ್ಳದ ಜಿಲ್ಲಾಧಿಕಾರಿ’

ಈ ಹಿಂದೆ ಪ್ರಕಟಿಸಲಾದ ಲೇಖನದ ಚಿತ್ರ.

ಎನ್ನುವ ಲೇಖನ ಪ್ರಕಟಿಸಿದಾಗ ಬೆಂಗಳೂರು ಮಾನವಹಕ್ಕು ಆಯೋಗ ವರದಿಯ ಆಧಾರದ ಮೇಲೆ ಸ್ವಯಂದೂರು ದಾಖಲು ಮಾಡಿ ಕೊಂಡು ತನಿಖೆ ನಡೆಸಿ ಅಘೋರೇಶ್ವರ ದೇವಾ ಲಯದ ಜಾಗ ಒತ್ತುವರಿಯಾಗಿರುವುದು ನಿಜ.

ಆದರೆ ಈ ಒತ್ತುವರಿಯಲ್ಲಿ 136 ಕುಟುಂಬಗಳು ನೆಲೆಸಿದ್ದು ಇವುಗಳಿಗೆ ಸ್ಥಳೀಯ ನಗರಸಭೆಯವರು ಸೇಲ್ ಸರ್ಟಿಫಿಕೇಟ್ ಹಾಗೂ ನಿವಾಸಿಗಳ ಹಕ್ಕುಪತ್ರವನ್ನು ಸರ್ಕಾ ರದಿಂದಲೆ ಮಂಜೂರು ಮಾಡಿಕೊಟ್ಟಿದ್ದಾರೆ. ಇದರಿಂದ ಈ ಕುಟುಂಬವನ್ನು ಸ್ಥಳಾಂತರಿಸಲು ಸಾಧ್ಯವಿಲ್ಲ. ಆದ್ದ ರಿಂದ ನಗರ ಸಭೆಯವರೇ ಪರ್ಯಾಯ ವ್ಯವಸ್ಥೆಯನ್ನು ಮಾಡ ಬೇಕು ಎಂದು ವರದಿ ನೀಡಿ ಅದ ರಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಆದರೆ ಸುಮಾರು ಹತ್ತು ವರ್ಷ ಕಳೆದರೂ ಜಿಲ್ಲಾಧಿಕಾರಿಗಳು ಅಲ್ಲಿಯ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸದ ಕಾರಣ ಆ 136 ಕುಟುಂಬಗಳಿಗೆ ಇ ಸ್ವತ್ತು ಇನ್ನಿತರೆ ಸೌಲಭ್ಯ ದಿಂದ ವಂಚಿತರಾಗಿದ್ದರು.

**ಈಗ ಹೇಗೆ ಕ್ರಮ ಕೈಗೊಳ್ಳುತ್ತಾರೆ?**

ಶಾಸಕರ ನೇತೃತ್ವದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಈಗಾಗಲೆ ನಗರಸಭೆಯಿಂದ ತಪ್ಪಾಗಿರುವುದು ನಿಜ. ಈ ಹಿಂದೆಯೇ ಜಾಗ ವನ್ನು ಪರಿಶೀಲಿಸದೆ ಸೇಲ್ ಸರ್ಟಿಫಿಕೇಟ್ ನೀಡಲಾಗಿದೆ. ಅಲ್ಲದೆ ಅಲ್ಲಿನ ನಿವಾಸಿಗಳು ಸುಮಾರು 50 ವರ್ಷದಿಂದ ವಾಸ ಮಾಡುತ್ತಿ ರುವು ದರಿಂದ ಸರ್ಕಾರದ ಸೂಚನೆಯಂತೆ ಅವರನ್ನು ತೆರವುಗೊಳಿಸಲು ಸಾಧ್ಯ ವಿಲ್ಲವಾಗಿರುವುದರಿಂದ ನಗರ ಸಭೆಯಿಂದ ಪ್ರತ್ಯೇಕ ವಾದ ಸರ್ವೆ ಯನ್ನು ಮಾಡಿ 136 ಕುಟುಂಬ ವಾಸ ವಿರುವ ಜಾಗದ ವಿಸ್ತೀರ್ಣವನ್ನು ಗುರುತಿಸಿ ಅಷ್ಟೇ ಜಾಗವನ್ನು ಮುಜ ರಾಯಿ ಇಲಾಖೆಗೆ ನಗರಸಭೆಯಿಂದ ಹಸ್ತಾಂತರ ಮಾಡುವುದು ಅಲ್ಲದೆ ಮುಜರಾಯಿ ಇಲಾಖೆಯು ಸರ್ಕಾರದ ಒಂದು ಸಂಸ್ಥೆ ಯಾಗಿರು ವುದರಿಂದ ಮುಜರಾಯಿ ಸಚಿವರ ಜೊತೆ ಶಾಸಕರು ಮನವಿ ಮಾಡಿ ಈ ಕುಟುಂಬಕ್ಕೆ ಖಾಯಂ ವ್ಯವಸ್ಥೆಯನ್ನು ಕಲ್ಪಿಸು ವುದು ಅಲ್ಲದೆ ಇ ಸ್ವತ್ತು ಮಾಡುವಹಾಗೆನ್ಯಾಯಾಲಯದಿಂದ ಆದೇಶ ಮಾಡಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದು ಕೂಡಲೆ ಕಾರ್ಯ ಪ್ರವೃತ್ತರಾಗಲು ಪೌರಾಯುಕ್ತರಿಗೆ ಸೂಚನೆ ಶಾಸಕರು ನೀಡಿದರು.

ಒಟ್ಟಿನಲ್ಲಿ ‘ಸಂಯುಕ್ತ ಕರ್ನಾಟಕ’ ಪತ್ರಿಕೆಯ ಸಾಮಾಜಿಕ ಕಳಕಳಿಯ ಲೇಖನಕ್ಕೆ ಶಾಸಕ ಬೇಳೂರು ಗೋಪಾಲಕೃಷ್ಣ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ.

ಸಂಯುಕ್ತ ಕರ್ನಾಟಕ ಫಲಶ್ರುತಿ ಸಂಯುಕ್ತ ಕರ್ನಾಟಕ

‘ಸಂಯುಕ್ತ ಕರ್ನಾಟಕ’ ಪತ್ರಿಕೆಯ ವರದಿಯ ಹಿನ್ನಲೆಯಲ್ಲಿ ಶಾಸಕ ಬೇಳೂರು ಗೋಪಾಲಕೃಷ್ಣ ಅವರು ನಮ್ಮ 136 ಕುಟುಂಬಕ್ಕೆ ನ್ಯಾಯವನ್ನು ಕೊಡಿಸುತ್ತಿದ್ದಾರೆ. ಕಳೆದ 60 ವರ್ಷಗಳ ಹಿಂದಿನಿಂದ ವಾಸ ಮಾಡುತ್ತಿದ್ದ ನಾವು ಇ ಸ್ವತ್ತು ಇಲ್ಲದೆ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ಈಗ ಶಾಸಕರು ನಮ್ಮ ಕಷ್ಟವನ್ನು ಆಲಿಸಿ ಕ್ರಮ ಕೈಗೊಂಡಿರುವುದಕ್ಕೆ ಕೃತಜ್ಞತೆ ಅರ್ಪಿಸುತ್ತೇವೆ.

**ಅಶ್ವಿನಿ ಹೆಗಡೆ, ಜನ್ನತ್‌ಗಲ್ಲಿ ನಿವಾಸಿ.**

ಸಂಯುಕ್ತ ಕರ್ನಾಟಕ

**ಎಕ್ಸ್‌ಟ್ರಾ ಕವರ್**

## ಅರ್ಶದೀಪ್‌ಗೆ ವ್ಲಾಗ್‌ಗಳನ್ನು ಮಾಡದಂತೆ ಬಿಸಿಸಿಐ ಎಚ್ಚರಿಕೆ

**ಮುಂಬೈ:** ಬಿಸಿಸಿಐ ಇತ್ತೀಚೆಗೆ ಅರ್ಶದೀಪ್ ಸಿಂಗ್ ಅವರ ವ್ಲಾಗ್‌ಗಳಿಗೆ ನಿಷೇಧ ಹೇರಿದೆ. ಪಂಜಾಬ್ ಕಿಂಗ್ಸ್ ತಂಡದ ಆಟಗಾರ ಯೆಜ್ವೇಂದ್ರ ಚಹಲ್ ವಿಮಾನದಲ್ಲಿ ವೇಪಿಂಗ್ ಮಾಡುತ್ತಿದ್ದ ದೃಶ್ಯ ಅರ್ಶದೀಪ್ ವ್ಲಾಗ್‌ನಲ್ಲಿ ಸೆರೆಯಾಗಿ ವೈರಲ್ ಆಗಿತ್ತು. ಇದು ತಂಡದ ಶಿಸ್ತಿನ ಬಗ್ಗೆ ದೊಡ್ಡ ವಿವಾದ ಸೃಷ್ಟಿಸಿತ್ತು. ಈ ಹಿನ್ನೆಲೆಯಲ್ಲಿ, ಆಟಗಾರರ ಗೌಪ್ಯತೆ ಮತ್ತು ಶಿಸ್ತು ಕಾಪಾಡಲು ಬಿಸಿಸಿಐ ಈ ಕಠಿಣ ಕ್ರಮ ಕೈಗೊಂಡಿದೆ. ಇನ್ನು ಮುಂದೆ ಐಪಿಎಲ್ ವೇಳೆ ಆಟಗಾರರು ಇಂತಹ ವಿಡಿಯೋ ಚಿತ್ರೀಕರಿಸದಂತೆ ಸೂಚಿಸಲಾಗಿದೆ.

## ಸಾಯಿರಾಜ್ ಸ್ಪಿನ್ ಕೋಚ್ ಆಗಿ ನೇಮಿಸಿ: ಗೌತಿ ಮನವಿ

**ನವದೆಹಲಿ:** ಟೀಮ್ ಇಂಡಿಯಾದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಸಾಯಿರಾಜ್ ಬಹುತುಲೆ ಅವರನ್ನು ಭಾರತದ ಸ್ಪಿನ್ ಬೌಲಿಂಗ್ ಕೋಚ್ ಆಗಿ ನೇಮಿಸುವಂತೆ ಬಿಸಿಸಿಐಗೆ ಶಿಫಾರಸು ಮಾಡಿದ್ದಾರೆ. ಪ್ರಸ್ತುತ ಐಪಿಎಲ್ 2026 ರಲ್ಲಿ ಪಂಜಾಬ್ ಕಿಂಗ್ಸ್ ತಂಡದೊಂದಿಗೆ ಇರುವ ಬಹುತುಲೆ, ಟೂರ್ನಿಯ ನಂತರ ರಾಷ್ಟ್ರೀಯ ತಂಡವನ್ನು ಸೇರಿಕೊಳ್ಳುವ ಸಾಧ್ಯತೆಯಿದೆ. ದೇಶೀಯ ಕ್ರಿಕೆಟ್‌ನಲ್ಲಿ ಅಪಾರ ಅನುಭವ ಹೊಂದಿರುವ ಅವರು, ಜೂನ್‌ನಲ್ಲಿ ನಡೆಯಲಿರುವ ಅಫ್ಘಾನಿಸ್ತಾನ ವಿರುದ್ಧದ ಸರಣಿಯಿಂದ ಭಾರತ ತಂಡದ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ.

## ಧೋನಿಯ ತೆರಿಗೆ ಪಾವತಿಗೆ ಕಂದಾಯ ಇಲಾಖೆ ಮೆಚ್ಚುಗೆ

**ನವದೆಹಲಿ:** ಟೀಮ್ ಇಂಡಿಯಾದ ಮಾಜಿ ನಾಯಕ ಎಂ.ಎಸ್. ಧೋನಿ 2025–26ರ ಹಣಕಾಸು ವರ್ಷದಲ್ಲಿ ಬಿಹಾರ ಮತ್ತು ಜಾರ್ಖಂಡ್ ವಲಯದ ಅತಿ ಹೆಚ್ಚು ವೈಯಕ್ತಿಕ ತೆರಿಗೆ ಪಾವತಿದಾರರಾಗಿ ಹೊರಹೊಮ್ಮಿದ್ದಾರೆ. ಇತ್ತೀಚೆಗೆ ರಾಂಚಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆದಾಯ ತೆರಿಗೆ ಇಲಾಖೆಯ ಮುಖ್ಯ ಆಯುಕ್ತ ಡಾ. ಡಿ. ಸುಧಾಕರ ರಾವ್ ಈ ಮಾಹಿತಿ ನೀಡಿದ್ದಾರೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರೂ, ಐಪಿಎಲ್ ಮತ್ತು ವಿವಿಧ ಜಾಹೀರಾತುಗಳ ಮೂಲಕ ಧೋನಿ ಅವರ ಆದಾಯ ಸ್ಥಿರವಾಗಿದೆ ಎಂಬುದು ಸ್ಪಷ್ಟವಾಗಿದೆ.

## ಬಿಎಫ್‌ಸಿ, ಜೆಎಫ್‌ಸಿ ಮಧ್ಯೆ ಇಂದು ಐಎಸ್‌ಎಲ್ ಪಂದ್ಯ

**ಜೆಮ್‌ಶೆಡ್‌ಪುರ:** ಬೆಂಗಳೂರು ಎಫ್‌ಸಿ ತಂಡವು ಈ ಸೀಸನ್‌ನ ತನ್ನ ಅಂತಿಮ ಪಂದ್ಯಕ್ಕೂ ಮುನ್ನ, ಜಮ್‌ಶೆಡ್‌ಪುರ ಎಫ್‌ಸಿಯ ಪ್ರಶಸ್ತಿಯ ಕನಸಿಗೆ ಅಡ್ಡಿಯಾಗಲು ಸಜ್ಜಾಗಿದೆ. ಇತ್ತೀಚಿನ ಪಂದ್ಯಗಳಲ್ಲಿ ಅಲ್ಪ ಹಿನ್ನಡೆ ಅನುಭವಿಸಿರುವ ಬೆಂಗಳೂರು ತಂಡವು ಮತ್ತೆ ಗೆಲುವಿನ ಹಾದಿಗೆ ಮರಳಲು ಎದುರು ನೋಡುತ್ತಿದ್ದರೆ, ಅಂಕಪಟ್ಟಿಯ ಅಗ್ರಸ್ಥಾನದ ಹತ್ತಿರವಿರುವ ಜಮ್‌ಶೆಡ್‌ಪುರ ಎಫ್‌ಸಿ ಪ್ರಶಸ್ತಿ ರೇಸ್‌ನಲ್ಲಿ ಭದ್ರವಾಗಿ ನೆಲೆಯೂರಲು ಪ್ರಯತ್ನಿಸುತ್ತಿದೆ. ಜೆಆರ್‌ಡಿ ಟಾಟಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮೈದಾನದಲ್ಲಿ ಬೆಂಗಳೂರು ಎಫ್‌ಸಿ 2 ರಲ್ಲಿ ಜಯಗಳಿಸಿದ್ದು, ಉಳಿದ 3 ಪಂದ್ಯಗಳು ಡ್ರಾಗೊಂಡಿವೆ.

# ಕೆಕೆಆರ್ ಎದ್ರು ಜಾರಿಬಿದ್ದ ಡೆಲ್ಲಿ

### ಕೋಲ್ಕತಾಗೆ 8 ವಿಕೆಟ್ ಜಯ | ಫಿನ್ ಅಲೆನ್ ಶತಕ | ಡಿಸಿಗೆ ಮುಖಭಂಗ

**ನವದೆಹಲಿ:** ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್ 2026ರ 51ನೇ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ತಂಡ ಭರ್ಜರಿ ಗೆಲುವು ಸಾಧಿಸಿದ್ದು, ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್‌ಗೆ ಭಾರಿ ಮುಖಭಂಗವಾಗಿದೆ. ಕೆಕೆಆರ್ ಬೌಲರ್‌ಗಳ ಜಾಲಕ್ಕೆ ಸಿಲುಕಿದ ಡೆಲ್ಲಿ ಕ್ಯಾಪಿಟಲ್ಸ್, ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ ಕೇವಲ 142 ರನ್ ಗಳಿಸಲಷ್ಟೇ ಶಕ್ತವಾಯಿತು.ಆದರೆ, ಸುಲಭ ಗುರಿ ಬೆನ್ನಟ್ಟಿದ ಕೆಕೆಆರ್ ಆರಂಭದಲ್ಲೇ ಅಜಿಂಕ್ಯ ರಹಾನೆ & ರಘುವಂಶಿ ಬಹಬೇಗನೇ ಔಟಾದರು. ಆದ್ರೆ, 47 ಎಸೆತಗಳಲ್ಲೇ ಶತಕ ಬಾರಿಸಿದ ಫಿನ್ ಅಲೆನ್ ಹಾಗೂ ಗ್ರೀನ್‌ರ 33 ರನ್‌ಗಳ ಕಾರಣ ಕೆಕೆಆರ್ 8 ವಿಕೆಟ್ ಜಯ ಸಂಪಾದಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ತಂಡಕ್ಕೆ ಆರಂಭಿಕ ಆಘಾತ ಎದುರಾಯಿತು. ನಾಯಕ ಕೆ.ಎಲ್. ರಾಹುಲ್ (23 ರನ್, 14 ಎಸೆತ) ಉತ್ತಮ ಆರಂಭ ಪಡೆದರೂ ದೊಡ್ಡ ಮೊತ್ತವಾಗಿ ಪರಿವರ್ತಿಸಲು ವಿಫಲರಾದರು. ಆದರೆ, ಮತ್ತೊಂದೆಡೆ ಪತುಮ್ ನಿಸ್ಸಂಕಾ ಆಕರ್ಷಕ ಅರ್ಧಶತಕ (50 ರನ್, 29 ಎಸೆತ, 5 ಬೌಂಡರಿ, 3 ಸಿಕ್ಸರ್) ಸಿಡಿಸಿ ತಂಡಕ್ಕೆ ಆಸರೆಯಾದರು. ಅನುಕುಲ್

ರಾಯ್ ಬೌಲಿಂಗ್‌ನಲ್ಲಿ ಸ್ಟಂಪಿಂಗ್ ಆಗುವ ಮೂಲಕ ನಿಸ್ಸಂಕಾ ತಮ್ಮ ಹೋರಾಟ ಅಂತ್ಯಗೊಳಿಸಿದರು.

ಕೆಕೆಆರ್ ಪರ ಸುನಿಲ್ ನರೈನ್ ಮತ್ತು ಅನುಕುಲ್ ರಾಯ್ ಅದ್ಭುತ ಬೌಲಿಂಗ್ ಪ್ರದರ್ಶಿಸಿದರು. ನರೈನ್ ಕೇವಲ 17 ರನ್ ನೀಡಿ 1 ವಿಕೆಟ್ ಪಡೆದರೆ, ಅನುಕುಲ್ ರಾಯ್ 2 ವಿಕೆಟ್ ಕಬಳಿಸಿ ಡೆಲ್ಲಿ ಮಧ್ಯಮ ಕ್ರಮಾಂಕಕ್ಕೆ ಆಘಾತ ನೀಡಿದರು. ನಿತೀಶ್ ರಾಣಾ (8), ಸಮೀರ್ ರಿಜ್ವಿ (3) ಮತ್ತು ಟ್ರಿಸ್ಟಾನ್ ಸ್ಟಬ್ಸ್ (2) ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿದ್ದು ತಂಡಕ್ಕೆ ಹಿನ್ನಡೆಯಾಯಿತು.ಒಂದು ಹಂತದಲ್ಲಿ 100 ರನ್ ದಾಟಲು ಪರದಾಡುತ್ತಿದ್ದ ಡೆಲ್ಲಿಗೆ ಕೊನೆಯಲ್ಲಿ ಅಶುತೋಷ್ ಶರ್ಮಾ ನೆರವಾದರು.

28 ಎಸೆತಗಳಲ್ಲಿ 3 ಬೌಂಡರಿ ಹಾಗೂ 3 ಭರ್ಜರಿ ಸಿಕ್ಸರ್ ಸಹಿತ 39 ರನ್ ಗಳಿಸಿದ ಅಶುತೋಷ್, ತಂಡದ ಮೊತ್ತವನ್ನು 140ರ ಗಡಿ ದಾಟಿಸಿದರು. ಅಕ್ಷರ್ ಪಟೇಲ್ 11 ರನ್ ಗಳಿಸಿ ರನ್ ವೇಗ ಹೆಚ್ಚಿಸಲು ವಿಫಲರಾದರು. ಸತತ ಸೋಲುಗಳಿಂದ ಕಂಗಾಲಾಗಿರುವ ಡೆಲ್ಲಿ ತಂಡಕ್ಕೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿತ್ತು.

ಆದರೆ, ಶಿಸ್ತುಬದ್ಧ ಬೌಲಿಂಗ್ ದಾಳಿ ನಡೆಸಿದ ಕೆಕೆಆರ್ ತಂಡಕ್ಕೆ 143 ರನ್‌ಗಳ ಸುಲಭ ಗುರಿ ಲಭಿಸಿತು. ಗೆಲುವಿಗಾಗಿ ಬ್ಯಾಟಿಂಗ್ ಮಾಡಲು ಬಂದ ಕೆಕೆಆರ್‌ನ 2 ವಿಕೆಟ್‌ಗಳ ನಂತರ ಫಿನ್ ಅಲೆನ್ & ಕ್ಯಾಮೆರೂನ್ ಗ್ರೀನ್ 116 ರನ್‌ಗಳ ಅಜೇಯ ಜೊತೆಯಾಟವಾಡಿ ಗೆಲ್ಲಿಸಿದರು. ಇದರಿಂದ ಕೆಕೆಆರ್ ಈಗ 7ನೇ ಸ್ಥಾನಕ್ಕೇರಿದೆ. 7ನೇ ಸ್ಥಾನದಲ್ಲಿದ್ದ ಡೆಲ್ಲಿ ಈಗ ಬಹುತೇಕ ಟೂರ್ನಿಯಿಂದ ಔಟಾಗಿದೆ.

**ಸಂಕ್ಷಿಪ್ತ ಸ್ಕೋರ್:** ಡೆಲ್ಲಿ ಕ್ಯಾಪಿಟಲ್ಸ್ 142/8. ಪತುಮ್ ನಿಸ್ಸಂಕಾ 50 (29), ಕೆಕೆಆರ್ 14.2 ಓವರ್‌ಗಳಲ್ಲೇ 147/2 ರನ್.

## ಐಪಿಎಲ್ 2026

| ನಂ | ತಂಡ | ಪಂದ್ಯ | ಜಯ | ಸೋಲು | ಅಂಕ |
|---|---|---|---|---|---|
| 01 | ಹೈದ್ರಾಬಾದ್ | 11 | 07 | 04 | 14 |
| 02 | ಪಂಜಾಬ್ | 10 | 06 | 03 | 13 |
| 03 | ಆರ್‌ಸಿಬಿ | 10 | 06 | 04 | 12 |
| 04 | ರಾಜಸ್ಥಾನ | 10 | 06 | 04 | 12 |
| 05 | ಗುಜರಾತ್ | 10 | 06 | 04 | 12 |
| 06 | ಚೆನ್ನೈ | 10 | 05 | 05 | 10 |
| 07 | ಕೆಕೆಆರ್ | 10 | 04 | 05 | 09 |
| 08 | ಡೆಲ್ಲಿ | 11 | 04 | 07 | 08 |
| 09 | ಮುಂಬೈ | 10 | 03 | 07 | 06 |
| 10 | ಲಖನೌ | 10 | 03 | 07 | 06 |

## 224 ಕ್ಷೇತ್ರಗಳಲ್ಲಿ ಕ್ರಿಕೆಟ್ ಟೂರ್ನಿ: 15ಕ್ಕೆ ಆರಂಭ

**ಬೆಂಗಳೂರು:** ಬರೋಬ್ಬರಿ 25 ಲಕ್ಷ ಪ್ರಥಮ ಬಹುಮಾನ ಮೊತ್ತದ ಬೃಹತ್ ಕ್ರಿಕೆಟ್ ಟೂರ್ನಿಗೆ ವೇದಿಕೆ ಸಜ್ಜಾಗಿದೆ. ಮೊದಲ ವಿಜೇತರಿಗೆ 25 ಲಕ್ಷ, ರನ್ನರ್ಸ್‌ಗೆ 5 ಲಕ್ಷ ಹಾಗೂ ಎರಡೂವರೆ ಲಕ್ಷ ತೃತೀಯ ಬಹುಮಾನಗಳನ್ನು ಘೋಷಿಸಲಾಗಿದೆ.

ಐಪಿಎಲ್, ಸಿಸಿಎಲ್ ಭರಾಟೆ ರಾಜ್ಯದಲ್ಲಿ ಜೋರಾಗಿದ್ದು, ಅದೇ ರೀತಿ ನೂತನವಾಗಿ ಬಿಎಸ್‌ಎನ್‌ಡಿಪಿ ಟೂರ್ನಿ ಮೂಲಕ ಗ್ರಾಮೀಣ ಭಾಗದ ಕ್ರಿಕೆಟಿಗರನ್ನೇ ಕೇಂದ್ರೀಕೃತ ಮಾಡಿ ಅವರಿಗೊಂದು ವೇದಿಕೆ ಕಲ್ಪಿಸಲಾಗುತ್ತಿದೆ.

ರಾಜ್ಯ ಮಟ್ಟದಲ್ಲಿ ಜರುಗುವ ದೊಡ್ಡ ಬಹುಮಾನದ ಮೊತ್ತ ಹೊಂದಿರುವ ಈ ಲೀಗ್‌ನ ಲೋಗೋವನ್ನು ಇತ್ತೀಚೆಗೆ ಅನಾವರಣ ಮಾಡಲಾಗಿದ್ದು, ಕ್ರಿಕೆಟಿಗರಾದ ದೊಡ್ಡ ಗಣೇಶ್, ಮಾಜಿ ಸಚಿವ ಅರವಿಂದ ಲಿಂಬಾವಳಿ, ದೇವಿಕಾನಂದ ಶ್ರೀ ಸೇರಿದಂತೆ ಗಣ್ಯರು ಹಾಜರಿದ್ದರು. ಕರ್ನಾಟಕದಲ್ಲಿರುವ 224 ಅಸೆಂಬ್ಲಿಗಳನ್ನೂ ಒಳಗೊಂಡು ಈ ಲೀಗ್ ನಡೆಸಲಾಗುತ್ತಿದೆ.

## ಇಂದು ರಾಜಸ್ಥಾನ & ಗುಜರಾತ್ ಫೈಟ್: ಗೆದ್ದ ತಂಡಕ್ಕೆ 2ನೇ ಸ್ಥಾನ

**ಜೈಪುರ:** ಐಪಿಎಲ್ 2026ರ ರೋಚಕ ಹಣಾಹಣಿಯಲ್ಲಿ ಇಂದು ರಾಜಸ್ಥಾನ್ ರಾಯಲ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳು ಜೈಪುರದ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ. ಪ್ಲೇ–ಆಫ್ ರೇಸ್‌ನಲ್ಲಿರುವ ಎರಡೂ ತಂಡಗಳಿಗೆ ಈ 52ನೇ ಪಂದ್ಯವು ಅತ್ಯಂತ ನಿರ್ಣಾಯಕವಾಗಿದೆ.

ಪ್ರಸ್ತುತ ರಾಜಸ್ಥಾನ್ ರಾಯಲ್ಸ್ ಅಂಕಪಟ್ಟಿಯಲ್ಲಿ 4ನೇ ಸ್ಥಾನದಲ್ಲಿದ್ದರೆ, ಸತತ ಮೂರು ಗೆಲುವುಗಳೊಂದಿಗೆ ಲಯದಲ್ಲಿರುವ ಗುಜರಾತ್ ಟೈಟಾನ್ಸ್ 5ನೇ ಸ್ಥಾನದಲ್ಲಿದೆ. ಈವರೆಗಿನ 9 ಪಂದ್ಯಗಳಲ್ಲಿ ಗುಜರಾತ್ 6 ಬಾರಿ ಗೆದ್ದಿದ್ದರೆ, ರಾಜಸ್ಥಾನ್ 3 ಬಾರಿ ಜಯ ಸಾಧಿಸಿದೆ. ಆದರೆ, ಈ ಸೀಸನ್‌ನ ಮೊದಲ ಹಣಾಹಣಿಯಲ್ಲಿ ರಾಜಸ್ಥಾನ್ ಜಯಭೇರಿ ಬಾರಿಸಿತ್ತು.

ರಾಜಸ್ಥಾನ್ ಪರ ಯಶಸ್ವಿ ಜೈಸ್ವಾಲ್ ಮತ್ತು ರಿಯಾನ್ ಪರಾಗ್ ಬ್ಯಾಟಿಂಗ್ ಶಕ್ತಿಯಾಗಿದ್ದರೆ,

ರವಿ ಬಿಷ್ಣೋಯ್ ಬೌಲಿಂಗ್‌ನಲ್ಲಿ ಮಿಂಚುತ್ತಿದ್ದಾರೆ. ಗುಜರಾತ್ ಪರ ಶುಭ್ಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಜೈಪುರದ ಪಿಚ್ ಬ್ಯಾಟಿಂಗ್‌ಗೆ ಪೂರಕವಾಗಿದ್ದು, ಇಲ್ಲಿ ರನ್ ಮಳೆ ಹರಿಯುವ ಸಾಧ್ಯತೆಯಿದೆ.

**ಪಂದ್ಯದಾರಂಭ: ರಾತ್ರಿ 7.30ಕ್ಕೆ**

## ಫ್ರಾನ್ಸ್ ಡೆ ಟೂರ್ ರೀತಿ 'ಎಲ್'ಎಟೇಪ್ ಸೈಕ್ಲಿಂಗ್

### ಮೈಸೂರಲ್ಲಿ ಅ.4ರಂದು ಸ್ಪರ್ಧೆ

**ಬೆಂಗಳೂರು:** ಮೈಸೂರಿನಲ್ಲಿ ನಡೆಯಲಿರುವ ಟೂರ್ ಡಿ ಫ್ರಾನ್ಸ್ ರೀತಿಯ 'ಎಲ್'ಎಟೇಪ್ ಮೈಸೂರು' ಸೈಕ್ಲಿಂಗ್ ಸ್ಪರ್ಧೆಗೆ ಎನ್‌ಇಬಿ ಸ್ಪೋರ್ಟ್ಸ್ ಸಂಸ್ಥೆಯು ಇಂದು ಅಧಿಕೃತ ಲೋಗೋ ಹಾಗೂ ವೆಬ್ಸೈಟ್ ಲೋಕಾರ್ಪಣೆ ಮಾಡಿತು. ಕರ್ನಾಟಕದಲ್ಲಿ ಹಿಂದೆಂದೂ ನಡೆಯದ ಐತಿಹಾಸಿಕ ಸೈಕ್ಲಿಂಗ್ ಸ್ಪರ್ಧೆ ಇದಾಗಿದ್ದು, ರಾಜ್ಯದ ಕ್ರೀಡಾ ಇತಿಹಾಸದಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಲು ಸಜ್ಜಾಗಿದೆ. ಅಕ್ಟೋಬರ್ 4, 2026ರಂದು ಈ ಹವ್ಯಾಸಿ ರೇಸ್ ನಡೆಯಲಿದ್ದು, ಜಗತ್ತಿನ ಅತ್ಯಂತ ಶ್ರೇಷ್ಠ ಸೈಕ್ಲಿಂಗ್ ಸ್ಪರ್ಧೆಯ ಸ್ಫೂರ್ತಿಯನ್ನು ಸಾಂಸ್ಕೃತಿಕ ನಗರಿ ಮೈಸೂರಿಗೆ ತರಲಿದೆ.

ಮೈಸೂರಲ್ಲಿ ನಡೆಯುವ ಸ್ಪರ್ಧೆ

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಸಹಭಾಗಿತ್ವದಲ್ಲಿ ಆಯೋಜಿಸಲಾಗಿರುವ ಎಲ್'ಎಟೇಪ್ ಮೈಸೂರು ಸ್ಪರ್ಧೆಯು ಟೂರ್ ಡಿ ಫ್ರಾನ್ಸ್ ಸರಣಿಯಲ್ಲಿ ನಡೆಯುವ ಜಾಗತಿಕ ಎಲ್'ಎಟೇಪ್ ಸ್ಪರ್ಧೆಯ ಭಾಗವಾಗಿದೆ. ಟೂರ್ ಡಿ ಫ್ರಾನ್ಸ್ ಆಯೋಜಕರು ಹವ್ಯಾಸಿ ಸೈಕ್ಲಿಂಗ್ ಆಸಕ್ತರಿಗಾಗಿ ಎಲ್'ಎಟೇಪ್ ಸ್ಪರ್ಧೆಯನ್ನು ಆಯೋಜಿಸುತ್ತಾ ಬಂದಿದ್ದಾರೆ. ಈ ಸೈಕ್ಲಿಂಗ್ 4 ವಿಭಾಗಗಳಲ್ಲಿ ನಡೆಯಲಿದ್ದು ಎಲ್ಲರೂ ಸ್ಪರ್ಧಿಸಬಹುದು.

## ಎಟಿಪಿ ಬೆಂಗಳೂರು : ಕ್ರಿಶ್ ತ್ಯಾಗಿ & ದೇವ್ ಜಾವಿಯಾಗೆ ವೈಲ್ಡ್‌ಕಾರ್ಡ್

**ಬೆಂಗಳೂರು:** ಮೇ 10 ರಿಂದ 14 ರವರೆಗೆ ನಡೆಯಲಿರುವ ಎಟಿಪಿ ಬೆಂಗಳೂರು ಚಾಲೆಂಜರ್ ಟೆನಿಸ್ ಪಂದ್ಯಾವಳಿಯ ಮೊದಲ ವಾರದ ಮುಖ್ಯ ಡ್ರಾಗೆ ಕರ್ನಾಟಕದ ಉದಯೋನ್ಮುಖ ಆಟಗಾರ ಕ್ರಿಶ್ ತ್ಯಾಗಿ ಮತ್ತು ದೇವ್ ಜಾವಿಯಾ ಅವರಿಗೆ ವೈಲ್ಡ್ ಕಾರ್ಡ್ ನೀಡಲಾಗಿದೆ.ಸ್ಥಳೀಯ ಪ್ರತಿಭೆ ಕ್ರಿಶ್ ತ್ಯಾಗಿ ಇತ್ತೀಚೆಗೆ ಅಂತಾರಾಷ್ಟ್ರೀಯ ಜೂನಿಯರ್ ಸರ್ಕ್ಯೂಟ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದು, ಐಟಿಎಫ್ ಜೂನಿಯರ್ ಶ್ರೇಯಾಂಕದಲ್ಲಿ 51ನೇ ಸ್ಥಾನಕ್ಕೇರಿದ್ದಾರೆ. ಅವರು 2024ರಲ್ಲಿ ಫರ್ಗಾನಾ ಮತ್ತು ಜಿಂಬಾಬ್ವೆಯಲ್ಲಿ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಸದ್ಯ ಅಮೆರಿಕದ ಕಾಲೇಜು ಸರ್ಕ್ಯೂಟ್‌ನಲ್ಲಿ ತರಬೇತಿ ಪಡೆಯುತ್ತಿರುವ ಕ್ರಿಶ್, ಈ ಪಂದ್ಯಾವಳಿಯ ಮೂಲಕ ವೃತ್ತಿಪರ ಟೆನಿಸ್‌ಗೆ ಹೆಜ್ಜೆ ಇಡಲಿದ್ದಾರೆ. ಅರ್ಹತಾ ಸುತ್ತಿನ ವೈಲ್ಡ್ ಕಾರ್ಡ್‌ಗಳನ್ನು ಆರಾಧ್ಯ, ಗಂಧರ್ವಗೆ ನೀಡಲಾಗಿದೆ.

## ಸಬಲೆಂಕಾ, ಶ್ವಾಂಟೆಕ್ ಮೂರನೇ ಸುತ್ತಿಗೆ

**ರೋಮ್:** ಅಗ್ರ ಸೀಡ್ ಬೆಲಾರಸ್‌ನ ಅರಿನಾ ಸಬಲೆಂಕಾ ಹಾಗೂ 4ನೇ ಶ್ರೇಯಾಂಕಿತೆ ಪೋಲೆಂಡಿನ ಇಗಾ ಶ್ವಾಂಟೆಕ್ ಪ್ರತಿಷ್ಠಿತ ಇಟಾಲಿಯನ್ ಓಪನ್ ಟೆನಿಸ್ ಟೂರ್ನಿ ಮಹಿಳೆಯರ ಸಿಂಗಲ್ಸ್ ಮೂರನೇ ಸುತ್ತು ಪ್ರವೇಶಿಸಿದ್ದಾರೆ. ಶುಕ್ರವಾರ ನಡೆದ ಎರಡನೇ ಸುತ್ತಿನ ಪಂದ್ಯಗಳಲ್ಲಿ ಸಬಲೆಂಕಾ ಜೆಕ್ ಆಟಗಾರ್ತಿ ಬಾರ್ಬರಾ ಕ್ರೆಜ್ಸಿಕೋವಾರನ್ನು ಹೆಚ್ಚಿನ ಪ್ರಯಾಸ ಪಡದೇ 6–2, 6–3 ರಿಂದ ಪರಾಭವಗೊಳಿಸಿದರೆ, ಶ್ವಾಂಟೆಕ್ ಅಮೇರಿಕದ ಕೇಟಿ ಮ್ಯಾಕ್ನಲಿ ಎದುರು 6–1, 6–7(5–7), 6–3 ರಿಂದ ಜಯಿಸಲು ಪ್ರಯಾಸ ಪಡಬೇಕಾಯಿತು.

ಆದರೆ ಪುರುಷರ ವಿಭಾಗದಲ್ಲಿ 6ನೇ ಸೀಡ್ ಹೊಂದಿದ್ದ ಆಸ್ಟ್ರೇಲಿಯದ ಅಲೆಕ್ಸ್ ಡಿ ಮಿನುರ್ ಇಟಲಿಯ ಶ್ರೇಯಾಂಕರಹಿತ ಆಟಗಾರ 25 ವರ್ಷ ವಯಸ್ಸಿನ ಮಾಟ್ಟೆಯೊ ಆರ್ನಾಲ್ಡಿ ಎದುರು 6–4, 6–7(5–7), 4–6 ಆಟಗಳಿಂದ ಪರಾಭವಗೊಂಡರೆ, 13ನೇ ಶ್ರೇಯಾಂಕಿತ ರಷ್ಯದ ಕರೆನ್ ಖಚನೊವ್ ಕಜಕಿಸ್ತಾನದ ಅಲೆಕ್ಸಾಂಡರ್ ಶೆವ್ಚೆಂಕೊ ಎದುರು 6–4, 6–4 ನೇರ ಆಟಗಳ ಗೆಲುವು ದಾಖಲಿಸಿದರು.

## 20ನೇ ಐಪಿಎಲ್‌ನಲ್ಲಿ 94 ಪಂದ್ಯ: ಬಿಸಿಸಿಐ

**ಮುಂಬೈ:** 2027ರ ಐಪಿಎಲ್‌ನ ಪಂದ್ಯಗಳ ಸಂಖ್ಯೆ ಹೆಚ್ಚಿಸಲಾಗಿದ್ದು, 74 ಪಂದ್ಯಗಳ ಬದಲಿಗೆ 94 ಪಂದ್ಯಗಳನ್ನು ಆಡಿಸಲು ಬಿಸಿಸಿಐ ತೀರ್ಮಾನಿಸಿದೆ. ಆದರೆ, 2028ರಿಂದ ಹಳೆಯ 'ಹೋಮ್ ಅಂಡ್ ಅವೇ' ಮಾದರಿಯು ಪೂರ್ಣಪ್ರಮಾಣದಲ್ಲಿ ಮರಳಲಿದೆ. ಇದರರ್ಥ ಪ್ರತಿ ತಂಡವು ಉಳಿದ ಒಂಬತ್ತು ತಂಡಗಳ ವಿರುದ್ಧ ತಲಾ ಎರಡು ಬಾರಿ (ತನ್ನ ಮೈದಾನದಲ್ಲಿ ಒಂದು ಮತ್ತು ಎದುರಾಳಿ ಮೈದಾನದಲ್ಲಿ ಒಂದು) ಸೆಣಸಲಿದೆ. ಹೀಗಾಗಿ ಅಭಿಮಾನಿಗಳಿಗೆ ಮತ್ತಷ್ಟು ಐಪಿಎಲ್ ಪಂದ್ಯಗಳನ್ನು ಕಣ್ತುಂಬಿಕೊಳ್ಳುವ ಅವಕಾಶ ಸಿಕ್ಕಂತಾಗಿದೆ. ಈ ಹೊಸ ವ್ಯವಸ್ಥೆಯಿಂದಾಗಿ ಪಂದ್ಯಾವಳಿಯಲ್ಲಿ ಮತ್ತಷ್ಟು ಪಾರದರ್ಶಕತೆ ಮತ್ತು ಹೆಚ್ಚಿನ ರೋಚಕತೆ ಇರಲಿದ್ದು, ಕ್ರಿಕೆಟ್ ಅಭಿಮಾನಿಗಳಿಗೆ ಹಾಗೂ ಪ್ರಸಾರಕರಿಗೆ ದೊಡ್ಡ ಮಟ್ಟದ ಲಾಭವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ಸದ್ಯಕ್ಕ ಪಂದ್ಯಗಳ ಸಂಖ್ಯೆಯನ್ನು 74 ರಿಂದ 94 ಕ್ಕೆ ಏರಿಸಲಾಗುತ್ತಿದ್ದು, 10 ತಂಡಗಳೇ ಮುಂದುವರಿಯಲಿವೆ. ಹಾಗಾಗಿ, ತಂಡಗಳ ಸಂಖ್ಯೆಯಲ್ಲಿ ಬದಲಾವಣೆಗಳನ್ನು ಬಿಸಿಸಿಐ ತಳ್ಳಿ ಹಾಕಿದೆ. ಸದ್ಯ ಎರಡು ತಿಂಗಳ ಐಪಿಎಲ್ ಬದಲಿಗೆ ಎರಡೂವರೆ ತಿಂಗಳ ಸುದೀರ್ಘ ವಿಂಡೋವನ್ನು ಮೀಸಲಿಡಲು ಬಿಸಿಸಿಐ ಯೋಜಿಸಿದೆ. 2026ರ ಐಪಿಎಲ್‌ನಲ್ಲೇ ಈ ಮೊದಲು 84 ಪಂದ್ಯಗಳನ್ನು ನಡೆಸುವುದಾಗಿ ಬಿಸಿಸಿಐ ತಿಳಿಸಿತ್ತು. ಆದರೆ, ಜಾರಿಗೊಳಿಸಲು ಸಾಧ್ಯವಾಗಿರಲಿಲ್ಲ.

## ಭಾರತದ ಟಿ20 ತಂಡಕ್ಕೆ ಶ್ರೇಯಸ್ ನಾಯಕತ್ವ ?

**ಮುಂಬೈ:** ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಂಬರುವ 2026ರ ಐಪಿಎಲ್ ನಂತರ ಟಿ20 ಮಾದರಿಯಲ್ಲಿ ದೊಡ್ಡ ಬದಲಾವಣೆಗೆ ಮುಂದಾಗಿದೆ. ಸದ್ಯದ ವರದಿಗಳ ಪ್ರಕಾರ, ಸೂರ್ಯಕುಮಾರ್ ಯಾದವ್ ಅವರ ಬದಲಿಗೆ ಸ್ಟಾರ್ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರನ್ನು ಭಾರತ ಟಿ20 ತಂಡದ ನೂತನ ನಾಯಕನನ್ನಾಗಿ ನೇಮಿಸಲು ಬಿಸಿಸಿಐ ಚಿಂತನೆ ನಡೆಸಿದೆ.

ಸೂರ್ಯಕುಮಾರ್ ಅವರ ಇತ್ತೀಚಿನ ಬ್ಯಾಟಿಂಗ್ ಫಾರ್ಮ್ ಕುಸಿತ ಮತ್ತು ಫಿಟ್‌ನೆಸ್ ಸಮಸ್ಯೆಗಳು ಈ ಬದಲಾವಣೆಗೆ ಪ್ರಮುಖ ಕಾರಣ ಎನ್ನಲಾಗಿದೆ. ಮತ್ತೊಂದೆಡೆ, ಐಪಿಎಲ್‌ನಲ್ಲಿ ಯಶಸ್ವಿ ನಾಯಕನಾಗಿ ಗುರುತಿಸಿಕೊಂಡಿರುವ ಅಯ್ಯರ್, ತಂಡವನ್ನು ಮುನ್ನಡೆಸಲು ಸೂಕ್ತ ವ್ಯಕ್ತಿ ಎಂದು ಆಯ್ಕೆ ಸಮಿತಿ ಭಾವಿಸಿದೆ. 2028ರ ಒಲಿಂಪಿಕ್ಸ್ ಮತ್ತು ಮುಂದಿನ ವಿಶ್ವಕಪ್ ದೃಷ್ಟಿಯಿಂದ ಈ ದೀರ್ಘಕಾಲೀನ ನಿರ್ಧಾರ ತೆಗೆದುಕೊಳ್ಳಲಾಗುತ್ತಿದೆ. ಐಪಿಎಲ್ 2026 ಮುಗಿದ ಕೂಡಲೇ ಅಧಿಕೃತ ಘೋಷಣೆ ಹೊರಬೀಳುವ ಸಾಧ್ಯತೆಯಿದೆ

## ಅಂತೂ ಇಂತೂ 118 ಸ್ಥಾನ

**ಮುಖಪುಟದಿಂದ**

ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಕೂಡ ತಾತ್ವಿಕವಾಗಿ ಬಾಹ್ಯ ಬೆಂಬಲ ಪ್ರಕಟಿಸಿದೆ. ಆದರೆ ಡಿಎಂಕೆ ಚಿಹ್ನೆಯ ಮೇಲೆ ಗೆದ್ದಿರುವುದರಿಂದ ಅಧಿಕೃತವಾಗಿ ಬೆಂಬಲ ವ್ಯಕ್ತಪಡಿಸಲು ತಾಂತ್ರಿಕ ತೊಂದರೆ ಇದೆ. ಇವೆಲ್ಲ ಹಿನ್ನೆಲೆಯಲ್ಲಿ ರಾಜ್ಯಪಾಲರು ಇನ್ನೂ ಸರ್ಕಾರ ರಚನೆಗೆ ವಿಜಯ್‌ಗೆ ಗ್ರೀನ್‌ಸಿಗ್ನಲ್ ನೀಡಿಲ್ಲ ಎಂದು ಮೂಲಗಳು ತಿಳಿಸಿವೆ. ಪಕ್ಷದ ನಾಯಕ ವಿಜಯ್ ಸ್ಪರ್ಧಿಸಿದ್ದ 2 ಸ್ಥಾನಗಳಲ್ಲಿನ ಗೆಲುವು ಸೇರಿದಂತೆ ಒಟ್ಟು 108 ಸ್ಥಾನಗಳೊಂದಿಗೆ ಚುನಾವಣೆಯಲ್ಲಿ ಏಕೈಕ ದೊಡ್ಡ ಪಕ್ಷವಾಗಿ ಟಿ.ವಿ.ಕೆ. ಹೊರಹೊಮ್ಮಿದೆ. ನಂತರ ಪಕ್ಷದ ನಾಯಕ ವಿಜಯ್ ಬುಧವಾರ ಹಾಗೂ ಗುರುವಾರ ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರ ರಚನೆಗೆ ಅವಕಾಶ ಕೊಡಬೇಕೆಂದು ಕೇಳಿಕೊಂಡರೂ ಸಹ ಅವಕಾಶ ಸಿಕ್ಕಿರಲಿಲ್ಲ. ಅಗತ್ಯ ಬಹುಮತ ಸಾಬೀತಿಗೆ 118 ಶಾಸಕರ ಸಹಿಯ ಪಟ್ಟಿಯೊಂದಿಗೆ ಬರಬೇಕೆಂದು ರಾಜ್ಯಪಾಲರು ಹೇಳಿಕಳುಹಿಸಿದ್ದರು.

## ಸುಪ್ರೀಂಗೆ ಶೃಂಗೇರಿ ವಿವಾದ

**ಮುಖಪುಟದಿಂದ**

ಮೇ 3ರಂದು ಅಂಚೆಮತ ಪತ್ರಗಳ ಮರುಪರಿಶೀಲನೆ ನಡೆಸಿದಾಗ ರಾಜೇಗೌಡರ ಪರಬಿದ್ದ ಮತಗಳ ಪೈಕಿ 255 ಮತಗಳು ಅಸಿಂಧುವಾಗಿರುವುದು ಕಂಡುಬಂದಿತ್ತು. ಈ ಹಿನ್ನೆಲೆಯಲ್ಲಿ ಜೀವರಾಜ್ ಅವರನ್ನು ವಿಜೇತರೆಂದು ಘೋಷಿಸಲಾಯಿತು. ಇದರಿಂದ ಶಾಸಕ ಸ್ಥಾನ ಕಳೆದುಕೊಂಡಿರುವ ರಾಜೇಗೌಡರು, ತಿರಸ್ಕರಿಸಲ್ಪಟ್ಟ 279 ಮತಗಳ ಮರುಪರಿಶೀಲನೆಗೆ ಮಾತ್ರ ಹೈಕೋರ್ಟ್ ಆದೇಶಿಸಿತ್ತು. ಆದರೆ ಚುನಾವಣಾಧಿಕಾರಿಯವರು ರಾಜೇಗೌಡರ ಪರವಾಗಿದ್ದ 562 ಅಂಚೆ ಮತಗಳನ್ನೂ ಮರು ಪರಿಶೀಲಿಸಿದ್ದಾರೆ ಎಂದು ತಮ್ಮ ವಕೀಲ ತುಷಾರ್‌ಗಿರಿ ಮೂಲಕ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಏತನಧ್ಯೆ ಜೀವರಾಜ್ ಈಗ ಅಂಚೆಮತಪತ್ರಗಳನ್ನು ತಿರುಚಿದ ಆರೋಪ ಎದುರಿಸುತ್ತಿದ್ದಾರೆ. ಕಾಂಗ್ರೆಸ್ ಚುನಾವಣಾ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ ಅವರು ಬಿಜೆಪಿ ಅಭ್ಯರ್ಥಿ ಜೀವರಾಜ್ ಹೊರತಾಗಿ ಜಿಲ್ಲಾಧಿಕಾರಿ ಕೆ.ಎನ್.ರಮೇಶ್, ಮಾಜಿ ಚುನಾವಣಾಧಿಕಾರಿ ವೇದಮೂರ್ತಿ ಮತ್ತಿತರರ ವಿರುದ್ಧ ಈ ದೂರು ದಾಖಲಿಸಿದ್ದಾರೆ.

ಆದರೆ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಜೀವರಾಜ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಇತ್ತೀಚೆಗೆ ಹೈಕೋರ್ಟ್ ಜೀವರಾಜ್ ಹಾಗೂ ವೇದಮೂರ್ತಿ ವಿರುದ್ಧದ ತನಿಖೆಗೆ ತಡೆಯಾಜ್ಞೆ ವಿಧಿಸಿದೆ.

## ಚಿತ್ರದುರ್ಗದಲ್ಲಿ ಇಂದು ಯಡಿಯೂರಪ್ಪೋತ್ಸವ

**ಮುಖಪುಟದಿಂದ**

ರಾಜ್ಯಾದ್ಯಂತ ಬಂದಿದ್ದ 24 ಜಾನಪದ ಕಲಾತಂಡಗಳ ಮೆರಗಿನೊಂದಿಗೆ ಆಕರ್ಷಕ ಮೆರವಣಿಗೆ ಆರಂಭವಾಯಿತು. ವಿಶೇಷವಾಗಿ ಮೆರವಣಿಗೆಯಲ್ಲಿ ಕೈಯಲ್ಲಿ ಒನಕೆ ಹಿಡಿದಿದ್ದ ನಾರಿಯರು, ಚಿತ್ರದುರ್ಗ ವೀರವನಿತೆ ಒನಕೆ ಓಬವ್ವನನ್ನು ಸ್ಮರಿಸುತ್ತ, ಮಹಿಳೆಯರ ಶಕ್ತಿ ಪ್ರದರ್ಶನವೂ ಆದಂತಿತ್ತು. ಅಲ್ಲದೆ ಯಡಿಯೂರಪ್ಪ ಪಕ್ಷ ಸಂಘಟನೆಗೆ ಬಳಸುತ್ತಿದ್ದ ಅಂಬಾಸೆಡರ್ ಕಾರು ಮೆರವಣಿಗೆಯಲ್ಲಿ ಆಕರ್ಷಣೆ ಪಡೆಯಿತು. ಅವರ ಅಂಬಾಸೆಡರ್ ಕಾರಿನ ಬಳಿ ಬಂದು ಫೋಟೊ ತೆಗೆಸಿಕೊಳ್ಳುವವರ ನಾಯಕರ ದೊಡ್ಡ ದಂಡೇ ನೆರೆದಿತ್ತು.

## ರಾಗಾ ಹೆಸರಲ್ಲಿ ಮೆಗಾ ವಂಚನೆ

**ಮುಖಪುಟದಿಂದ**

ಕಾಂಗ್ರೆಸ್ ಹೈಕಮಾಂಡ್‌ಗೆ ಆಪ್ತ ಎಂದು ಹೇಳಿಕೊಂಡಿದ್ದ ಆರೋಪಿ, ಪಕ್ಷದ ಉನ್ನತ ಪದಾಧಿಕಾರಗಳನ್ನು ಕೊಡಿಸುವ ಭರವಸೆ ನೀಡಿದ್ದ.

**ವಂಚನೆಯ ಕಾರ್ಯ ವಿಧಾನವೇನು?**

ದೂರಿನ ಪ್ರಕಾರ, ಆರೋಪಿಯು ತನ್ನ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಫೋನ್ ಕರೆಗಳ ಸಮಯದಲ್ಲಿ ಆಡಿಯೋ ರೆಕಾರ್ಡಿಂಗ್‌ಗಳನ್ನು ಪ್ಲೇ ಮಾಡುತ್ತಿದ್ದ. ಅವು ಹಿರಿಯ ಕಾಂಗ್ರೆಸ್ ನಾಯಕರ ಧ್ವನಿಗಳು ಎಂದೂ ಹೇಳಿಕೊಂಡಿದ್ದ. ಆತನ ಭರವಸೆಗಳಿಗೆ ಮರುಳಾದ ಪಾಂಡೆ, ತನ್ನ ಸಹಚರರೊಬ್ಬರ ಮೂಲಕ ಹಣವನ್ನು ಹಸ್ತಾಂತರಿಸಿದ್ದರು. ಆದರೆ ಹಣ ಪಾವತಿ ಮಾಡಿದ ಕೂಡಲೇ ದೂರವಾಣಿ ಸಂವಹನ ಸ್ಥಗಿತಗೊಂಡಿತ್ತು ಎನ್ನಲಾಗಿದೆ.

## ಪುದುಚೇರಿ: ಗೌರ್ನರ್ ಭೇಟಿಯಾಗಿ ಹಕ್ಕು ಮಂಡಿಸಿದ ಎನ್.ರಂಗಸ್ವಾಮಿ

### ಮೇ 13ಕ್ಕೆ ಮಗದೊಮ್ಮೆ ಮುಖ್ಯಮಂತ್ರಿ ಆಗಿ ಪ್ರಮಾಣವಚನ

**ಪುದುಚೇರಿ:** ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ಹೊಸ ಸರ್ಕಾರ ರಚನೆಯ ಪ್ರಕ್ರಿಯೆ ಚುರುಕುಗೊಂಡಿದೆ. ಎಐಎನ್‌ಆರ್‌ಸಿ ಮುಖ್ಯಸ್ಥ ಎನ್. ರಂಗಸ್ವಾಮಿ ಅವರು ಶುಕ್ರವಾರ ಲೆಫ್ಟಿನೆಂಟ್ ಗವರ್ನರ್ ಅವರನ್ನು ಭೇಟಿ ಮಾಡಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದರು. ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎನ್.ಆರ್. ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಎಐಎನ್‌ಆರ್‌ಸಿ ಸ್ಪಷ್ಟ ಬಹುಮತ ಗಳಿಸಿದ್ದು, ಈ ಹಿನ್ನೆಲೆಯಲ್ಲಿ ರಂಗಸ್ವಾಮಿ ಅವರು ರಾಜ್ಯಪಾಲರ

ಭವನವಾದ ರಾಜ್ ನಿವಾಸ್‌ನಲ್ಲಿ ಲೆಫ್ಟಿನೆಂಟ್ ಗವರ್ನರ್ ಅವರಿಗೆ ಬೆಂಬಲಿತ ಶಾಸಕರ ಪಟ್ಟಿಯನ್ನು ಸಲ್ಲಿಸಿದರು. ಎನ್.ಡಿ.ಎ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾದ ರಂಗಸ್ವಾಮಿ, 30 ಸದಸ್ಯರ ಬಲದ ವಿಧಾನಸಭೆಯಲ್ಲಿ ಬಹುಮತಕ್ಕೆ ಅಗತ್ಯವಾದ 16ಕ್ಕೂ ಹೆಚ್ಚು ಶಾಸಕರ ಬೆಂಬಲ ಪತ್ರವನ್ನು ಹಸ್ತಾಂತರಿಸಿದರು. ಮೂಲಗಳ ಪ್ರಕಾರ, ಎನ್. ರಂಗಸ್ವಾಮಿ ಅವರು ಮೇ 13ರಂದು ಪುದುಚೇರಿಯ ಮುಂದಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ. ಇದೇ ಮೊದಲ ಬಾರಿಗೆ ಪುದುಚೇರಿಯಲ್ಲಿ ಬಿಜೆಪಿ ಅಧಿಕಾರ ಹಂಚಿಕೊಳ್ಳುತ್ತಿದೆ..

## ಏರಿಂಡಿಯಾ: ತಿಂಗಳಲ್ಲಿ ವರದಿ

**ನವದೆಹಲಿ:** ಕಳೆದ ವರ್ಷ ಅಹಮದಾಬಾದ್‌ನಲ್ಲಿ ಸಂಭವಿಸಿದ ಭೀಕರ ಏರ್ ಇಂಡಿಯಾ ವಿಮಾನ ದುರಂತದ ತನಿಖೆಯು ಅಂತಿಮ ಹಂತಕ್ಕೆ ತಲುಪಿದ್ದು, ಮುಂದಿನ ಒಂದು ತಿಂಗಳೊಳಗೆ ಅಂತಿಮ ವರದಿ ಬಿಡುಗಡೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಸಚಿವ ಕೆ. ರಾಮಮೋಹನ್ ನಾಯ್ಡು ಶುಕ್ರವಾರ ತಿಳಿಸಿದ್ದಾರೆ. ಈ ಕುರಿತು ಮಾತನಾಡಿರುವ ಅವರು, ವಿಮಾನ ಅಪಘಾತದ ತನಿಖೆಯು ಅತ್ಯಂತ ಗಂಭೀರವಾಗಿ ಮತ್ತು ಪಾರದರ್ಶಕವಾಗಿ ನಡೆಯುತ್ತಿದೆ. ಇದು ಅಂತಾರಾಷ್ಟ್ರೀಯ ವಿಮಾನವಾಗಿದ್ದರಿಂದ ತನಿಖೆ ವಿಳಂಬವಾಗಿದೆ ಎಂದರು.

## ತೇಲಿ ಹೋಗಿ ಸ್ಫೋಟಿಸುವ ದೇಸಿ ಬಾಂಬ್!

**ಮುಖಪುಟದಿಂದ**

ಅತ್ಯಾಧುನಿಕ ಯುದ್ಧ ಸಲಕರಣೆಗಳ ತಂತ್ರಜ್ಞಾನವನ್ನು ಹೊಂದಿರುವ ಕೆಲವೇ ದೇಶಗಳ ಬಳಿ ಇಂತಹ ವ್ಯವಸ್ಥೆ ಸದ್ಯಕ್ಕೆ ಇದೆ. ಇದೀಗ ಭಾರತ ಕೂಡ ಅವುಗಳ ಸಾಲಿಗೆ ಸೇರ್ಪಡೆಯಾದಂತಾಗಿದೆ.

ಹಳೆಯ ಸಾಮಾನ್ಯ ಬಾಂಬ್‌ಗಳನ್ನೇ ಗ್ಲೈಡ್ ಬಾಂಬ್ ಆಗಿ ಪರಿವರ್ತಿಸಿ, ಹೇಳಿದ ಜಾಗಕ್ಕೆ ಹೋಗಿ ಸ್ಫೋಟಿಸುವಂತೆ ಮಾಡುವುದೇ 'ತಾರಾ' ತಂತ್ರಜ್ಞಾನ. ತಾರಾ ಅಂದರೆ ಟ್ಯಾಕ್ಟಿಕಲ್ ಅಡ್ವಾನ್ಸ್ಡ್ ರೇಂಜ್ ಆಗ್ಮೆಂಟೇಶನ್.

**ಹೀಗೆ ಕೆಲಸ ಮಾಡುತ್ತದೆ:**

ಸಾಮಾನ್ಯವಾಗಿ ಯುದ್ಧ ವಿಮಾನಗಳು ನಿರ್ದಿಷ್ಟ ಪ್ರದೇಶದ ಮೇಲೆ ಹೋಗಿ ಬಾಂಬ್ ಬೀಳಿಸಿದರೆ ಆ ಬಾಂಬ್ ನೇರವಾಗಿ ಕೆಳಗೆ ಬಿದ್ದು ಅದೇ ಜಾಗದಲ್ಲಿ ಸ್ಫೋಟಿಸುತ್ತದೆ. ಆದರೆ, ಆ ಬಾಂಬ್‌ಗೆ 'ತಾರಾ' ಸಿಸ್ಟಂ ಅಳವಡಿಸಿದ್ದರೆ, ವಿಮಾನದಿಂದ ಬಾಂಬನ್ನು ಕೆಳಗೆ ಹಾಕಿದ ಮೇಲೂ ಬಾಂಬ್‌ನ ದಿಕ್ಕು ಅಥವಾ ಗುರಿಯನ್ನು ಬದಲಿಸಿ, ಅದು ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಿ ಬಿದ್ದು ಸ್ಫೋಟಿಸುವಂತೆ ಮಾಡಬಹುದು.

ಇದರಿಂದಾಗಿ ಯುದ್ಧ ವಿಮಾನಗಳು ಅಪಾಯಕಾರಿ ಪ್ರದೇಶಗಳಿಗೆ ಹೋಗುವುದರ ಬದಲು ಸುರಕ್ಷಿತ ಜಾಗದವರೆಗೆ ಮಾತ್ರ ಹೋಗಿ ಅಲ್ಲಿಂದ ಬಾಂಬ್ ದಾಳಿ ನಡೆಸಬಹುದು.

ಅಲ್ಲದೆ, ಹಳೆಯ ಸಾಂಪ್ರದಾಯಿಕ ಬಾಂಬ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಈಗಾಗಲೇ ಉತ್ಪಾದಿಸಿದ್ದರೆ, ಅವುಗಳನ್ನು ವ್ಯರ್ಥಗೊಳಿಸದೆ, ಅವುಗಳಿಗೆ 'ತಾರಾ' ವ್ಯವಸ್ಥೆ ಅಳವಡಿಸಿಕೊಂಡು ಅತ್ಯಂತ ಸುಧಾರಿತ ಬಾಂಬ್‌ನಂತೆ ಬಳಸಬಹುದು. ಇದರಿಂದಾಗಿ ರಕ್ಷಣಾ ಇಲಾಖೆಗೆ ಸಾಕಷ್ಟು ಹಣ ಉಳಿಯುತ್ತದೆ, ವಾಯುಪಡೆಗೆ ಹೊಸ ಆಯ್ಕೆಗಳು ಸಿಗುತ್ತವೆ ಮತ್ತು ನಿಖರ ದಾಳಿಗಳನ್ನು ನಡೆಸಲು ಸಾಧ್ಯವಾಗುತ್ತದೆ.

## ಟ್ರಂಪ್‌ಗೆ ಪತ್ರ ಬರೆದ ಸಂಜತ್ ರಾವತ್!

**ಕೋಲ್ಕತ್ತ:** ಪಶ್ಚಿಮ ಬಂಗಾಳದ ಗೆಲುವಿಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿನಂದಿಸಿದ ನಡೆಗೆ ಶಿವಸೇನೆ (ಉದ್ಧವ್ ಬಣ) ನಾಯಕ ಸಂಜಯ್ ರಾವುತ್ ಕಿಡಿಕಾರಿದ್ದಾರೆ.

ಜತೆಗೆ ತಮ್ಮ ಆಕ್ಷೇಪ ವ್ಯಪಡಿಸಿದ ಟ್ರಂಪ್‌ಗೆ ಪತ್ರವನ್ನೂ ಬರೆದಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಇದು ಭಾರತದ ಒಕ್ಕೂಟ ವ್ಯವಸ್ಥೆಯ ಆಂತರಿಕ ವಿಷಯ. ಹಾಗಾಗಿ ಇದರಲ್ಲಿ ಯಾವುದೇ ಬಾಹ್ಯ ಬೆಂಬಲವೂ ಅಪ್ರಸ್ತುತವಾಗುತ್ತದೆ ಎಂದು ಹೇಳಿದ್ದಾರೆ.

## ಸುದ್ದಿ ಮಿಂಚು

### ಕಾರುಗಳ ನಡುವೆ ಅಪಘಾತ ಇಬ್ಬರು ಸಾವು

**ದಾವಣಗೆರೆ:** ನಗರದ ಹೊರವಲಯದಲ್ಲಿರುವ ಶಾಮನೂರು ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರುಗಳ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಇಬ್ಬರು ಯುವಕರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಡೆದಿದೆ. ನಗರದ ನಿವಾಸಿಗಳಾದ ಗೌತಮ್(29 ವರ್ಷ), ಮನೋಜ್(29) ಸಾವನ್ನಪ್ಪಿದ ಯುವಕರು.

ಮದುವೆ ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ ಬರುವಾಗ ನಡೆದ ಈ ದುರ್ಘಟನೆಯಲ್ಲಿ ಇಬ್ಬರೂ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಅತಿ ವೇಗದ ಕಾರು ಚಾಲನೆಯೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಎರಡೂ ಕಾರುಗಳು ಅಪಘಾತದಲ್ಲಿ ಸಂಪೂರ್ಣ ಜಖಂಗೊಂಡಿವೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಬಗ್ಗೆ ದಾವಣಗೆರೆ ದಕ್ಷಿಣ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಬಿಎಸ್‌ವೈರಿಂದ ಸಾಧನೆಯ ಬೆಟ್ಟ ಹತ್ತುವ ಕೆಲಸ: ಬಿವೈಆರ್

**ದಾವಣಗೆರೆ:** ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ 50 ವರ್ಷಗಳ ರಾಜಕೀಯ ಜೀವನದಲ್ಲಿ ಹೋರಾಟದ ಮೂಲಕ ಸಾಧನೆ ಬೆಟ್ಟ ಹತ್ತುವ ಕೆಲಸ ಮಾಡಿದ್ದಾರೆ ಎಂದು ಶಿವಮೊಗ್ಗದ ಸಂಸದ ಬಿ.ವೈ.

ರಾಘವೇಂದ್ರ ಹೇಳಿದರು. ಚಿತ್ರದುರ್ಗದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ತೆರಳಲು ಶುಕ್ರವಾರ ನಗರಕ್ಕೆ ಆಗಮಿಸಿದ್ದ ವೇಳೆ ಪತ್ರಕರ್ತರೊಂದಿಗೆ ಅವರು ಮಾತನಾಡಿದರು. ಬಿಜೆಪಿ ಚೌಕಟ್ಟಿನಲ್ಲಿ ಸ್ವಂತ ಸಂಘಟನೆ ಕಟ್ಟಿರೋದು ವಿಶೇಷ. ಬಿ.ಎಸ್.ಯಡಿಯೂರಪ್ಪ ಅವರಿಗೆ ಅಜಾತ ಶತ್ರು ಅಂತ ಹೇಳುವುದು ಸಮಂಜಸ ಅನಿಸುವುದಿಲ್ಲ. ಪಾಪ ಅವರ ನಕ್ಷತ್ರದಲ್ಲಿ ಇರೋ ವಿರೋಧ ಎಲ್ಲಾ ಬಂಡೆಕಲ್ಲು ಎದುರಿಸಿದರು. ಭಿನ್ನಮತ ಅನ್ನೋದು ಜೊತೆ ಜೊತೆಗೆ ಬಂದಿತು. ಸಂಘಟನೆಗಾಗಿ ಸಿಟ್ಟು ಮಾಡುತ್ತಿದ್ದರು; ಸ್ವಾರ್ಥಕ್ಕಾಗಿ ಎಂದೂ ಮಾಡಲಿಲ್ಲ ಎಂದು ಬಿಎಸ್‌ವೈ ರಾಜಕಾರಣವನ್ನು ಬಿಚ್ಚಿಟ್ಟರು.

ಬಿ.ಎಸ್.ಯಡಿಯೂರಪ್ಪ ಅವರು ಹಿಂದುತ್ವದ ವಿಚಾರ ಜನರಿಗೆ ಮುಟ್ಟಿಸಿ ಅವರ ಮನಸ್ಸು ಗೆದ್ದರು. ಬಗರ್‌ಹುಕುಂ ಹೋರಾಟದ ಮೂಲಕ ದಲಿತರ ಮನ ಗೆದ್ದಿದ್ದಾರೆ. ಹೀಗಾಗಿ ಅವರ 50 ವರ್ಷಗಳ ರಾಜಕೀಯ ಜೀವನದ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಗೃಹ ಸಚಿವ ಅಮಿತ್ ಷಾ ಬರುತ್ತಾರೆ. ಸುಮಾರು 10 ಲಕ್ಷ ಜನರು ಸೇರುವ ಸಾಧ್ಯತೆ ಇದೆ. ಒಂದೇ ವೇದಿಕೆಯಲ್ಲಿ ಎಲ್ಲಾ ಸ್ವಾಮೀಜಿಗಳನ್ನು ನೋಡುವ ಅವಕಾಶವಿದೆ ಎಂದು ಹೇಳಿದರು.

### ಲಂಚ ಪ್ರಕರಣ: ಕಂದಾಯ ನಿರೀಕ್ಷಕನಿಗೆ ನ್ಯಾಯಾಂಗ ಬಂಧನ

**ದಾವಣಗೆರೆ:** ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದ ದಾವಣಗೆರೆ ತಹಶೀಲ್ದಾರ್ ಕಚೇರಿಯ ಕಂದಾಯ ನಿರೀಕ್ಷಕ (RI) ಎನ್.ಎಸ್.ಚಂದ್ರಪ್ಪ ಅವರನ್ನು ಶುಕ್ರವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಡಾ.ಉಮೇಶ್ ಹೀರೇಮಠ ಎಂಬುವವರಿಂದ ಲಂಚ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಚಂದ್ರಪ್ಪ ಅವರು ದಾವಣಗೆರೆ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು.

ಬಂಧನದ ನಂತರ ಅನಾರೋಗ್ಯದ ಕಾರಣ ನೀಡಿ ಅವರು ನ್ಯಾಯಾಲ ಯದಿಂದ ಮಧ್ಯಂತರ ಜಾಮೀನು ಪಡೆದುಕೊಂಡಿದ್ದರು. ಮಧ್ಯಂತರ ಜಾಮೀನಿನ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ, ಆರೋಪಿ ಚಂದ್ರಪ್ಪ ಶುಕ್ರವಾರ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಆರೋಪಿಯ ಜಾಮೀನು ವಿಸ್ತರಿಸದೆ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದೆ.

ಕರ್ನಾಟಕ ಲೋಕಾಯುಕ್ತದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ರವಿ ಶಂಕರ್ ತಿಮ್ಮಲಾಪುರ ಅವರು ವಾದ ಮಂಡಿಸಿದ್ದರು.

### 23, 24ಕ್ಕೆ ಎಜುಕೇಷನ್ ಎಕ್ಸ್‌ಪೋ 2026

**ದಾವಣಗೆರೆ:** ಎಜು ಕನೆಕ್ಟ್ ಸಂಸ್ಥೆಯ ವತಿಯಿಂದ ಮೇ 23 ಮತ್ತು 24ರಂದು ನಗರದ ರೇಣುಕಾ ಮಂದಿರದಲ್ಲಿ ಎಜುಕೇಷನ್ ಆ್ಯಂಡ್ ಕರಿಯರ್ ಎಕ್ಸ್‌ಪೋ 2026 ಕಾರ್ಯಕ್ರಮ ನಡೆಯಲಿದೆ ಎಂದು ಸಂಸ್ಥೆಯ ಸಿಇಒ ಪವನ್ ಓಲೇಕಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯ ನಂತರ ಯಾವ ಕೋರ್ಸ್ ತೆಗೆದುಕೊಳ್ಳಬೇಕು. ಯಾವ ಕಾಲೇಜು ಆಯ್ಕೆ ಮಾಡಿಕೊಳ್ಳಬೇಕೆಂಬ ಗೊಂದಲ ವಿದ್ಯಾರ್ಥಿಗಳಲ್ಲಿ ಮತ್ತು ಪೋಷಕರಲ್ಲಿ ಇರುತ್ತದೆ. ಈ ಗೊಂದಲ ನಿವಾರಿಸಿ ಮಾರ್ಗದರ್ಶನ ಮಾಡುವ ಉದ್ದೇಶದಿಂದ ಈ ಪ್ರದರ್ಶನ ಏರ್ಪಡಿಸಲಾಗಿದೆ. ಎರಡು ದಿನ ನಡೆಯುವ ಈ ಎಕ್ಸ್‌ಪೋದಲ್ಲಿ ಮುಂದೆ ಯಾವ ಕೋರ್ಸ್ ಮತ್ತು ಯಾವ ಕಾಲೇಜು ಆಯ್ಕೆ ಮಾಡಿಕೊಳ್ಳಬೇಕು ಎಂಬ ಮಾಹಿತಿ ನೀಡಲಾಗುವುದು. ಪ್ರದರ್ಶನದಲ್ಲಿ 80ಕ್ಕೂ ಹೆಚ್ಚು ಸ್ಟಾಲ್ ಹಾಕಲಾಗುವುದು. ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಈ ಪ್ರದರ್ಶನದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಮಹಾವೀರ್ ಸಂಘ್ವಿ ಇದ್ದರು.

## ನಿಧನ ವಾರ್ತೆ

### ಶತಾಯುಷಿ ಬಾತಿ ಮೈಲಮ್ಮ

**ದಾವಣಗೆರೆ:** ಇಲ್ಲಿನ ಗಾಂಧಿನಗರ 5ನೇ ಕ್ರಾಸ್ ವಾಸಿ ದಿವಂಗತ ಬಾತಿ ಚೆನ್ನಬಸಪ್ಪ ನವರ ಧರ್ಮ ಪತ್ನಿ ಶತಾಯುಷಿ ಶ್ರೀಮತಿ ಬಾತಿ ಮೈಲಮ್ಮ ಮೇ 8ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ದೈವಾದೀನರಾಗಿದ್ದಾರೆ. ಮೃತರು ಬಿಜೆಪಿ ಮುಖಂಡ ಬಾತಿ ಶಿವಮೂರ್ತಿ

ಸೇರಿದಂತೆ ಇಬ್ಬರು ಪುತ್ರರು, ಆರು ಜನ ಪುತ್ರಿಯರು ಅಳಿಯಂದಿರು, ಸೊಸೆ ಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಮೃತರ ಅಂತ್ಯ ಸಂಸ್ಕಾರವನ್ನು ಶನಿವಾರ ಮಧ್ಯಾಹ್ನ 12ಗಂಟೆಗೆ ಗಾಂಧಿನಗರದ ಹಿಂದೂರುದ್ರ ಭೂಮಿಯಲ್ಲಿ ನೆರವೇರಿಸಲಾಗುವುದು.

---

ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ನಟ ಚೇತನ್ ಅಹಿಂಸಾ ಅಭಿಪ್ರಾಯ

# ಸಮಾನತೆ, ವೈಜ್ಞಾನಿಕತೆಯೇ ಅಂಬೇಡ್ಕರ್ ವಾದ

**ದಾವಣಗೆರೆ:** ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖವಾಗಿರುವ ಸಮಾನತೆ, ನ್ಯಾಯ ಮತ್ತು ವೈಜ್ಞಾನಿಕತೆಯೇ ನಿಜವಾದ ಅಂಬೇಡ್ಕರ್ ವಾದ. ಯಾರು ಯಾವ ಜಾತಿ, ಧರ್ಮ, ಲಿಂಗ ಅಥವಾ ಊರಲ್ಲಿ ಹುಟ್ಟಬೇಕು ಎಂದು ಆಯ್ಕೆ ಮಾಡಿಲ್ಲ. ಆದರೆ ಹುಟ್ಟಿದ ನಂತರ ಸಮಾನತಾವಾದಿಗಳಾಗಿ ಬದುಕುವುದು ನಮ್ಮ ಆಯ್ಕೆ ಎಂದು ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಹೇಳಿದರು.

ಮಹಾನಾಯಕ ಡಾ.ಬಿ.ಆರ್.ಅಂಬೇಡ್ಕರ್ ಸೇನೆಯಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜಕ್ಕೆ ವಾಪಸ್ ಕೊಡಬೇಕು ಎಂಬ ಮನೋಭಾವವೇ ಬದಲಾವಣೆಯ ಬೀಜ. ಬಾಬಾಸಾಹೇಬರು ಹೇಳಿದ ಶಿಕ್ಷಣ, ಚಳವಳಿ ಮತ್ತು ಸಂಘಟನೆಯ ಸಂದೇಶ ಕೇವಲ ಘೋಷಣೆ ಅಲ್ಲ; ಅದು ದೇಶ ನಿರ್ಮಾಣದ ದಿಕ್ಕು. ಅಂಬೇಡ್ಕರ್ ಅವರನ್ನು ಕೇವಲ ಸಂವಿಧಾನ ಶಿಲ್ಪಿ ಅಥವಾ ಭಾರತ ರತ್ನ ಎಂಬ ಸೀಮಿತ ಪರಿಧಿಯಲ್ಲಿ ನೋಡದೆ, ಅವರ ಸಮಾನತಾವಾದಿ ಚಿಂತನೆ ಮತ್ತು ಕ್ರಾಂತಿಕಾರಿ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಬೇಕು ಎಂದು ಹೇಳಿದರು.

ಅಂಬೇಡ್ಕರ್ ವಾದದ ಅರ್ಥ ಅಂದರೆ, ಅವರ ಫೋಟೋಗಳು, ಪ್ರತಿಮೆಗಳು ಅಥವಾ ದೊಡ್ಡ

ದಾವಣಗೆರೆಯಲ್ಲಿ ಮಹಾನಾಯಕ ಡಾ.ಬಿ.ಆರ್.ಅಂಬೇಡ್ಕರ್ ಸೇನೆಯಿಂದ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ನಟ ಚೇತನ್ ಅಹಿಂಸಾ ಉದ್ಘಾಟಿಸಿದರು.

ಯೋಜನೆಗಳಿಂದ ಮಾತ್ರ ಅಂಬೇಡ್ಕರ್ ವಾದ ಬರೋದಿಲ್ಲ. ಸಮಸಮಾಜ ನಿರ್ಮಾಣವೇ ನಿಜವಾದ ಅಂಬೇಡ್ಕರ್ ವಾದವಾಗಿದೆ. ಇದನ್ನು ನಾವುಗಳು ಅರ್ಥ ಮಾಡಿಕೊಳ್ಳಬೇಕಿದೆ. ನಾಯಕರ ಆರಾಧನೆ ಮತ್ತು ವ್ಯಕ್ತಿ ಆರಾಧನೆಯನ್ನು ಬಾಬಾಸಾಹೇಬರು ಒಪ್ಪಲಿಲ್ಲ. ಅವರನ್ನು ಪೂಜಿಸುವುದಕ್ಕಿಂತ ಓದಬೇಕು, ಅವರು ಕಂಡ ಕನಸನ್ನು ಸಾಕಾರಗೊಳಿಸಬೇಕು. ಅದು ಯುವಜನತೆ ಮೇಲಿದೆ ಎಂದರು.

ನಮ್ಮ ಹೋರಾಟ ಯಾವ ಜಾತಿ ಅಥವಾ ಧರ್ಮದ ವಿರುದ್ಧವಲ್ಲ; ಅಸಮಾನತೆ ಮತ್ತು ಅನ್ಯಾಯದಿಂದ ಕೂಡಿದ ವ್ಯವಸ್ಥೆಯ ವಿರುದ್ಧ ಆಗಬೇಕು. ಯಥಾಸ್ಥಿತಿ ವ್ಯವಸ್ಥೆಯೇ ದೊಡ್ಡ ಅನ್ಯಾಯವಾಗಿದ್ದು, ಕೆಳಮಟ್ಟದ ಜನರನ್ನು ಮೇಲಕ್ಕೆತ್ತುವ ಮೂಲಕ ಸಮಸಮಾಜ ನಿರ್ಮಿಸಬೇಕು ಎಂದರು.

**ರಾಜಕೀಯ ಅಧಿಕಾರವೇ ಶಾಶ್ವತ ಪರಿಹಾರ**

ಅಂಬೇಡ್ಕರ್ ಅವರ ಹೋರಾಟದ ಇತಿಹಾಸವನ್ನು ನೋಡಿದರೆ ಬಾಬಾಸಾಹೇಬರು ರಾಜಕೀಯ ಅಧಿಕಾರದ ಮಹತ್ವ ಸಾರಿದ್ದಾರೆ. ಅವರ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಸಾಕ್ಷಿಯಾಗಿದೆ. ಸಿದ್ಧಾಂತದ ಆಧಾರದ ಮೇಲೆ ರಾಜಕೀಯ ಚಳುವಳಿ ಕಟ್ಟಿದಾಗ ಮಾತ್ರ ಶಾಶ್ವತ ಬದಲಾವಣೆ ಸಾಧ್ಯ ಎಂದು ಅಂಬೇಡ್ಕರ್ ನಂಬಿದ್ದರು. ಆ ಕನಸನ್ನು ನನಸು ಮಾಡುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎಂದರು.

ಸೇನೆಯ ಜಿಲ್ಲಾಧ್ಯಕ್ಷ ಎನ್.ಡಿ.ಮೈಲಾರಪ್ಪ, ಜಿಲ್ಲಾ ಮಹಿಳಾ ಅಧ್ಯಕ್ಷೆ ಚನ್ನಮ್ಮ, ನಟ ವಿಜಯ ಜಯ್ಕರ್, ಕರ್ನಾಟಕ ಏಕತಾ ವೇದಿಕೆ ರಾಜ್ಯಾಧ್ಯಕ್ಷ ಎನ್.ಎಚ್. ಹಾಲೇಶ್ ನಾಯಕ ಮುಖಂಡರಾದ ನಾರಾಯಣ ಸ್ವಾಮಿ, ಎಂ.ಸುರೇಶ್, ದೇವ ರಾಜ್, ದೇವದಾಸ್, ವಿಠಲ್ ಮತ್ತಿತರರಿದ್ದರು.

**ಅಂಬೇಡ್ಕರ್ ಚಿಂತನೆಗಳ ಆಧಾರದ ಮೇಲೆ ಸಮಾಜ ಕಟ್ಟಿದಾಗ ಕರ್ನಾಟಕದಲ್ಲಿ ಸಮಾನತೆಯ ಆಡಳಿತ ಸಾಧ್ಯ**

ಸಮಾನತೆ, ನ್ಯಾಯ, ವೈಜ್ಞಾನಿಕತೆ ಮತ್ತು ಸಂವಿಧಾನದ ಮೌಲ್ಯಗಳನ್ನು ಅಳವಡಿಸಿಕೊಂಡವರು ಯಾರೇ ಆಗಿದ್ದರೂ ಅವರು ನಮ್ಮ ಜನರು ಎಂಬ ಭಾವನೆ ಮೂಡಬೇಕು. ಈ ಹೋರಾಟ ಒಂದು ಸಮುದಾಯಕ್ಕೆ ಸೀಮಿತವಾಗದೆ, ಏಳು ಕೋಟಿ ಕನ್ನಡಿಗರ ಸಿದ್ಧಾಂತದ ಹೋರಾಟವಾಗಬೇಕು. ನಾವು ಬಲಪಂಥೀಯರೂ ಅಲ್ಲ, ಎಡಪಂಥದವರೂ ಅಲ್ಲ, ಮನುವಾದ ಮಧ್ಯಪಂಥವೂ ಅಲ್ಲ, ನಮ್ಮದೇ ಆದ ಅಂಬೇಡ್ಕರ್, ಪೆರಿಯಾರ್, ಕಾನ್ಷೀರಾಂ ಅವರ ಸತ್ಯಪಂಥದ ಚಿಂತನೆಗಳ ಆಧಾರದ ಮೇಲೆ ಸಮಾಜ ಕಟ್ಟಿದಾಗ ಮಾತ್ರ ಕರ್ನಾಟಕದಲ್ಲಿ ನಿಜವಾದ ಸಮಾನತೆಯ ಆಡಳಿತ ಸಾಧ್ಯ ಎಂದು ಚೇತನ್ ಅಹಿಂಸಾ ಹೇಳಿದರು.

> ಮೌಢ್ಯ ಮತ್ತು ಮೂಢನಂಬಿಕೆಗಳಿಂದ ಸಮಾಜ ನಿರ್ಮಾಣ ಸಾಧ್ಯವಿಲ್ಲ. ವೈಜ್ಞಾನಿಕ ಮನೋಭಾವದಿಂದ ಮಾತ್ರ ಉತ್ತಮ ಸಮಾಜ ಕಟ್ಟಬಹುದು.
>
> **ಚೇತನ್ ಅಹಿಂಸಾ**

---

# ಕೆಎಸ್‌ಆರ್‌ಟಿಸಿ ಬಸ್ ಪಲ್ಟಿ : ವಿದ್ಯಾರ್ಥಿ ಸಾವು

**ಸಾಸ್ವೆಹಳ್ಳಿ:** ಕೆಎಸ್‌ಆರ್‌ಟಿಸಿ ಬಸ್ ಪಲ್ಟಿಯಾಗಿ ಓರ್ವ ವಿದ್ಯಾರ್ಥಿ ಮೃತಪಟ್ಟಿರುವ ಘಟನೆ ಚನ್ನಗಿರಿ ತಾಲ್ಲೂಕಿನ ಮರಬನಹಳ್ಳಿ ಬಳಿ ನಡೆದಿದೆ.

ಬಸ್‌ನಲ್ಲಿದ್ದ 30ಕ್ಕೂ ಅಧಿಕ ಪ್ರಯಾಣಿಕರು ಗಾಯಗೊಂಡಿದ್ದಾರೆ.

ಹೊನ್ನಾಳಿ ತಾಲ್ಲೂಕಿನ ಕುಂದೂರು ಗ್ರಾಮದ ದರ್ಶನ್ (21)ಮೃತಪಟ್ಟ ವಿದ್ಯಾರ್ಥಿ. ಈ ಅಪಘಾತದಲ್ಲಿ ಏಳು ಜನರ ಸ್ಥಿತಿ ಗಂಭೀರವಾಗಿದೆ. ದಾವಣಗೆರೆಯಿಂದ ಬಸವಾಪಟ್ಟಣಕ್ಕೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನ ಆ್ಯಕ್ಸಲ್ ತುಂಡಾಗಿದೆ. ಇದರಿಂದ ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿದ್ದು,

ಬಸ್ ನಜ್ಜುಗುಜ್ಜಾಗಿದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ನಲ್ಲಿದ್ದರು. ಗ್ರಾಮಸ್ಥರು ಮತ್ತು ಪೊಲೀಸರು ರಕ್ಷಣಾ ಕಾರ್ಯ ನಡೆಸಿ, ಅಂಬ್ಯುಲೆನ್ಸ್, ಖಾಸಗಿ ವಾಹನಗಳ ಮೂಲಕ ಗಾಯಾಳುಗಳನ್ನು ಬಸವಾಪಟ್ಟಣದ ಸರ್ಕಾರಿ ಆಸ್ಪತ್ರೆ ಮತ್ತು ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಯಿತು.

ಘಟನಾ ಸ್ಥಳಕ್ಕೆ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಭೇಟಿ ನೀಡಿ ಗಾಯಾಳಗಳ ಆರೋಗ್ಯ ವಿಚಾರಿಸಿದರು.

**ಜಿಲ್ಲಾಧಿಕಾರಿಗಳ ಭೇಟಿ**

ವಿಷಯ ತಿಳಿಯುತ್ತಿದ್ದಂತೆಯೇ ಜಿಲ್ಲಾಧಿಕಾರಿ ಗಳು ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ಸ್ಥಿತಿಗತಿಯನ್ನು ವಿಚಾರಿಸಿದರು. ಅಪಘಾತಕ್ಕೊಳಗಾದ ಸಂತ್ರಸ್ತರಿಗೆ ಹಾಗೂ ಅವರ ಕುಟುಂಬದವರಿಗೆ ಧೈರ್ಯ ತುಂಬಿ, ಘಟನೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಆಸ್ಪತ್ರೆಯ ವೈದ್ಯರೊಂದಿಗೆ ಚರ್ಚಿಸಿ, ಗಾಯಾಳುಗಳಿಗೆ ಯಾವುದೇ ವಿಳಂಬವಿಲ್ಲದೆ ತುರ್ತು ಮತ್ತು ಗುಣಮಟ್ಟದ ಚಿಕಿತ್ಸೆ ನೀಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗಂಭೀರವಾಗಿ ಗಾಯಗೊಂಡವರಿಗೆ ವಿಶೇಷ ನಿಗಾ ವಹಿಸಲು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

### ಶಾಸಕ ಬಸವಂತಪ್ಪ ಸಾಂತ್ವನ: 10 ಲಕ್ಷ ರೂ. ಪರಿಹಾರ ನೀಡಲು ಸೂಚನೆ

**ದಾವಣಗೆರೆ:** ಚನ್ನಗಿರಿ ತಾಲ್ಲೂಕಿನ ಕೋಟೆಹಾಳ್- ಮರಬನಹಳ್ಳಿ ಮಧ್ಯೆ ಗ್ರಾಮಾಂತರ ಸಾರಿಗೆ ಬಸ್ಸಿನ ಚಕ್ರ(ಟೈರ್) ಸ್ಫೋಟಗೊಂಡು ಆಕ್ಸೆಲ್ ತುಂಡಾಗಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ಕಾಲೇಜು ವಿದ್ಯಾರ್ಥಿ ಸಾವನ್ನಪ್ಪಿದ ಘಟನೆಗೆ ಶಾಸಕ ಕೆ.ಎಸ್.ಬಸವಂತಪ್ಪ ಸಾಂತ್ವನ ಹೇಳಿದ್ದಾರೆ.

ಈ ಘಟನೆಗೆ ಸಂಬಂಧ ಬೆಂಗಳೂರಿನಿಂದ ಪ್ರತಿಕ್ರಿಯೆ ನೀಡಿದ ಶಾಸಕರು, ಕೋಟೆಹಾಳ್-ಮರಬನಹಳ್ಳಿ ಮಧ್ಯೆ ಬಸ್ ಪಲ್ಟಿಯಾಗಿ ಹಲವಾರು ಪ್ರಯಾಣಿಕರು ಗಾಯಗೊಂಡು, ಓರ್ವ ವಿದ್ಯಾರ್ಥಿ ಮೃತಪಟ್ಟಿರುವ ದುರಂತದ ಸುದ್ದಿ ಕೇಳಿ ನನ್ನ ಮನ ಕಲಕಿದೆ. ಕೂಡಲೇ ಕೆಎಸ್‌ಆರ್‌ಟಿಸಿ ಅಧಿಕಾರಿಗಳನ್ನು ಸಂಪರ್ಕಿಸಿ ಮೃತಪಟ್ಟು ವಿದ್ಯಾರ್ಥಿ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ನೀಡುವಂತೆ ಸೂಚಿಸಿದ್ದೇನೆ ಎಂದು ತಿಳಿಸಿದ್ದಾರೆ. ಗಾಯಗೊಂಡವರು, ಗಂಭೀರ ಗಾಯಗೊಂಡವರಿಗೆ ದಾವಣಗೆರೆ ಎಸ್.ಎಸ್.ಆಸ್ಪತ್ರೆ ಹಾಗೂ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದು, ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಕೊಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸುಸ್ಥಿತಿಯಲ್ಲಿರುವ ಬಸ್‌ಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಓಡಿಸಬೇಕು. ಒಂದು ಟ್ರಿಪ್ ಹೋಗಿ ಡಿಪೋಗೆ ಬಂದ ತಕ್ಷಣವೇ ಬಸ್‌ಗಳನ್ನು ಪರೀಕ್ಷೆಗೆ ಒಳಪಡಿಸಿ ದುಸ್ಥಿತಿಯಲ್ಲಿದ್ದರೆ ರಿಪೇರಿ ಮಾಡಿ ಹಳ್ಳಿಗಳ ಮಾರ್ಗಗಳಿಗೆ ಕಳುಹಿಸಬೇಕು. ಸುಸ್ಥಿತಿಯಲ್ಲಿ ಇರದ ಬಸ್‌ಗಳನ್ನು ಯಾವುದೇ ಕಾರಣಕ್ಕೂ ಕಳುಹಿಸಬಾರದು. ಕಳುಹಿಸಿದರೆ ಇಂತಹ ಅವಘಡಗಳು ಸಂಭವಿಸುತ್ತವೆ. ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

# ಆಗಿಂದಾಗೆ ಮೊಸಳೆ ಪ್ರತ್ಯಕ್ಷ: ಆತಂಕ

**ಸಾಸ್ವೆಹಳ್ಳಿ:** ಸಮೀಪದ ರಾಂಪುರ ಗ್ರಾಮದ ಬಳಿ ಎಕೆ ಕಾಲೋನಿಯ ತುಂಗಭದ್ರಾ ನದಿಯಲ್ಲಿ ಮೊಸಳೆ ಆಗಿಂದಾಗೆ ಕಾಣಿಸಿಕೊಂಡಿದ್ದು, ಜನರಲ್ಲಿ ಆತಂಕ ಮನೆ ಮಾಡಿದೆ.

ಈ ಮಾಹಿತಿಯನ್ನು ಸಾರ್ವಜನಿಕರು ಸ್ಥಳೀಯ ಗ್ರಾಮ ಪಂಚಾಯಿತಿಗೆ ನೀಡುತ್ತಿದ್ದಂತೆ, ಪಿಡಿಒ ರಾಘವೇಂದ್ರ ಹಾಗೂ ಅರಣ್ಯ ಸಿಬ್ಬಂದಿ ಉಮೇಶ್ ನದಿ ಪಾತ್ರದ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ, ಮೊಸಳೆಯೊಂದಿಗೆ ನಾಲ್ಕು ಮರಿಗಳು ಇರುವುದಾಗಿ ತಿಳಿಸಿದ್ದಾರೆ.

ಮುಂಜಾಗ್ರತಾ ಕ್ರಮವಾಗಿ ಗ್ರಾಮಸ್ಥರು ಸ್ನಾನ ಮಾಡಲು, ಬಟ್ಟೆ ತೊಳೆಯಲು, ಜಾನುವಾರುಗಳ ಸ್ನಾನ ಮಾಡಿಸಲು, ನೀರು ಕುಡಿಸಲು ನದಿ ಪಾತ್ರದ ಸ್ಥಳಕ್ಕೆ ಹೋಗದಂತೆ ಧ್ವನಿವರ್ಧಕದ ಮೂಲಕ ಗ್ರಾಮದಲ್ಲಿ ಪ್ರಕಟಣೆ ಮಾಡಿಸಿದ್ದಾರೆ.

# ಮೇ 11ಕ್ಕೆ ಕಾವೇರಿ ತಂತ್ರಾಂಶ ಮರು ಜಾರಿಗೆ ಆಗ್ರಹಿಸಿ ಪ್ರತಿಭಟನೆ

**ದಾವಣಗೆರೆ:** ಆಸ್ತಿ ನೋಂದಣಿಗೆ ಪೇಪರ್ ಲೆಸ್ ವ್ಯವಸ್ಥೆಯನ್ನು ರದ್ದುಪಡಿಸಿ, ಹಿಂದಿನ ಕಾವೇರಿ ತಂತ್ರಾಂಶವನ್ನು ಮರುಜಾರಿಗೊಳಿಸುವಂತೆ ಒತ್ತಾಯಿಸಿ ಜಿಲ್ಲಾ ದಸ್ತಾವೇಜು(ಪತ್ರ) ಬರಹಗಾರರ ಅಸೋಸಿಯೇಷನ್ ವತಿಯಿಂದ ಮೇ 11ರಂದು ನಗರದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಬಿ.ವಿ.ಶಿವಾನಂದ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಅಂಬೇಡ್ಕರ್ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಹಾಗೂ ನೋಂದಣಾಧಿಕಾರಿ ಮುಖಾಂತರ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಲಾಗುವುದು. ಪೇಪರ್‌ಲೆಸ್ ನೋಂದಣಿಯನ್ನು ಸರ್ಕಾರ ಸ್ಥಗಿತಗೊಳಿಸಬೇಕು. ದಸ್ತಾವೇಜು ನೋಂದಣಿಯನ್ನು ಯಥಾಸ್ಥಿತಿಯಲ್ಲಿಯೇ ಮುಂದುವರಿಸುವ ಮೂಲಕ ಆಸ್ತಿ ಖರೀದಿದಾರರಿಗೆ ನೋಂದಣಿಯ ದಸ್ತಾವೇಜು ದಾಖಲೆ ಸಿಗುವಂತಾಗಬೇಕು ಎಂದು ಆಗ್ರಹಿಸಿದರು.

ಕಂದಾಯ ಸಚಿವ ಕೃಷ್ಣ ಭೈರೇಗೌಡ ಇತ್ತೀಚೆಗೆ ಚಾಮರಾಜನಗರ ಜಿಲ್ಲೆಯಲ್ಲಿ ಪೇಪರ್‌ಲೆಸ್ ನೋಂದಣಿ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಈ ನೋಂದಣಿಯಲ್ಲಿ ಮಾರಾಟಗಾರರು/ಖರೀದಿದಾರರು ಮತ್ತು ಸಾಕ್ಷಿದಾರರು ಸಹಿ ಹಾಕುವ ವ್ಯವಸ್ಥೆ ಇಲ್ಲ. ಈ ರೀತಿ ಯಾರದೇ ಸಹಿ ಇಲ್ಲದೆ ನೋಂದಣಿಯಾದ ಪತ್ರಕ್ಕೆ ಕಾನೂನು ಮಾನ್ಯತೆ ಸಿಗುವ ಬಗ್ಗೆ ಅನುಮಾನವಿದೆ. ಅಲ್ಲದೆ, ದಸ್ತಾವೇಜು ಬರಹಗಾರ ವೃತ್ತಿಯನ್ನು ನಂಬಿರುವ ಜನರು ಪೇಪರ್‌ಲೆಸ್ ನೋಂದಣಿಯಿಂದ ತೊಂದರೆ ಅನುಭವಿಸುವಂತಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್ ಅಧ್ಯಕ್ಷಡಿ.ಕೆ.ಸಂಗಮೇಶ್ ಎಲಿಗಾರ್,ಮುಖಂಡರಾದ ಧರ್ಮರಾಜ್ ಏಕಬೋಟೆ, ಡಿ.ಆರ್.ಗಿರಿರಾಜ್, ಎಸ್.ರಾಜಶೇಖರ್, ಕೆ.ಹನುಮಂತಪ್ಪ, ಮಧುಸೂಧನ, ಬಿ.ವಿ.ರಾಜಶೇಖರ್, ಕರಿಬಸಪ್ಪ ಬಳ್ಳಿ, ಬಿ.ಶಿವರಾಜ್ ಮತ್ತಿತರರಿದ್ದರು.

# ನಿವೇಶನ ನೀಡಲು ಅಧಿಕಾರಿಗಳಿಂದ ಮರಗಳ ಸರ್ವೆ

**ಹೊನ್ನಾಳಿ:** ಪಟ್ಟಣ ಪುರಸಭೆ ವ್ಯಾಪ್ತಿಯ ನಿವೇಶನ ರಹಿತರಿಗೆ ವಸತಿ ಕಲ್ಪಿಸಿಕೊಡುವ ಸಲುವಾಗಿ ತಾಲೂಕಿನ ಸುಂಕದಕಟ್ಟೆ ಸಮೀಪದ ಮಲ್ಲದೇವರಕಟ್ಟೆ ಪ್ರದೇಶದಲ್ಲಿ ಗುರುವಾರ ಮತ್ತು ಶುಕ್ರವಾರ ಉಪ ವಿಭಾಗಾಧಿಕಾರಿ ಎಚ್.ಬಿ.ಚನ್ನಪ್ಪ ಅವರು ನೇತೃತ್ವದಲ್ಲಿ ಕಂದಾಯ, ಅರಣ್ಯ ಹಾಗೂ ಪುರಸಭೆ ಅಧಿಕಾರಿಗಳ ತಂಡ ಈ ಪ್ರದೇಶಲ್ಲಿನ ಮರಗಳ ಸರ್ವೆ ಹಾಗೂ ಮರಗಳ ಮಾರ್ಕ್ ಮಾಡುವ ಕಾರ್ಯ ನಡೆಸಿದರು.

ಈ ವೇಳೆ ಉಪವಿಭಾಗಾಧಿಕಾರಿ ಎಚ್.ಬಿ. ಚನ್ನಪ್ಪ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಈ ಭಾಗದ ಸರ್ವೆ ನಂ.4ರ ಸುಮಾರು 29.17 ಎಕರೆ ಪ್ರದೇಶದಲ್ಲಿ ವಸತಿ ರಹಿತರಿಗೆ ನಿವೇಶ ನೀಡುವ ಉದ್ದೇಶ ಹೊಂದಿದ್ದು, ಇದಕ್ಕಾಗಿ ಯಾವ ಯಾವ ಜಾತಿಯ ಎಷ್ಟೆಷ್ಟು ಮರಗಳಿವೆ ಎಂದು ಸರ್ವೆ ಮಾಡಿ ಮಾರ್ಕ್ ಮಾಡಲಾಗುವುದು ನಂತರ ಅರಣ್ಯ ಇಲಾಖೆಯ ಸಹಕಾರದಿಂದ ಅವುಗಳನ್ನು ತೆರವುಗೊಳಿಸಿ ನಿವೇಶಗಳನ್ನು ಮಾಡಲಾಗುವುದು ಎಂದು ತಿಳಿಸಿದರು.

ಈಗಾಗಲೇ ನಿವೇಶನ ರಹಿತರಿಗೆ ವಸತಿ ಕಲ್ಪಿಸಿಕೊಡಲು ಮಂಜೂರಾದ ಈ ಪ್ರದೇಶದಲ್ಲಿ ಬಡಾವಣೆ ನಿರ್ಮಣಕ್ಕಾಗಿ ಸರ್ಕಾರದಿಂದ 20 ಲಕ್ಷ ಅನುದಾನ ಬಿಡುಗಡೆ ಮಾಡಿದೆ, ಈ ಹಣದಲ್ಲಿ ಚರಂಡಿ, ರಸ್ತೆ, ನಿರ್ಮಾಣ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಪುರಸಭೆ ಮುಖ್ಯಾಧಿಕಾರಿ ಟಿ.ಲೀಲಾವತಿ ಮಾತನಾಡಿ, ಮಲ್ಲದೇವರಕಟ್ಟೆ ಪ್ರದೇಶದ 29.17 ಎಕರೆಯಲ್ಲಿ 20|30 ಅಡಿ ಅಳತೆಯ ನಿವೇಶನ ಗುರುತು ಮಾಡಲಾಗುವುದು. ಅಲ್ಲದೆ ನೈಜ್ಯ ಫಲಾನುಭವಿಗಳನ್ನು ಮಾತ್ರ ಗುರುತಿಸಿ ಯಾವುದೇ ಪ್ರಭಾವಕ್ಕೆ ಒಳಗಾಗದೇ ಅರ್ಹರಿಗೆ ಮಾತ್ರ ವಿವೇಶನ ಹಂಚಿಕೆ ಮಾಡಲಾಗುವುದು ಎಂದು ಹೇಳಿದರು.

ಈಗಾಗಲೇ ಅನೇಕರಿಂದ ಅರ್ಜಿಗಳು ಬಂದಿದ್ದು, ಹೊಸದಾಗಿ ಅರ್ಜಿಕರೆಯವುದರ ಬಗ್ಗೆ ಶಾಸಕರೊಂದಿಗೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

**ಸುಂಕದಕಟ್ಟೆ ಗ್ರಾಮಸ್ಥರ ವಿರೋಧ**

ನಿವೇಶನ ರಹಿತರಿಗೆ ವಸತಿ ಕಲ್ಪಿಸಿಕೊಡುವ ಉದ್ದೇಶದಿಂದ ಮಲ್ಲದೇವರಕಟ್ಟೆಯ ಈ ಪ್ರದೇಶವನ್ನು ವಶಕ್ಕೆ ಪಡೆಯುವ ಸಂದರ್ಭದಿಂದಲೂ ಕೂಡ ಸುಂಕದ ಕಟ್ಟೆ ಗ್ರಾಮದ ಜನತೆ, ರೈತರು, ತೀವ್ರ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಗುರುವಾರ ಮತ್ತು ಶುಕ್ರವಾರ ಅಧಿಕಾರಿಗಳು ಈ ಪ್ರದೇಶದಲ್ಲಿ ಮರಗಳ ಸಮೀಕ್ಷೆ ನಡೆಸುತ್ತಿರುವ ವೇಳೆ ಗ್ರಾಮದ ರೈತ ಮುಖಂಡ ಕರಿಬಸಪ್ಪ, ಅರಬಗಟ್ಟೆ ಗ್ರಾ.ಪಂ.ಮಾಜಿ ಅಧ್ಯಕ್ಷ ಎಸ್.ಆರ್. ಮಂಜುನಾಥ್, ನರಸಿಂಹ ಮೂರ್ತಿ, ಹಾಗೂ ನರಸಿಂಹಪ್ಪ ಅವರು ವಿರೋಧ ವ್ಯಕ್ತಪಡಿಸಿ ಇದು ಆನಾದಿಕಾಲದಿಂದಲೂ ಗ್ರಾಮದ ಜಾನುವಾರುಗಳಿಗೆ ಮೀಸಲಿಟ್ಟ ಜಾಗವಗಿದ್ದು, ಈ ಜಾಗದಲ್ಲಿ ಸಾವಿರಾರು ನವಿಲುಗಳು, ಸೇರಿದಂತೆ ಅನೇಕ ವನ್ಯಜೀವಿಗಳು ವಾಸಮಾಡುತ್ತಿದ್ದು, ಉತ್ತಮ ಜಾತಿಯ ಮರಗಿಡಗಳು ಇದ್ದು, ಇದ್ಯಾವುದನ್ನು ಪರಿಗಣಿಸದೇ ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣಿದು ಈ ಜಾಗದಲ್ಲಿ ನಿವೇಶನ ರಹಿತರಿಗೆ ವಸತಿಕಲ್ಪಿಸಲು ಮುಂದಾಗಿದ್ದಾರೆ ಎಂದು ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಉಪ ವಿಭಾಗಾಧಿಕಾರಿ ಚನ್ನಪ್ಪ, ಸರ್ಕಾರದ ಅದೇಶವನ್ನು ನಾವು ಪಾಲಿಸುತ್ತಿದ್ದೇವೆ ಎಂದಷ್ಟೇ ಹೇಳಿದರು.

ಮರಗಳ ಸರ್ವೆ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ರಾಜೇಶ್‌ಕುಮಾರ್, ಅರಣ್ಯ ಇಲಾಖೆಯ ಕಿಶೋರ್ ನಾಯ್ಕ, ಸಹಾಯಕ ಸರ್ವೆ ಅಧಿಕಾರಿ ಮಲ್ಲಿಕಾ ರ್ಜುನ್, ತಾಲೂಕು ಸರ್ವೇಯರ್ ರಮೇಶ್, ಪುರಸಭೆ ಎಂಜಿನಿಯರ್ ದೇವರಾಜ್, ಶಿವಣ್ಣ, ರಾಜಸ್ವನಿರೀಕ್ಷಕ ರಮೇಶ್, ಪುನಿತ್,ಆಕಾಶ್ ಮತ್ತಿತರ ರಿದ್ದರು.

# ಭೂಮಿ ಪೂಜೆಗೆ ಸಚಿವರಿಗೆ ಆಹ್ವಾನ

**ದಾವಣಗೆರೆ:** ನಗರದ ಬೈಪಾಸ್ ರಸ್ತೆಯಲ್ಲಿ ನಿರ್ಮಾಣ ಆಗುತ್ತಿರುವ ವಾಲ್ಮೀಕಿ ನಾಯಕ ಮಹಿಳಾ ವಿದ್ಯಾರ್ಥಿ ನಿಲಯದ ಭೂಮಿಪೂಜೆಗೆ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿಗೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದಿಂದ ಆಹ್ವಾನಿಸಲಾಯಿತು. ನಾಯಕ ವಿದ್ಯಾರ್ಥಿನಿಲಯದ ಅಧ್ಯಕ್ಷ ಬಿ.ವೀರಣ್ಣ, ಎಂ.ಎಂ.ಆಂಜನೇಯ ಗುರೂಜಿ, ಕಾರ್ಯದರ್ಶಿ ಶ್ಯಾಗಲೆ ಕೆ.ಆರ್.ಮಂಜುನಾಥ್, ಗುಮ್ಮನೂರು ಶಂಭುಲಿಂಗಪ್ಪ, ಎ.ಬಿ.ರಾಮಚಂದ್ರಪ್ಪ, ಸಂತೋಷ್ ಇನ್ನಿತರರಿದ್ದರು.

# ಹಿರಿಯ ಪತ್ರಕರ್ತ ಶಿವರುದ್ರಯ್ಯ ಹಿರೇಮಠ್‌ಗೆ ಸನ್ಮಾನ

**ನ್ಯಾಮತಿ:** 112ನೇ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನದ ಪ್ರಯುಕ್ತ ನ್ಯಾಮತಿ ತಾಲೂಕಿನ ಹಿರಿಯ ಪತ್ರಕರ್ತರಾದ ಶಿವರುದ್ರಯ್ಯ ಹಿರೇಮಠ್ ರವರ ಮನೆಗೆ ಬೆಳಗುತ್ತಿಯ ಕನ್ನಡ ಸಾಹಿತ್ಯ ಪರಿಷತ್ತು ಸದಸ್ಯರಾದ ಜಿ.ಕುಬೇರಪ್ಪ ಮತ್ತು ಶಿಕ್ಷಕಿ ಸರ್ವಮಂಗಳ ದಂಪತಿ ಭೇಟಿ ನೀಡಿ ಆರೋಗ್ಯ ವಿಚಾರಿಸಿ, ಗೌರವಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯತ್ವ ಹೊಂದಿರುವ ಬೆಳಗುತ್ತಿ ಗ್ರಾಮದ ಜಿ.ಕುಬೇರಪ್ಪ ದಂಪತಿ ಶಿವರುದ್ರಯ್ಯ ಹಿರೇಮಠರವರ ಮನೆಗೆ ಭೇಟಿ ನೀಡಿ ಸನ್ಮಾನಿಸಿ, ಕಳೆದ 58 ವರ್ಷಗಳಿಂದ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿರುವುದನ್ನು ಸ್ಮರಿಸಿಕೊಂಡರು.

ಕಲ್ಲಿನಕೋಟೆ ಪ್ರವೇಶಿಸಿದ ಯಡಿಯೂರಪ್ಪ | ಬಿಎಸ್‌ವೈ ಸ್ವಾಗತಕ್ಕೆ ದಿಗ್ಗಜರ ದಂಡು | ಕಲಾ ತಂಡಗಳ ಮೆರುಗು

# ಅಭಿಮಾನೋತ್ಸವ ಮುನ್ನವೇ ಅಭಿಮಾನದ ಹೊಳೆ

■ -ಈ.ಮಹೇಶ್‌ಬಾಬು

**ಸಂ.ಕ.ಸಮಾಚಾರ, ಚಿತ್ರದುರ್ಗ** ಭಾರೀ ಮಳೆ ಮುನ್ಸೂಚನೆ ನೀಡುವ ರೀತಿ ಮೇ 9ರ ಶನಿವಾರ ನಗರದಲ್ಲಿ ಹಮ್ಮಿಕೊಂಡಿರುವ ಬಿಎಸ್‌ವೈ ಅಭಿಮಾನೋತ್ಸವ ಮುನ್ನಾ ದಿನ ಶುಕ್ರವಾರ ಸಂಜೆ ಕೋಟೆನಾಡು ಪ್ರವೇಶಿಸಿದ ಬಿ.ಎಸ್. ಯಡಿಯೂರಪ್ಪ ಅವರನ್ನು ಅಭಿಮಾನಿಗಳು ಅದ್ದೂರಿಯಾಗಿಯೇ ಸ್ವಾಗತಿಸಿಕೊಂಡರು.

ಹಾಲಿ–ಮಾಜಿ ಜನಪ್ರತಿನಿಧಿಗಳು, ನೂರಾರು ಮುಖಂಡರುಗಳ ದಂಡೇ ಯಡಿಯೂರಪ್ಪ ಅವರ ಆಗಮನಕ್ಕಾಗಿ ಗಂಟೆಗಟ್ಟಲೇ ಕಾದು ನಿಂತಿದ್ದರು.

ಚಂದ್ರವಳ್ಳಿ ಸಮೀಪದ ಬಸವ ವೃತ್ತದಲ್ಲಿ ನಿರ್ಮಾಣ ಮಾಡಿದ್ದ ವೇದಿಕೆಯಲ್ಲಿ ನವಧಾನ್ಯಗಳ ಕುಂಭಗಳು, ಯಡಿಯೂರಪ್ಪ ಅವರಿಗಾಗಿಯೇ ಮುಖ್ಯಮಂತ್ರಿ ಮಾದರಿ ಏಕೈಕ ಕುರ್ಚಿ, ಹೂವಿನ ಅಲಂಕಾರದಿಂದ ವೇದಿಕೆ ಆಕರ್ಷಣೀಯವಾಗಿತ್ತು. ದಾವಣರೆಯಲ್ಲಿ ವಿಶ್ರಾಂತಿ ಬಳಿಕ ನೇರ ಚಿತ್ರದುರ್ಗದ ವೇದಿಕೆ ಸ್ಥಳಕ್ಕೆ ಯಡಿಯೂರಪ್ಪ ಸಂಜೆ 6.15ಕ್ಕೆ ಆಗಮಿಸುತ್ತಿದ್ದಂತೆ ಎರಡು ಬದಿ ಜೆಸಿಬಿ ಮೂಲಕ ಹೂವಿನ ಮಳೆ ಸುರಿಸಲಾಯಿತು, ಪಟಾಕಿ ಸದ್ದು, ಕಲಾತಂಡಗಳ ಮೆರುಗು ಬಿಎಸ್‌ವೈ ಪುರ ಪ್ರವೇಶವನ್ನು ರಂಗನ್ನಾಗಿಸಿತು.

ವಯಸ್ಸು 83 ಆಗಿದ್ದರೂ ಮುಖದಲ್ಲಿ ಸಿಟ್ಟಿನ ಗೆರೆಗಳು, ಸಫಾರಿ ಡ್ರೆಸ್, ಹಣೆ ಮೇಲೆ ಕುಂಕುಮ, ಬಿಳಿಮೀಸೆಯ ಯಡಿಯೂರಪ್ಪ ವೇದಿಕೆ ಸ್ಥಳಕ್ಕೆ ಆಗಮಿಸುತ್ತಿದ್ದಂತೆ ಜೇಬಲ್ಲಿದ್ದ ಬಾಚಣಿಕೆ ತೆಗೆದುಕೊಂಡು ಕೂದಲು ಬಾಚಿಕೊಂಡು ಮೆಲ್ಲಗೆ ವೇದಿಕೆ ಹತ್ತಿ ಜನರತ್ತ ಕೈಬೀಸುತ್ತಿದ್ದಂತೆ ಅಭಿಮಾನಿಗಳ ಹರ್ಷೋದ್ಗಾರ ಮುಗಿಲುಮುಟ್ಟಿತು.

ವಯಸ್ಸು ಮಾತ್ರ 83 ಆಗಿದ್ದರೂ ಯುವಕನಂತೆ ಕಂಗೊಳಿಸುತ್ತಿದ್ದ ಯಡಿಯೂರಪ್ಪ ಅವರ ಕಾಲಿಗೆ ಮುಖಂಡರು, ಹಾಲಿ–ಮಾಜಿ ಜನಪ್ರತಿನಿಧಿಗಳು ಬಿದ್ದು ನಮಸ್ಕರಿಸಿ, ಆಶೀರ್ವಾದ ಪಡೆದರು.

ನಾಡಗೀತೆ ಬಳಿಕ ಪ್ರಮುಖರು ಬಿಎಸ್‌ವೈ ಹೆಗಲಿಗೆ ಹಸಿರು ಶಾಲು ಹಾಕಿ, ಕೈಗೆ ಚಿಕ್ಕ ನೇಗಿಲು ಕೊಟ್ಟು ಗೌರವಿಸಿದರು. ಬಳಿಕ ಸೇರಿದ್ದ ಮುಖಂಡರೆಲ್ಲರಿಗೂ ಹಸ್ತಲಾಘವ ಮಾಡಿ, ಮತ್ತೊಮ್ಮೆ ಅಭಿಮಾನಿಗಳತ್ತ ಕೈಬಿಸಿ, ನಮಸ್ಕರಿಸಿ ವೇದಿಕೆ ಇಳಿದು, ಸಿಂಗಾರಗೊಂಡಿದ್ದ ವಾಹನವನ್ನು ಯಡಿಯೂರಪ್ಪ ಹತ್ತುತ್ತಿದ್ದಂತೆ ಆಕರ್ಷಕ ಮೆರವಣಿಗೆ ಚಾಲನೆ ಪಡೆದುಕೊಂಡಿತು.

ಬಿ.ಎಸ್.ಯಡಿಯೂರಪ್ಪ ಅವರ ಬಳಸಿದ ಅಂಬಾಸಿಡರ್ ಕಾರು ಜೊತೆಗೆ ಫೋಟೋ ತೆಗೆಸಿಕೊಳ್ಳುತ್ತಿರುವ ಸಂಸದ ಗೋವಿಂದ ಕಾರಜೋಳ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಶಾಸಕರಾದ ಎಸ್.ಕೆ.ಬಸವರಾಜನ್, ಜಿ.ಎಚ್.ತಿಪ್ಪಾರೆಡ್ಡಿ ಇತರರು.

ನಂತರ ವಾಹನವು ಕನಕ, ಸಂಗೊಳ್ಳಿ ರಾಯಣ್ಣ, ಗಾಂಧಿ, ರಾಣಿಚೆನ್ನಮ್ಮ, ಅಂಬೇಡ್ಕರ್ ವೃತ್ತದ ಮಾರ್ಗ ಮದಕರಿ ನಾಯಕ ವೃತ್ತ ತಲುಪಿತು. ಎಲ್ಲೆಡೆ ಮಹನೀಯರ ವೃತ್ತಗಳನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ದಾರಿಯುದ್ದಕ್ಕೂ ಬಿಎಸ್‌ವೈ, ಅಮಿತ್ ಶಾ, ಮೋದಿ ಭಾವಚಿತ್ರಗಳು, ಕೇಸರಿ ಭಾವುಟಗಳು ಯಡಿಯೂರಪ್ಪ ಅವರ ಪುರಪ್ರವೇಶದ ಮೆರವಣಿಗೆಗೆ ಮೆರುಗಾಗಿ ನಿಂತಿದ್ದವು.

ನೂರಾರು ಕುಂಭವನ್ನೊತ್ತಿದ್ದ ಮಹಿಳೆಯರು, ಕೈಯಲ್ಲಿ ಒನಕೆ ಹಿಡಿದಿದ್ದ ನಾರಿಯರು, ಕೋಲಾಟ ತಂಡ, ಗೊರಪ್ಪಗಳು, ಸಾಂಪ್ರಾದಾಯಿಕ ಉಡುಗೆ ತೊಟ್ಟಿದ್ದ ಲಂಬಾಣಿ ಮಹಿಳೆಯರು, ಪೂಜಾ, ಪಟ, ಗಾರುಡಿ ಗೊಂಬೆ, ವೀರಗಾಸೆ, ಡೊಳ್ಳು, ಗೊರವರ ಕುಣಿತ, ಬೇಡರ ವೇಷ, ಹಗಲು ವೇಷ ಸೇರಿ ರಾಜ್ಯದ ವಿವಿಧಡೆಯಿಂದ ಆಗಮಿಸಿದ್ದ 24 ಕಲಾತಂಡಗಳು, ಯಡಿಯೂರಪ್ಪ ಬಳಸುತ್ತಿದ್ದ ಸಿಕೆಆರ್ ಅಂಬಾಸಡೆರ್ ಕಾರು, ಟ್ಯಾಬ್ಲೋಗಳು ಮೆರವಣಿಗೆಯ ಸೊಬಗನ್ನು ಹೆಚ್ಚಿಸಿದ್ದವು.

ಸಂಜೆ ಕತ್ತಲು ಆವರಿಸಿದ್ದಕ್ಕೂ ಎಐ ತಂತ್ರಜ್ಞಾನ ಬಳಸಿಕೊಂಡು ಯಡಿಯೂರಪ್ಪ ಅವರು ಕಾಲ್ನಡಿಗೆ, ಸೈಕಲ್, ವಿವಿಧೆಡೆ ಭಾಷಣ, ವಿಧಾನಸಭೆ ಮುತ್ತಿಗೆ ಹಾಕುವುದು, ಯಡಿಯೂರಪ್ಪ ಭಾಷಣದ ವೇಳೆ ಮಧ್ಯೆ ಮಧ್ಯೆ ಘರ್ಜಿಸುವ ದೃಶ್ಯದ ಪ್ರದರ್ಶನಕ್ಕಾಗಿಯೇ ಮಾಡಲಾಗಿದ್ದ ವಿಶೇಷ ಟ್ಯಾಬ್ಲೋ ಬಿಎಸ್‌ವೈ ಅವರ ರಾಜಕೀಯ ಹಾದಿಯ ಚಿತ್ರಣ ಪರಿಚಯಿಸಿತು.

ಒಟ್ಟಾರೆ ದೊಡ್ಡದಾಗಿ ಮಳೆ ಸುರಿಯುವ ಮುನ್ನ ಮೋಡಗಳು ಓಡಾಟ, ಗುಡುಗು ರೀತಿ ಶನಿವಾರ ಹಮ್ಮಿಕೊಂಡಿರುವ ಅಭಿಮಾನೋತ್ಸವದ ಯಶಸ್ವಿಗೆ ಮುನ್ನುಡಿ ರೀತಿ ಶುಕ್ರವಾರ ಸಂಜೆ ನಡೆದ ಯಡಿಯೂರಪ್ಪ ಅವರ ಪುರಪ್ರವೇಶ ಅದ್ದೂರಿಯಾಗಿ ನೆರವೇರಿತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಿಎಂ ಸದಾನಂದಗೌಡ, ಸಂಸದರಾದ ಗೋವಿಂದ ಕಾರಜೋಳ, ಬಿ.ವೈ.ರಾಘವೇಂದ್ರ, ಮಾಜಿ ಸಚಿವರಾದ ಜನಾರ್ಧನರೆಡ್ಡಿ, ಸಿ.ಟಿ.ರವಿ, ಶ್ರೀರಾಮುಲು, ಮುನಿರತ್ನ, ಬಿ.ಸಿ.ಪಾಟೀಲ್, ಎಂ.ಪಿ.ರೇಣುಕಾಚಾರ್ಯ, ಜಿ.ಎಚ್.ತಿಪ್ಪಾರೆಡ್ಡಿ, ಎಸ್.ಕೆ.ಬಸವರಾಜನ್, ಲಿಂಗಮೂರ್ತಿ, ಬೆಂಗಳೂರಿನ ವಿಶ್ವನಾಥ್, ಗೋಪಾಲಯ್ಯ, ವೈ.ಎ.ನಾರಾಯಣಸ್ವಾಮಿ, ಛಲವಾದಿ ನಾರಾಯಣಸ್ವಾಮಿ, ಎ.ನಾರಾಯಣಸ್ವಾಮಿ, ಎಂ.ಚಂದ್ರಪ್ಪ, ಡಾ.ಸಿದ್ಧಾರ್ಥ ಗುಂಡಾರ್ಪಿ, ನಾಗರಾಜ್ ಬೇದ್ರೆ, ದಗ್ಗೆ ಶಿವಪ್ರಕಾಶ್, ರವಿ ಮಡಿವಾಳ ಇತರರಿದ್ದರು.

### ಸಾಲುಗಟ್ಟಿ ನಿಂತ ವಾಹನ

ಬಸವಣ್ಣ, ಕನಕ ವೃತ್ತದಲ್ಲಿ ಯಡಿಯೂರಪ್ಪ ಅವರ ಪುರಪ್ರವೇಶಕ್ಕಾಗಿ ಆಗಮಿಸಿದ್ದ ನಾಯಕರ ದಂಡು ಹಿನ್ನೆಲೆಯಲ್ಲಿ ನೂರಾರು ಕಾರುಗಳು ರಸ್ತೆಮಧ್ಯೆ ನಿಂತಿದ್ದರಿಂದ ವಾಹನ ಸಂಚಾರದ ಮಾರ್ಗವನ್ನು ತಕ್ಷಣವೇ ಪೊಲೀಸರು ಬದಲಾಯಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

# ಬಿಎಸ್‌ವೈ ಅಭಿಮಾನಿಗಳ ಸ್ವಾಗತಕ್ಕೆ ದುರ್ಗ ಸಜ್ಜು

**ಸಂ.ಕ.ಸಮಾಚಾರ, ಚಿತ್ರದುರ್ಗ :** ಮಧ್ಯಕರ್ನಾಟದ ಹೃದಯ ಭಾಗ ಚಿತ್ರದುರ್ಗದಲ್ಲಿ ಮೊದಲ ಬಾರಿಗೆ ಬೃಹತ್ ಮಟ್ಟದ ಸಮಾವೇಶದ ಹೆಜ್ಜೆಗುರುತು ಮೂಡಿಸಲು ಬಿಎಸ್‌ವೈ ಅಭಿಮಾನೋತ್ಸವದ ಸಿದ್ಧತೆಗಳು ಬಹುತೇಕ ಪೂರ್ಣಗೊಂಡಿದೆ.

ನಗರದ ಹೊರವಲಯ ಮಾದಾರ ಚೆನ್ನಯ್ಯ ಮಠ ಸಮೀಪದ ವಿಶಾಲ ಜಾಗದಲ್ಲಿ ಮೇ 9ರ ಮಧ್ಯಾಹ್ನ 2ಕ್ಕೆ ಆರಂಭಗೊಂಡು 5 ಗಂಟೆಗೆ ಮುಕ್ತಾಯವಾಗುವ ಅಭಿಮಾನೋತ್ಸವಕ್ಕೆ ಒತ್ತಡದ ಮಧ್ಯೆಯೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮಿಸುತ್ತಿರುವುದು ವಿಶೇಷತೆ ಪಡೆದುಕೊಂಡಿದೆ. 20 ದಿನಗಳಿಂದ ನಡೆಯುತ್ತಿದ್ದ ಸಿದ್ಧತೆ ಬಹುತೇಕ ಶುಕ್ರವಾರ ರಾತ್ರಿ ಪೂರ್ಣ ಹಂತಕ್ಕೆ ತಲುಪಿದ್ದು, ಹಾಲಿ–ಮಾಜಿ ಶಾಸಕರು, ಸಂಸದರು ವೇದಿಕೆ ಸ್ಥಳದಲ್ಲೇ ಬೀಡುಬಿಟ್ಟಿದ್ದು ವಿವಿಧ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.

ಕಿಮೀ ಗಟ್ಟಲೇ ರಾಷ್ಟ್ರೀಯ ಹೆದ್ದಾರಿ, ನಗರ ಪ್ರದೇಶ ಸೇರಿ ವಿವಿಧಡೆ ಸಾಲಾಗಿ ಅಳವಡಿಸಿರುವ ಕೇಸರಿ ಬಾವುಟ, ಕಟೌಟ್‌ಗಳು, ಆಕರ್ಷಕ ಫ್ಲೆಕ್ಸ್‌ಗಳು ಇಡೀ ಕೋಟೆನಾಡು ಚಿತ್ರದುರ್ಗದಲ್ಲಿ ಹಬ್ಬದ ವಾತಾವರಣವನ್ನೇ ನಿರ್ಮಿಸಿದೆ.

ಸಮಾರಂಭದ ಸ್ಥಳಕ್ಕೆ ಪ್ರವೇಶಿಸುವ ಮಾರ್ಗದ ಎರಡು ಬದಿ ವಿಶೇಷವಾಗಿ ಯಡಿಯೂರಪ್ಪ, ಅಮಿತ್ ಶಾ, ಮೋದಿ ಬೃಹತ್ ಕಟೌಟ್‌ಗಳನ್ನು ಸ್ವಾಗತಿಸುವ ರೀತಿ ಸಿದ್ಧಪಡಿಸಲಾಗಿದೆ.

ಬೃಹತ್ ವೇದಿಕೆಗೆ ಎರಡು ದ್ವಾರಬಾಗಿಲನ್ನು ಕೋಟೆನಾಡು ರೀತಿ ಸಿಂಗರಿಸಲಾಗಿದೆ. ಸಭಾಂಗಣದಲ್ಲಿ ವಿಶೇಷ ಅತಿಥಿಗಳು, ಗಣ್ಯರು, ಅಭಿಮಾನಿಗಳು ಹೀಗೆ ವಿವಿಧ ವಿಭಾಗಗಳನ್ನಾಗಿಸಿ ಒಟ್ಟಾರೆ 1 ಲಕ್ಷಕ್ಕೂ ಹೆಚ್ಚು ಆಸನಗಳನ್ನು ಹಾಕಲಾಗಿದೆ. ನಾಡಿನ ವಿವಿಧೆಡೆಯಿಂದ ಆಗಮಿಸುವ ನೂರಕ್ಕೂ ಹೆಚ್ಚು ಮಠಾಧೀಶರನ್ನು ವಿಶೇಷವಾಗಿ ಬರಮಾಡಿಕೊಂಡು ಅವರನ್ನು ಗೌರವಿಸಲು ವಿಶೇಷ ತಂಡವನ್ನೇ ರಚಿಸಲಾಗಿದೆ.

ಅಭಿಮಾನೋತ್ಸವದ ಬಳಿ ಭೋಜನ ತಯಾರಿಸಲು ಸಿದ್ಧತೆ ಮಾಡುತ್ತಿರುವ ಬಾಣಸಿಗರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮಿಸುವ ಹಿನ್ನೆಲೆಯಲ್ಲಿ ಚಿತ್ರದುರ್ಗಕ್ಕೆ ಶುಕ್ರವಾರವೇ ಬಂದಿಳಿದಿರುವ ಬಾಂಬ್ ನಿಷ್ಕ್ರೀಯ ದಳ, ವಿಶೇಷ ಭದ್ರತಾ ತಂಡ ಶಾ ಅವರ ಆಗಮನ, ನಿರ್ಗಮನದ ಮಾರ್ಗ, ಹೆಲಿಪ್ಯಾಡ್, ವೇದಿಕೆ ಸೇರಿ ವಿವಿಧೆಡೆ ಪರಿಶೀಲನೆ ನಡೆಸಿತು. ಜೊತೆಗೆ ಎಸ್‌ಪಿ, ಐಜಿಪಿ ಅವರೊಂದಿಗೆ ಸಭೆ ನಡೆಸಿದರು.

ಶುಕ್ರವಾರ ಬೆಳಗ್ಗೆಯೇ ಮಾಜಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರ ನಿವಾಸದಲ್ಲಿ ಸ್ಥಳೀಯ ಮಟ್ಟದಲ್ಲಿಯೇ ಹೆಚ್ಚು ಅಭಿಮಾನಿಗಳನ್ನು ಕರೆತರುವ ಕುರಿತು ವಿಶೇಷ ಸಭೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ವಿವಿಧ ಮುಖಂಡರು ಉಪಸ್ಥಿತರಿದ್ದರು.

ಬಳಿಕ ನೇರ ಕಾರ್ಯಕ್ರಮ ಸ್ಥಳಕ್ಕೆ ಆಗಮಿಸಿದ ಬಿ.ವೈ.ವಿಜಯೇಂದ್ರ, ಸಂಸದ ಗೋವಿಂದ ಕಾರಜೋಳ ಇಡೀ ಕಾರ್ಯಕ್ರಮದ ಸಿದ್ಧತೆಯನ್ನು ಪರಿಶೀಲಿಸಿದರು. ಮಾಜಿ ಶಾಸಕರಾದ ಎಸ್.ಕೆ.ಬಸವರಾಜನ್, ಜಿ.ಎಚ್.ತಿಪ್ಪಾರೆಡ್ಡಿ, ಜಿಪಂ ಮಾಜಿ ಅಧ್ಯಕ್ಷೆ ಸೌಭಾಗ್ಯಾ ಬಸವರಾಜನ್, ನಾಗರಾಜ್ ಬೇದ್ರೆ, ದಗ್ಗೆ ಶಿವಪ್ರಕಾಶ್, ರವಿ ಮಡಿವಾಳ, ತಮೇಶ್ ಗೌಡ, ಕಿರಣ್ ಸೇರಿ ಅನೇಕರು ಇದ್ದರು.

### ಬಿಸಿ ಬಿಸಿ ಊಟ

ಬೆಂಗಳೂರಿನ ವಿಶ್ವನಾಥ್, ಗೋಪಾಲಯ್ಯ ನೇತೃತ್ವದ ತಂಡ ಊಟದ ವ್ಯವಸ್ಥೆ ಉಸ್ತುವಾರಿ ವಹಿಸಿಕೊಂಡಿದ್ದ ಅಡುಗೆ ತಯಾರಿ ಸ್ಥಳದಲ್ಲಿ ಬೀಡುಬಿಟ್ಟಿರುವ ಇವರು, ಸ್ವಯಂ ಸೇವಕರು, ಪಕ್ಷದ ಪ್ರಮುಖರು, ಪ್ರಧಾನ ಅಡುಗೆ ಭಟ್ಟರೊಂದಿಗೆ ನಿರಂತರ ಸಭೆ ನಡೆಸಿದರು. ಐದು ಮಂದಿ ಭಟ್ಟರಿಗೆ ಅಡುಗೆ ಗುತ್ತಿಗೆ ನೀಡಿದ್ದು, ಒಬ್ಬೊಬ್ಬರು ಒಂದೂವರೆ ಲಕ್ಷಕ್ಕೂ ಹೆಚ್ಚು ಮಂದಿಗೆ ಊಟ ತಯಾರಿಸಿದ ಅನುಭವಿಗಳಾಗಿದ್ದಾರೆ. ಒಬ್ಬೊಬ್ಬರ ನೇತೃತ್ವದಲ್ಲಿ ಒಂದು ವಿಭಾಗದಲ್ಲಿ ಅಡುಗೆ ತಯಾರಿ ಸಿದ್ಧತೆ ನಡೆಯಲಿದ್ದು, 25 ಕೌಂಟರ್‌ಗಳು ಸೇರಿ ಒಟ್ಟು ಐದು ವಿಭಾಗ, 125 ಕೌಂಟರ್‌ಗಳನ್ನು ತೆರೆಯಲಾಗಿದ್ದು, ನೂಕುನುಗ್ಗಲು ಆಗದ ರೀತಿ ಪೂರ್ವಸಿದ್ಧತೆ ಕೈಗೊಳ್ಳಲಾಗಿದೆ. ಶುಕ್ರವಾರ ಬೆಳಗ್ಗೆಯೇ ಸ್ಥಳಕ್ಕೆ ಬಂದಿರುವ ಅಡುಗೆ ಭಟ್ಟರು, ಸಿಬ್ಬಂದಿ ಎಲ್ಲರೂ 500ಕ್ಕೂ ಹೆಚ್ಚಿದ್ದು, ಇವರೆಲ್ಲರೂ ಊಟದ ಪೂರ್ಯ ತಯಾರಿ ಸಿದ್ಧತೆ ನಡೆಸುತ್ತಿದ್ದು ಗಮನಸೆಳೆಯಿತು.

### ಊಟದ ಮೆನು

ಮಧ್ಯಾಹ್ನ 12ಕ್ಕೆ ಊಟ ವಿತರಣೆ ಆರಂಭಗೊಂಡು ಕಾರ್ಯಕ್ರಮ ಮುಕ್ತಾಯದವರೆಗೂ ವಿತರಿಸಲಾಗುವುದು. 12ರಿಂದ 2 ಗಂಟೆ ವರೆಗೆ ಬಿಸಿಬೇಳೆ ಬಾತ್, ಮೊಸರನ್ನ, ಮೈಸೂರುಪಾಕ್, ಒಂದು ನೀರಿನ ಬಾಟಲಿ ವಿತರಿಸಲಾಗುವುದು. 2ರಿಂದ ಕಾರ್ಯಕ್ರಮದ ಮುಕ್ತಾಯದವರೆಗೆ ವೆಜಿಟೇಬಲ್ ಪಲಾವ್, ಮೊಸರನ್ನ, ಉಪ್ಪಿಟ್ಟು, ಒಂದು ನೀರಿನ ಬಾಟಲಿ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ.

### ನೇಗಿಲು ಗಿಫ್ಟ್

ರೈತಪರ ಚಳವಳಿ ಮೂಲಕ ರಾಜ್ಯದಲ್ಲಿ ಬಿಜೆಪಿಯನ್ನು ಹಳ್ಳಿ ಹಳ್ಳಿಗೂ ವಿಸ್ತರಿಸಿ ದಕ್ಷಿಣ ಭಾರತದಲ್ಲಿ ಅಧಿಕಾರ ತಂದ ಬಿ.ಎಸ್. ಯಡಿಯೂರಪ್ಪ ಅವರನ್ನು ರೈತನಾಯಕರೆಂದೇ ಪಕ್ಷದವರು ಗುರುತಿಸುವುದು. ಇದಕ್ಕೆ ಪೂರಕವಾಗಿ ಕೃಷಿ ಬಜೆಟ್ ಮಂಡಿಸಿದ್ದು ವಿಶೇಷ. ಈ ಹಿನ್ನೆಲೆಯಲ್ಲಿ 50 ವರ್ಷದ ರಾಜಕೀಯ ಹಾದಿ ಸವಿಸಿರುವ ಯಡಿಯೂರಪ್ಪ ಅವರಿಗೆ ನೇಗಿಲು ಕೊಟ್ಟು ವಿಶೇಷವಾಗಿ ಗೌರವಿಸಲು ಅಭಿಮಾನೋತ್ಸವದ ಸಂಘಟಕರು ಸಿದ್ಧತೆ ಮಾಡಿಕೊಂಡಿದ್ದಾರೆ.

ಯಡಿಯೂರಪ್ಪ ಮನೆಗೆ ಹೋದವರು ಖಾಲಿ ಹೊಟ್ಟೆಯಿಂದ ಮರಳಿದ್ದೇ ಇಲ್ಲ. ಆದ್ದರಿಂದ ಅವರನ್ನು ಗೌರವಿಸುವ ಅಭಿಮನೋತ್ಸವದಲ್ಲಿ ಪಾಲ್ಗೊಳ್ಳುವ ಯಾವೊಬ್ಬ ವ್ಯಕ್ತಿಯೂ ಹಸಿವಿನಿಂದ ಹಿಂತಿರುಗುಂತಿಲ್ಲ. ನಿರೀಕ್ಷೆಗೂ ಮೀರಿ ಜನರು ಆಗಮಿಸಿದರೇ ಊಟ ಸಿದ್ಧಗೊಳಿಸಲು ಹೆಚ್ಚುವರಿ ಸಾಮಾನು ಸಿದ್ಧಗೊಳಿಸುವಂತೆ ಅಡುಗೆ ಭಟ್ಟರಿಗೆ ಸೂಚಿಸಲಾಗಿದೆ.

■ **ವಿಶ್ವನಾಥ್, ಶಾಸಕ, ಬೆಂಗಳೂರು**

### ಪಾರ್ಕಿಂಗ್ ಸ್ಥಳಗಳು

ಮುರುಘಾ ಮಠದ ಸಮೀಪದ ಬಸವ ಪ್ರತಿಮೆ ನಿರ್ಮಾಣ ಜಾಗ, ಕಾರ್ಯಕ್ರಮ ಸ್ಥಳದ ಮುಂಭಾಗದ ವೀರಾಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ, ಎಸ್‌ಜೆಎಂ ಶಾಲೆ ಹೆಲಿಪ್ಯಾಡ್ ಮುಖ್ಯ ರಸ್ತೆಯ ಎಡ ಮತ್ತು ಬಲಭಾಗ, ವೇರ್‌ಹೌಸ್ ಹಿಂಭಾಗದ ಜಮೀನು, ಮಡಿವಾಳ ಮಾಚಿದೇವ ಮಠದ ಮುಂಭಾಗ, ಬೋವಿ ಗುರುಪೀಠದ ರಸ್ತೆ, ಟ್ರಕ್ ಟರ್ಮಿನಲ್ ಮತ್ತು ಅದರ ಪಕ್ಕದ ಖಾಲಿ ಲೇಔಟ್, ಬಾಲಮ್ಮ ಪೆಟ್ರೋಲ್ ಬಂಕ್‌ನಿಂದ ಓಜಸ್ ಹೋಟೆಲ್‌ವರೆಗೆ ಹಳೇ ರಾಷ್ಟ್ರೀಯ ಹೆದ್ದಾರಿ 4 ರ ಎರಡು ಬದಿ ವಾಹನಗಳ ನಿಲುಗಡೆ ವ್ಯವಸ್ಥೆ ಮಾಡಲಾಗಿದೆ.

# ಕಲ್ಯಾಣ ಪುರುಷ

## ನಿರ್ಲಕ್ಷಿತ ಜಿಲ್ಲೆಗಳಿಗೆ ನೆರವಿನ ಅಭಯಹಸ್ತ

# ಆಧುನಿಕ ಭಗೀರಥ ಯಡಿಯೂರಪ್ಪ

## ಬಯಲುಸೀಮೆ ಜನರ ದಾಹ ನೀಗಿಸಿದ ಅಭಿವೃದ್ಧಿಯ ಹರಿಕಾರ | ಧಾರ್ಮಿಕ ಕೇಂದ್ರಗಳಿಗೆ ಹೇರಳ ಅನುದಾನ

ಅಂದಾಜು ಹತ್ತು ವರ್ಷಗಳ ಹಿಂದಿನ ಘಟನೆ. ದೆಹಲಿಯಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಬೆಂಗಳೂರಿನ ವಿಮಾನ ನಿಲ್ದಾಣದತ್ತ ಪ್ರಯಾಣಿಸುತ್ತಿದ್ದೆವು. ಮಾರ್ಗ ಮಧ್ಯೆ ಮೊಬೈಲ್ ಕರೆ ಬಂತು. ಕರೆ ಮಾಡಿದವರು ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮುನ್ನ ಆಶೀರ್ವಾದ ಕೋರಿ ಕರೆ ಮಾಡುವುದು ಅವರ ಸಹಜ ಧಾರ್ಮಿಕ ಶ್ರದ್ಧೆಯ ಭಾಗವಾಗಿತ್ತು. ಆದರೆ, ಅಂದಿನ ಕರೆಯ ಉದ್ದೇಶ ವಿಭಿನ್ನವಾಗಿತ್ತು.

ಉಭಯ ಕುಶಲೋಪರಿಯ ನಂತರ ಅವರು, ಬುದ್ಧಿ, ನಾಳೆ ನಾನು ರಾಜ್ಯದ ಬಜೆಟ್ ಮಂಡಿಸಲಿದ್ದೇನೆ. ತಮ್ಮ ಆಶೀರ್ವಾದ ಬೇಕು. ಮಠಕ್ಕಾಗಿ ಏನಾದರೂ ಮಾಡಬೇಕೆಂದಿದ್ದೇನೆ. ಏನು ಮಾಡಲಿ ಎಂದು ಕೇಳಿದರು.

ಅವರ ಧಾರ್ಮಿಕ ನಿಷ್ಠೆ ನಿಷ್ಕಳಂಕವಾದದ್ದು. ರಾಜ್ಯದ ಮುಖ್ಯಮಂತ್ರಿಯಾಗಿ ಎಲ್ಲ ಸಮುದಾಯಗಳ ಧಾರ್ಮಿಕ ಸಂಸ್ಥೆಗಳಿಗೆ ಸಮಾನ ಮನೋಭಾವದಿಂದ ನೆರವು ನೀಡುತ್ತಾ ಬಂದವರು. ಆದರೂ ಮಠಕ್ಕಾಗಿ ಏನು ಮಾಡಲಿ ಎಂಬ ಪ್ರಶ್ನೆ ನಮಗೆ ಸಮಂಜಸವೆನಿಸಲಿಲ್ಲ.

ಮಠಕ್ಕೆ ಕಾಣಿಕೆ ಕೊಡಲು ಶಿಷ್ಯರಿದ್ದಾರೆ. ನೀವು ಸ್ವಜಾತಿಯ ಮಠಕ್ಕೆ ಸಹಾಯ ಮಾಡಿದರೆ ಕೆಟ್ಟ ಹೆಸರು ತೆಗೆದುಕೊಳ್ಳುತ್ತೀರಿ ಎಂದು ನಾವು ನೇರವಾಗಿ ಹೇಳಿದೆವು. ಕ್ಷಣಕಾಲ ಮೌನವಾದ ಯಡಿಯೂರಪ್ಪನವರು ಮತ್ತೆ ಅತ್ಯಂತ ವಿನಮ್ರವಾಗಿ, ಹಾಗಾದರೆ ನಾನೇನು ಮಾಡಲಿ ಎಂದು ಪ್ರಶ್ನಿಸಿದರು.

ಆ ಪ್ರಶ್ನೆಯಲ್ಲಿದ್ದ ಜನಪರ ಕಾಳಜಿ ನಮ್ಮ ಮನಸ್ಸನ್ನು ತಟ್ಟಿತು. ಅದೇ ಕ್ಷಣದಲ್ಲಿ ನಮ್ಮ ಕಣ್ಮುಂದೆ ಮೂಡಿದ್ದು ಬೇಸಿಗೆಯ ಮುಂಜಾನೆ ಕಂಡ ದೃಶ್ಯ. ಮಠದ ಪಕ್ಕದ ರಸ್ತೆಯಲ್ಲಿ ಮಹಿಳೆಯರು ಬಿಂದಿಗೆ ಹಿಡಿದು ಬೀದಿ ನಲ್ಲಿಗಳ ಬಳಿ ಸಾಲಾಗಿ ನಿಂತಿದ್ದ ಚಿತ್ರ. ಸಿರಿಗೆರೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಕುಡಿಯುವ ನೀರಿನ ಸಂಕಷ್ಟ.

ತಕ್ಷಣವೇ ನಾವು, ಸಿರಿಗೆರೆ ಮತ್ತು ಸುತ್ತಮುತ್ತಲಿನ 50–60 ಹಳ್ಳಿಗಳಿಗೆ ಕುಡಿಯುವ ನೀರಿನ ತೊಂದರೆ ಇದೆ. ಚನ್ನಗಿರಿ ತಾಲೂಕಿನ ಸೂಳೆಕೆರೆಯಿಂದ ನೀರು ಪೂರೈಕೆ ಮಾಡುವ ಯೋಜನೆ ಮಂಜೂರು ಮಾಡಿದರೆ ಅದು ದೊಡ್ಡ ಪುಣ್ಯಕಾರ್ಯವಾಗುತ್ತದೆ ಎಂದು ಮನವಿ ಮಾಡಿದೆವು.

ಯಡಿಯೂರಪ್ಪ ಕ್ಷಣವೂ ತಡಮಾಡಲಿಲ್ಲ. ಹಾಗೆಯೇ ಆಗಲಿ. ತಮ್ಮ ಅಪೇಕ್ಷೆಯಂತೆ ಮಾಡು ತ್ತೇನೆ ಎಂದು ಭರವಸೆ ನೀಡಿದರು.

ಅದು ರಾಜಕಾರಣಿಗಳ ಸಾಮಾನ್ಯ ಭರವಸೆ ಯಾಗಿರಲಿಲ್ಲ. ಮರು ದಿನವೇ ವಿಧಾನಸಭೆಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಆ ಕುಡಿಯುವ ನೀರಿನ ಯೋಜನೆಗೆ 25 ಕೋಟಿ ರೂಪಾಯಿ ಮೀಸಲಿಟ್ಟರು. ನಂತರ ಯೋಜನೆ ವಿಸ್ತಾರ ಗೊಂಡು ಅನೇಕ ಹಳ್ಳಿಗಳು ಸೇರಿ ಅದರ ಮೊತ್ತ 80 ಕೋಟಿ ರೂಪಾಯಿಗಳಿಗೆ ಏರಿತು. ಆರಂಭದಲ್ಲಿ ಕೊಳವೆ ಬಾವಿಗಳ ಮೇಲೆ ಅವಲಂಬಿತವಾಗಿದ್ದ ಗ್ರಾಮಗಳಿಗೆ ಈ ಯೋಜನೆಯ ಮಹತ್ವ ಅಷ್ಟಾಗಿ ತಿಳಿದಿರಲಿಲ್ಲ. ಆದರೆ, ಇಂದು ಅಂತರ್ಜಲ ಬತ್ತುತ್ತಿರುವ ಸಂದರ್ಭದಲ್ಲಿ ಈ ಯೋಜನೆ ಇಲ್ಲದೇ ಇದ್ದರೆ ಏನಾಗುತ್ತಿತ್ತೋ ಎಂದು ಜನರು ಆತಂಕದಿಂದ ನೆನಪಿಸಿಕೊಳ್ಳುತ್ತಿದ್ದಾರೆ.

ಯಡಿಯೂರಪ್ಪನವರೊಂದಿಗೆ ನಮ್ಮ ಸಂಬಂಧ ಇಂದಿನದಲ್ಲ. 1985ರಲ್ಲಿ ಶಿಕಾರಿಪುರದಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಅವರು ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾಗಿದ್ದರು. ಅಂದಿನಿಂದಲೇ ಆತ್ಮೀಯ ನಂಟು ಬೆಳೆದಿದೆ.

ವಿರೋಧ ಪಕ್ಷದಲ್ಲಿದ್ದಾಗಲೂ, ಆಡಳಿತ ಪಕ್ಷದಲ್ಲಿದ್ದಾಗಲೂ, ಸಚಿವರಾಗಿದ್ದಾಗಲೂ, ಮಾಜಿ ಮುಖ್ಯಮಂತ್ರಿಯಾಗಿದ್ದಾಗಲೂ ನಮ್ಮ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳಿಗೆ ಅವರು ನಿರಂತರ ಸಹಕಾರ ನೀಡುತ್ತಾ ಬಂದಿದ್ದಾರೆ.

ಯಡಿಯೂರಪ್ಪ ಕನ್ನಡ ನಾಡು ಕಂಡ ಅಪ್ರತಿಮ ರೈತಪರ ಹೋರಾಟಗಾರ. ಜನರ ಮಧ್ಯೆ ಬೆಳೆದ ನಾಯಕ. ರೈತರ ನೋವು, ಗ್ರಾಮೀಣ ಬದುಕಿನ ಸಂಕಷ್ಟ ಹಾಗೂ ನೀರಿನ ಅಗತ್ಯವನ್ನು ಹತ್ತಿರದಿಂದ ಅರಿತವರು.

ಅದರ ಫಲವೇ ರಾಜ್ಯದ ಅನೇಕ ಭಾಗಗಳಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳಿಗೆ ಅವರು ನೀಡಿದ ಉತ್ತೇಜನ. ಉಬ್ರಾಣಿ ಅಮೃತಾಪುರ, ರಾಜನಹಳ್ಳಿ, ಸಾಸ್ವೆಹಳ್ಳಿ, ಅಣಜಿ, ಬುಡಪನಹಳ್ಳಿ, ಜಗಳೂರು, ಭರಮಸಾಗರ ಹೀಗೆ ಅನೇಕ ಏತನೀರಾವರಿ ಯೋಜನೆ ಗಳಿಗೆ ಅಂತಿಮ ಹಂತದಲ್ಲಿ ಕೋಟ್ಯಂತರ ರೂಪಾಯಿ ಬಿಡುಗಡೆ ಮಾಡಿ ಕಾಮಗಾರಿಗಳಿಗೆ ಜೀವ ತುಂಬಿದವರು.

ಒಂದು ಹಂತದಲ್ಲಿ 1,220 ಕೋಟಿ ರೂಪಾಯಿ ಮೊತ್ತದ ಜಗಳೂರು, ಭರಮಸಾಗರ ಯೋಜನೆಯನ್ನು 225 ಕೋಟಿಗೆ ಸೀಮಿತ ಗೊಳಿಸಲಾಗಿತ್ತು. ಅದು ನಮಗೆ ಬೇಸರ ಉಂಟುಮಾಡಿತ್ತು. ಆದರೆ, ನಮ್ಮ ಒತ್ತಾಸೆಗೆ ಸ್ಪಂದಿಸಿದ ಅವರು ಒಂದೇ ವಾರದಲ್ಲಿ ಆ ಆದೇಶ ಹಿಂಪಡೆದು ಸಂಪೂರ್ಣ ಅನುದಾನ ಮಂಜೂರು ಮಾಡಿದರು.

ಇಂದು ಆ ಭಾಗದ ನೂರಾರು ಕೆರೆಗಳಿಗೆ ತುಂಗಭದ್ರೆಯ ನೀರು ಹರಿಯುವ ಕನಸು ನನಸಾಗುವ ಹಂತದಲ್ಲಿದೆ. ಶತಮಾನಗಳಿಂದ ಬರಗಾಲದ ಬೇಗೆಯಲ್ಲಿ ಬೇಸತ್ತ ಜನರು ಹೊಸ ಆಶಾಭರವಸೆಯಿಂದ ಬದುಕು ಕಟ್ಟಿಕೊಳ್ಳುತ್ತಿದ್ದಾರೆ.

ನೀರಿಗಾಗಿ ಕಾಯುತ್ತಿದ್ದ ಹಳ್ಳಿಗಳಿಗೆ ಜೀವಜಲ ಒದಗಿಸಿದ ಕಾರಣಕ್ಕೇ ಯಡಿಯೂರಪ್ಪರನ್ನು ಆಧುನಿಕ ಭಗೀರಥ ಎಂದು ಕರೆಯುವುದು ಅತಿಶಯೋಕ್ತಿಯಲ್ಲ.

- ಸಿರಿಗೆರೆ ಸುತ್ತಲಿನ 50-60 ಹಳ್ಳಿಗಳಿಗೆ ಜೀವಜಲ
- ಬಜೆಟ್‌ನಲ್ಲಿ 25 ಕೋಟಿ ರೂ. ಘೋಷಣೆ
- ಬಳಿಕ 80 ಕೋಟಿ ರೂ.ಗೆ ವಿಸ್ತರಿಸಿದ ಯೋಜನೆ
- ಅಂತರ್ಜಲ ಬತ್ತಿದಾಗ ಆಸರೆಯಾದ ನೀರಿನ ಯೋಜನೆ
- 1985ರಿಂದಲೇ ತರಳಬಾಳು ಮಠದ ಆತ್ಮೀಯ ನಂಟು
- ರೈತಪರ, ಜನಪರ ನಾಯಕ
- ಜಗಳೂರು-ಭರಮಸಾಗರ ಸೇರಿ ಹಲವು ಏತನೀರಾವರಿ ಯೋಜನೆಗಳಿಗೆ ಬೆಂಬಲ
- ಕೋಟ್ಯಂತರ ರೂ. ಬಿಡುಗಡೆ ಮಾಡಿ ಕಾಮಗಾರಿಗೆ ವೇಗ
- ನೂರಾರು ಕೆರೆಗಳಿಗೆ ತುಂಗಭದ್ರೆಯ ನೀರು ಹರಿಸುವ ಸಂಕಲ್ಪ

### ಸಿರಿಗೆರೆ ಭಾಗಕ್ಕೆ ನೀರಿನ ಯೋಜನೆ

ಮುಖ್ಯಮಂತ್ರಿಯಾಗಿದ್ದ ವೇಳೆ ಬಿ.ಎಸ್.ಯಡಿಯೂರಪ್ಪ ಅವರು ಸಿರಿಗೆರೆ ಹಾಗೂ ಸುತ್ತಮುತ್ತಲಿನ 50–60 ಹಳ್ಳಿಗಳಿಗೆ ಸೂಳೆಕೆರೆಯಿಂದ ಕುಡಿಯುವ ನೀರು ಪೂರೈಕೆ ಮಾಡುವ ಯೋಜನೆಗೆ ಬಜೆಟ್‌ನಲ್ಲಿ 25 ಕೋಟಿ ರೂ. ಘೋಷಣೆ ಮಾಡಿದ್ದರು. ಬಳಿಕ ಯೋಜನೆ 80 ಕೋಟಿ ರೂಪಾಯಿಗೆ ವಿಸ್ತರಣೆಗೊಂಡಿತು.

### ಮಠಕ್ಕೆ ಅಲ್ಲ, ಜನರಿಗೆ

ಮಠಕ್ಕಾಗಿ ಏನು ಮಾಡಲಿ ಎಂದು ಯಡಿಯೂರಪ್ಪ ಕೇಳಿದಾಗ, ಮಠಕ್ಕೆ ಕಾಣಿಕೆ ಕೊಡಲು ಶಿಷ್ಯರಿದ್ದಾರೆ; ಜನರಿಗೆ ಉಪಯೋಗವಾಗುವ ಕೆಲಸ ಮಾಡಲು ಸಲಹೆ ನೀಡಿದ್ದೆವು. ಅದರಂತೆ ಕುಡಿಯುವ ನೀರಿನ ಯೋಜನೆಗೆ ಸರ್ಕಾರ ಅನುಮೋದನೆ ನೀಡಿತ್ತು ಎಂಬ ಘಟನೆ ಸ್ಮರಣೀಯ.

ಡಾ. ಶ್ರೀ ಶಿವಮೂರ್ತಿ ಶಿವಮೂರ್ತಿ ಸ್ವಾಮೀಜಿ

**ಲೇಖನ**

■ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
| ಪೀಠಾಧ್ಯಕ್ಷರು, ತರಳಬಾಳು ಸದ್ಧರ್ಮ ಮಠ, ಸಿರಿಗೆರೆ

ಬಿ.ಎಸ್.ವೈ. ಪುರ ಪ್ರವೇಶಕ್ಕೆ ಪ್ರಬಂಧಕರಾಗಿ ಹೊಸದುರ್ಗ ತಾಲೂಕಿನಿಂದ ಇನ್ನೂರಕ್ಕೂ ಹೆಚ್ಚು ಜನರು ಶುಕ್ರವಾರ ಮಧ್ಯಾಹ್ನ ಚಿತ್ರದುರ್ಗಕ್ಕೆ ತೆರಳಿದರು.

## ಅಭಿಮಾನೋತ್ಸವಕ್ಕೆ ತೆರಳಿದ ಶಿವು ಮಠ ತಂಡ

**ಹೊಸದುರ್ಗ:** ಮೇ 9ರ ಶನಿವಾರದಂದು ಚಿತ್ರದುರ್ಗ ನಗರದ ಮದಾರ ಚನ್ನಯ್ಯ ಗುರುಪೀಠದ ಸಮೀಪ ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಅಭಿ ಮಾನೋತ್ಸವ ಕಾರ್ಯಕ್ರಮಕ್ಕೆ ತಾಲೂಕಿನಿಂದ ಬಿಜೆಪಿ ಮುಖಂಡ ಶಿವರಾಜ್ ಕುಮಾರ್ (ಶಿವು ಮಠ) ನೇತೃತ್ವದಲ್ಲಿ ಇನ್ನೂರಕ್ಕೂ ಹೆಚ್ಚು ಜನರು ಶುಕ್ರವಾರ ಮಧ್ಯಾಹ್ನ ಚಿತ್ರದುರ್ಗ ನಗರಕ್ಕೆ ತೆರಳಿದರು.

ಇದಕ್ಕೂ ಮುನ್ನ ಪಟ್ಟಣದಲ್ಲಿ ಬಿಜೆಪಿ ಮುಖಂಡ ಶಿವರಾಜ್ ಕುಮಾರ್ (ಶಿವು ಮಠ) ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ನಾಡಿನ ಧೀಮಂತ ನಾಯಕ, ರೈತ ಬಂಧು, ಮಾಜಿ ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪನವರು 50 ವರ್ಷದ ಸಾರ್ಥಕ ರಾಜಕೀಯ ಪಯಣ ಮುಗಿಸಿದ್ದು, ಈ ಹಿನ್ನೆಲೆಯಲ್ಲಿ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ರಾಜ್ಯ ಬಿಜೆಪಿ ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ರವರ ನೇತೃತ್ವದಲ್ಲಿ ಪುರ ಪ್ರವೇಶ ಕಾರ್ಯಕ್ರಮ ನಡೆಯುತ್ತಿದ್ದು, ಯಡಿಯೂರಪ್ಪನವರ ಆಗಮನಕ್ಕೆ 300 ಮಂದಿ ಮಹಿಳೆಯರು ಒನಕೆ ಓಬವ್ವನ ವೇಷದಲ್ಲಿ ಬರಲಿದ್ದಾರೆ. 300 ರಿಂದ 400 ರೈತರು ನೇಗಿಲು ಹೊತ್ತು ಪಾಲ್ಗೊಳ್ಳಲಿದ್ದಾರೆ. ರೈತರು ಮತ್ತು ಮಹಿಳೆಯರಿಗೆ ರಕ್ಷಣೆ ನೀಡಲು ಪ್ರಬಂಧಕರಾಗಿ ಹೊಸದುರ್ಗದಿಂದ ನಮ್ಮ ತಂಡ ತೆರಳುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಅರೇಹಳ್ಳಿ ಸುರೇಶ್, ಮತ್ತೋಡು ತಿಪ್ಪೇಸ್ವಾಮಿ, ಅಂಜಿನಪ್ಪ, ಪೂಜಾರ್ ಪರಮೇಶ್ವರಪ್ಪ ಮತ್ತು ಸಣ್ಣ ಕರಿಯಪ್ಪ ಸೇರಿದಂತೆ ಇತರರಿದ್ದರು.



# ಕಲ್ಯಾಣ ಪುರುಷ

## ನಿರ್ಲಕ್ಷಿತ ಜಿಲ್ಲೆಗಳಿಗೆ ನೆರವಿನ ಅಭಯಹಸ್ತ

# ಸೇವೆ, ಸಿದ್ಧಾಂತ ಮತ್ತು ಸಂಘಟನೆ: ಯಡಿಯೂರಪ್ಪ ಎಂಬ ಶಕ್ತಿ

2006ರ ಫೆಬ್ರವರಿ, ರಾಜ್ಯದ ರೈತರ ಸಂಕಷ್ಟ ಮತ್ತು ನೀರಾವರಿ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯಲು, ಬೆಂಗಳೂರು ನಗರದಲ್ಲಿರುವ ವಿಧಾನಸೌಧ ಮುಂಭಾಗದಲ್ಲಿ ಒಬ್ಬ ನಾಯಕ ಕೈಗೊಂಡ ನಿರ್ಧಾರ ರಾಜ್ಯ ರಾಜಕೀಯದ ದಿಕ್ಕನ್ನೇ ಬದಲಿಸಿತು. ರೈತರ ಬೇಡಿಕೆಗಳಿಗೆ ಸ್ಪಂದನೆ ಸಿಗಬೇಕು ಎಂಬ ಧ್ಯೇಯದೊಂದಿಗೆ ಅನಿರ್ದಿಷ್ಟಾವಧಿಯ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಅದು ಕೇವಲ ರಾಜಕೀಯ ಕ್ರಮವಾಗಿರಲಿಲ್ಲ ಜನರ ನೋವಿಗೆ ಧ್ವನಿಯಾಗಿದ್ದ ಹೋರಾಟ. ಅಂತಹ ಧೀಮಂತ ನಾಯಕನೇ ಬಿ.ಎಸ್. ಯಡಿಯೂರಪ್ಪ.

ಅಂದು ಮಾಡಿದ ಉಪವಾಸವು ಕೇವಲ ಒಂದು ದಿನದ ಸುದ್ದಿಯಾಗಿಯೇ ಉಳಿಯಲಿಲ್ಲ; ಬದಲಾಗಿ ರಾಜ್ಯದ ರಾಜಕೀಯದಲ್ಲಿ ಪ್ರಬಲವಾದ ಸಂದೇಶ ನೀಡಿತು. ಜನರ ಸಮಸ್ಯೆಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ರೈತರ ನೋವು, ನೀರಿನ ಅಭಾವ, ಬೆಳೆ ಹಾನಿ ಇವೆಲ್ಲವು ಕೇವಲ ಅಂಕಿಅಂಶಗಳಲ್ಲ, ಬದುಕಿನ ಪ್ರಶ್ನೆಗಳು. ಯಡಿಯೂರಪ್ಪನವರು ಈ ವಿಚಾರವನ್ನು ರಾಜಕೀಯದ ಕೇಂದ್ರಬಿಂದುವಾಗಿಸಿದರು. ಜನರ ಸಂಕಷ್ಟನ್ನು ತಮ್ಮದೇ ನೋವಿನಂತೆ ತೆಗೆದುಕೊಂಡ ನಾಯಕತ್ವವೇ ಅವರಿಗೆ ವಿಶಿಷ್ಟತೆ ನೀಡಿತು.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಯಡಿಯೂರಪ್ಪ ಎಂಬ ಹೆಸರು ಕೇವಲ ವ್ಯಕ್ತಿಯ ಗುರುತು ಅಲ್ಲ ಬದಲಾಗಿ ಒಂದು ಚಳವಳಿ ಎಂದು ಹೇಳಿದರೆ ತಪ್ಪಾಗಲಾರದು. ಹಳ್ಳಿಯ ಮಣ್ಣಿನಿಂದ ಹುಟ್ಟಿದ ನಾಯಕತ್ವವು ಹೇಗೆ ರಾಜ್ಯದ ಭವಿಷ್ಯವನ್ನು ರೂಪಿಸಬಹುದು ಎಂಬುದಕ್ಕೆ ಅವರು ಜೀವಂತ ಉದಾಹರಣೆ. ಶಿಕಾರಿಪುರದಂತಹ ಸಣ್ಣ ಪಟ್ಟಣದಿಂದ ಪ್ರಾರಂಭವಾದ ಅವರ ಪಯಣ, ರಾಜ್ಯದ ಅಗ್ರಪಂಕ್ತಿಯ ನಾಯಕತ್ವದವರೆಗೆ ಸಾಗಿದ್ದು ಸುಲಭದ ಕಥೆಯಲ್ಲ ಅದು ಪರಿಶ್ರಮ, ತ್ಯಾಗ ಮತ್ತು ಅಚಲ ನಂಬಿಕೆಯ ಫಲ.

### ರೈತರ ಉನ್ನತಿಯೇ ಅವರ ಧ್ಯೇಯವಾಗಿತ್ತು

ಅವರ ಆಡಳಿತದ ಶೈಲಿ ಅಭಿವೃದ್ಧಿಗೆ ಮಾತ್ರ ಸೀಮಿತವಾಗಿರಲಿಲ್ಲ ಅದು ಮಾನವೀಯತೆಯೊಂದಿಗೆ ಕೂಡಿಕೊಂಡಿತ್ತು. ರೈತರ ಹಿತಾಸಕ್ತಿಗಾಗಿ ಕೈಗೊಂಡ ಕ್ರಮಗಳು, ನೀರಾವರಿ ಯೋಜನೆಗಳಿಗೆ ನೀಡಿದ ಆದ್ಯತೆ, ಗ್ರಾಮೀಣ ಅಭಿವೃದ್ಧಿಗೆ ಒತ್ತು ಇವೆಲ್ಲವೂ ಅವರ ದೃಷ್ಟಿಯ ವ್ಯಾಪ್ತಿಯನ್ನು ತೋರಿಸುತ್ತವೆ. ಅಭಿವೃದ್ಧಿಯ ಅರ್ಥವನ್ನು ಅವರು ಪುನರ್‌ವ್ಯಾಖ್ಯಾನಿಸಿದರು. ಅದು ಕೇವಲ ಮೂಲಸೌಕರ್ಯಗಳ ನಿರ್ಮಾಣವಲ್ಲ ಜನರ ಜೀವನಮಟ್ಟವನ್ನು ಮೇಲೇಳಿಸುವ ಪ್ರಕ್ರಿಯೆ. ಯಡಿಯೂರಪ್ಪ ಅವರ ನಾಯಕತ್ವದಲ್ಲಿ ಸಂಘಟನೆಯ ಪಾತ್ರವೂ ಅತಿ ಮುಖ್ಯವಾಗಿದೆ. ಅವರು ಕೇವಲ ಆಡಳಿತಗಾರರಲ್ಲ ಸಂಘಟಕರೂ ಹೌದು. ಕಾರ್ಯಕರ್ತರನ್ನು ಪ್ರೇರೇಪಿಸುವುದು, ಅವರಿಗೆ ಮಾರ್ಗದರ್ಶನ ನೀಡುವುದು ಮತ್ತು ಪ್ರತಿಯೊಬ್ಬರನ್ನೂ ಜೊತೆಗೊಳ್ಳುವಂತೆ ಮಾಡುವುದು ಇವು ಅವರ ರಾಜಕೀಯ ಶೈಲಿಯ ಪ್ರಮುಖ ಅಂಶಗಳು. ಸಂಘಟನೆಯ ಬಲವೇ ರಾಜಕೀಯದ ನೆಲೆಯಾಗಿದೆ ಎಂಬುದನ್ನು ಅವರು ತೋರಿಸಿದ್ದಾರೆ. ರಾಜಕೀಯದಲ್ಲಿ, ರಾಷ್ಟ್ರದ ಅಭಿವೃದ್ಧಿಪಥದಲ್ಲಿ ಸಾಗಬೇಕೆಂದುಕೊಂಡಿರುವ ಯುವ ಸಮೂಹಕ್ಕೆ ಬಿಎಸ್‌ವೈ ನಡೆದಾಡುವ ಪಾಠಶಾಲೆ. ನಾಯಕತ್ವವೆಂದರೆ ಕೇವಲ ನಿರ್ಧಾರಗಳನ್ನು ತೆಗೆದುಕೊಳ್ಳುದಲ್ಲ, ಜನರ ವಿಶ್ವಾಸವನ್ನು ಗಳಿಸುವ ಪ್ರಕ್ರಿಯೆ. ಈ ವಿಶ್ವಾಸವನ್ನು ಗಳಿಸಲು ವರ್ಷಗಳ ಪರಿಶ್ರಮ ಬೇಕು. ಜನರ ನಡುವೆ ನಿರಂತರವಾಗಿ ಕೆಲಸ ಮಾಡುವುದು, ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು, ಮತ್ತು ಅವರಿಗೆ ಪರಿಹಾರ ನೀಡುವುದು ಇವೆಲ್ಲವೂ ನಾಯಕತ್ವದ ಅವಿಭಾಜ್ಯ ಭಾಗಗಳು. ರಾಜಕೀಯವು ಸೇವೆಯ ಸಾಧನವಾಗಿರಬೇಕು ಎಂಬ ಸಂದೇಶವನ್ನು ಅವರು ತಮ್ಮ ಜೀವನದಿಂದಲೇ ನೀಡಿದ್ದಾರೆ. ಜನರ ವಿಶ್ವಾಸವನ್ನು ಗಳಿಸುವುದು ಕಷ್ಟ; ಆದರೆ ಅದನ್ನು ಕಾಪಾಡುವುದು ಇನ್ನಷ್ಟು ಕಠಿಣ. ಅವರು ಈ ಎರಡನ್ನೂ ಯಶಸ್ವಿಯಾಗಿ ಸಾಧಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

### ವ್ಯಕ್ತಿ ಮೀರಿದ ಶಕ್ತಿ ಬಿಎಸ್‌ವೈ

ಯಡಿಯೂರಪ್ಪನವರು ವ್ಯಕ್ತಿಯ ಮೀರಿದ ಒಂದು ಶಕ್ತಿ. ಅವರು ಕಟ್ಟಿದ ನಂಬಿಕೆ, ರೂಪಿಸಿದ ಮಾರ್ಗ, ಬೆಳೆಸಿದ ನಾಯಕತ್ವ ಇವೆಲ್ಲವೂ ಮುಂದಿನ ಪೀಳಿಗೆಗೆ ದಿಕ್ಕು ತೋರಿಸುತ್ತವೆ. ಅವರ ಹಾದಿಯಲ್ಲಿ ನಡೆಯುವುದು ಎಂದರೆ, ಮೌಲ್ಯಗಳನ್ನು ಕಾಪಾಡುತ್ತಾ ಹೊಸ ದಿಕ್ಕುಗಳನ್ನು ಅನ್ವೇಷಿಸುವುದು. ನಾವು ಹೊಸ ಆಲೋಚನೆಗಳನ್ನು ಸೇರಿಸಬಹುದು, ಹೊಸ ವಿಧಾನಗಳನ್ನು ಅನುಸರಿಸಬಹುದು ಆದರೆ ಮೂಲ ಮೌಲ್ಯಗಳನ್ನು ಕಾಪಾಡುವುದು ಅತ್ಯಂತ ಮುಖ್ಯ. ರಾಜಕೀಯದಲ್ಲಿ ಸಿದ್ಧಾಂತಗಳ ಮಹತ್ವವನ್ನು ಅವರು ಸದಾ ಒತ್ತಿ ಹೇಳಿದ್ದಾರೆ. ಸಿದ್ಧಾಂತವಿಲ್ಲದ ರಾಜಕೀಯವು ದಿಕ್ಕು ಇಲ್ಲದ ನೌಕೆಯಂತೆ. ಜನರ ಅಗತ್ಯತೆಗಳನ್ನು, ಅವರ ವಿಶ್ವಾಸವನ್ನು, ಮತ್ತು ಅವರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನಡೆಯುವ ರಾಜಕೀಯವೇ ಶಾಶ್ವತ. ಈ ದಿಕ್ಕಿನಲ್ಲಿ ಯಡಿಯೂರಪ್ಪ ಅವರ ಕೊಡುಗೆ ಅಪಾರ.

### ರೈತರ, ಮಹಿಳೆಯರ, ಬಡವರ ಕಲ್ಯಾಣಕ್ಕೆ ಬಿಎಸ್‌ವೈ ಪ್ರೇರಣೆ

ಕರ್ನಾಟಕದ ಆಡಳಿತದಲ್ಲಿ ರೈತರ ಪರವಾದ ಸ್ಪಷ್ಟ ದೃಷ್ಟಿಕೋನವನ್ನು ತಂದ ಪ್ರಮುಖ ನಾಯಕರಲ್ಲಿ ಬಿಎಸ್‌ವೈ ಅವರು ಅಗ್ರಗಣ್ಯರು. ದೇಶದಲ್ಲೇ ಪ್ರತ್ಯೇಕ ಕೃಷಿ ಬಜೆಟ್ ಪರಿಚಯಿಸಿದ ಮುಂಚೂಣಿಯ ನಾಯಕತ್ವ ಅವರದ್ದು. ರೈತರ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸಲು ಹಾಗೂ ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಲು ಪಂಪ್‌ಸೆಟ್ ಸಬ್ಸಿಡಿ ಸೇರಿದಂತೆ ಹಲವು ಯೋಜನೆಗಳನ್ನು ಬಲಪಡಿಸಿ, ಕೃಷಿಗೆ ದೃಢವಾದ ಆಧಾರವನ್ನು ನಿರ್ಮಿಸಿದರು. ಅವರ ರೈತಪರ ಚಿಂತನೆಗೆ ಪ್ರೇರಣೆಯಾಗಿ ಇಂದು ಅನೇಕ ಜಿಲ್ಲೆಗಳಲ್ಲಿ ಡ್ರೋನ್ ತಂತ್ರಜ್ಞಾನವನ್ನು ರೈತರ ಸೇವೆಗೆ ಪರಿಚಯಿಸಲಾಗಿದೆ. ಬೆಳೆ ಮೇಲ್ವಿಚಾರಣೆ, ಔಷಧಿ ಸಿಂಪಡಣೆ ಮತ್ತು ಉತ್ಪಾದಕತೆ ಹೆಚ್ಚಿಸುವ ದಿಕ್ಕಿನಲ್ಲಿ ಈ ನವೀನ ಪ್ರಯತ್ನ ಕೈಗೊಳ್ಳಲಾಗಿದೆ.

**"ನಾನು ನನ್ನ ರಾಜಕೀಯ ಜೀವಮಾನದಲ್ಲಿ ಕಂಡ ಅತ್ಯಂತ ಶ್ರೇಷ್ಠ ನಾಯಕರು. ನುಡಿದಂತೆ ನಡೆಯುವ, ಒಮ್ಮೆ ಮಾತು ಕೊಟ್ಟರೆ ಅದನ್ನು ಕಾರ್ಯರೂಪಕ್ಕೆ ತರುವ ಛಲಗಾರರು. ಸಂಕೀರ್ಣ ಪರಿಸ್ಥಿತಿಯಲ್ಲೂ ಕುಸಿಯದೇ ಮುಂದುವರಿಯುವ ಗುಣ, ಅವರನ್ನು ಶ್ರೇಷ್ಠ ಛಲಗಾರರನ್ನಾಗಿ ರೂಪಿಸಿದೆ.**

## ಪಕ್ಷಭೇದ ನೋಡದೆ ಎಲ್ಲ ಶಾಸಕರನ್ನು ಸಮಾನವಾಗಿ ಕಾಣುವ ನಾಯಕ,

# 'ಸವ್ಯಸಾಚಿ–ಸರ್ವವ್ಯಾಪಿ' ಮಹಾನಾಯಕ

■ ಓರ್ವೆಲ್ಲ್ ಫರ್ನಾಂಡೀಸ್

ಅವರನ್ನು ಕೇವಲ ರಾಜಕೀಯ ನಾಯಕರಂದಷ್ಟೇ ನೋಡಬಾರದು, ಅವರ ಜೀವನ, ಅವರ ಶಿಸ್ತು, ಕಲಿಕೆಯ ಅಭ್ಯಾಸ, ದೃಢ ನಿರ್ಧಾರಗಳು, "ರಾಜಕೀಯ, ನಾಯಕತ್ವ, ಸಂಘಟನೆ" ಹೀಗೆ ಎಲ್ಲವನ್ನೂ ಕಾಣುವ ಅಭ್ಯಸಿಸುವ ಒಂದು ಶ್ರೇಷ್ಠ ಅಧ್ಯಯನ ಕೇಂದ್ರವಾಗಿದ್ದಾರೆ. ಅದಕ್ಕಾಗಿ ಅವರು "ಸವ್ಯಸಾಚಿ–ಸರ್ವವ್ಯಾಪಿ" ಇದಕ್ಕಿಂತ ನಾನೂ ಹೆಚ್ಚು ಹೇಳಲಾರೇ..,

ರಾಜ್ಯ ಕಂಡ ಶ್ರೇಷ್ಠ ಮುತ್ಸದ್ದಿ ರಾಜಕಾರಣಿ ಬಿ.ಎಸ್.ಯಡಿಯೂರಪ್ಪ ಅವರ ಕುರಿತು ಹಳಿಯಾಳ ಕ್ಷೇತ್ರದ ಮಾಜಿ ಶಾಸಕ, ಬಿಜೆಪಿ ಮುಖಂಡ ಸುನೀಲ ಹೆಗಡೆಯವರು ವ್ಯಕ್ತಪಡಿಸಿದ ಅಭಿಮಾನ ಹಾಗೂ ಗೌರವದ ತುಂಬು ಹೃದಯದ ನುಡಿಗಳಿವು.ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವದ ಸಮಾರಂಭಕ್ಕಾಗಿ ನಾಡಿನ ಹಿರಿಯ ಪತ್ರಿಕೆ ಸಂಯುಕ್ತ ಕರ್ನಾಟಕದೊಂದಿಗೆ ಅವರು ತಮ್ಮ ಅಭಿಪ್ರಾಯ ಹಂಚಿಕೊಂಡರು.

ನಾನು ವಿಧಾನ ಸಭೆಯಲ್ಲಿ ಮೊದಲ ಬಾರಿ ಶಾಸಕನಾಗಿ ಪ್ರವೇಶಿದಾಗ ಅಂದೂ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ನನಗೆ ನೀಡಿದ ಸಹಕಾರ, ಮಾರ್ಗದರ್ಶನ ಮರೆಯಲು ಅಸಾಧ್ಯ. ನಾನು ಜೆಡಿಎಸ್ ಪಕ್ಷದಿಂದ ಶಾಸಕನಾಗಿ ಆಯ್ಕೆಯಾಗಿದ್ದೆ, ಆದರೆ ಯಡಿಯೂರಪ್ಪ ಅವರು ಒಮ್ಮೆಯೂ ತಾರತಮ್ಯ ಮಾಡಿದನ್ನು ನಾನು ಕಂಡಿಲ್ಲ. ಹಳಿಯಾಳ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಯೋಜನೆಗಳನ್ನು ಮಾಡುವಾಗ ಸ್ಥಳೀಯ ಶಾಸಕನಾಗಿದ್ದ ನನ್ನನ್ನು ಸಂಪರ್ಕಿಸಿಯೇ ಚರ್ಚಿಸಿಯೇ ನಿರ್ಧಾರ ತೆಗೆದುಕೊಳ್ಳುವಂತೆ ಖುದ್ದು ಅವರೇ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಸೂಚಿಸಿದ್ದರು ಎಂದು ಸ್ಮರಿಸಿಕೊಂಡರು.

### ಮಾತಿನಂತೆ ನಡೆಯುವ ನಾಯಕ

ನಾನು ಬಿಜೆಪಿಗೆ ಸೇರ್ಪಡೆಯಾಗಬೇಕಾದರೇ ನಡೆದ ಒಪ್ಪಂದದಂತೆ, ನೀಡಿದ ಮಾತಿನಂತೆ ಬಿ.ಎಸ್. ಯಡಿಯೂರಪ್ಪನವರು ನಡೆದುಕೊಂಡರು, ಬಿಜೆಪಿಯಿಂದ ನನಗೆ ಟಿಕೇಟ್ ಕೊಟ್ಟರು. ಸಾಕಷ್ಟು ಮುಖಂಡರು ನಮ್ಮ ಮಧ್ಯೆ ಇದ್ದಾರೆ, ಇಂದು ಮಾತು ಕೊಟ್ಟು, ಮರುದಿನ ಬೇರೆಯವರ ಮಾತು ಕೇಳಿ ನಿರ್ಧಾರ ಬಲಿಸುವಂತಹ ಹಿತ್ತಾಳೆ ಕಿವಿಯ, ಚಂಚಲ ಮನಃಸ್ಥಿತಿಯ ನಾಯಕರು. ಆದರೆ ಯಡಿಯೂರಪ್ಪ ಅವರು ಕಂಪ್ಲಿಟ್ಲಿ ಡಿಫ್ರೆಂಟ್ ಅಡೋರೇಬಲ್ ರೋಲ್ ಮಾಡೇಲ್ ಲೀಡರ್.

### ನನ್ನ ಮಾರ್ಗದರ್ಶಕರು

ದೊಡ್ಡ ರಾಜಕೀಯ ಶಕ್ತಿಯನ್ನು ಸೋಲಿಸಿ ಹಳಿಯಾಳ ಕ್ಷೇತ್ರದಿಂದ ನಾನು ಅಂದೂ ಆಯ್ಕೆಯಾಗಿದ್ದಾಗ ಇಡೀ ರಾಜ್ಯದ ಹಾಗೂ ರಾಜಕೀಯ ಪಕ್ಷಗಳ ಕಣ್ಣು ನನ್ನ ಮೇಲೆಯೇ ಇತ್ತು. ಇಂತಹ ನಾಜೂಕು ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನನಗೆ ತುಂಬಾ ಸಹಕಾರ ನೀಡಿದ್ದರು. ದೊಡ್ಡ ವ್ಯಕ್ತಿಯನ್ನು ಸೋಲಿಸಿ ಹೆಗಡೆಯವರು ಬಂದಿದ್ದಾರೆ, ಹಳಿಯಾಳ ಕ್ಷೇತ್ರದಲ್ಲಿ ಅವರನ್ನು ಡಿಸ್ಟರ್ಬ ಮಾಡಬೇಡಿ ಎಂದು ಸಂಪುಟದ ಸಚಿವರಿಗೂ ಅಧಿಕಾರ ವೃಂದಕ್ಕೂ ತಿಳಿಸಿದ್ದರು ಎಂದು ಸುನೀಲ ಹೆಗಡೆ ನೆನಪಿಸಿಕೊಂಡರು. ಇವರು ಬೇರೆ ಪಕ್ಷದವರು ಇವರಿಗೆ ಹೆಚ್ಚಿಗೆ ಪ್ರಾಧಾನ್ಯತೆ ಕೊಡಬಾರದೆಂಬ ಮನಃಸ್ಥಿತಿ ಅವರದಾಗಿರಲಿಲ್ಲ, ಕ್ಷೇತ್ರದ ಹಾಗೂ ಜನರ ಅಭಿವೃದ್ಧಿಯಾಗಬೇಕು, ರೈತರ, ಶೋಷಿತರ ಕೆಲಸವಾಗಬೇಕು ಎನ್ನವುದೇ ಅವರ ನಿಲುವು. ಅಂದು ಸದನದಲ್ಲಿ ಪ್ರತಿಪಕ್ಷದವರೂ ಅವರಿಗೆ ವಿರೋಧಿಸಿದರೂ ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಅವರ ಸಲಹೆಗಳನ್ನು ಆಡಳಿತದಲ್ಲಿ ಅಳವಡಿಸಿಕೊಳ್ಳುತ್ತಿದ್ದರು, ತಮ್ಮನ್ನು ವಿರೋಧಿಸಿದವರನ್ನು ಟೀಕಿಸಿದವರನ್ನು ಎಂದೂ ಅವರೂ ದೂರ ಮಾಡಲಿಲ್ಲ, ಅವರನ್ನು ಕರೆದು ಚರ್ಚಿಸಿ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಸ್ಪಂದಿಸುವುದನ್ನು ನಾನು ಕಣ್ಣಾರೆ ನೋಡಿದ್ದೇನೆ.

**ಸರ್ವ ವ್ಯಾಪಿ:** ರಾಜ್ಯದ ಎಲ್ಲಾ ಭಾಗಗಳು, ಎಲ್ಲಾ ವರ್ಗದವರನ್ನು ಒಳಗೊಂಡು ಕೆಲಸ ಮಾಡುವುದರಿಂದಲೇ "ಸರ್ವ ವ್ಯಾಪಿ" ಎಂಬ ವಿಶೇಷಣ ಅವರಿಗೆ ಬಂದಿದೆ. ಆಡಳಿತದಲ್ಲಿ ತ್ವರಿತ ನಿರ್ಣಯಗಳು, ಸಮಯಪಾಲನೆ, ಸ್ಪಂದನ ಶೀಲತೆ, "ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು" ತತ್ವವು ಅವರ ಜನಪರ ಆಡಳಿತಕ್ಕೆ ಮಾರ್ಗದರ್ಶನವಾಗಿದೆ. ಅವರ 50 ವರ್ಷಗಳ ದೀರ್ಘ ರಾಜಕೀಯ ಪಯಣ, ಚಾರಿತ್ರಿಕ ಕೊಡುಗೆಗಳ ಬಗ್ಗೆ ಕೋಟೆನಾಡು ಚಿತ್ರದುರ್ಗದಲ್ಲಿ ಆಯೋಜಿಸಿರುವ ಐತಿಹಾಸಿಕ ಅಭಿಮಾನೋತ್ಸವಕ್ಕೆ ಹಳಿಯಾಳ ವಿಧಾನ ಸಭಾ ಕ್ಷೇತ್ರದ ಮೂರು ತಾಲೂಕಗಳಿಂದ ಬಾರಿ ಸಂಖ್ಯೆಯಲ್ಲಿ ಅಭಿಮಾನಿಗಳು, ಕಾರ್ಯಕರ್ತರೂ ಸ್ವಯಂ ಪ್ರೇರಣೆಯಿಂದಲೇ ಸಿದ್ಧರಾಗಿದ್ದು, ಅವರೊಂದಿಗೆ ನಾನು ಸಹ ತೆರಳಲಿದ್ದು, ನಮ್ಮ ಮಹಾನ ನಾಯಕರ ಆಶೀರ್ವಾದ ಪಡೆಯಲಿದ್ದೇನೆ.

**ಸಕ್ಕರೆ ಕಾರ್ಖಾನೆ**

ನಾನು ಹಳಿಯಾಳ ಕ್ಷೇತ್ರದಲ್ಲಿ ಕಾಳಿನದಿ ನೀರಾವರಿ ಯೋಜನೆಗಾಗಿ ಆಗ್ರಹಿಸಿ ಮಾಡಿದ ಪಾದಯಾತ್ರೆಯ ಸಂದರ್ಭದಲ್ಲಿ ಹಾಗೂ ಹಳಿಯಾಳದಲ್ಲಿ ಸಕ್ಕರೆ ಕಾರ್ಖಾನೆ ಆರಂಭಿಸಲು ಅವರು ನೀಡಿದ ಸಹಕಾರ ಮರೆಯಲಾರದಂತಹದು. ಯಾರೂ ಎಷ್ಟೇ ಹೇಳಲಿ, ಪ್ರಚಾರ ಗಿಟ್ಟಿಸಿಕೊಳ್ಳಲಿ ಇಂದು ಹಳಿಯಾಳದಲ್ಲಿರುವ ಸಕ್ಕರೆ ಕಾರ್ಖಾನೆ ಕಾರ್ಯಾರಂಭ ಮಾಡಲು ಯಡಿಯೂರಪ್ಪನವರು ನೀಡಿದ ಸಹಕಾರವೇ ಮೂಲ ಕಾರಣ. ಅವರ ಪ್ರಯತ್ನದ ಫಲವಾಗಿಯೇ ಹಳಿಯಾಳದಲ್ಲಿಯೇ ಬಹಳ ಸಲಿಸಾಗಿ ಕಾರ್ಖಾನೆ ಪ್ರಾರಂಭವಾಯಿತು. ಸತ್ಯ ಎಲ್ಲರಿಗೂ ಗೊತ್ತಾಗಬೇಕು, ನಮ್ಮ ಕ್ಷೇತ್ರದ ಜನತೆ, ರೈತರಿಗೂ ಈ ಸತ್ಯದ

ಚಿತ್ರದುರ್ಗ ಪುರ ಪ್ರವೇಶ ಮೆರವಣಿಗೆಯಲ್ಲಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಮಾನಿಗಳತ್ತ ನಮಸ್ಕರಿಸುತ್ತಿರುವುದು.

ಚಿತ್ರದುರ್ಗದ ಅಭಿಮಾನೋತ್ಸವ ಸಮಾರಂಭದ ಬಳಿ ಆಕರ್ಷಕ ಕಟೌಟ್, ಫ್ಲೆಕ್ಸ್‌ಗಳು.

# ಕಲ್ಯಾಣ ಪುರುಷ

## ನಿರ್ಲಕ್ಷಿತ ಜಿಲ್ಲೆಗಳಿಗೆ ನೆರವಿನ ಅಭಯಹಸ್ತ

## ಬಿಎಸ್‌ವೈ ಅಭಿಮಾನೋತ್ಸವ: ಕಾರ್ಯಕರ್ತರಿಗೆ ಟೀ ಶರ್ಟ್ ವಿತರಣೆ

ಅಭಿಮಾನೋತ್ಸವದ ಕಾರ್ಯಕ್ರಮಕ್ಕೆ ಹೋಗುವ ಕಾರ್ಯಕರ್ತರಿಗೆ 2 ಸಾವಿರ ಟೀ ಶರ್ಟ್ ಬಿಡುಗಡೆ.

**ಜಗಳೂರು:** ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಜೀವನದ ಸಾಧನೆಯನ್ನು ಸಂಭ್ರಮಿಸುವ ಉದ್ದೇಶದಿಂದ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬೃಹತ್ ಅಭಿಮಾನೋತ್ಸವದ ಕಾರ್ಯಕ್ರಮಕ್ಕೆ ಹೋಗುವ ಕಾರ್ಯಕರ್ತರಿಗೆ ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಅವರು ಮನೆಯಲ್ಲಿ ಬಿ.ಎಸ್.ಯಡಿಯೂರಪ್ಪ ಭಾವಚಿತ್ರ ಇರುವ ಟೀ ಶರ್ಟ್‌ಗಳನ್ನು ಬಿಡುಗಡೆಗೊಳಿಸಿ ವಿತರಿಸಿದರು.

ಈ ವೇಳೆ ಮಾತನಾಡಿದ ಎಸ್.ವಿ.ರಾಮಚಂದ್ರ, ಬಿಜೆಪಿಯನ್ನು ಶಕ್ತಿಶಾಲಿಯಾಗಿ ರೂಪಿಸಿದವರು ಯಡಿಯೂರಪ್ಪ. ಅವರು ಜಗಳೂರು ತಾಲ್ಲೂಕಿಗೆ ಅವರ ಅಧಿಕಾರದ ಅವಧಿಯಲ್ಲಿ ಹಲವು ಅನುದಾನ ನೀಡಿದ್ದಾರೆ. ಸಿರಿಗೆರೆ ಶ್ರೀಗಳ ಆಶೀರ್ವಾದ ಜೊತೆಗೆ ಬಿ.ಎಸ್. ಯಡಿಯೂರಪ್ಪ ಅವರ ಅವಧಿಯಲ್ಲಿ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ, ಬಹು ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ತಂದರು ಎಂದು ತಿಳಿಸಿದರು. 2028ರಲ್ಲಿ ವಿಜಯೇಂದ್ರ ಅವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಚಿತ್ರದುರ್ಗದಲ್ಲಿ ನಡೆಯುವ ಅಭಿಮಾನೋತ್ಸವ ಕಾರ್ಯಕ್ರಮ ಶಕ್ತಿಯಾಗಲಿದೆ. ಈ ಕಾರ್ಯಕ್ರಮಕ್ಕೆ ತಾಲ್ಲೂಕಿನಿಂದ 8 ಸಾವಿರಕ್ಕಿಂತ ಅಧಿಕ ಮಂದಿ ಭಾಗವಹಿಸಲಿದ್ದಾರೆ ಎಂದರು. ತಾಲೂಕು ಮಂಡಲ ಅಧ್ಯಕ್ಷ ಎ.ಎಂ.ಮರುಳಾರಾಧ್ಯ, ಬಿಜೆಪಿ ಮುಖಂಡರಾದ ಬಳಗೇರ್ ರುದ್ರಣ್ಣ, ಕ್ಯಾಂಪ್ ಓಬಳೇಶ್, ಬಾಣೇಶ್, ಲ್ಯಾಬ್ ಶಿವು ಸೇರಿದಂತೆ ಬಿಜೆಪಿ ಕಾರ್ಯಕರ್ತರು ಇದ್ದರು.

ಪುರ ಪ್ರವೇಶ ಆರಂಭಕ್ಕೂ ಮುನ್ನ ವೇದಿಕೆಯಲ್ಲಿ ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖಂಡರು ಗೌರವಿಸಿದರು. ಗೋವಿಂದ ಕಾರಜೋಳ, ಡಿ.ವಿ.ಸದಾನಂದಗೌಡ, ಬಿ.ವೈ.ವಿಜಯೇಂದ್ರ, ಜನಾರ್ಧನ ರೆಡ್ಡಿ, ಶ್ರೀರಾಮುಲು, ಎಂ.ಚಂದ್ರಪ್ಪ ಮತ್ತಿತರರು ಇದ್ದಾರೆ.

## ಅಭಿಮಾನೋತ್ಸವ ಯಶಸ್ವಿಗೆ ಶ್ರಮ

**ಚಿತ್ರದುರ್ಗ:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ 50 ವರ್ಷದ ರಾಜಕೀಯ ಜೀವನದ ಹಿನ್ನೆಲೆಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಸಲು ಉದ್ದೇಶಿಸಿರುವ ಅಭಿಮಾನೋತ್ಸವ ಯಶಸ್ವಿಗೆ ನಿರಂತರ ಶ್ರಮಿಸಲಾಗುತ್ತಿದೆ ಎಂದು ರಾಜ್ಯ ಓಬಿಸಿ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನ ಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿ ಇಟ್ಟಿದ್ದಾರೆ.

ದಲಿತರು, ಪರಿಶಿಷ್ಟ ಜಾತಿ ಮತ್ತು ಪಂಗಡ, ಮಹಿಳೆಯರಿಗೆ ಧ್ವನಿಯಾಗಿ ಕೆಲಸವನ್ನು ಮಾಡಿದ್ದಾರೆ. ಅಧಿಕಾರಕ್ಕಾಗಿ ಎಂದೂ ಹೋರಾಟ ಮಾಡದೆ, ಬಡವರ ಕಣ್ಣೀರು ಒರೆಸುವ ಸಲುವಾಗಿ ಕೆಲಸ ಮಾಡಿದ್ದಾರೆ ಎಂದರು. ಉಪಾಧ್ಯಕ್ಷರಾದ ವೆಂಕಟೇಶ್, ಅಶ್ವಿನಿ, ಸಿದ್ದಾಪುರ ಸುರೇಶ್, ಬಸವರಾಜ್, ಸಂಪತ್ ಕುಮಾರ್, ದಗ್ಗೆ ಶಿವಪ್ರಕಾಶ್ ಇತರರಿದ್ದರು.






# ಕಲ್ಯಾಣ ಪುರುಷ

## ನಿರ್ಲಕ್ಷಿತ ಜಿಲ್ಲೆಗಳಿಗೆ ನೆರವಿನ ಅಭಯಹಸ್ತ



### ಕಡೂರು ತಾಲೂಕಿಗೆ ಭದ್ರಾ ಉಪ ಕಣಿವೆಯಿಂದ ನೀರನ್ನು ಎತ್ತಿ ಏತ ನೀರಾವರಿ ಮೂಲಕ 135 ಕೆರೆಗಳಿಗೆ ನೀರು ತುಂಬಿಸುವ ಕಾಮಾಗಾರಿ

ತರೀಕೆರೆ, ಚಿಕ್ಕಮಗಳೂರು ಕಡೂರು ತಾಲೂಕಿನ ಹಾಗೂ ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಒಟ್ಟು **197 ಕೆರೆಗಳಿಗೆ** ಭದ್ರಾ ಜಲಾಶಯ ಪ್ರದೇಶದಿಂದ ಏತ ನೀರಾವರಿ ಮೂಲಕ ನೀರನ್ನು ಎತ್ತಿ ತುಂಬಿಸುವ **ರೂ. 1281.80 ಕೋಟಿ** ಮೊತ್ತದ ಕೆರೆ ತುಂಬಿಸುವ ಯೋಜನೆಗೆ 4 ಹಂತಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಹಾಗೂ 2020-21ನೇ ಸಾಲಿನಲ್ಲಿ ಮೊದಲನೇ ಹಂತದ ಕಾಮಗಾರಿ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೊದನೆಯನ್ನು ಅಂದಿನ **ಸಿಎಂ ರೈತ ಮುಖ್ಯಮಂತ್ರಿ** ಎಂದೆ ಕರೆಯಲ್ಪಡುವ **ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು** ನೀಡಿರುತ್ತಾರೆ.

- ಮೊದಲ ಹಂತದಲ್ಲಿ ತರೀಕೆರೆ ತಾಲೂಕಿನ **50 ಕೆರೆಗಳು,** ಕಡೂರು ತಾಲೂಕಿನ **04 ಕೆರೆಗಳು** ಒಟ್ಟು **54 ಕೆರೆಗಳಿಗೆ ಸೇರಿ ರೂ.406.50** ಕೋಟಿ ಅನುದಾನ ಬಿಡುಗಡೆ.
- ಎರಡನೇ ಹಂತದಲ್ಲಿ ಕಡೂರು ತಾಲೂಕಿನ **71 ಕೆರೆಗಳು,** ತರೀಕೆರೆ **04 ಕೆರೆಗಳು,** ಅರಸಿಕೆರೆ **03 ಕೆರೆಗಳು** ಒಟ್ಟು **78 ಕೆರೆಗಳಿಗೆ ರೂ. 298.60 ಕೋಟಿ** ವೆಚ್ಚದಲ್ಲಿ ನೀರು ತುಂಬಿಸುವ ಮಹತ್ಕಾರ್ಯಕ್ಕೆ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಎರಡನೇ ಹಂತದ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಅನುಮೋದನೆ ನೀಡಿರುತ್ತಾರೆ.

ಈ ಎರಡು ಹಂತದ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು ಕೆಲವೇ ದಿನಗಳಲ್ಲಿ ನೀರು ಹರಿಯಲಿದೆ, ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿ ಚಾಲನೆ ಮಾಡುವಲ್ಲಿ ಅವಕಾಶ ಕಲ್ಪಿಸಿಕೊಟ್ಟ **ಶ್ರೀಯುತ ಬಿ.ಎಸ್. ಯಡಿಯೂರಪ್ಪನವರಿಗೆ** ಕಡೂರು ತಾಲ್ಲೂಕಿನ ನಾಗರಿಕರ ಪರವಾಗಿ ಕೋಟಿ ಕೋಟಿ ನಮಸ್ಕಾರಗಳು.

ಚೌಳಹಿರಿಯೂರು ಬಳಿ ವೇದಾನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ರೂ. 21 ಕೋಟಿ ವೆಚ್ಚದ ಬ್ರಿಡ್ಜ್ ಕಂ ಬ್ಯಾರೇಜ್ ಹಾಗೂ 21 ವಿವಿಧ ಚೆಕ್‌ಡ್ಯಾಂ ಮತ್ತು ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಗಳನ್ನು ನಿರ್ಮಿಸಲಾಗಿದ್ದು ಕಾಮಗಾರಿಗಳನ್ನು ಅನುಮೋದನೆ ನೀಡಿದ **ಬಿ.ಎಸ್.ವೈ.**

## ಕೋಟೆನಾಡು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ ಐತಿಹಾಸಿಕ ಬೃಹತ್ ಅಭಿಮಾನೋತ್ಸವಕ್ಕೆ

### ಸರ್ವರಿಗೂ ಸುಸ್ವಾಗತ

# ಬೆಳ್ಳಿಪ್ರಕಾಶ್

**ಮಾಜಿ ಶಾಸಕರು, ಕಡೂರು ವಿಧಾನಸಭಾ ಕ್ಷೇತ್ರ**
**ನಿಕಟಪೂರ್ವ ಅಧ್ಯಕ್ಷರು ಹಾಗೂ ನಿರ್ದೇಶಕರು**
**ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ಬೆಂಗಳೂರು**